೨೯ - ೩೦
ಜನವರಿ - ಜೂನ್ - ೦೪

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ

ಕುವೆಂಪು ಜನ್ಮ ಶತಮಾನೋತ್ಸವ - ವಿಶ್ವಮಾನವ ವರ್ಷ ೨೦೦೪

- ಮಲೆನಾಡಿಗರ ಬಾಯಲ್ಲಿ ಕುವೆಂಪು
- ಕುವೆಂಪು : ಎರಡು ವಿಮರ್ಶೆಗಳು
- ಕಾಶ್ಮೀರದ ಋಷಿ ಸೂಫಿಗಳು
- ಹುಲಿಸೀರೆ - ಕಥನ ಕವನ
- 'ನೀರೆಂಬ ಬೆಂಕಿಯ ಮೇಲೆ !'
- ತಿರುಪ್ಪಾವೈ : ರೂಪಾಂತರ ಗೀತೆಗಳು
- ಚೆಣ್ಣಾಳ ಮತ್ತು ರಾಜಕುಮಾರಿ ವಿದ- ಇರುಳಿಗರ ಕಥೆ.



ದಯವಿಟ್ಟು ಗಮನಿಸಿ

ಪ್ರತಿ ಪುಸ್ತಕಕ್ಕೂ ಮುಖ ಬೆಲೆಯ ಶೇ. ೧೦ರಷ್ಟು ರಿಯಾಯಿತಿ ನೀಡಲಾಗುವುದು.

ಶೇ. ೩೩ರಷ್ಟು ರಿಯಾಯಿತಿಯಿದೆ. ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ಖರೀದಿಸಬೇಕು.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆ 'ಅನಿಕೇತನ' ಕ್ಕೆ ಚಂದಾದಾರರಾಗಿರಿ.

ಬಿಡಿ ಪ್ರತಿ	-	೧೦-೦೦
ವಾರ್ಷಿಕ ಚಂದಾ	-	೨೦-೦೦
ಆಜೀವ ಚಂದಾ	-	೧೫೦-೦೦

ವಾರ್ಷಿಕ ಚಂದಾದಾರರ ಗಮನಕ್ಕೆ

ಅನಿಕೇತನ ವಾರ್ಷಿಕ ಚಂದಾದಾರರಾಗಿರುವವರ ತಮ್ಮ ಚಂದಾ ಅವಧಿ ಮುಗಿದಿದೆ. ದಯವಿಟ್ಟು ಚಂದಾ ನವೀಕರಿಸಿ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಜನವರಿ - ಜೂನ್, ೨೦೦೪

ಕುವೆಂಪು ಜನ್ಮಶತಮಾನೋತ್ಸವ - ವಿಶ್ವಮಾನವ ವರ್ಷ - ೨೦೦೪

ಸಂಪಾದಕರು

ಪ್ರೊ. ವಿ. ಚಂದ್ರಶೇಖರ ನಂಗಲಿ

ಲಕ್ಷ್ಮೀಪತಿ ಕೋಲಾರ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

ANIKETHANA : A Literary Journal (Quarterly)
Edited by : **Prof. V. Chandrashekhara Nangali**
Lakshmipathi Kolara
Published by : Registrar, Karnataka Sahithya Academy
Kannada Bhavana, J.C. Road, Bangalore - 2

Pages : x + 204

Registration No. 45646/88

ಸಂಪುಟ : ೧೫
ಸಂಚಿಕೆ : ೩ / ೪
ಪ್ರತಿಗಳು : ೧೨೦೦

ಪ್ರಧಾನ ಸಂಪಾದಕರು
ಡಾ. ಗುರುಲಿಂಗ ಕಾಪಸೆ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ವಿ. ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ಬಿಡಿ ಪ್ರತಿ	:	ರೂ. ೨೦/-
ವಾರ್ಷಿಕ ಚಂದಾ	:	ರೂ. ೭೦/-
ಆಜೀವ ಚಂದಾ	:	ರೂ. ೨೫೦/-

ಮುಖಪುಟ ಹಾಗೂ
ಹಿಂಬದಿ ಚಿತ್ರಕಲೆ ಕೃಪೆ : ಕೆ. ಟಿ. ಶಿವಪ್ರಸಾದ್
ನೆರವು / ಸಹಕಾರ : 'ಅಭಿನವ' ರವಿ
ಅದ್ದೆ ಮಂಜುನಾಥ್
ರಕ್ಷಾಪುಟ ವಿನ್ಯಾಸ : ಎಸ್. ಮಂಜುನಾಥ್

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
೧೧೭/೨, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು - ೧೮
೨೬೬೧ ೩೧೨೩, ೨೬೬೧ ೮೭೫೨

ನಿಮ್ಮ ಕಕ್ಕುಲಾತಿ, ನೈತಿಕ ಆಸರೆ ದೊಡ್ಡದು

ಇದು ನಾವು ನಿರ್ವಹಿಸುತ್ತಿರುವ ಕೊನೆಯ ಹಾಗೂ ಸಂಯುಕ್ತ ಸಂಚಿಕೆ. ಇದರೊಂದಿಗೆ ನಮ್ಮ ಅವಧಿಯ 'ಅನಿಕೇತನ'ದ ಎಲ್ಲಾ ಸಂಚಿಕೆಗಳೂ ಪ್ರಕಟಗೊಂಡಂತಾಗುತ್ತದೆ.

ಈವರೆಗೂ ಪ್ರಕಟಗೊಂಡಿರುವ ಅನಿಕೇತನದ ಎಲ್ಲಾ ಸಂಚಿಕೆಗಳ ಬಗ್ಗೆಯೂ ಓದುಗ ಹಾಗೂ ಆಸಕ್ತ ವಲಯದಲ್ಲಿ ಉತ್ತಮ ಅಭಿಪ್ರಾಯವೇ ಕೇಳಿಬಂದಿದೆ. ಆದರೂ ನಾವು ಅತೃಪ್ತರೆ. ಯಾಕೆಂದರೆ ಈ ಸಂಚಿಕೆಯನ್ನು ಕೂಡ ನಾವು ರೂಪಿಸಬೇಕೆಂದುಕೊಂಡಿದ್ದ ರೀತಿಯಲ್ಲಿ ಸಂಪಾದಿಸಲು ಕೊನೆಯ ಗಳಿಗೆಯವರೆಗೂ ಸಾಧ್ಯವಾಗಲೇ ಇಲ್ಲ. ಬಹು ಮುಖ್ಯವಾಗಿ ಈ ಸಂಚಿಕೆ ಕುವೆಂಪು ವಿಶೇಷ ಸಂಚಿಕೆಯಾಗಿ ಹೊರಬರಬೇಕಿತ್ತು. ಜೊತೆಗೆ ಪುಕೊ, ಇವಾನ್ ಇಲಿಚ್, ಗ್ರಾಮ್ಷಿ ಮುಂತಾದವರ ಚಿಂತನೆಗಳ ಕುರಿತ ಬರಹಗಳು, ತಾವೊ, ಝೆನ್‌ನಂತಹ ಪಂಥಗಳ ಲೇಖನಗಳು ಕೂಡ ಒಳಗೊಳ್ಳಬೇಕೆಂದು ಆಶಿಸಿದ್ದೆವು. ಆದರೆ ಕುವೆಂಪು ಸಾಹಿತ್ಯ ಕುರಿತಂತೆ ಎರಡು ವಿಮರ್ಶಾ ಲೇಖನಗಳು ಹಾಗೂ ಅವರ ಬದುಕಿನ ಕೆಲವು ಸ್ವಾರಸ್ಯಕರ ಪ್ರಸಂಗಗಳ ಮೆಲುಕುಗಳನ್ನು ಮಾತ್ರ ನೀಡಲು ಸಾಧ್ಯವಾಗಿದೆ. ಜೊತೆಗೆ ಕಾಶ್ಮೀರದ ಋಷಿ ಸೂಫೀ ಪಂಥದ ಪರಿಚಯಾತ್ಮಾಕ ಲೇಖನವೊಂದನ್ನು ಜೆ. ಬಾಲಕೃಷ್ಣರವರು ಅನಿಕೇತನದ ಈ ಸಂಚಿಕೆಗಾಗಿಯೇ ಸಿದ್ಧಪಡಿಸಿಕೊಟ್ಟಿದ್ದಾರೆ.

ಕವಿಮಿತ್ರ ಕೆ.ವೈ. ನಾರಾಯಣಸ್ವಾಮಿಯವರು ಇತ್ತೀಚೆಗೆ ಬರೆದಿರುವ ಜಾನಪದ ಕಥಾಭಿತ್ತಿಯ 'ಹುಲಿ ಸೀರೆ' ಎಂಬ ಕಥನ ಕವನ ಹಾಗೂ ಆರ್. ವಿಜಯರಾಘವನ್‌ರವರು ಅನುವಾದಿಸಿರುವ ನಜೀಂ ಹಿಕ್ಮತ್ತನ ದೀರ್ಘವೂ, ಕುತೂಹಲದಾಯಕವೂ ಆದ 'ಜಿಯೋಕೊಂಡ ಮತ್ತು ಸಿಯಾವು' ಎಂಬ ಕವಿತೆ ಈ ಸಂಚಿಕೆಗೆ ವಿಶೇಷ ಮೆರುಗು ನೀಡಿವೆಯೆಂದು ಭಾವಿಸಿದ್ದೇವೆ. ಇರುಳಿಗರ ಜಾನಪದ ಕಥೆ 'ಚಿಣ್ಣಾಳ ಮತ್ತು ರಾಜಕುಮಾರಿ ವಿದ' ಕೂಡ ಆಸಕ್ತಿದಾಯಕ ಓದನ್ನು ನೀಡಬಲ್ಲದು. ಪಶುಪಕ್ಷಿ ಪ್ರಾಣಿಗಳಾದಿಯಾಗಿ ಈ ಭೂಮಿಯ ಇಡೀ ಜೀವಕೋಟಿಗೆ ಜೀವಾಧಾರವಾಗಿರುವ ನೀರಿನ ಅಂತಾರಾಷ್ಟ್ರೀಯ ಹಂತದ ಪಿತೂರಿಗಳ ಕುರಿತು ಪರಿಸರ ಪ್ರಧಾನವಾದ ಮೂರು ಲೇಖನಗಳನ್ನು ಗೆಳೆಯ ವಿವೇಕಾನಂದರು ಒದಗಿಸಿದ್ದಾರೆ. ಅನಿಕೇತನದ ಓದುಗರನ್ನು ಈ ಲೇಖನಗಳು 'ನೀರೆಂಬ

ಬೆಂಕಿಯ ಮೇಲೆ' ನಿಲ್ಲಿಸಿ ಚಿಂತನೆಗೆ ಹಚ್ಚಬಲ್ಲವು. ಬಿಳುಮನೆ ರಾಮದಾಸರ ಕುವೆಂಪು ಕುರಿತ ಮೆಲುಕುಗಳು ಸಂಚಿಕೆಯ ಸ್ವಾರಸ್ಯ ಹೆಚ್ಚಿಸಿವೆ.

ಉಳಿದಂತೆ ಎಚ್.ಎಲ್. ಪುಷ್ಪ ಅವರ 'ನದೀ ಮುಖ' ಕವಿತೆ, ಕ್ಯೂಬಾದ ಕಥೆ 'ಮಾಂಸ', ವಿಭಾ ತಿರಕಪಡಿ ಅನುವಾದಿಸಿರುವ ಕೈಫಿ ಅಜ್ಮಿಯವರ ಗಜಲ್‌ಗಳು, ಅನಿತಾ ನಾಯರ್‌ರವರ ಕವಿತೆಗಳು, ತಿರುಪ್ಪಾವೈನ ರೂಪಾಂತರ ಗೀತೆಗಳು ಖಂಡಿತ ಗಮನ ಸೆಳೆಯುವಂತಿವೆ.

ಒಟ್ಟಾರೆ, ನಾವು ನಿರೀಕ್ಷಿಸಿದ ರೀತಿಯಲ್ಲಿ ಈ ಸಂಚಿಕೆ ರೂಪುಗೊಳ್ಳದಿದ್ದರೂ ವಸ್ತು ವೈವಿಧ್ಯತೆಯಿಂದ ಮೈದುಂಬಿ ನಿಂತಿದೆ. ಈ ಎಲ್ಲಾ ಲೇಖಕ / ಕವಿ ಮಿತ್ರರಿಗೆ ನಮ್ಮ ನೆನಕೆಗಳು ಸಲ್ಲಲೇಬೇಕು.

ಈ ಮೂರು ವರ್ಷಗಳ ಅವಧಿಯಲ್ಲಿ ನಾವು ನಮ್ಮ ಮಿತಿಗಳ ನಡುವೆಯೂ ಅನಿಕೇತನವನ್ನು ಕೊಂಚವಾದರೂ ಅರ್ಥಪೂರ್ಣವಾಗಿ ಹೊರತರಲು ಸಾಧ್ಯವಾದದ್ದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ, ಅನಿಕೇತನದ ಗೌರವ ಸಂಪಾದಕರೂ ಆದ ಶ್ರೀಯುತ ಗುರುಲಿಂಗ ಕಾಪಸೆಯವರು ನಮಗೆ ನೀಡಿದ ನೈತಿಕ ಬೆಂಬಲ ಮತ್ತು ತೋರಿದ ಪ್ರೀತಿ, ವಿಶ್ವಾಸಗಳಿಂದಲೇ ಎಂಬುದು ನಮ್ಮ ಗಟ್ಟಿ ನಂಬಿಕೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿ.ಎಸ್. ಮಲ್ಲಿಕಾರ್ಜುನಸ್ವಾಮಿ ಹಾಗೂ ಸಿಬ್ಬಂದಿಯ ಕಕ್ಕುಲಾತಿ ನಾವು ನಮ್ಮೆದೆಯಲ್ಲೇ ಉಳಿಸಿಕೊಳ್ಳುವಂತಹದ್ದು. ಅಕಾಡೆಮಿಯ ಎಲ್ಲಾ ಸದಸ್ಯರಿಗೂ, ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ್‌ಕುಮಾರ್ ಹಾಗೂ ಸಿಬ್ಬಂದಿಗೂ, ನಮ್ಮೊಂದಿಗೆ ಸಹಕರಿಸಿದ ಲಲಿತ ಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಮುನಿರಾಜಯ್ಯ ಹಾಗೂ ಸಿಬ್ಬಂದಿ ಮತ್ತು ತಮ್ಮ ಪೈಂಟಿಂಗ್‌ಗಳನ್ನು ಮುಖಪುಟಕ್ಕೆ ಬಳಸಿಕೊಳ್ಳಲು ಅನುಮತಿಸಿದ ನಾಡಿನ ಖ್ಯಾತ ಕಲಾವಿದರಿಗೂ, ನೆರವಿತ್ತ ಎಲ್ಲರಿಗೂ, ಎಲ್ಲಾ ಲೇಖಕ ಬಂಧುಗಳಿಗೂ ಧನ್ಯವಾದಗಳು.

– ಸಂಪಾದಕರು

ಪರಿವಿಡಿ

ಭಾಗ - ೧

ಮಾಂಸ

ಮೂಲ : ವಿರ್ಜಿಲಿಯೋ ಪಿನೇರಾ
ಅನು : ಬಿ. ಕನಕರಾಜು

ಅಷ್ಟೊಂದು ವಿಶೇಷವೇನೂ ಇಲ್ಲದೆ, ಯಾವೊಂದು ಭಾವನೆಯೂ ಇಲ್ಲದೆ ಅದು ಸಂಭವಿಸಿತ್ತು. ಆ ನಗರ ಆಹಾರದ ಕೊರತೆಯಿಂದ ತತ್ತರಿಸುತ್ತಿತ್ತು. ಹಾಗಾಗಲು ಕಾರಣವನ್ನು ಇಲ್ಲಿ ವಿವರಿಸಬೇಕಾದ ಅವಶ್ಯಕತೆಯಿಲ್ಲ. ಎಲ್ಲರೂ ಕಳವಳಗೊಂಡಿದ್ದರು. ನೂರಾರು ಅಭಿಪ್ರಾಯಗಳು ಸುಳಿದಾಡುತ್ತಿದ್ದವು. ಸೇಡಿಗೆ ಸೇಡು ಎಂದೂ ಜನ ಮಾತಾಡಿಕೊಳ್ಳುತ್ತಿದ್ದರು. ಆದರೂ, ಮಾಮೂಲಿಯಂತೆ ಬೆದರಿಕೆಗಳ ಮೀರಿ ವಿರೋಧ ಬೆಳೆಯಲೇ ಇಲ್ಲ. ದಮನಕ್ಕೊಳಗಾದ ಆ ನಗರದ ಜನತೆ ಅತಿ ಬೇಗನೆ ನಾನಾ ರೀತಿಯ ತರಕಾರಿಗಳನ್ನು ತಿನ್ನುವುದರಲ್ಲಿ ರುಚಿ ಕಂಡುಕೊಂಡರು!

ಮಾನ್ಯ ಶ್ರೀ ಅನ್ಸಾಲ್ಟೋ ಆ ನಗರದ ಮಾದರಿಯಾಗುವುದರಲ್ಲಿದ್ದ. ಯಾವೊಂದು ಉದ್ವೇಗವೂ ಇಲ್ಲದೆ ಆತ ಒಂದು ದೊಡ್ಡ ಕತ್ತಿಯೊಂದನ್ನು ಮಸೆಯುತ್ತಿದ್ದ. ತದನಂತರ ತನ್ನ ಪ್ಯಾಂಟನ್ನು ಸಡಿಲಗೊಳಿಸಿ ಮೊಣಕಾಲವರೆಗೆ ತಳ್ಳಿದ. ಎಡಭಾಗದ ತನ್ನ ಅಂಡಿನಿಂದ ಒಂದು ತುಂಡು ಮಾಂಸವನ್ನು ಕೊಯ್ದು ತೆಗೆದ. ಉಪ್ಪು, ವಿನೆಗರ್ ಹಾಕಿ ಆ ಮಾಂಸವ ತೊಳೆದು ಬಾಯ್ಲರಲ್ಲಿಟ್ಟು ಕುದಿಸಿದ. ಭಾನುವಾರದಂದು ಮಾತ್ರ ಬಳಸುವ ಬಾಣಲೆಯಲ್ಲಿ ಆ ಮಾಂಸವನ್ನು ಹುರಿದ. ಕುರ್ಚಿಯಲ್ಲಿ ಕೂತು ಜೊಲ್ಲು ಸುರಿಸುತ್ತಾ ತನ್ನದೇ ಮಾಂಸವನ್ನು ತಿನ್ನಲಾರಂಭಿಸಿದ. ಆಗ ಯಾರೋ ಕದ ಬಡಿಯುತ್ತಿರುವ ಸದ್ದು ಕೇಳಿಸಿತು. ಬಡಿಯುತ್ತಿದ್ದಾತ ಅನ್ಸಾಲ್ಟೋವಿನ ನೆರೆ ಮನೆಯವ. ಆತ ತನ್ನ ಮನದೊಳಗಿನ ಮಾತನ್ನು ಪಿಸುಗುಟ್ಟಲು ಬಂದಿದ್ದ. ಅನ್ಸಾಲ್ಟೋ ಸ್ನೇಹಪೂರ್ವಕವಾಗಿ ಆ ಮಾಂಸದ ತುಂಡನ್ನು ಆತನಿಗೆ ತೋರಿಸಿದ. ಅದರ ಬಗ್ಗೆ ಕೇಳಿದಾಗ ತನ್ನ ಎಡಭಾಗದ ಅಂಡನ್ನು ಆತನಿಗೆ ತೋರಿಸಿದ. ಅದು ನಿಜವಾಗಿತ್ತು. ಆತ ಆಶ್ಚರ್ಯಗೊಂಡು ಒಂದು ಮಾತೂ ಆಡದೆ ಹೊರನಡೆದು ಕ್ಷಣಾರ್ಧದಲ್ಲೇ ಆ ನಗರದ ಮೇಯರ್‌ನೊಂದಿಗೆ ವಾಪಸ್ಸು ಬಂದ. ಆ ನಗರದ ಜನತೆ ತಮ್ಮ ವಶದಲ್ಲೇ ಇರುವ ಮಾಂಸವನ್ನು, ಅಂದರೆ ಸ್ವಂತ ಮಾಂಸದಿಂದ ತಮ್ಮ ತಮ್ಮ ಹಸಿವನ್ನು

ನಿಭಾಯಿಸಿಕೊಳ್ಳುವಂತೆ ಮಾಡಬಹುದು ಎಂಬ ತನ್ನ ಉದ್ದೇಶವನ್ನು ಅನ್ನಾಲ್ಸ್ಟೋವಿನ ಬಳಿ ಮೇಯರ್ ತಿಳಿಸಿದರು.

'ತುಂಬಾ ಓದಿದವರ' ವಿರೋಧದ ನಡುವೆಯೂ ಆ ನಗರದ ಮಧ್ಯಭಾಗದ ವೃತ್ತವೊಂದರಲ್ಲಿ ಜಮಾಯಿಸಿದ್ದ ಮಹಾಜನತೆಗೆ ಸ್ವಂತ ಮಾಂಸ ತಿನ್ನುವುದರ ವಿಧಿ ವಿಧಾನವನ್ನು ಅನ್ನಾಲ್ಸ್ಟೋ ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿದ. ನಂತರವೇ ಆ ಸಮಸ್ಯೆ ಒಂದು ಹಂತಕ್ಕೆ ಬಂದು ತಲುಪಿದ್ದು.

ಎಲ್ಲರೂ ಹೇಗೆ ತಮ್ಮ ಎಡಅಂಡುಗಳಿಂದ ಎರಡೆರಡು ತುಂಡುಗಳನ್ನು ಕೊಯ್ದು ತೆಗೆಯಬಹುದು ಎಂಬುದನ್ನು ಪ್ಲಾಸ್ಟರ್‌ನಿಂದ ಮಾಡಲ್ಪಟ್ಟಿದ್ದ ತೊಗಲಿನ ಬಣ್ಣದ ಗೊಂಬೆಯೊಂದನ್ನು ಬಳಸಿಕೊಂಡು ಉಪನ್ಯಾಸ ನೀಡಿದ. ಕೇಳಿಸಿಕೊಂಡ ನಂತರ ಒಬ್ಬೊಬ್ಬರು ತಮ್ಮ ಎಡಭಾಗದ ಅಂಡಿನಿಂದ ಎರಡು ತುಂಡು ಮಾಂಸವನ್ನು ಕೊಯ್ದು ತೆಗೆಯಲು ಶುರು ಮಾಡಿಕೊಂಡರು. ಅದೊಂದು ಮನಮೋಹಕ ದೃಶ್ಯವಾಗಿತ್ತು. ಆದರೆ ಅದನ್ನು ವಿವರಿಸಕೂಡದು ಎಂದು ಆಜ್ಞಾಪಿಸಲಾಗಿತ್ತು. ಇದರಿಂದ ಲಭಿಸುವ ಮಾಂಸವನ್ನಿಟ್ಟುಕೊಂಡು ನಗರದ ಆಹಾರದ ಸಮಸ್ಯೆಯನ್ನು ಎಷ್ಟು ದಿನಗಳವರೆಗೆ ನಿಭಾಯಿಸಬಹುದು ಎಂಬ ಲೆಕ್ಕಚಾರ ನಡೆಯುತ್ತಿತ್ತು. ನೂರು ಪೌಂಡ್ ತೂಕವುಳ್ಳ ವ್ಯಕ್ತಿಯೊಬ್ಬ ಕರುಳಿನಂತಹ ತಿನ್ನಲಾಗದವುಗಳನ್ನು ಹೊರತುಪಡಿಸಿ ಒಂದು ದಿನಕ್ಕೆ ಅರ್ಧಪೌಂಡಿನಂತೆ ನೂರನಲವತ್ತು ದಿನಗಳಿಗೆ ತಮ್ಮ ಮಾಂಸವನ್ನು ಬಳಸಿಕೊಳ್ಳಲು ಸಾಧ್ಯ ಎಂದು ಪ್ರಸಿದ್ಧ ವೈದ್ಯರೊಬ್ಬರು ಸಲಹೆ ನೀಡಿದರು. ಪ್ರತಿಯೊಬ್ಬರಿಗೂ ತಮ್ಮ ಸುಂದರ ಮಾಂಸವನ್ನು ತಿನ್ನಲು ಅವಕಾಶ ಒದಗಿ ಬಂದುದರಿಂದ ಆ ಹೇಳಿಕೆ ಅಷ್ಟೇನೂ ಪ್ರಮುಖವಾಗಿ ಕಾಣಲಿಲ್ಲ.

ಶ್ರೀಯುತ ಅನ್ನಾಲ್ಸ್ಟೋವಿನ ಈ ಚಿಂತನೆಯನ್ನು ಸ್ತ್ರೀಯರೆಲ್ಲರೂ ಮುಕ್ತಕಂಠದಿಂದ ಪ್ರಶಂಸಿಸಿದರು. ಅಲ್ಲಿಯವರೆಗೆ, ಸ್ತನಗಳನ್ನು ಕೊಯ್ದು ತೆಗೆದುದರಿಂದ ತಮ್ಮ ದೇಹದ ಮೇಲ್ಭಾಗವನ್ನು ಮುಚ್ಚಿಕೊಳ್ಳುವ ಪ್ರಮೇಯವೇ ಅವರಿಗೆ ಕಾಣಲಿಲ್ಲ. ಅವರು ಉಡುಪುಗಳನ್ನು ಸೊಂಟದವರೆಗೆ ಮಾತ್ರ ಧರಿಸಿಕೊಳ್ಳತೊಡಗಿದರು. ಕೆಲವು ಹೆಂಗಸರು ಮಾತನಾಡುವುದನ್ನು ನಿಲ್ಲಿಸಿದ್ದರು. ಏಕೆಂದರೆ, ಅವರೆಲ್ಲರು ತಮ್ಮ ನಾಲಿಗೆಗಳನ್ನು ನುಂಗಿದ್ದರು. (ಅವರೆಗೂ ಅದು ರಾಜಮನೆತನದವರು ಮಾತ್ರ ಅನುಭವಿಸಬಹುದಾಗಿದ್ದ ಭೋಜನವಾಗಿತ್ತು.) ರಸ್ತೆಯ ಇಕ್ಕೆಲಗಳ ತುಂಬೆಲ್ಲಾ ವಿನೋದದ ದೃಶ್ಯಗಳೇ ಕಂಡುಬರುತ್ತಿದ್ದವು. ಬಹುದಿನಗಳಿಂದ ಸಂಧಿಸಲಾಗದ ಇಬ್ಬರು ಪ್ರೇಮಿಗಳು ಭೇಟಿಯಾದಾಗ ಅವರಿಂದ ಪರಸ್ಪರ ಮುತ್ತಿಡಲು ಸಾಧ್ಯವಾಗಲಿಲ್ಲ. ಏಕೆಂದರೆ, ಅವರು ತಮ್ಮ ತುಟಿಗಳಿಂದ ರುಚಿಯಾದ ಸಾರುಮಾಡಿ ಊಟಮಾಡಿದ್ದರು. ಕಾರಾಗೃಹದ ಜೈಲರ್‌ನಿಂದ ಖೈದಿಯೊಬ್ಬನ ಮರಣದಂಡನಾ ಪತ್ರಕ್ಕೆ ಸಹಿ ಹಾಕಲಾಗಲಿಲ್ಲ. ಏಕೆಂದರೆ ಆತ ತನ್ನ ಬೆರಳುಗಳಲ್ಲಿದ್ದ ಮಾಂಸವನ್ನು ಕಡಿದು ತಿಂದಿದ್ದ. ಪಾಕಪ್ರಿಯರು-ಅವರಲ್ಲಿ ಈ ಅಧಿಕಾರಿಯೂ ಒಬ್ಬ-ಈ ಮಾದರಿಯನ್ನಿಟ್ಟುಕೊಂಡೇ 'ಬೆರಳು ಚೀಪೋದು ಒಳ್ಳೇದು' ಎಂಬ ನಾಣ್ಣುಡಿಯನ್ನು ಹುಟ್ಟುಹಾಕಿದರು ಎನಿಸುತ್ತದೆ.

ಈ ಮಾದರಿಗೆ ಸ್ವಲ್ಪ ಮಟ್ಟಿಗಿನ ವಿರೋಧ ಇದ್ದೇ ಇತ್ತು. ಹೆಂಗಸರ ಉಡುಪುಗಳನ್ನು ತಯಾರಿಸೋ ಕಾರ್ಖಾನೆಯ ಲೇಬರ್ ಯೂನಿಯನ್‌ಗೆ ಸೇರಿದವರು ಮಾಲೀಕರ ಬಳಿ ತಮ್ಮ

ವಿರೋಧವನ್ನು ವ್ಯಕ್ತಪಡಿಸಿದರು. ಹೆಂಗಸರು, ತಮ್ಮ ತಮ್ಮ ಟೈಲರ್‌ಗಳನ್ನು ಬದುಕಿಸುವಂತಹ ಹಾದಿಯೊಂದನ್ನು ರೂಪಿಸಬೇಕೆಂಬ ಅವರ ಕೋರಿಕೆಗಳನ್ನು ಮಾಲೀಕರು ನಿರಾಕರಿಸಿದರು. ಆದರೆ ಆ ವಿರೋಧ ಗುರುತರವಾಗೇನೂ ಇರಲಿಲ್ಲ. ತಮ್ಮ ಮಾಂಸವನ್ನು ತಾವೇ ತಿನ್ನೋ ಆ ನಗರವಾಸಿಗಳ ಅಭ್ಯಾಸಕ್ಕೆ ಅದು ಯಾವುದೇ ತಡೆಯನ್ನೊಡ್ಡಲಿಲ್ಲ.

ಈ ಮಾಂಸದ ವಿಚಾರದಲ್ಲಿ ತುಂಬಾ ಆಕರ್ಷಕ ಘಟನೆ ಘಟಿಸಿದ್ದು ಆ ನಗರದ ಬ್ಯಾಲೆ ನರ್ತಕ ಉಳಿದಿದ್ದ ತನ್ನ ಕೊನೆಯ ತುಂಡು ಮಾಂಸವನ್ನು ಕೊಯ್ದುಕೊಂಡಾಗಲೇ. ಕಲೆಯ ಮೇಲಿಟ್ಟಿದ್ದ ಆತನ ಅಪಾರ ಗೌರವದ ಕಾರಣದಿಂದ ತನ್ನ ಮುಂಗಾಲುಗಳನ್ನು ಕೊನೆಯಲ್ಲಿ ತಿನ್ನೋಣವೆಂದು ಅವನು ಬಿಟ್ಟುಕೊಂಡಿದ್ದ. ಹೀಗೇ ಕೆಲವು ದಿನಗಳಿಂದ ಆತ ನೆಮ್ಮದಿಯಿಲ್ಲದೆ ಚಡಪಡಿಸುತ್ತಿದ್ದುದನ್ನು ಆತನ ಸಹಚರರು ಗಮನಿಸಿದ್ದರು. ಈಗ ಆತನ ಬಳಿ ಉಳಿದಿರುವುದು ಮುಂಗಾಲಿನ ಮಾಂಸ ಮಾತ್ರ. ಆ ಒಂದು ಘಳಿಗೆ ತನ್ನ ಆತ್ಮೀಯರನ್ನು ಕರೆಸಿಕೊಂಡು ಕಠೋರ ಮೌನದಲ್ಲಿ ಆ ಉಳಿದ ಭಾಗವನ್ನು ಆತ ಕೊಯ್ದು ತೆಗೆದ. ಬೇಯಿಸದ ಹಾಗೆಯೇ ಅದನ್ನು ಈ ಮುಂಚೆ ಸುಂದರ ಬಾಯಿಯಾಗಿದ್ದು ಈಗ ಬರೀ ತೂತು ಮಾತ್ರ ಆಗಿರುವ ಭಾಗದೊಳಗೆ ಹಾಕಿಕೊಂಡ. ಅಲ್ಲಿದ್ದವರೆಲ್ಲ ಕ್ಷಣ ದಿಗ್ಭ್ರಮೆಗೊಂಡರು.

ಪರಿಸ್ಥಿತಿ ಹೀಗಿದ್ದರೂ, ಬದುಕು ಸಾಗುತ್ತಲೇ ಇತ್ತು. ಇದೇ ಮುಖ್ಯವಾದ ವಿಷಯ. ಅದು ಅದೃಷ್ಟವಶಾತ್ ಘಟಿಸಿತಾ? ನೆನಪುಗಳು ಹೇಳುವ ವಿಷಯಗಳಿಗಾಗಿರುವ ಮ್ಯೂಸಿಯಂನ ಮೂಲೆಯೊಂದರಲ್ಲಿ ಆ ನರ್ತಕನ ಕಾಲ್ಚೀಲಗಳನ್ನು ಇಟ್ಟಿರುವುದು ಈ ಕಾರಣದಿಂದಾಗಿಯೇ ಇದ್ದಿರಬಹುದೇ ? ಆ ನಗರದ ಗಜಗಾತ್ರ ದೇಹವುಳ್ಳ ವ್ಯಕ್ತಿಗಳಲ್ಲಿ ಈತ (ನಾನೂರಕ್ಕೂ ಹೆಚ್ಚು ಪೌಂಡ್ ತೂಕದ ವ್ಯಕ್ತಿ) ತನ್ನ ವಶದಲ್ಲಿದ್ದ ಮಾಂಸವೆಲ್ಲವನ್ನು ಹದಿನೈದು ದಿನಗಳಲ್ಲೇ ತಿಂದು ಮುಗಿಸಿದ್ದ (ಆತ ತಿಂಡಿ ತಿನಿಸುಗಳನ್ನು, ಮಾಂಸವನ್ನು ತಿನ್ನುವುದರಲ್ಲಿ ನಿಸ್ಸೀಮ. ಆತನ ದೇಹದ ವಿನ್ಯಾಸವೇ ಹೇರಳವಾಗಿ ತಿನ್ನಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿತ್ತು.) ಸ್ವಲ್ಪ ದಿನಗಳಲ್ಲೇ ಆತನನ್ನು ಗುರುತಿಸುವುದು ಕಷ್ಟವಾಯಿತು. ನಿಜ ಹೇಳಬೇಕೆಂದರೆ, ಆತ ಯಾರ ಕಣ್ಣಿಗೂ ಬೀಳದೆ ಅವಿತುಕೊಂಡ. ಹಾಗೆ ಕಣ್ತಪ್ಪಿಸಿ ಬದುಕಿದ್ದು ಆತನೊಬ್ಬನೇನಲ್ಲ. ನಗರದ ಹಲವಾರು ದಢೂತಿ ಮನುಷ್ಯರು ಹಾಗೇ ಮಾಡುತ್ತಿದ್ದರು.

ಹೀಗೆ ಒಂದು ದಿನ ಬೆಳಗ್ಗೆ ಶ್ರೀಮತಿ ಒರ್ಫಿಲಾ ತನ್ನ ಮಗನನ್ನು ಕೂಗಿದಾಗ ಆತನಿಂದ ಮಾರುತ್ತರವೇನೂ ಇರಲಿಲ್ಲ (ಆತ ತನ್ನ ಎಡಕಿವಿಯನ್ನು ತಿನ್ನುತ್ತಾ ಇದ್ದ). ಕಿವಿಯಿದ್ದ ಜಾಗಕ್ಕೆ ಬೇರೇನನ್ನೋ ಇಟ್ಟಿದ್ದ. ಬೇಡುವುದು, ಬೆದರಿಸುವುದು ಯಾವುದಕ್ಕೂ ಆತ ಕಿಮುಕ್ಕೆನ್ನಲಿಲ್ಲ. ಕಾಣೆಯಾದವರ ಪತ್ತೆ ಮಾಡುವ ನಿಪುಣರನ್ನು ಕರೆಸಲಾಯಿತು. ತಾನು ವಿಚಾರಿಸುತ್ತಿದ್ದಾಗ ತನ್ನ ಮಗ ಕೂತಿದ್ದಾಗಿಯೂ, ಈಗ ಕಾಣುತ್ತಿಲ್ಲ ಎಂದು ಹೇಳಿ ಮಿಸೆಸ್ ಒರ್ಫಿಲ ತೋರಿಸಿದ ಜಾಗದಿಂದ ಆ ನಿಪುಣರಿಗೆ ಉಳಿದಿದ್ದ ದೇಹದ ಚೂರು ಪಾರು ಬಿಡಿಭಾಗಗಳನ್ನು ಮಾತ್ರ ತೆಗೆಯಲು ಸಾಧ್ಯವಾಯಿತು. ಇಂತಹ ಸಣ್ಣಸಣ್ಣ ತೊಂದರೆಗಳು ಆ ನಗರವಾಸಿಗಳ ಸಂತೋಷವನ್ನು ಯಾವ ವಿಧದಲ್ಲೂ ಭಗ್ನಗೊಳಿಸಲಿಲ್ಲ. ಆಹಾರ ಕೊರತೆಯಿಂದ ಅಸ್ತವ್ಯಸ್ತಗೊಳ್ಳುತ್ತಿದ್ದ ಆ ನಗರದ ಜೀವನ

ಇದರಿಂದಾಗಿ ಬಗೆಪರಿದಂತಾಗಲಿಲ್ಲವೆ? ನಗರದ ಜನಸಂಖ್ಯೆ ಕಣ್ಣಿಗೆ ಕಾಣದೆ ಹೋಗುವಷ್ಟು ವೇಗದಲ್ಲಿ ಕ್ಷೀಣಿಸುತ್ತಾ ಹೋಗುತ್ತಿರುವುದು ಮೂಲಭೂತ ಸಮಸ್ಯೆಯೊಂದನ್ನು ಪರಿಹರಿಸುವ ಯತ್ನಗಳಿಗೆ ಸಂದ ಜಯ. ಹಾಗಂತ, ಜನತೆ ತಮ್ಮ ಬದುಕಿನಾಧಾರಗಳನ್ನು ಪಡೆಯುವಲ್ಲಿ ಇಟ್ಟಿರುವ ನಂಬಿಕೆಯನ್ನೇನೂ ಅದು ಭಗ್ನಗೊಳಿಸಲಿಲ್ಲ. ಚಿಂತನಾಸಾಗರವನ್ನು ಹೊತ್ತು ನಿಂತಿದ್ದರೂ ಆ ಸಮೂಹ ಈಗ ಉತ್ತಮವಾಗಿ ತನ್ನನ್ನು ತಾನು ಪೋಷಿಸಿಕೊಳ್ಳುತ್ತಿದೆ.

ಕ್ಯೂಬಾದವನಾದ ಪಿನೇರಾ ಕವಿ, ಕಥೆಗಾರ ಹಾಗೂ ನಾಟಕಕಾರ. ಅವನ ಎರಡು ಕಥಾಸಂಕಲನಗಳು ಹೊರಬಂದಿವೆ. ವಿಶ್ವದ ಪ್ರಖ್ಯಾತ ಲೇಖಕನಾದ ಬೋರ್ಹೆಸ್‌ನ ಜೊತೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದ ಪಿನೇರಾ ೧೯೬೧ರಲ್ಲಿ ರಾಜಕೀಯ ಕಾರಣಗಳಿಂದ ಬಂಧನಕ್ಕೊಳಗಾದ. ಈತನ ಕಥೆಗಳಲ್ಲಿ ಫ್ರಾನ್ಜ್ ಕಾಫ್ಕಾನ ದಟ್ಟ ಛಾಯೆ ಇದೆ ಎಂದು ಕೆಲವರು ಅಭಿಪ್ರಾಯಿಸಿದರೆ, ಇನ್ನು ಕೆಲವರು ಅವನ ಒಡನಾಡಿ ಬೋರ್ಹೆಸ್‌ನ ಛಾಯೆ ಇದೆ ಎನ್ನುತ್ತಾರೆ.

-ಲೇ.

ಕನಕರಾಜು ಬಿ. ಇಂಗ್ಲಿಷ್ ಉಪನ್ಯಾಸಕ, ಬಿಎಸ್‌ವಿಪಿ ಮಹಿಳಾ ಕಾಲೇಜು,
ವಿಜಯನಗರ, ಬೆಂಗಳೂರು-೪೦.

ನೊಬೆಲ್ ಪಾರಿತೋಷಕ ಅಂಗೀಕಾರ ಭಾಷಣ

ಮೂಲ : ರವೀಂದ್ರನಾಥ ಟಾಗೋರ್
ಅನು : ವಿ. ಶ್ರೀನಿವಾಸ

ಕಡೆಗೊಮ್ಮೆ ನಾನು ತಮ್ಮ ದೇಶಕ್ಕೆ ಭೇಟಿ ನೀಡಲು ಸಾಧ್ಯವಾಗಿದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ತಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸಲು ನನಗೆ ಸಂತೋಷವಾಗಿದೆ. ತಾವು ನನ್ನ ಕಾರ್ಯವನ್ನು ಮನ್ನಿಸಿ ನನಗೆ ನೊಬೆಲ್ ಪಾರಿತೋಷಕವನ್ನು ನೀಡಿ ಗೌರವಿಸಿದ್ದೀರಿ.

ಇಂಗ್ಲೆಂಡಿನಲ್ಲಿರುವ ನನ್ನ ಪ್ರಕಾಶಕರು ನನಗೆ ಈ ಪಾರಿತೋಷಕವನ್ನು ನೀಡಲಾಗಿದೆಯೆಂದು ಕಳುಹಿಸಿದ್ದ ಕೇಬಲ್‌ಗ್ರಾಂ ನನ್ನ ಕೈಸೇರಿದ ಆ ಮಧ್ಯಾಹ್ನ ನನಗೆ ನೆನಪಿದೆ. ನಾನು ಶಾಂತಿನಿಕೇತನದ ಶಾಲೆಯಲ್ಲಿದ್ದೆ. ಆ ಶಾಲೆಯ ಬಗ್ಗೆ ತಾವು ಕೇಳಿದ್ದೀರೆಂದು ಭಾವಿಸುತ್ತೇನೆ. ಆಗ ನಾವು ಶಾಲೆಯ ಬಳಿ ಇರುವ ಅರಣ್ಯಕ್ಕೆ ಒಂದು ತಂಡವನ್ನು ಕರೆದೊಯ್ಯುತ್ತಿದ್ದೆವು. ನಾನು ತಂತಿ ಮತ್ತು ಅಂಚೆ ಕಛೇರಿಯ ಮುಂದೆ ಸಾಗಿ ಹೋಗುತ್ತಿದ್ದಾಗ, ಒಬ್ಬಾತ ನನ್ನ ಬಳಿಗೆ ಓಡಿ ಬಂದು ತಂತಿ ಸಂದೇಶವನ್ನು ಮುಂದೆ ಹಿಡಿದ. ಅದೇ ವಾಹನದಲ್ಲಿ ನನ್ನೊಡನೆ ಓರ್ವ ಆಂಗ್ಲ ಸಂದರ್ಶಕರೂ ಇದ್ದರು. ಆ ಸಂದೇಶವು ಮುಖ್ಯವಾದದ್ದೇನೂ ಅಲ್ಲವೆಂದು ಭಾವಿಸಿ, ನಾನು ಅದನ್ನು ಜೇಬಿನೊಳಗಿಟ್ಟುಕೊಂಡು, ನಾವು ಹೊರಟಿದ್ದ ಸ್ಥಳವನ್ನು ತಲುಪಿದ ನಂತರ ಓದಿದರಾಯಿತು ಎಂದುಕೊಂಡೆ. ಆದರೆ, ನನ್ನ ಸಂದರ್ಶಕರು ತಮಗೆ ಸಂದೇಶದ ಒಳಾಂಶಗಳು ತಿಳಿದಿರುವುದಾಗಿಯೂ, ಅದರಲ್ಲಿ ಒಂದು ಮುಖ್ಯವಾದ ಸಂದೇಶವಿರುವುದಾಗಿಯೂ ತಿಳಿಸಿ, ಅದನ್ನು ಓದುವಂತೆ ನನ್ನನ್ನು ಒತ್ತಾಯಪಡಿಸಿದರು. ನಾನು ಅದನ್ನು ತೆರೆದು ಓದಿದೆ; ನನಗೆ ಸಂದೇಶವನ್ನು ನಂಬುವುದೇ ಕಷ್ಟವಾಯಿತು. ಮೊದಲಿಗೆ ನಾನು ತಂತಿ ಸಂದೇಶದ ಭಾಷೆ ಸರಿಯಾಗಿರದೆ, ನಾನು ಅದನ್ನು ತಪ್ಪಾಗಿ ಅರ್ಥಮಾಡಿಕೊಂಡಿರಬಹುದೆಂದುಕೊಂಡೆ. ಆದರೆ, ಕಡೆಗೆ ನನಗೆ ಖಾತರಿಯಾಯಿತು. ಶಾಲೆಯ ನನ್ನ ಹುಡುಗರು ಹಾಗೂ ಶಿಕ್ಷಕರ ಸಂತೋಷ-ಸಂಭ್ರಮಗಳನ್ನು ನಾನು ತಮಗೆ ವಿವರಿಸಬೇಕಾಗಿಲ್ಲ. ನನ್ನನ್ನು ಪ್ರೀತಿಸುತ್ತಿದ್ದ, ನಾನು ಗಾಢವಾಗಿ ಪ್ರೀತಿಸುತ್ತಿದ್ದ ಈ ಹುಡುಗರು ತಾವು ಪೂಜ್ಯಭಾವನೆಯಿಂದ

ಕಾಣುತ್ತಿದ್ದಾತನಿಗೆ ಸಂದ ಗೌರವಕ್ಕಾಗಿ ಹೆಮ್ಮೆಪಟ್ಟಿದ್ದು ಎಲ್ಲಕ್ಕಿಂತ ಮಿಗಿಲಾಗಿ ನನ್ನ ಮನಸ್ಸನ್ನು ಕರಗಿಸಿತು. ನನಗೆ ಸಂದ ಗೌರವದಲ್ಲಿ ನನ್ನ ದೇಶ ಬಾಂಧವರು ಪಾಲ್ಗೊಳ್ಳುವರೆಂಬುದು ನನಗೆ ಮನವರಿಕೆಯಾಯಿತು.

ಮಧ್ಯಾಹ್ನದ ಉಳಿದ ಸಮಯವೆಲ್ಲ ಹೀಗೆ ಕಳೆಯಿತು. ಸಂಜೆಯಾದ ಮೇಲೆ ನಾನು ಅಟ್ಟಣಿಕೆಯ ಮೇಲೆ ಒಂಟಿಯಾಗಿ ಕುಳಿತು ನನ್ನನ್ನು ನಾನು ಪ್ರಶ್ನಿಸಿಕೊಂಡೆ: ನಾನು ಬೇರೊಂದು ಜನಾಂಗಕ್ಕೆ - ಸಾಗರ -ಪರ್ವತಗಳ ಪಾಶ್ಚಿಮಾತ್ಯ ಮಕ್ಕಳಿಂದ ಬೇರ್ಪಡಿಸಿ, ಪ್ರತ್ಯೇಕಿಸಿರುವ ವಿಭಿನ್ನ ಜನಾಂಗವೊಂದಕ್ಕೆ ಸೇರಿದವನಾಗಿದ್ದಾಗ್ಯೂ, ಪಶ್ಚಿಮವು ನನ್ನ ಕವನಗಳನ್ನು ಅಂಗೀಕರಿಸಲು ಕಾರಣವೇನಿದ್ದೀತು? ಹೃದಯ ಪರಿಶೋಧನೆ ಮಾಡಿಕೊಂಡು ನನ್ನನ್ನು ನಾನು ಪ್ರಶ್ನಿಸಿಕೊಂಡೆನೇ ಹೊರತು, ಹಿಗ್ಗಿನ, ಹೆಮ್ಮೆಯ ಭಾವನೆಗಳಿಂದಲ್ಲ ಎಂದು ನಾನು ತಮಗೆ ಭರವಸೆ ನೀಡಬಲ್ಲೆ. ಆ ಕ್ಷಣದಲ್ಲಿ ನಾನು ವಿನಮ್ರನಾದೆ.

ನಾನು ಬಹಳ ಚಿಕ್ಕವನಾಗಿದ್ದಾಗಿನಿಂದಲೂ ನನ್ನ ಜೀವನದ ಕಾರ್ಯ ಹೇಗೆ ವಿಕಾಸಗೊಂಡಿತೆಂಬುದು ನನಗೆ ನೆನಪಿದೆ. ಸುಮಾರು ೨೫ ವರ್ಷದವನಾಗಿದ್ದಾಗ, ನಾನು ಗಂಗಾನದಿ ದಂಡೆಯ ಅಭ್ಯುಕ್ತ ಬಂಗಾಳಿ ಗ್ರಾಮವೊಂದರ ದೋಣಿ ಮನೆಯ ಏಕಾಂತದಲ್ಲಿ ಅತ್ಯಂತ ವಿವಿಕ್ತ ಜೀವನವನ್ನು ನಡೆಸುತ್ತಿದ್ದೆ. ಶರತ್ಕಾಲದಲ್ಲಿ ಹಿಮಾಲಯದಲ್ಲಿ ಸರೋವರಗಳಿಂದ ಬರುತ್ತಿದ್ದ ಕಲಹಂಸಗಳೇ ನನ್ನ ಏಕೈಕ ಜೀವಂತ ಸಂಗಾತಿಗಳಾಗಿದ್ದವು. ಆ ಏಕಾಂತದಲ್ಲಿ ನಾನು ಬಯಲು ಪ್ರದೇಶವನ್ನು, ಸೂರ್ಯ ಪ್ರಕಾಶದಿಂದ ತುಂಬಿ ತುಳುಕಿರುವ ದ್ರಾಕ್ಷಾರಸದಂತೆ ಹೀರಿಕೊಂಡಿದ್ದೇನೆಂದು ಕಾಣುತ್ತದೆ. ನದಿಯ ಮೆಲು ನುಡಿ ನನ್ನೊಡನೆ ಸಂಭಾಷಿಸಿ, ಪ್ರಕೃತಿಯ ರಹಸ್ಯಗಳನ್ನು ನನಗೆ ಹೇಳುತ್ತಿತ್ತು. ನಾನು ಏಕಾಂತದಲ್ಲಿ ದಿನಕಳೆದೆ-ಕನಸು ಕಾಣುತ್ತ, ನನ್ನ ಕನಸಿಗೆ ಕವನಗಳಲ್ಲಿ, ಅಧ್ಯಯನಗಳಲ್ಲಿ ರೂಪು ನೀಡುತ್ತ; ನನ್ನ ಚಿಂತನೆಗಳನ್ನು ಕಲ್ಕತ್ತೆಯ ಸಾರ್ವಜನಿಕರಿಗೆ ಕಳುಹಿಸುತ್ತ-ನಿಯತಕಾಲಿಕೆಗಳು ಮತ್ತು ಇತರ ಪತ್ರಿಕೆಗಳ ಮೂಲಕ. ಅದು ಪಾಶ್ಚಿಮಾತ್ಯರ ಜೀವನಕ್ಕಿಂತ ತೀರ ವಿಭಿನ್ನವಾದ ಜೀವನವಾಗಿದ್ದಿತೆಂಬುದನ್ನು ತಾವು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಿರಿ. ತಮ್ಮ ಪಾಶ್ಚಿಮಾತ್ಯ ಕವಿಗಳು ಅಥವಾ ಲೇಖಕರುಗಳ ಪೈಕಿ ಯಾರಾದರೂ ತಮ್ಮ ಎಳೆಯ ವಯಸ್ಸಿನ ದಿನಗಳ ಅತ್ಯಧಿಕ ಭಾಗವನ್ನು ಅಂತಹ ಸಂಪೂರ್ಣ ಏಕಾಂತತೆಯಲ್ಲಿ ಕಳೆಯುವರೇ ಎಂಬುದು ನನಗೆ ತಿಳಿಯದು. ಅದು ಸಾಧ್ಯವಾಗಲಾರದು, ಪಾಶ್ಚಿಮಾತ್ಯ ಜಗತ್ತಿನಲ್ಲಿ ಅಂತಹ ವಿವಕ್ತತೆಗೇ ಸ್ಥಾನವಿಲ್ಲವೆಂಬುದು ನನಗೆ ಬಹುಮಟ್ಟಿಗೆ ಖಚಿತಪಟ್ಟಿದೆ.

ನನ್ನ ಜೀವನ ಹೀಗೆಯೇ ಸಾಗಿತು. ಆ ದಿನಗಳಲ್ಲಿ ನಾನೊಬ್ಬ ಅಪ್ರಸಿದ್ಧ ವ್ಯಕ್ತಿ-ನನ್ನ ಬಹುತೇಕ ದೇಶ ಬಾಂದವರಿಗೆ ನಾನಾರೆಂಬುದೇ ತಿಳಿದಿರಲಿಲ್ಲ. ಅರ್ಥಾತ್, ನನ್ನ ಸ್ವಂತ ಪ್ರಾಂತದಾಚೆ ನನ್ನ ಹೆಸರು ತಿಳಿದೇ ಇರಲಿಲ್ಲ. ಆದರೆ, ಜನಜಂಗುಳಿಯ ಕುತೂಹಲದಿಂದ ನನ್ನನ್ನು ರಕ್ಷಿಸಿದ್ದ ಆ ಪ್ರಸಿದ್ಧಿಯಿಂದ ತುಂಬ ತೃಪ್ತನಾಗಿಯೇ ಇದ್ದೆ.

ನಂತರ ಬಂದಿತು, ಅದೊಂದು ಕಾಲ-ಆ ಏಕಾಂತದಿಂದ ಹೊರಬಂದು ನನ್ನ ಸಹ-ಮಾನವರಿಗಾಗಿ ಸ್ವಲ್ಪ ಕೆಲಸ ಮಾಡಬೇಕು; ನನ್ನ ಕನಸುಗಳಿಗೆ ರೂಪು ನೀಡುತ್ತ, ಜೀವನದ

ಸಮಸ್ಯೆಗಳ ಬಗ್ಗೆ ಗಾಢವಾಗಿ ಚಿಂತಿಸುವಷ್ಟರಿಂದಲೇ ತೃಪ್ತಿಗೊಳ್ಳದೆ, ಯಾವುದಾದರೂ ನಿರ್ದಿಷ್ಟ ಕಾರ್ಯದ ಮೂಲಕ ನನ್ನ ಸಹ-ಮಾನವರಿಗೆ ಯಾವುದಾದರೂ ನಿರ್ಧಾರಾತ್ಮಕ ಸೇವೆಯ ಮೂಲಕ ನನ್ನ ಭಾವನೆಗಳಿಗೆ ಅಭಿವ್ಯಕ್ತಿ ನೀಡಬೇಕೆಂಬ ಹೆಬ್ಬಯಕೆ ಮೂಡಿತು, ನನ್ನ ಹೃದಯದಲ್ಲಿ.

ನನ್ನ ಮನಸ್ಸಿಗೆ ಹೊಳೆದ ಒಂದು ವಿಷಯವೆಂದರೆ, ನನ್ನ ಮನಸ್ಸಿಗೆ ಬಂದ ಒಂದು ಕೆಲಸವೆಂದರೆ ಮಕ್ಕಳಿಗೆ ಪಾಠ ಹೇಳುವುದು. ಪಾಠ ಹೇಳುವ ಕಾಯಕಕ್ಕೆ ನಾನು ವಿಶೇಷ ಅರ್ಹತೆಯನ್ನು ಪಡೆದಿದ್ದೇನೆಂದೇನೂ ಅಲ್ಲ. ಏಕೆಂದರೆ, ನಾನೇ ಕ್ರಮಬದ್ಧ ಶಿಕ್ಷಣದ ಪೂರ್ಣ ಲಾಭವನ್ನು ಪಡೆದವನಲ್ಲ. ಸ್ವಲ್ಪ ಕಾಲ ನಾನು ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಹಿಂದೆ-ಮುಂದೆ ನೋಡಿದ್ದುಂಟು. ಆದರೆ, ನನಗೆ ಪ್ರಕೃತಿಯ ಮೇಲೆ ಗಾಢವಾದ ಪ್ರೀತಿ ಇರುವುದರಿಂದ, ಸ್ವಾಭಾವಿಕವಾಗಿಯೇ ನನಗೆ ಮಕ್ಕಳ ಮೇಲೆ ಪ್ರೀತಿ ಉಂಟೆಂದು ತೋರಿತು. ಮಾನವರ ಮಕ್ಕಳಿಗೆ ನಕ್ಕುನಲಿಯುವ, ಬದುಕುವ, ಪ್ರಕೃತಿಯೊಂದಿಗೆ ತಾದಾತ್ಮ್ಯವನ್ನು ಸಾಧಿಸಿಕೊಳ್ಳುವ ಪೂರ್ಣ ಸ್ವಾಂತಂತ್ರ್ಯವನ್ನು ದೊರಕಿಸಿಕೊಡುವುದೇ ನಾನು ಈ ಸಂಸ್ಥೆಯನ್ನು ಸ್ಥಾಪಿಸುವುದರ ಉದ್ದೇಶವಾಗಿತ್ತು. ಶಾಲೆಗೆ ಹೋಗುವ ಬಹುತೇಕ ಮಂದಿ ಹುಡುಗರ ಮೇಲೆ ವಿಧಿಸಲಾಗುತ್ತಿದ್ದ ತೊಡಕು-ತೊಡರುಗಳಿಂದಾಗಿ ಚಿಕ್ಕವನಾಗಿದ್ದಾಗ ನಾನೇ ನರಳಿದ್ದೆ. ಮಕ್ಕಳು ಬದುಕಿನ ಆನಂದ ಹಾಗೂ ಸ್ವಾತಂತ್ರ್ಯಗಳಿಗಾಗಿ ಹಾತೊರೆಯುತ್ತಾರೆ. ಅವರ ಈ ತಣಿಸಲಾಗದ ತೃಷೆಯನ್ನೇ ದಮನ ಗೊಳಿಸಿ, ತುಳಿದು ಹಾಕುವ ಶಿಕ್ಷಣ ಯಂತ್ರದ ಮೂಲಕ ನಾನು ಸಾಗಿ ಬಂದಿದ್ದೇನೆ. ಮನುಷ್ಯರ ಮಕ್ಕಳಿಗೆ ಸ್ವಾತಂತ್ರ್ಯವನ್ನೂ, ಆನಂದವನ್ನು ಕೊಡುವುದೇ ನನ್ನ ಗುರಿಯಾಗಿತ್ತು.

ಹೀಗೆ, ನನ್ನ ಸುತ್ತ ಕೆಲವು ಹುಡುಗರನ್ನು ಸೇರಿಸಿಕೊಂಡು, ನಾನು ಅವರಿಗೆ ಪಾಠ ಹೇಳಿಕೊಟ್ಟು ಅವರನ್ನು ಸಂತುಷ್ಟಿಗೊಳಿಸಲು ಪ್ರಯತ್ನಿಸಿದೆ. ನಾನು ಅವರ ಆಟದ ಸಂಗಾತಿಯಾದೆ, ಅವರ ಒಡನಾಡಿಯಾದೆ. ನಾನು ಅವರ ಬದುಕನ್ನು ಹಂಚಿಕೊಂಡೆ. ನಾನು ತಂಡದ ಅತ್ಯಂತ ದೊಡ್ಡ ಮಗುವೆಂದುಕೊಂಡೆ. ಈ ಸ್ವತಂತ್ರ ವಾತಾವರಣದಲ್ಲಿ ನಾವೆಲ್ಲರೂ ಒಟ್ಟಿಗೆ ಬೆಳೆದೆವು. ಮಕ್ಕಳ ಹುರುಪು-ಹುಮ್ಮಸ್ಸು, ಆನಂದ, ಸರಸ-ಸಲ್ಲಾಪ, ಹಾಡುಗಳಿಂದಾಗಿ ವಾತಾವರಣದಲ್ಲಿ ತುಂಬಿ ತುಳುಕುತ್ತಿದ್ದ ನಲಿವಿನ, ಸಂತಸದ ಸುಧೆಯನ್ನು ನಾನು ಅಲ್ಲಿದ್ದ ಪ್ರತಿಯೊಂದು ದಿನವು ಈಂಟಿದೆ, ಹೀರಿಕೊಂಡೆ. ಸಂಜೆಯ ವೇಳೆ, ಸೂರ್ಯಾಸ್ತಮಾನದ ಸಮಯದಲ್ಲಿ ನಾನು ಒಂಟಿಯಾಗಿ ಕುಳಿತು, ರಸ್ತೆಯ ಪಕ್ಕದ ನೆರಳು ಹರಡುವ ಸಾಲು ಮರಗಳನ್ನು ವೀಕ್ಷಿಸುತ್ತಿದ್ದೆ. ಮಧ್ಯಾಹ್ನದ ನೀರವತೆಯಲ್ಲಿ ಗಾಳಿಯಲ್ಲಿ ತೇಲಿ ಬರುತ್ತಿದ್ದ ಮಕ್ಕಳ ದನಿಯು ಸ್ಪಷ್ಟವಾಗಿ ಕೇಳಿಬರುತಿತ್ತು. ಮಕ್ಕಳ ಈ ಕಿರಿಚಾಟ, ಹಾಡು-ಪಾಡು, ಸಂತಸದ ದನಿಗಳು ಮರಗಳಂತೆಯೇ ಎಂದು ನನಗನಿಸಿತು. ಆ ಮರಗಳಾದರೋ ಆ ಅನಂತ ಆಗಸದ ಹೃದಯದಿಂದ ಚಿಮ್ಮುವ ಜೀವನದ ಬುಗ್ಗೆಗಳಂತೆ ಭೂಮಿಯ ಹೃದಯದಿಂದ ಹೊರಬರುತ್ತಿದ್ದವು. ಅದು ಮನಷ್ಯ ಜೀವನದ ಒಟ್ಟಾರೆ, ಸಮಗ್ರ ಕೂಗಿನ, ಮಾನವ ಜನಾಂಗದ ಹೃದಯದಿಂದ ಆಗಸದವರೆಗೆ ಮೇಲೇರುವ ಮಾನವರ ಆನಂದ ಮತ್ತು ಆಶೋತ್ತರಗಳ ಎಲ್ಲ ಭಾವಗಳ ಸಂಕೇತವಾಗಿ, ಅವುಗಳನ್ನು ನನ್ನ ಮನಸ್ಸಿನ ಮುಂದೆ ನಿಲ್ಲಿಸಿತು. ಬೆಳೆದ ಮಕ್ಕಳಾದ ನಾವು ಕೂಡ ಅನಂತಕ್ಕೆ ನಮ್ಮ ಆಶೋತ್ತರಗಳ ಕೂಗನ್ನು ಕಳುಹಿಸುತ್ತಿದ್ದೇವೆ ಎಂದು ನನಗನಿಸಿತು,

ನನಗರಿವಾಯಿತು. ನನ್ನ ಹೃದಯದ ಅಂತರಾಳದಲ್ಲಿ ನನಗೆ ಅವರ ಅನುಭವವಾಯಿತು.

ಇಂತಹ ವಾತಾವರಣದಲ್ಲಿ, ಇಂತಹ ಪರಿಸರದಲ್ಲಿ ನಾನು ಗೀತಾಂಜಲಿಯ ಕವನಗಳನ್ನು ಬರೆಯುತ್ತಿದ್ದೆ. ಮಧ್ಯರಾತ್ರಿಯ ವೇಳೆ, ಭಾರತದ ಆಕಾಶದ ದಿವ್ಯತಾರೆಗಳ ಅಡಿಯಲ್ಲಿ ಕುಳಿತು, ನನಗೆ ನಾನೇ ಅವುಗಳನ್ನು ಹಾಡಿದೆ. ಉಷಃ ಕಾಲದಲ್ಲಿ, ಸೂರ್ಯಾಸ್ತಮಾನದ, ಅಪರಾಹ್ನದ ಪ್ರಕಾಶದಲ್ಲಿ ನಾನು ಈ ಹಾಡುಗಳನ್ನು ಬರೆಯುತ್ತಿದ್ದೆ. ಕಡೆಗೊಂದು ದಿನ ನನಗೆ ನಾನು ಮತ್ತೊಮ್ಮೆ ಹೊರಬಂದು, ವಿಶಾಲ ಜಗತ್ತಿನ ಹೃದಯವನ್ನು ಸಂಧಿಸಬೇಕೆಂಬ ಪ್ರೇರಣೆ ಯುಂಟಾಯಿತು.

ನಾನು ನನ್ನ ಏಕಾಂತತೆಯ ಜೀವನದಿಂದ ಈ ನಕ್ಕುನಲಿಯುವ ಮಕ್ಕಳ ನಡುವೆ ಹೊರಬಂದು, ನನ್ನ ಸಹಜೀವಿಗಳಿಗೆ ಸೇವೆ ಸಲ್ಲಿಸಲು ತೊಡಗಿದುದು ಹೆಚ್ಚು ವಿಶಾಲವಾದ ಜಗತ್ತಿಗೆ ನಾನು ಕೈಕೊಂಡ ತೀರ್ಥಯಾತ್ರೆಗೆ ನಾಂದಿಯಾಯಿತೆಂಬುವುದನ್ನು ನಾನು ಮನಗಂಡೆ. ನನಗೆ ಹೊರಗೆ ಬಂದು ಪಶ್ಚಿಮದ ಮಾನವ ಜನಾಂಗದೊಂದಿಗೆ ಸಂಪರ್ಕ ಬೆಳೆಸಿಕೊಳ್ಳಬೇಕೆಂಬ ಉತ್ಕಟೇಚ್ಛೆ ಯುಂಟಾಯಿತು. ಏಕೆಂದರೆ, ಇಂದಿನ ಯುಗವು ಅತ್ಯಂತ ಸಮೃದ್ಧವಾಗಿ ಶಕ್ತಿ-ಸಾಮರ್ಥ್ಯಗಳನ್ನು ಪಡೆದಿರುವ ಪಶ್ಚಿಮಾತ್ಯ ಮಾನವನಿಗೆ ಸೇರಿದ್ದೆಂಬುದನ್ನು ನಾನು ಅರಿತಿದ್ದೆ.

ಆತ ಇಡೀ ಜಗತ್ತಿನ ಅಧಿಕಾರವನ್ನು ಹೊಂದಿದ್ದಾನೆ. ಆತನ ಜೀವನವು ಎಲ್ಲಾ ಎಲ್ಲೆಗಳನ್ನು ಮೀರಿ, ಉಕ್ಕಿ ಹರಿದು, ಮಹಾನ್ ಭವಿಷ್ಯಕ್ಕೆ ತನ್ನ ಸಂದೇಶವನ್ನು ಕಳುಹಿಸುತ್ತಿದೆ. ನಾನು ಸಾಯುವುದಕ್ಕೆ ಮುಂಚೆ ಪಶ್ಚಿಮಕ್ಕೆ ಬಂದು ದೈವಿ ಚೇತನದ ನೆಲೆಯಾದ ಗುಪ್ತ ದೇವಾಲಯದ ಅರ್ಚಕನನ್ನು ಭೇಟಿಯಾಗಬೇಕೆಂದು ನನಗನಿಸಿತು. ತನ್ನೆಲ್ಲ ಶಕ್ತಿ-ಸಾಮರ್ಥ್ಯಗಳೊಂದಿಗೆ, ಜೀವನದ ಆಶೋತ್ತರಗಳೊಂದಿಗೆ ದೈವೀ ಮಾನವ ಪಶ್ಚಿಮದಲ್ಲಿ ನೆಲೆಸಿದ್ದಾನೆ ಎಂದೆಣಿಸಿದೆ.

ಹೀಗೆ ನಾನು ಹೊರಗೆ ಬಂದೆ. ನನ್ನ ಗೀತಾಂಜಲಿ ಕವನಗಳನ್ನು ಬಂಗಾಳಿಯಲ್ಲಿ ಬರೆದ ನಂತರ ನಾನು ಅವುಗಳನ್ನು ಇಂಗ್ಲಿಷಿಗೆ ಅನುವಾದಿಸಿದೆ. ನನ್ನ ಆಂಗ್ಲ ಭಾಷಾಪ್ರಭುತ್ವದ ಬಗ್ಗೆ ನನಗೆ ಆತ್ಮವಿಶ್ವಾಸವಿರದಿದ್ದುದರಿಂದ, ನನಗೆ ಅವುಗಳನ್ನು ಪ್ರಕಟಿಸುವ ಇಚ್ಛೆಯೇನು ಇರಲಿಲ್ಲ. ಆದರೆ, ನಾನು ಪಶ್ಚಿಮಕ್ಕೆ ಬಂದಾಗ ಹಸ್ತಪ್ರತಿಯನ್ನು ನನ್ನೊಡನೆ ತಂದಿದ್ದೆ. ತಮ್ಮ ಮುಂದೆ ಈ ಕವನಗಳನ್ನಿಟ್ಟಾಗ ಬ್ರಿಟಿಷ್ ಸಾರ್ವಜನಿಕರು ಹಾಗೂ ಅದಕ್ಕಿಂತ ಮುಂಚೆ ಹಸ್ತಪ್ರತಿಯಲ್ಲಿ ಅವುಗಳನ್ನು ಓದುವ ಅವಕಾಶವಿದ್ದವರು ಅವುಗಳನ್ನು ಅನುಮೋದಿಸಿದರೆಂಬುದು ನಿಮಗೆ ತಿಳಿದಿದೆ. ನಾನು ಅಂಗೀಕೃತನಾದೆ. ಪಶ್ಚಿಮವು ತನ್ನ ಹೃದಯವನ್ನು ತೆರೆದಿಟ್ಟಿತು, ತಡಮಾಡದೆ. ಐವತ್ತು ವರ್ಷಗಳ ಕಾಲ ಕಾರ್ಯಚಟುವಟಿಕೆಯಿಂದ, ಪಶ್ಚಿಮದಿಂದ, ದೂರವಿದ್ದ ನನ್ನನ್ನು ಪಶ್ಚಿಮವು ಒಂದು ಕ್ಷಣದಲ್ಲಿ ತನ್ನ ಸ್ವಂತ ಕವಿಗಳಲ್ಲಿ ಒಬ್ಬನೆಂದು ಅಂಗೀಕರಿಸಿದ್ದು ನನಗೆ ಒಂದು ಪವಾಡವಾಗಿತ್ತು. ಅದು ನನಗೆ ಆಶ್ಚರ್ಯವನ್ನುಂಟು ಮಾಡಿತು. ನಿಜ. ಆದರೆ, ಇದರಲ್ಲಿ ಬಹುಶಃ ಗಾಢವಾದ ಮಹತ್ವವಿದ್ದೀತೆಂದು ನನಗನಿಸಿತು. ಪಾಶ್ಚಿಮಾತ್ಯ ಜೀವನ ಮತ್ತು ಚೇತನಗಳಿಂದ ಬೇರ್ಪಟ್ಟು, ನಾನು ಏಕಾಂತತೆಯಲ್ಲಿ ಕಳೆದಿದ್ದ ಆ ವರ್ಷಗಳು ತಮ್ಮೊಡನೆ ತಂದಿದ್ದುವು-ವಿಶ್ರಾಂತಿ, ಪ್ರಸನ್ನತೆಗಳ ಸಂವೇದನೆಯನ್ನು, ಚಿರಂತನದ ಸಂವೇದನೆಯನ್ನು. ಮಿತಿಮೀರಿದ ಕಾರ್ಯಚಟುವಟಿಕೆಯಿಂದ ಕೂಡಿದ ಜೀವನವನ್ನು

ನಡೆಸುತ್ತಿರುವ ಪಾಶ್ಚಿಮಾತ್ಯ ಜನರ ಹೃದಯದ ಅಂತರಾಳದಲ್ಲಿ ಇನ್ನೂ ಶಾಂತಿಗಾಗಿ, ಅನಂತ ಶಾಂತಿಗಾಗಿ ತೃಷೆ ಇರುವುದರಿಂದ, ಅವರಿಗೆ ನಿಜವಾಗಿ ಬೇಕಾಗಿದ್ದ ಭಾವನೆಗಳು ಅವೇ ಆಗಿದ್ದುವು. ನನ್ನ ಬಾಲ್ಯದ ದಿನಗಳಿಂದಲೂ ಗಂಗಾನದಿ ದಂಡೆಯ ಪೂರ್ಣ ಏಕಾಂತತೆಯಲ್ಲಿ ನನ್ನ ಕಾವ್ಯ ಸ್ಫೂರ್ತಿಯು ಪಡೆದಿದ್ದ ತರಬೇತಿಯೇ ನನ್ನ ಪಾಲಿನ ಅರ್ಹತೆಯಾಯಿತು. ಆ ವರ್ಷಗಳ ಶಾಂತಿಯು ನನ್ನ ಸ್ವಭಾವದಲ್ಲಿ ಶೇಖರಣೆಯಾಗಿದ್ದುದರಿಂದ, ನಾನು ಅದನ್ನು ಹೊರತಂದು ಪಾಶ್ಚಿಮಾತ್ಯ ಮಾನವನ ಮುಂದೆ ಎತ್ತಿಹಿಡಿಯುವುದು ಸಾಧ್ಯವಾಯಿತು. ನಾನು ನೀಡಿದ್ದನ್ನು ಆತ ಸ್ವೀಕರಿಸಿದ-ಕೃತಜ್ಞತಾಪೂರ್ವಕವಾಗಿ.

ಆ ಪ್ರಶಂಸೆಯನ್ನು ನನ್ನ ವೈಯಕ್ತಿಕ ಪಾಲೆಂದು-ನನ್ನ ಸ್ವಂತಕ್ಕೆ ಸೇರಿದ್ದೆಂದು-ಅಂಗೀಕರಿಸಬಾರದೆಂಬುದನ್ನು ನಾನು ಬಲ್ಲೆ . ಅದು ನನ್ನಲ್ಲಿರುವ ಪೌರ್ವಾತ್ಯವು ಪಾಶ್ಚಿಮಾತ್ಯಕ್ಕೆ ಕೊಟ್ಟದ್ದು. ಪೂರ್ವವು ಆಧ್ಯಾತ್ಮಿಕ ಮಾನವಕುಲದ ಮಾತೆಯಲ್ಲವೆ? ಪಶ್ಚಿಮವು, ಪಶ್ಚಿಮದ ಮಕ್ಕಳು ತಮ್ಮ ಆಟ-ಪಾಟಗಳಲ್ಲಿ ಘಾಸಿಗೊಂಡಾಗ; ಉಪವಾಸದಿಂದ, ಹಸಿವೆಯಿಂದ ಬಳಲಿದಾಗ, ಪೂರ್ವದ ಪ್ರಸನ್ನಮಾತೆಯತ್ತ ತಮ್ಮ ಮುಖವನ್ನು ತಿರುಗಿಸುವುದಿಲ್ಲವೇ? ಅವರು ಆಕೆಯಿಂದ ತಮ್ಮ ಆಹಾರವನ್ನೂ, ಬಳಲಿದಾಗ ರಾತ್ರಿಯ ವಿಶ್ರಾಂತಿಯನ್ನೂ ನಿರೀಕ್ಷಿಸುವುದಿಲ್ಲವೇ? ಅವರನ್ನು ನಿರಾಶೆಗೊಳಿಸಬಹುದೇ?

ಪಶ್ಚಿಮವು ಪೂರ್ವದತ್ತ ಮತ್ತೊಮ್ಮೆ ತನ್ನ ಮುಖವನ್ನು ತಿರುಗಿಸಿ, ಪೌಷ್ಟಿಕ ಆಹಾರವನ್ನು ಪಡೆಯಲು ಪ್ರಯತ್ನಿಸುತ್ತಿದ್ದ ಸಮಯಕ್ಕೆ ಸರಿಯಾಗಿ ನಾನು ಬಂದದ್ದು ನನ್ನ ಸುದೈವ. ನಾನು ಪೂರ್ವದ ಪ್ರತಿನಿಧಿಯಾದ್ದರಿಂದ ನನ್ನ ಪಾಶ್ಚಿಮಾತ್ಯ ಮಿತ್ರರು ನನಗೆ ಪಾರಿತೋಷಕವನ್ನು ನೀಡಿದರು.

ತಾವು ನನಗೆ ನೀಡಿರುವ ಬಹುಮಾನದ ಹಣವನ್ನು ನಾನು ನನಗಾಗಿ ವ್ಯರ್ಥವಾಗಿ ವೆಚ್ಚಮಾಡಿಲ್ಲವೆಂದು ತಮಗೆ ಭರವಸೆ ನೀಡಬಲ್ಲೆ. ಓರ್ವ ವ್ಯಕ್ತಿಯಾಗಿ ಅದನ್ನು ಸ್ವೀಕರಿಸುವ ಹಕ್ಕು ನನಗಿರಲಿಲ್ಲವಾದ್ದರಿಂದ, ನಾನು ಅದನ್ನು ಇತರರಿಗಾಗಿ ವಿನಿಯೋಗಿಸಿದ್ದೇನೆ. ನಾನು ಅದನ್ನು ನಮ್ಮ ಪೌರ್ವಾತ್ಯ ಮಕ್ಕಳು ಮತ್ತು ವಿದ್ಯಾರ್ಥಿಗಳಿಗೆ ಸಮರ್ಪಿಸಿದ್ದೇನೆ. ಆದರೆ, ಅದು ಬಿತ್ತಿದ ಬೀಜದಂತೆ, ಅದು ತನ್ನನ್ನು ಬಿತ್ತಿದವರಿಗಾಗಿ ಮೊಳಕೆಯೊಡೆದು ಮೇಲೆ ಬಂದು, ಅವರ ಲಾಭಕ್ಕಾಗಿ ಫಲ ನೀಡುತ್ತದೆ. ನಾನು ಇತ್ತೀಚೆಗೆ ಸ್ಥಾಪಿಸಿರುವ ವಿಶ್ವವಿದ್ಯಾನಿಲಯದ ನಿರ್ವಹಣೆಗಾಗಿ ತಾವು ನೀಡಿದ ಈ ಹಣವನ್ನು ಬಳಸಿದ್ದೇನೆ. ಈ ವಿಶ್ವವಿದ್ಯಾನಿಲಯವು ಪಾಶ್ಚಿಮಾತ್ಯ ವಿದ್ಯಾರ್ಥಿಗಳು ಬಂದು ತಮ್ಮ ಪೌರ್ವಾತ್ಯ ಸೋದರರನ್ನು ಸಂಧಿಸಿ, ಸತ್ಯದ ಅನ್ವೇಷಣೆಯಲ್ಲಿ ಒಟ್ಟಾಗಿ ದುಡಿದು, ಪೌರ್ವಾತ್ಯದಲ್ಲಿ ಶತಶತಮಾನಗಳಿಂದ ಹುದುಗಿರುವ ನಿಧಿಗಳನ್ನು ಹೊರದೆಗೆಯಲು ಪ್ರಯತ್ನಿಸಿ ಇಡೀ ಮಾನವ ಜನಾಂಗಕ್ಕೇ ಅಗತ್ಯವಾದ ಪೌರ್ವಾತ್ಯ ಆಧ್ಯಾತ್ಮಿಕ ಸಂಪನ್ಮೂಲಗಳನ್ನು ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿಪಡಿಸುವ ಸ್ಥಳವಾಗಬೇಕೆಂದು ನನಗೆ ತೋರಿತು.

ತನ್ನ ನಾಗರಿಕತೆಯ ವೈಭವದ ದಿನಗಳಲ್ಲಿ ಭಾರತವು ತನ್ನ ಮಹಾನ್ ವಿಶ್ವವಿದ್ಯಾನಿಲಯವನ್ನು ಹೊಂದಿದ್ದ ಕಾಲವನ್ನು ನಾನು ತಮ್ಮ ನೆನಪಿಗೆ ತರಬಲ್ಲೆ. ಜ್ಯೋತಿಯನ್ನು ಒಂದು ಸಣ್ಣ ಪರಿಮಿತ

ವ್ಯಾಪ್ತಿಯೊಳಗೆ ಬೆಳಗಿಸಲಾಗದು. ಅದು ಇಡೀ ಜಗತ್ತನ್ನೇ ಬೆಳಗಬೇಕಾದದ್ದು. ಭಾರತದ ನಾಗರಿಕತೆಯು ವೈಭವೋಪೇತವೂ, ವಿವೇಕಪೂರ್ಣವೂ, ಸಂಪದ್ಭರಿತವೂ ಆಗಿದ್ದಿತು. ಭಾರತವು ತನ್ನ ಸ್ವಂತ ಮಕ್ಕಳಿಗಾಗಿ ಮಾತ್ರವೇ ಅದನ್ನು ಉಪಯೋಗಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಅದು ಎಲ್ಲ ಜನಾಂಗಗಳ ಜನರಿಗೆ ತನ್ನ ಮಹಾದ್ವಾರಗಳನ್ನು ತೆರೆದು ಆತಿಥ್ಯ ನೀಡಬೇಕಾಯಿತು. ಚೀನೀಯರು, ಜಪಾನೀಯರು, ಪರ್ಷಿಯನ್ನರು ಮತ್ತು ಎಲ್ಲಾ ವಿಭಿನ್ನ ಜನಾಂಗಗಳಿಗೆ ಸೇರಿದ ಜನರು ಬಂದರು. ಭಾರತದಲ್ಲಿ ಅತ್ಯುತ್ತಮವಾದದ್ದೇನಿತ್ತೋ ಅದನ್ನು - ಎಲ್ಲ ಕಾಲಗಳ ಹಾಗೂ ಸಮಸ್ತ ಮಾನವ ಕುಲಕ್ಕೆ ಭಾರತದ ಅತ್ಯುತ್ತಮ ಕೊಡುಗೆಯನ್ನು ಗಳಿಸಿಕೊಳ್ಳುವ ಅವಕಾಶ ಅವರದಾಯಿತು. ಭಾರತ ಅದನ್ನು ಉದಾರವಾಗಿ ನೀಡಿತು. ಬೋಧನೆಗಾಗಿ-ಪಾಠ ಹೇಳಿಕೊಟ್ಟದ್ದಕ್ಕಾಗಿ-ಯಾವುದೇ ಐಹಿಕ ವಸ್ತು ರೂಪದಲ್ಲಿ ಶುಲ್ಕವನ್ನು ಪಡೆಯುವುದು ಎಂದೂ ನಮ್ಮ ಸಂಪ್ರದಾಯವಲ್ಲವೆಂಬುದನ್ನು ತಾವು ಬಲ್ಲಿರಿ. ಏಕೆಂದರೆ ಜ್ಞಾನವನ್ನು ಪಡೆದಿರುವವನು ಅದನ್ನು ವಿದ್ಯಾರ್ಥಿಗಳಿಗೆ ಬೋಧಿಸುವುದು ಆತನ ಜವಾಬ್ದಾರಿಯೆಂದು ಭಾರತದಲ್ಲಿ ನಾವು ಪರಿಗಣಿಸುತ್ತೇವೆ. ವಿದಾರ್ಥಿಗಳಷ್ಟೇ ತಮ್ಮ ಉಪಾಧ್ಯಾಯರ ಬಳಿ ಬಂದು ಕೇಳುವುದಲ್ಲ, ಆದರೆ, ಉಪಾಧ್ಯಾಯನು ತನ್ನ ಅತ್ಯುತ್ತಮ ಕೊಡುಗೆಯನ್ನು ಅದರ ಅಗತ್ಯವಿರುವವರಿಗೆಲ್ಲ ನೀಡಿ, ತನ್ನ ಜೀವಿತೋದ್ದೇಶವನ್ನು ಈಡೇರಿಸಿಕೊಳ್ಳಬೇಕು. ಹೀಗೆ, ಆತ್ಮಾಭಿವ್ಯಕ್ತಿಯ ಅಗತ್ಯವೇ, ಭಾರತದಲ್ಲಿ ಸಂಗ್ರಹಣೆಯಾಗಿದ್ದುದನ್ನು ಹಾಗೂ ತನ್ನಲ್ಲಿಯೇ ಇರುವ ಅತ್ಯುತ್ತಮವಾದದ್ದನ್ನು ನೀಡುವ ಅಗತ್ಯವೇ ಭಾರತದ ವಿವಿಧ ಪ್ರಾಂತಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಮಾಡಿತಲ್ಲದೆ, ಅವುಗಳ ಹೇತುವೂ, ಮೂಲವೂ ಆಯಿತು.

ಇಂದು ನಮ್ಮ ಪಾಲಿಗೆ ಒದಗಿಬಂದಿರುವ ದುರ್ದೆಶೆಯೆಂದರೆ, ನಾವು ಜಗತ್ತಿನ ಕಣ್ಣಿಗೆ ಅಗೋಚರವಾಗಿ, ಏಕಾಂತದಲ್ಲಿ ಬಾಳುತ್ತಿರುವುದಲ್ಲದೆ ಬೇರೇನೂ ಅಲ್ಲ ಎಂದು ನನಗನಿಸುತ್ತದೆ. ನಾವು ಮಾನವ ಕುಲಕ್ಕೆ ಆತಿಥ್ಯ ನೀಡಿ, ನಮ್ಮಲ್ಲಿರುವ ಅತ್ಯುತ್ತಮದಾದದ್ದನ್ನು ನಮ್ಮೊಡನೆ ಹಂಚಿಕೊಳ್ಳುವಂತೆ ಜಗತ್ತನ್ನು ಕೋರಲು ನಮಗಿದ್ದ ಅವಕಾಶವನ್ನು ಕಳೆದುಕೊಂಡಿದ್ದೇವೆ. ಐಹಿಕ ಪ್ರಗತಿಯ ದೃಷ್ಟಿಯಿಂದ, ಪೌರ್ವಾತ್ಯ ಮನುಷ್ಯಕುಲ ಮತ್ತು ಪೌರ್ವಾತ್ಯ ಸಂಸತಿಗಳ ಮೇಲೆ ಮೇಲುಗೈ ಸಾಧಿಸಿರುವ ಪಾಶ್ಚಾತ್ಯ ಜನಾಂಗಗಳ ಸಂಪರ್ಕ ಪಡೆದ ನಂತರ, ಒಂದು ಶತಮಾನಕ್ಕಿಂತ ಹೆಚ್ಚು ಕಾಲದಿಂದಲೂ ನಾವು ನಮ್ಮ ಸ್ವಂತ ಸಂಸತಿಯಲ್ಲಿ ನಂಬಿಕೆಯನ್ನು ಕಳೆದುಕೊಂಡೆವು. ಶಿಕ್ಷಣ ಸಂಸ್ಥೆಗಳಲ್ಲಿ ನಮ್ಮ ಸ್ವಂತ ಸಂಸತಿಗೆ ಯಾವು ಅವಕಾಶವನ್ನೂ ಕಲ್ಪಿಸಿಕೊಡಲಿಲ್ಲ. ಒಂದು ಶತಮಾನಕ್ಕಿಂತ ಹೆಚ್ಚು ಕಾಲದಿಂದಲೂ ನಮ್ಮ ವಿದ್ಯಾರ್ಥಿಗಳು ಗತಕಾಲದ ತಮ್ಮ ಸಂಸತಿಯ ಮೌಲ್ಯದ ಕಿಂಚಿತ್ ಅರಿವೂ ಇಲ್ಲದೆಯೇ ಬೆಳೆದು ಬಂದಿದ್ದಾರೆ. ಹೀಗೆ, ನಾವು ನಮ್ಮ ಸ್ವಂತ ಪರಂಪರೆಯಲ್ಲಿ ಹುದುಗಿದ್ದ ಶ್ರೇಷ್ಠವಾದುದರ, ಮಹತ್ವಪೂರ್ಣವಾದುದರ ಸಂಪರ್ಕವನ್ನು ಕಳೆದುಕೊಂಡದ್ದು ಮಾತ್ರವೇ ಅಲ್ಲ. ಮನುಷ್ಯಕುಲದ ನಾಗರಿಕತೆಗೆ ನಮ್ಮ ಪಾಲಿನ ಕೊಡುಗೆಯನ್ನು ಸಲ್ಲಿಸುವ ಮಹಾನ್ ಗೌರವವನ್ನೂ ಇಲ್ಲದಂತೆ ಮಾಡಿಕೊಂಡೆವು. ಇತರರಿಂದ ಭಿಕ್ಷೆ ಬೇಡುತ್ತ, ಸಂಸತಿಯನ್ನು ಎರವಲಾಗಿ ಪಡೆದುಕೊಂಡು, ಶಾಶ್ವತವಾಗಿ ಶಾಲಾ ಬಾಲಕರಂತೆ ಬಾಳುತ್ತ, ನಾವು ನಮ್ಮಲ್ಲಿದ್ದುದನ್ನು ಕೊಡುವ ಅವಕಾಶವನ್ನು ಕಳೆದುಕೊಂಡೆವು.

ಆದರೆ, ನಾವು ಅಂತಹ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಾದ ಕಾಲವೀಗ ಬಂದಿದೆ. ನಮ್ಮಲ್ಲಿರುವುದನ್ನು ಹೊರತರಲು ನಾವು ಸಕಲ ಪ್ರಯತ್ನಗಳನ್ನು ಮಾಡಬೇಕಾಗಿದೆ. ಶತಮಾನದಿಂದ ಶತಮಾನಕ್ಕೆ ದೇಶದಿಂದ ದೇಶಕ್ಕೆ ಹೋಗುತ್ತ ಇತರರ ಮುಂದೆ ನಮ್ಮ ದಾರಿದ್ರ್ಯವನ್ನು ಪ್ರದರ್ಶಿಸುವುದಲ್ಲ. ನಮ್ಮಲ್ಲಿ ಹೆಮ್ಮೆಪಡಬೇಕಾದದ್ದೇನಿದೆ, ನಾವು ನಮ್ಮ ಪೂರ್ವಜರಿಂದ ಏನನ್ನು ಪಡೆದಿದ್ದೇವೆ ಎಂಬುದು ನಮಗೆ ತಿಳಿದಿದೆ. ಅಂತಹ ಕೊಡುವ ಅವಕಾಶವನ್ನು ಕಳೆದುಕೊಳ್ಳಬಾರದು-ನಮ್ಮ ಜನರಿಗಾಗಿ ಮಾತ್ರವೇ ಅಲ್ಲದೇ, ಮನುಷ್ಯಕುಲಕ್ಕಾಗಿ.

ಅದೇ ಕಾರಣಕ್ಕಾಗಿಯೇ ನಾನು ಅಂತಾರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ವಿದ್ಯಾರ್ಥಿಗಳು ಒಟ್ಟಿಗೆ ಕಲೆತು, ಆಧ್ಯಾತ್ಮಿಕ ರಸದೂಟದ ಸಾಮಾನ್ಯ ಸಂತರ್ಪಣೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದು ನಿರ್ಧರಿಸಿದೆ.

ಹೀಗೆ, ತಾವು ನನಗೆ ನೀಡಿರುವ ಪಾರಿತೋಷಕವು ನನ್ನ ಮನಸ್ಸಿನಲ್ಲಿದ್ದ ಈ ಮಹಾನ್ ಉದ್ದೇಶ ಸಾಧನೆಗೆ ಅಷ್ಟಿಷ್ಟು ಕೊಡುಗೆಯಾಗಿದೆ ಎಂದು ತಿಳಿಸಲು ನನಗೆ ಹೆಮ್ಮೆಯೆನಿಸುತ್ತದೆ. ಇದು ನಾನು ಪಶ್ಚಿಮಕ್ಕೆ ಮತ್ತೊಮ್ಮೆ ಬರುವಂತೆ ಮಾಡಿದೆ. ನಾನು ಬಂದಿದ್ದೇನೆ, ದೂರ ಪ್ರಾಚ್ಯದಲ್ಲಿ ತಮಗಾಗಿ ಕಾದಿರುವ ಸಂತರ್ಪಣೆಗೆ ತಮ್ಮನ್ನು ಕರೆಯಲು, ತಮ್ಮನ್ನು ಸ್ವಾಗತಿಸಲು. ತಾವು ನನ್ನ ಆಹ್ವಾನವನ್ನು ತಿರಸ್ಕರಿಸಲಾರಿರೆಂದು ನಂಬಿದ್ದೇನೆ. ನಾನು ಯೂರೋಪಿನ ವಿವಿಧ ದೇಶಗಳಿಗೆ ಭೇಟಿ ನೀಡಿ, ಉತ್ಸಾಹಪೂರ್ಣ ಸ್ವಾಗತವನ್ನು ಪಡೆದಿದ್ದೇನೆ. ಆ ಸ್ವಾಗತಕ್ಕೆ ತನ್ನದೇ ಆದ ಅರ್ಥವಿದೆ-ಪೂರ್ವಕ್ಕೆ ಪಶ್ಚಿಮದ ಅಗತ್ಯವಿರುವಂತೆಯೇ ಪಶ್ಚಿಮಕ್ಕೆ ಪೂರ್ವದ ಅಗತ್ಯವಿದೆ. ಆದ್ದರಿಂದ, ಅವೆರಡೂ ಸಂಧಿಸಬೇಕಾದ ಕಾಲವೀಗ ಬಂದಿದೆ.

ನಾನು ಈ ಮಹಾನ್ ಕಾಲಕ್ಕೆ, ಈ ಮಹಾನ್ ಯುಗಕ್ಕೆ ಸೇರಿದವನಾಗಿರುವುದು ನನಗೆ ಸಂತೋಷದ ಸಂಗತಿ. ಪೂರ್ವ-ಪಶ್ಚಿಮಗಳು ಒಟ್ಟಿಗೆ ಸೇರುತ್ತಿರುವ ಈ ಮಹಾನ್ ಯುಗಕ್ಕೆ ಅಭಿವ್ಯಕ್ತಿ ನೀಡಲು ನಾನು ಅಷ್ಟಿಷ್ಟು ಕೆಲಸ ಮಾಡಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಅವು ಪರಸ್ಪರರತ್ತ ಮುಂದೆ ಸಾಗುತ್ತಿವೆ. ಅವು ಪರಸ್ಪರರನ್ನು ಸಂಧಿಸಲು ಬರುತ್ತಿವೆ. ಹಾಗೂ ಪರಸ್ಪರ ಸಂಧಿಸಿ, ಒಂದು ನವ ನಾಗರಿಕತೆಯನ್ನು, ಭವಿಷ್ಯದ ಮಹಾನ್ ಸಂಸತಿಯನ್ನು ನಿರ್ಮಿಸಲು ತಮ್ಮ-ತಮ್ಮ ಆಮಂತ್ರಣವನ್ನು ಪಡೆದಿವೆ.

ನನ್ನ ಬರಹದ ಮೂಲಕ, ಅನುವಾದದಲ್ಲಿ ಅಸ್ಪಷ್ಟವಾಗಿಯಾದರೂ ಅಂತಹದೊಂದು ಭಾವ, ವಿಚಾರ ತಮ್ಮನ್ನು ತಲುಪಿದೆಯೆಂಬುದು ನನಗೆ ಖಚಿತಪಟ್ಟಿದೆ. ಪೂರ್ವ- ಪಶ್ಚಿಮಗಳೆರಡಕ್ಕೂ ಸೇರಿದ ಈ ಭಾವ, ವಿಚಾರ ಪೂರ್ವದಿಂದ ಹೊರಟು, ಪಶ್ಚಿಮಕ್ಕೆ ಬಂದು ಇಲ್ಲಿ ತನ್ನ ವಿರಾಮವನ್ನೂ ಆವಾಸಸ್ಥಾನವನ್ನು ಪಡೆದು ಸ್ವಾಗತಾರ್ಹತೆಯನ್ನು ಗಳಿಸಿಕೊಂಡು, ಪಶ್ಚಿಮದಿಂದ ಅಂಗೀಕರಿಸಲ್ಪಟ್ಟಿದೆ. ನಾನು ನನ್ನ ಬರಹಗಳಲ್ಲಿ ಈ ಕಾಲದ ಅಗತ್ಯದ ಧ್ವನಿಯ- ಯುಗಧರ್ಮದ ಧ್ವನಿಯ- ಅರ್ಥವಿವರಣೆ ನೀಡಲು ಸಮರ್ಥನಾಗುವಷ್ಟು ಸುದೈವಿಯಾಗಿದ್ದ ಪಕ್ಷದಲ್ಲಿ, ತಾವು ನನಗೆ ನೀಡಿರುವ ಈ ದಿವ್ಯ ಅವಕಾಶಕ್ಕಾಗಿ ನಾನು ತಮಗೆ ಹೃತ್ಪೂರ್ವಕವಾಗಿ ಕೃತಜ್ಞನಾಗಿದ್ದೇನೆ. ಸ್ವೀಡನ್‌ನಿಂದ ನಾನು ಪಡೆದ ಅಂಗೀಕಾರವು ನನ್ನನ್ನೂ ನನ್ನ ಕಾರ್ಯವನ್ನು ಪಾಶ್ಚಾತ್ಯ ಸಾರ್ವಜನಿಕರ ಮುಂದೆ ತಂದು ನಿಲ್ಲಿಸಿದೆಯಾದರೂ, ಅದರಿಂದ ನನಗೆ ಸ್ವಲ್ಪ ತೊಂದರೆಯೇ ಆಗಿದೆಯೆಂಬುದನ್ನು ಹೇಳಬೇಕು.

ಅದು ನನಗೆ ರೂಢಿಯಾದ ವಿವಿಕ್ತತೆಯನ್ನು ಭೇದಿಸಿದೆ. ಅದು ನನಗೆ ಎಂದೂ ವಾಡಿಕೆಯಿಲ್ಲದ ಮಹಾನ್ ಜನಸ್ತೋಮದ ಮುಂದೆ ನನ್ನನ್ನು ತಂದು ನಿಲ್ಲಿಸಿದೆ. ಈ ಪರಿಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಪಾಶ್ಚಾತ್ಯ ಜಗತ್ತಿನ ಅಪಾರ ಜನಸ್ತೋಮದ ಮುಂದೆ ನಿಂತಾಗ ನನ್ನ ಹೃದಯ ಮುದುಡಿಹೋಗುತ್ತದೆ. ತಾವು ನನಗೆ ನೀಡಿರುವ ಮೆಚ್ಚುಗೆ-ಪ್ರಶಂಸೆಗಳ ಮಹಾನ್ ಉಡುಗೊರೆಯನ್ನು ತಾವು ನನಗೆ ನೀಡಿರುವ ರೀತಿಯಲ್ಲಿ ಸ್ವೀಕರಿಸುವುದನ್ನು ನಾನಿನ್ನೂ ಅಭ್ಯಾಸ ಮಾಡಿಕೊಳ್ಳಬೇಕಾಗಿದೆ. ತಮ್ಮ ಮುಂದೆ ನಿಂತಾಗ ನನಗೆ ನಾಚಿಕೆಯಾಗುತ್ತದೆ, ಲಜ್ಜಾಸ್ಪದವೆನಿಸುತ್ತದೆ- ಈಗ ಆಗುತ್ತಿರುವುದು ಅದೇ. ಆದರೆ, ನಾನು ಇಷ್ಟನ್ನು ಮಾತ್ರ ಹೇಳಬಲ್ಲೆ: ನನಗೆ ಇಂತಹ ಮಹತ್ತರ ಅವಕಾಶವನ್ನು ನೀಡಿರುವುದಕ್ಕಾಗಿ, ಪೂರ್ವ-ಪಶ್ಚಿಮಗಳನ್ನು ಒಂದುಗೂಡಿಸಿ ಅವುಗಳ ಹೃದಯಗಳನ್ನು ಬೆಸೆಯಲು ನಾನು ಒಂದು ಸಾಧನವಾಗಿರುವುದಕ್ಕಾಗಿ ಭಗವಂತನಿಗೆ ನಾನು ಕೃತಜ್ಞನಾಗಿದ್ದೇನೆ. ನನ್ನ ಜೀವನದ ಕಡೆಯವರೆಗೂ ನಾನು ಈ ಉದ್ದಿಷ್ಟ ಕಾರ್ಯವನ್ನು ನಿರ್ವಹಿಸಬೇಕು. ನನ್ನ ಕೈಲಾದದ್ದನ್ನೆಲ್ಲ ಮಾಡಬೇಕು. ಪೂರ್ವ ಮತ್ತು ಪಶ್ಚಿಮಗಳ ನಡುವಣ ಸಿಟ್ಟಿನ ಮನೋಭಾವವನ್ನು ಉಪಶಮನಗೊಳಿಸಬೇಕು. ಆ ಉದ್ದೇಶದಿಂದಲೇ ನಾನು ಈ ಸಂಸ್ಥೆಯನ್ನು ಸ್ಥಾಪಿಸಿದ್ದೇನೆ.

ಯಾವುದನ್ನೇ ಆಗಲಿ, ಯಾವ ಜನಾಂಗವನ್ನೇ ಆಗಲಿ, ಯಾವ ಸಂಸ್ಕೃತಿಯನ್ನೇ ಆಗಲಿ, ತಿರಸ್ಕರಿಸುವುದು ಭಾರತದ ಮನೋಧರ್ಮವೆಂದು ನನಗನಿಸುವುದಿಲ್ಲ. ಭಾರತದ ಮನೋಧರ್ಮವು ಯಾವಾಗಲೂ ಏಕತೆಯ ಆದರ್ಶವನ್ನೇ ಘೋಷಿಸಿದೆ. ಈ ಏಕತೆಯ ಆದರ್ಶವು ಎಂದೂ ಯಾವುದನ್ನೂ ಯಾವುದೇ ಜನಾಂಗವನ್ನು ಅಥವಾ ಯಾವುದೇ ಸಂಸ್ಕೃತಿಯನ್ನು ತಿರಸ್ಕರಿಸುವುದಿಲ್ಲ. ಅದು ಎಲ್ಲವನ್ನೂ ತನ್ನಲ್ಲಿಯೇ ಒಳಗೊಳ್ಳುತ್ತದೆ. ಒಂದೇ ಆತ್ಮದಿಂದ ಎಲ್ಲವನ್ನು ಒಳ ಹೊಕ್ಕು ನೋಡುವುದೇ ಎಲ್ಲವನ್ನು ಯಥಾಸ್ಥಿತಿಯಲ್ಲಿಯೇ ಗ್ರಹಿಸಿ, ಇದೀ ವಿಶ್ವದಲ್ಲಿಯೇ ಯಾವುದನ್ನೂ ಹೊರಗಿಡದೆ, ಎಲ್ಲವನ್ನೂ ಅನುಕಂಪದಿಂದ, ಪ್ರೇಮದಿಂದ ತನ್ನೊಳಗೆ ಸಮಾವೇಶಗೊಳಿಸಿಕೊಳ್ಳುವುದೇ ನಮ್ಮ ಎಲ್ಲ ಆಧ್ಯಾತ್ಮಿಕ ಪರಿಶ್ರಮದ ಮೇರುಗುರಿಯಾಗಿದೆ. ಇದೇ ಭಾರತದ ಮನೋಧರ್ಮ. ಈ ರಾಜಕೀಯ ಅಶಾಂತಿಯ ಇಂದಿನ ಕಾಲದಲ್ಲಿ ಅದೇ ಮಹಾನ್ ಭಾರತ ಮಾತೆಯ ಮಕ್ಕಳು ಪಶ್ಚಿಮವನ್ನು ತಿರಸ್ಕರಿಸುವಂತೆ ಕೂಗೆಬ್ಬಿಸಿದಾಗ, ನನಗೆ ನೋವಾಗುತ್ತದೆ.ಅದು ಅವರು ಪಾಶ್ಚಾತ್ಯರಿಂದ ಕಲಿತಿರುವ ಪಾಠವೆಂದು ನನಗನಿಸುತ್ತದೆ. ನಮ್ಮ ಜೀವನಧ್ಯೇಯ, ಉದ್ದಿಷ್ಟ ಕಾರ್ಯ ಅಂತಹುದಲ್ಲ. ಭಾರತವಿರುವುದು ಎಲ್ಲ ಮನುಷ್ಯ ಜನಾಂಗಗಳನ್ನೂ ಒಂದುಗೂಡಿಸುವುದಕ್ಕಾಗಿ. ಆ ಕಾರಣಕ್ಕಾಗಿಯೇ ಭಾರತದಲ್ಲಿ ಜನಾಂಗಗಳ ಏಕತೆಯಿಲ್ಲ. ನಮ್ಮ ಸಮಸ್ಯೆ ಸಮಸ್ತ ಮನುಕುಲದ ಸಮಸ್ಯೆಯಾದ ಜನಾಂಗ ಸಮಸ್ಯೆ. ನಮ್ಮಲ್ಲಿ ದ್ರಾವಿಡರಿದ್ದಾರೆ, ಮಹಮ್ಮದೀಯರಿದ್ದಾರೆ, ಹಿಂದೂಗಳಿದ್ದಾರೆ, ಭಾರತದ ವಿಭಿನ್ನ ಪಂಗಡಗಳ, ಸಮುದಾಯಗಳ ಜನರಿದ್ದಾರೆ. ಆದ್ದರಿಂದ, ರಾಜಕೀಯ ಐಕಮತ್ಯದ ಯಾವ ಮೇಲ್ನೋಟದ ಬಾಹ್ಯಬಂಧವೂ ನಮ್ಮ ಮನಸ್ಸನ್ನು ಆಕರ್ಷಿಸಲಾರದು, ನಮಗೆ ಸಮಾಧಾನವನ್ನು ಕೊಡಲಾರದು, ನಮಗೆ ವಾಸ್ತವಿಕವೆನಿಸಲಾರದು. ನಾವು ಇನ್ನೂ ಆಳಕ್ಕಿಳಿದು ಹೋಗಬೇಕು. ನಾವು ಅತ್ಯಂತ ಗಾಢವಾದ ಏಕತೆಯನ್ನು ವಿವಿಧ ಜನಾಂಗಗಳ ನಡುವಣ ಆಧ್ಯಾತ್ಮಿಕ ಏಕತೆಯನ್ನು ಕಂಡುಕೊಳ್ಳಬೇಕು.

ನಾವು ಮನುಷ್ಯ ಮನೋಧರ್ಮದ ಆಳಕ್ಕಿಳಿದು, ಎಲ್ಲ ಮನುಷ್ಯ ಜನಾಂಗಗಳ ನಡುವೆ ಇರುವ ಏಕತೆಯ ಮಹಾನ್ ಬಂಧವನ್ನು ಕಂಡುಕೊಳ್ಳಬೇಕು. ಅದಕ್ಕೆ ಬೇಕಾದ ಸಿದ್ಧತೆ, ಸಾಧನ-ಸಲಕರಣೆಗಳು ನಮ್ಮ ಬಳಿ ಇವೆ. ನಾವು ನಮ್ಮ ಪೂರ್ವಜರ ಅಮರಕೃತಿಗಳನ್ನು ಪಿತ್ರಾರ್ಜಿತವಾಗಿ ಪಡೆದಿದ್ದೇವೆ. ಆ ಮಹಾನ್ ಲೇಖಕರು ಏಕತೆ ಮತ್ತು ಅನುಕಂಪಗಳ ಧರ್ಮವನ್ನು ಬೋಧಿಸಿ **"ಎಲ್ಲ ಜೀವಿಗಳನ್ನೂ ತನ್ನಂತೆಯೇ ಕಾಣುವವನು, ಎಲ್ಲ ಜೀವಿಗಳನ್ನು ತನ್ನಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳುವವನು ಸತ್ಯದ ದರ್ಶನವನ್ನು ಪಡೆಯುತ್ತಾನೆ"**. ಎಂದು ಘೋಷಿಸಿದರು. ಪೂರ್ವದ ಮಕ್ಕಳು ಮಾತ್ರವೇ ಅಲ್ಲದೆ ಪಶ್ಚಿಮದ ಮಕ್ಕಳೂ ಅದನ್ನು ಮತ್ತೊಮ್ಮೆ ಸ್ಪಷ್ಟವಾಗಿ ಗ್ರಹಿಸಬೇಕು. ಈ ಮಹಾನ್ ಅಮರ ಸತ್ಯಗಳನ್ನು ಅವರಿಗೆ ನೆನಪುಮಾಡಿ ಕೊಡಬೇಕಾದ ಅಗತ್ಯವೂ ಇದೆ. ಮಾನವನು ಇತರ ಮನುಷ್ಯ ಜನಾಂಗಗಳೊಡನೆ, ಇತರ ಮಾನವರೊಂದಿಗೆ ಕಾದಾಡುವುದಲ್ಲ, ಆದರೆ, ಸಮಾಧಾನ ಮತ್ತು ಶಾಂತಿಗಳನ್ನು ನೆಲೆಗೊಳಿಸಿ, ಸ್ನೇಹ-ಪ್ರೇಮಗಳ ಬಂಧಗಳನ್ನು ಪುನಃ ಸ್ಥಾಪಿಸುವುದು ಆತನ ಕೆಲಸ. ನಾವು ಕಾದಾಡುವ ಮೃಗಗಳಂತಲ್ಲ. ಅಹಂ-ಸ್ವಾರ್ಥವು-ನಮ್ಮ ಜೀವನದಲ್ಲಿ ಪ್ರಬಲವಾಗಿದೆ. ಮೈಲುಗೈಯಾಗಿದೆ. ಈ ಸ್ವಾರ್ಥವೇ ವಿವಿಕ್ತತೆಗೆ, ನೋವು-ಯಾತನೆಗಳಿಗೆ, ದ್ವೇಷಾಸೂಯೆಗಳಿಗೆ, ರಾಜಕೀಯ ಮತ್ತು ವಾಣಿಜ್ಯ ಪೈಪೋಟಿಗೆ ಎಡೆಮಾಡಿಕೊಟ್ಟಿದೆ. ನಾವು ಗರ್ಭಗುಡಿಯೊಳಕ್ಕೆ ಹೋದರೆ, ಎಲ್ಲ ಜನಾಂಗಗಳ ಪ್ರೇಮ ಮತ್ತು ಏಕತೆಗಳ ಆಳಕ್ಕಿಳಿದರೆ, ಈ ಎಲ್ಲ ಭ್ರಮೆಗಳೂ ಮಾಯವಾಗುತ್ತವೆ.

ಭಾರತದ ಆ ಮಹಾನ್ ಜೀವಿತೋದ್ದೇಶ ಸಾಧನೆಗಾಗಿ ನಾನು ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಿದ್ದೇನೆ. ತಾವು ನಮ್ಮಲ್ಲಿಗೆ ಬಂದು ನಮ್ಮೊಡನೆ ಕೈಜೋಡಿಸಿ, ಈ ಸಂಸ್ಥೆಯನ್ನು ನಮಗಷ್ಟೇ ಬಿಟ್ಟುಬಿಡದೆ, ತಮ್ಮ ಸ್ವಂತ ವಿದ್ಯಾರ್ಥಿಗಳನ್ನೂ, ವಿದ್ವಾಂಸರನ್ನೂ ನಮ್ಮಲ್ಲಿಗೆ ಕಳುಹಿಸಿಕೊಟ್ಟು, ಈ ವಿಶ್ವವಿದ್ಯಾನಿಲಯವನ್ನು ಪೂರ್ವ-ಪಶ್ಚಿಮಗಳೆರಡಕ್ಕೂ ಒಂದು ಸಾಮಾನ್ಯ ಸಂಸ್ಥೆಯನ್ನಾಗಿ ಬೆಳೆಸಲು ನಮಗೆ ಸಹಾಯ ಮಾಡುವಂತೆ, ನಾನು, ನನಗೆ ಈ ಅವಕಾಶ ದೊರೆತಿರುವಾಗ ತಮ್ಮನ್ನು ಕೋರುತ್ತೇನೆ. ತಮ್ಮನ್ನು ಆಮಂತ್ರಿಸುತ್ತೇನೆ. ತಮ್ಮ ವಿದ್ಯಾರ್ಥಿಗಳು, ವಿದ್ವಾಂಸರು ತಮ್ಮ ಜೀವನದ ಕಾಣಿಕೆಯನ್ನು ಸಲ್ಲಿಸುವಂತಾಗಲಿ; ನಾವೆಲ್ಲರೂ ಒಟ್ಟಿಗೆ ಸೇರಿ, ಅದು ಜೀವಂತವಾಗಿ ಸ್ಪಂದಿಸಿ, ಜಗತ್ತಿನ ಅವಿಭಾಜ್ಯ, ಅವಿಭಾಜಿತ ಮನುಷ್ಯಕುಲದ ಪ್ರಾತಿನಿಧಿಕ ಸಂಸ್ಥೆಯಾಗುವಂತೆ ಮಾಡೋಣ.

ಇದಕ್ಕಾಗಿ ನಾನು ತಮ್ಮಲ್ಲಿಗೆ ಬಂದಿದ್ದೇನೆ. ನಾನು ತಮ್ಮಿಂದ ಕೇಳುವುದು ಇದನ್ನೇ. ಮಾನವರ ಏಕತೆಯ ಹೆಸರಿನಲ್ಲಿ, ಪ್ರೇಮದ ಹೆಸರಿಸಲ್ಲಿ, ಭಗವಂತನ ಹೆಸರಿನಲ್ಲಿ, ನಾನು ತಮ್ಮನ್ನು ಹಕ್ಕಿನಿಂದ ಕೇಳುತ್ತಿದ್ದೇನೆ. ತಮ್ಮನ್ನು ಬರುವಂತೆ ಕೋರುತ್ತೇನೆ. ನಾನು ತಮ್ಮನ್ನು ಆಮಂತ್ರಿಸುತ್ತೇನೆ.

(ವಿಶ್ವಕವಿ ರವೀಂದ್ರನಾಥ ಟಾಗೋರರು ಸ್ಟಾಕ್ ಹೋಂ ನಗರದಲ್ಲಿ ೧೯೨೧ರ ಮೇ ೨೬ರಂದು ಮಾಡಿದ ಭಾಷಣದ ಕನ್ನಡ ಭಾವಾನುವಾದ.)

☐

ವಿ. ಶ್ರೀನಿವಾಸ, ಮನೆ ನಂ. ೨೧೨, ೨ನೇ ಕ್ರಾಸ್, ೧ನೇ 'ಜ' ಮುಖ್ಯರಸ್ತೆ, ಜಕ್ಕಸಂದ್ರ ಬಡಾವಣೆ, ೧ನೇ ಬ್ಲಾಕ್, ೧ನೇ ಮೇನ್, ಕೋರಮಂಗಲ, ಬೆಂಗಳೂರು-೫೬೦೦೩೪.

ಜಿಯೋಕೊಂಡ* ಮತ್ತು ಸಿ-ಯಾ-ವು

ಮೂಲ : ನಜೀಂ ಹಿಕ್ಮತ್
ಅನು : ಆರ್. ವಿಜಯರಾಘವನ್

(ಷಾಂಗೈನಲ್ಲಿ ಶಿರಚ್ಛೇದಗೊಂಡ ನನ್ನ ಗೆಳೆಯ ಸಿ-ಯಾ-ವುನ ನೆನಪಿಗೆ)

ಒಂದು ದಾವೆ:

ಪ್ರಖ್ಯಾತ ದಾ ವಿಂಚಿಯ
ವಿಶ್ವವಿಖ್ಯಾತ ಲಾ ಜಿಯೋಕೊಂಡ
ಕಣ್ಮರೆಯಾಗಿಹೋಯಿತು
ಚೋರ ಖಾಲಿಮಾಡಿದ
ಜಾಗದಲ್ಲಿ ಅದರ ನಕಲೊಂದನ್ನು
ಇರಿಸಲಾಯಿತು

ಈ ಇತಿವೃತ್ತವನ್ನು ದಾಖಲಿಸುತ್ತಿರುವ ಕವಿ
ನಿಜವಾದ ಜಿಯೋಕೊಂಡ
ಏನಾಗಿಹೋಯಿತೆನ್ನುವುದರ ಬಗ್ಗೆ
ಕೊಂಚ ಬಲ್ಲ
ಅವಳು ಜೇನ ಸವಿ ನಾಲಗೆಯ
ಹೊಳೆವ ಬಾದಾಮಿ ಕಣ್ಣ
ಸಿ-ಯಾ-ವು ಎಂಬ ಹೆಸರಿನ

---

* ಲಿಯೋನಾರ್ಡೋ ಡ ವಿಂಚಿಯ ಒಂದು ಕಲಾಕೃತಿ.

ಮನಮೋಹಕ ಚೀನಿ ಚೆಲುವನ
ಪ್ರೀತಿಯ ಸುಳಿಯಲ್ಲಿ ಬಿದ್ದಳು
ಜಿಯೋಕೊಂಡ
ಅವನ ಹಿಂದೆ ಬಿದ್ದು
ಓಡಿ ಹೋದಳು
ಚೀನಾದ ನಗರವೊಂದರಲ್ಲಿ
ಜಿಯೋಕೊಂಡಳನ್ನು
ಸುಟ್ಟು ಹಾಕಿದರು

ನಾನು ನಜೀಂ ಹಿಕ್ಮತ್
ಈ ವಿಚಾರದಲ್ಲಿ ಪ್ರಮಾಣು
ಗೆಳೆಯರಿರಲಿ, ಶತ್ರುವಿರಲಿ
ಮೂಗಿನಮೇಲೆ ಬೆರಳನಿಟ್ಟು
ಅಣಕಿಸುತ್ತ ಸಾರುತ್ತೇನೆ
ದಿನಕ್ಕೈದು ಬಾರಿ ಸಾರಿಸಾರಿ ಸಾರುತ್ತೇನೆ
ಅಳುಕದೆ ಅಂಜದೆ ಸಾರುತ್ತೇನೆ
ನಾನಿದನ್ನು ರುಜುವಾತು ಮಾಡಬಲ್ಲೆ
ಮಾಡಲಾಗದಿದ್ದರೆ ಕಾವ್ಯದ ಗಡಿಗಳಾಚೆ
ಕಾಣದಾಗಿ ಹೋಗುತ್ತೇನೆ
ನಾಶವಾಗಿ ಹೋಗುತ್ತೇನೆ

ಭಾಗ: ಒಂದು

ಜಿಯೋಕೊಂಡಳ ದಿನಚರಿಯಿಂದ

೧೫ನೆಯ ಮಾರ್ಚ್ ೧೯೨೪; ಪ್ಯಾರಿಸ್, ಲಾವರ್ ಮ್ಯೂಸಿಯಂ

ಕೊನೆಗೂ ನಾನು ಬೇಸತ್ತು ಹೋಗಿದ್ದೇನೆ
ಲಾವರ್ ಮ್ಯೂಸಿಯಂ ಬಗ್ಗೆ
ಬಹುಬೇಗ ಬೇಸರದ ಬಗ್ಗೆಯೇ
ನೀವು ಬೇಸತ್ತು ಹೋಗಬಹುದು

ನನಗಾದ ಬೇಸರದಿಂದ
ನನಗೆ ತಲೆ ಚಿಟ್ಟುಹಿಡಿದಂತೆ ಆಗಿಹೋಗಿದೆ
ನನ್ನೊಳಗೆ ಆಗಿಹೋದ ವಿನಾಶದಿಂದ
ನಾನೀ ಪಾಠ ಕಲಿತಿದ್ದೇನೆ
ಮ್ಯೂಸಿಯಂಗೆ ಭೇಟಿಕೊಡುವುದು ಚಂದ
ಅದರಲ್ಲೊಂದು ಕೃತಿಯಾಗಿ ಇರುವುದು ಭಯಂಕರ
ಗತವನ್ನು ಬಂಧಿಸಿಡುವ ಈ ಸೆರೆಯಲ್ಲಿ
ಎಂಥ ಕಠಿಣಶಿಕ್ಷೆಗೆ ಗುರಿಯಾಗಿ
ನಾನಿರುವೆನೆಂದರೆ ಚಿಟಚಿಟನೆ
ನನ್ನ ಮುಖದಮೇಲಿನ ಬಣ್ಣ ಬಿರಿಯುತ್ತಿದೆ
ಎಡೆಬಿಡದೆ ಬಲವಂತಕ್ಕೆ ನಗುತ್ತಲೇ ಇರುವ
ಪರಿಹಾರವಿಲ್ಲದ ಶಿಕ್ಷೆ
ಏಕೆಂದರೆ ನಾನು ಫ್ಲಾರೆನ್ಸಿನ ಜಿಯೋಕೊಂಡ
ಫ್ಲಾರೆನ್ಸಿಗಿಂತಲು ಮಿಗಿಲು ನಗೆಗೆ ಹೆಸರಾದವಳು
ನಾನು ಬೇಸತ್ತು ಹೋಗಿದ್ದೇನೆ
ಲಾವರ್ ಮ್ಯೂಸಿಯಂ ಬಗ್ಗೆ
ಭೂತದೊಂದಿಗೆ ಮಾತಾಡಿ ಆಡಿ ರೋಗಿಯಾಗುವೆನೆಂದು !
ನಾನು ನಿರ್ಧರಿಸಿದ್ದೇನೆ
ಇಲ್ಲಿಂದ ಮುಂದೆ ನಾನು ದಿನಚರಿಯನೊಂದು
ಬರೆಯುವುದೆಂದು
ಇಂದು ಬರೆಯುವುದು ನಿನ್ನೆಯ ಮರೆಯಲು
ಒಂದಿಷ್ಟು ಸಹಾಯಕ್ಕೆ ಬರಬಹುದು
ಇದ್ದರೂ ಲಾವರ್ ಮ್ಯೂಸಿಯಂ ಒಂದು ವಿಚಿತ್ರ ಸ್ಥಳ
ಇಲ್ಲಿ ನೀನು ಕಾಣಬಹುದು
ಸಾಮ್ರಾಟ ಅಲೆಗ್ಸಾಂಡರ್ ದಿ ಗ್ರೇಟ್‌ನ ದಿಕ್ಕಾಲಸೂಚಿ ಗಡಿಯಾರ
ಆದರೆ ಒಂದೇ ಒಂದು ಶುಭ್ರ ನೋಟ್ ಪುಸ್ತಕವಾಗಲಿ
ಒಂದೇ ಒಂದು ಕವಡೆಕಾಸಿನ ಬೆಲೆಯ ಸೀಸದಕಡ್ಡಿಯಾಗಲೀ
ಇಲ್ಲಿ ನಿನಗೆ ಕಾಣಸಿಗದು
ಥೂ ಲಾವರ್, ಥೂ ನಿನ್ನ ಪ್ಯಾರಿಸ್
ನಾನಿವನ್ನೆಲ್ಲ ನನ್ನ

ಕ್ಯಾನವಾಸಿನ ಹಿಂಬದಿಯಲ್ಲಿ ಬರೆಯುತ್ತೇನೆ
ಹಾಗೆ
ದೂರದೃಷ್ಟಿ ದೋಷವುಳ್ಳ ಅಮೆರಿಕನ್
ತಲೆಗೂದಲು ಹೆಂಡದ ನಾತಬೀರುವ ಅಮೆರಿಕನ್
ಅವನ ಕೆಂಪು ಮೂಗನ್ನು
ನನ್ನ ಸ್ಕರ್ಟಿಗೆ ತಾಗಿಸಿ ನೋಡುವ ಅಮೆರಿಕನ್
ಅವನ ಕಿಸೆಯಿಂದ ಎತ್ತಿದ ಪೆನ್ನನ್ನೆತ್ತಿಕೊಂಡಾಗ
ಬರೆಯಲು ಶುರುಮಾಡಿದೆ
ಬರೆಯುತ್ತಿದ್ದೇನೆ ನಾನೀಗ ನೆನಪುಗಳ
ನನ್ನ ಬೆನ್ನಿನ ಮೇಲೆ
ಜನಜನಿತವಾದ ನಗೆಯೊಂದನ್ನು
ಮುಖದ ಮೇಲೆ ಹೊತ್ತ ದುಮ್ಮಾನವನ್ನು

೧೮ ಮಾರ್ಚ್ : ರಾತ್ರಿ

ಲಾವರ್ ನಿದ್ದೆಹೋಗಿದೆ
ಕತ್ತಲಿನಲ್ಲಿ ಕೈ ಇಲ್ಲದ ವೀನಸ್ ಕಾಣುತ್ತಿದ್ದಾಳೆ
ಮಹಾಯುದ್ಧವೊಂದರ ಮಹಾಕಲಿಯಂತೆ
ಇರುಳ ಪಹರೆಯವನ ಕೈನ ಲಾಂದ್ರದ ಬೆಳಕು
ಕಪ್ಪು ಚಿತ್ರವೊಂದಕ್ಕೆ ತಾಗಿ ಕಾಪುಯೋಧನೊಬ್ಬನ
ಚಿನ್ನದ ಶಿರಸ್ತ್ರಾಣ ಹೊಳೆಯುತ್ತಿದೆ
ಇಲ್ಲಿ
ಲಾವರೆಯಲ್ಲಿ
ನನ್ನ ದಿನಗಳಷ್ಟೂ ಹಾಗೇ ಇವೆ ಮರದ ಘನಾಕೃತಿಯ ಆರು ಪಾರ್ಶ್ವಗಳ ಹಾಗೆ
ಔಷಧಿಯ ಕಪಾಟೊಂದರ ಹಾಗೆ
ನನ್ನ ತಲೆಯ ತುಂಬೆಲ್ಲ ಕಮಟು ವಾಸನೆಗಳು

೨೦ ಮಾರ್ಚ್

ನಾನು ಫ್ಲಾಂಡರ್ಸಿನ ಕಲಾವಿದರನ್ನು ಮೆಚ್ಚಿಕೊಳ್ಳುತ್ತೇನೆ
ಹಾಲು ಮಾಂಸಗಳ ವ್ಯಾಪಾರಿಗಳ ದಢೂತಿ ಹೆಂಗಸರಿಗೆ
ನಗ್ನ ದೇವತೆಗಳ ಹಾಗಿನ ವೇಷ ತೊಡಿಸುವುದು
ಸಾಮಾನ್ಯರಿಗೆ ಸುಲಭಸಾಧ್ಯವೇ

ಆದರೆ
ನೀನು ರೇಷಿಮೆಯ ಒಳ ಉಡುಪುಗಳ ತೊಟ್ಟರೂ
ಹಸು+ರೇಷಿಮೆಯ ಒಳ ಉಡುಪು=ಹಸು
ಕಳೆದಿರುಳು
ಒಂದು ಕಿಟಕಿ
ತೆರೆದೇ ಇತ್ತು
ನಗ್ನ ಫ್ಲಾಂಡರ್ಸಿ ದೇವತೆಗೆ ನೆಗಡಿ ಬಂತು
ಇಡೀ ದಿನ
ಇವತ್ತು ಕೂಡಾ
ತಮ್ಮ ಬತ್ತಲು ಪರ್ವತದೋಪಾದಿಯ
ಕಡುಗೆಂಪು ಹಿಂಬದಿಯನ್ನು
ಜನಗಳತ್ತ ತಿರುಗಿಸಿದ
ಅವರಿಗೆ ನೆಗಡಿ ಹಿಡಿದು, ಸೀನಿ
ನನಗೂ ನೆಗಡಿ ಬಂತು
ನೆಗಡಿ ಹಿಡಿದು
ಮೂರ್ಖನಂತೆ ನಗುತ್ತಿರುವಂತೆ ತೋರದಿರಲು
ನಾನು ನನ್ನ ಸೊರಗುಟ್ಟುವಿಕೆಯನ್ನು ಅತಿಥಿಗಳಿಂದ
ಅವಿತಿಡಲು ನಾನು ಪ್ರಯತ್ನಪಟ್ಟೆ

೧ ಏಪ್ರಿಲ್

ಇವತ್ತು ನಾನೊಬ್ಬ ಚೀನೀಯನ್ನ ನೋಡಿದೆ
ಅವನು ತನ್ನ ತಲೆಯ ಮೇಲೆ
ಕೂದಲು ಬಿಗಿದುಕಟ್ಟಿದ್ದ
ಚೀನೀಯನಿಗಿಂತ ಭಿನ್ನವಾಗಿದ್ದ
ನನ್ನನ್ನವನು ಎಷ್ಟುಕಾಲ ದಿಟ್ಟಿಸಿದ
ನನಗೆ ಚೆನ್ನಾಗಿ ಗೊತ್ತು
ದಂತವನ್ನು ರೇಷಿಮೆಗಿಂತಲು ಹೆಚ್ಚಾಗಿ ಒಪ್ಪುವ
ಅದರೊಡನೆ ದುಡಿಯುವ ಚೀನೀಯರನ್ನು
ಲಘುವಾಗಿ ತೆಗೆದುಕೊಳ್ಳಲಾಗದು

೧೧ ಏಪ್ರಿಲ್

ನಾನಿಂದು
ಪ್ರತಿದಿನ ಬರುವ
ಆ ಚೀನೀಯನ
ಹೆಸರನ್ನು
ಕಂಡುಕೊಂಡೆ
ಸಿ-ಯಾ-ವು

೧೬ ಏಪ್ರಿಲ್

ನಾವಿಂದು ಕಣ್ಣುಗಳ ಭಾಷೆಯಲ್ಲಿ ಮಾತಾಡಿದೆವು
ಅವನು ನೇಯುತ್ತಾ ದಿನ ಕಳೆಯುತ್ತಾನೆ
ಇರುಳುಗಳಲ್ಲಿ ವ್ಯಾಸಂಗ ಮಾಡುತ್ತಾ
ಆ ಇರುಳು
ಕಪ್ಪು ಅಂಗಿಗಳ ತೊಟ್ಟ ಫ್ಯಾಸಿಸ್ಟ್‌ಗಳ ಹಾಗೆ
ವಕ್ಕರಿಸಿ ಬಹಳ ದಿನವಾಯಿತು
ಕೆಲಸ ಕಳೆದುಕೊಂಡು ಬಲೆಗೆ ಸಿಲುಕಿದ
ಆ ಮನುಷ್ಯನ ಆಕ್ರಂದನ ಕಪ್ಪು ನೀರೊಳಗಿಂದ
ಮೇಲೆದ್ದ ಹಾಗೆ
ಓ ನೀನು
ಯಾರ ಮುಷ್ಟಿಯಷ್ಟು ಇರುವ ತಲೆಯ ಮೇಲೆ
ಬೆಟ್ಟದಷ್ಟು ಇರುವ ಮಾರುತಗಳು ಇಳಿಯುವವೋ
ಆ ನೀನು
ತಾರೆಗಳನ್ನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ
ಬಹುಶಃ ದಪ್ಪತೊಗಲಿನ ಕವಚ ಹೊದ್ದ ಉದ್ಗ್ರಂಥಗಳ
ರಾಶಿ ನಿರ್ಮಿಸುವ ಕೆಲಸದಲ್ಲಿ ತೊಡಗಿಕೊಂಡಿರುವ
ಆ ನೀನು
ಓದು ಸಿ-ಯಾ-ವು
ಓದು
ನಿನ್ನ ಕಣ್ಣುಗಳಿಗೆ ಅವೇನು ಬೇಡುತ್ತವೋ ಅವು ಸಿಕ್ಕಿ
ಪುಸ್ತಕಗಳ ಮೇಲಿರುವ ಜಪಾನಿನ

ಹಳದಿ-ಕಪ್ಪು ಸೇವಂತಿಗೆಯ ಹಾಗೆ
ನಿನ್ನ ಕಣ್ಣು ದಣಿದ ಮೇಲೆ
ನಿದ್ದೆ ಮಾಡು
ಸಿ-ಯಾ-ವು
ನಿದ್ದೆ ಮಾಡು

೧೮ ಏಪ್ರಿಲ್

ನಾನು ಮರೆಯಲು ಆರಂಭಿಸಿದ್ದೇನೆ
ಪುನರುತ್ಥಾನದ ಮಹನೀಯರ ಹೆಸರುಗಳನ್ನು
ನಾನು ಕಾಣಲು ಬಯಸಿದ್ದೇನೆ
ಮೆಳ್ಳಗಣ್ಣಿನ ಚೀನೀ ಚಿತ್ರಕಾರರು
ಉದ್ದುದ್ದದ ಬಿದಿರು ಕುಂಚಗಳಿಂದ
ಜಿನುಗಿಸುವ
ಜಲವರ್ಣದ ಕಪ್ಪು ಹಕ್ಕಿ ಮತ್ತು ಹೂವನ್ನು

ಪ್ಯಾರಿಸ್ ವೈರ್‌ಲೆಸ್‌ನಿಂದ ಬಂದ ಸುದ್ದಿ :

ಹಲೋ
ಹಲೋ
ಹಲೋ
ಪ್ಯಾರಿಸ್
ಪ್ಯಾರಿಸ್
ಪ್ಯಾರಿಸ್
ಕೊರಳ ಶಬ್ದಗಳು ನಾಗಾಲೋಟದಲ್ಲಿ
ಧಾವಿಸುತ್ತಿವೆ ಗಾಳಿಯಲ್ಲಿ
ಕ್ರೂರ ಭಯಂಕರ ಗ್ರೇ ಹೌಂಡ್‌ಗಳ ಹಾಗೆ
ಐಫೆಲ್ ಟವರ್‌ನ ವೈರ್‌ಲೆಸ್
ಕೂಗಿಕರೆಯುತ್ತದೆ
ಹಲೋ
ಹಲೋ
ಹಲೋ

ಪ್ಯಾರಿಸ್
ಪ್ಯಾರಿಸ್
ಪ್ಯಾರಿಸ್
ನಾನೂ ಒಬ್ಬ ಪೌರಾತ್ಯ
ಈ ಕರೆಯು ನನಗಾಗಿ
ನನ್ನ ಕಿವಿಗಳು ರಿಸೀವರ್‌ಗಳು
ಐಫೆಲ್ಲನ್ನು ನಾನೂ ಕೇಳಿಸಿಕೊಳ್ಳಬೇಕು
ಚೀನಾದ ವಾರ್ತೆ
ಚೀನಾದ ವಾರ್ತೆ

ಚೀನಾದ ವಾರ್ತೆ:

ಕಾಫ್ ಪರ್ವತಗಳ ಮೇಲಿಂದ ಇಳಿದುಬಂದ ಡ್ರೇಗನ್
ಚೀನಾದ ಹೊಂಬಣ್ಣದ ಆಕಾಶದಗಲಕ್ಕು
ತನ್ನ ರೆಕ್ಕೆಗಳನ್ನು ಬಿಚ್ಚಿಹರಡಿದೆ
ಆದರೆ
ಈ ವ್ಯವಹಾರದಲ್ಲಿ
ಪುಕ್ಕಕಿತ್ತ ಕೋಳಿಯ ದಪ್ಪ ಕೊರಳಿನಂತೆ ಸಣ್ಣಗಾಗುವುದು
ಬ್ರಿಟನ್ನಿನ ಅರಸನ ಕೊರಳಷ್ಟೇ ಅಲ್ಲ
ಕನ್ಫ್ಯೂಷಿಯಸ್‌ನ ತೆಳ್ಳಗಿನ ನೀಳ ಗಡ್ಡವೂ ಸಹ !

ಜಿಯೋಕೊಂಡಳ ದಿನಚರಿಯಿಂದ:

೨೧ ಏಪ್ರಿಲ್

ಇವತ್ತು ನನ್ನ ಚೀನೀ
ನೇರವಾಗಿ ನನ್ನ ಕಣ್ಣೊಳಗೆ ನೋಡಿ ಕೇಳಿದ:

ನಮ್ಮ ಭತ್ತದ ಹೊಲಗಳನ್ನು ತಮ್ಮ ಟ್ಯಾಂಕುಗಳ
ಗಾಲಿಸರಪಳಿಗಳಿಂದ ಹಾಳುಗೆಡುವುವ
ನಮ್ಮ ನಗರಗಳ ತುಂಬ
ನರಕದ ಅಧಿಪತಿಗಳ ಹಾಗೆ ಗಸ್ತಿನಿಂದ ಓಡಾಡುವ
ಅವರು ನಿನ್ನ ಕುಲದವರೇನು ?
ನಿನ್ನನ್ನು ಹುಟ್ಟಿಸಿದವನ ಕುಲದವರೇನು ?

ನಾನು ಕೈಯೇರಿಸಿ ಕಿರುಚಿದೆ
ಅಲ್ಲ ಅಲ್ಲ

೨೭ ಏಪ್ರಿಲ್

ಈ ಇರುಳು ಹನ್ನೆರಡು ಹಾರ್ಸ್‌ಪವರಿನ
ಫೋರ್ಡ್ ಗರ್ಜನೆಯ ದೆಸೆಯಿಂದ
ನಾನು ಕನಸೊಂದರಿಂದ ಹಠಾತ್ತನೆಚ್ಚರಗೊಂಡೆ
ಥಟ್ಟನೆ ಮಾಯವಾಯಿತು ನಾನು ಕ್ಷಣಕಂಡ ನೋಟ
ನಾನು ಕಂಡದ್ದೆಂದರೆ ನೀಲಿ ನೀರಿನ ನಿಶ್ಚಲ ಕೊಳ
ಕೊಳದಲ್ಲಿ ಮಾಲುಗಣ್ಣಿನ ನನ್ನ ಬಾಳಿಗೆ ಬೆಳಕು ಕೊಟ್ಟವನು
ತನ್ನ ಬೆರಳುಗಳಿಂದ
ಚಿನ್ನದ ಮುಲಾಮು ಬಳಿದಿದ್ದ ಮೀನೊಂದನ್ನು ಹಿಡಿದಿದ್ದ
ನಾನು ಅವನನ್ನು ತಲುಪಲು ಯತ್ನಿಸಿದೆ
ನನ್ನ ನಾವೆ ಒಂದು ಚೀನೀ ಟೀ ಕಪ್ಪು
ನನ್ನ ಹಾಯಿ ಜಪಾನೀ ಬಿದಿರು ಛತ್ರಿಯ
ಕುಸುರಿಗೆಲಸದ ರೇಷಿಮೆಯ ಬಟ್ಟೆ ....

ಪ್ಯಾರಿಸ್ ವೈರ್‌ಲೆಸ್‌ನಿಂದ ಬಂದ ಸುದ್ದಿ :

ಹಲೋ
ಹಲೋ
ಹಲೋ
ಪ್ಯಾರಿಸ್
ಪ್ಯಾರಿಸ್
ಪ್ಯಾರಿಸ್
ರೇಡಿಯೋ ಸ್ಟೇಷನ್ ಮುಕ್ತಾಯ ಘೋಷಿಸುತ್ತಿದೆ
ಮತ್ತೊಮ್ಮೆ ನೀಲಿ ಷರ್ಟಿನ ಪ್ಯಾರಿಸ್ಸಿಗರು
ಪ್ಯಾರಿಸ್ಸನ್ನು ಕೆಂಪು ಕೊರಳಿಂದ
ತುಂಬಿಸುತ್ತಿದ್ದಾರೆ
ಮತ್ತು ಕೆಂಪು ಬಣ್ಣಗಳು .....

ಜಿಯೋಕೊಂಡಳ ದಿನಚರಿಯಿಂದ :

೨ ಮೇ

ಇಂದು ನನ್ನ ಚೀನೀ ಕಾಣಬರಲಿಲ್ಲ

೮ ಮೇ

ನನ್ನ ದಿನಗಳು
ಸ್ಟೇಷನ್ ಒಂದರ ಕಾಯುವ ಕೋಣೆಗಳು
ಕಣ್ಣುಗಳು ಕೀಲಿಸಲ್ಪಟ್ಟಿವೆ
ಹಳಿಗಳ ಮೇಲೆ

೧೦ ಮೇ

ಗ್ರೀಸಿನ ಶಿಲ್ಪಿಗಳೇ
ಸೆಲ್ಯುಕ್‌ಚೀನಾದ ಚಿತ್ರಗಾರರೇ
ಪರ್ಷಿಯಾದಲ್ಲಿ ಪ್ರಜ್ವಲಿಸುವ
ಕಂಬಳಿಗಳ ನೇಯುವ ನೇಕಾರರೇ
ಮರುಭೂಮಿಗಳಲ್ಲಿ ಅರಬ್ಬೀ ಒಂಟೆಗಳಿಗೆ
ಸ್ತುತಿಗೀತೆಗಳ ಹಾಡುವವರೇ
ಗಾಳಿಯಂತೆ ಬಳಕುವ ದೇಹವುಳ್ಳ ನರ್ತಕಿಯೇ
ಒಂದು ಕ್ಯಾರೆಟ್ ಹರಳಿನಲ್ಲಿ
ಮುವ್ವತ್ತಾರು ಮುಖಗಳ ಕಡೆಯುವ ಕುಶಲಿಗಳೇ
ಮತ್ತು ನೀನು
ನಿನ್ನೈದು ಬೆರಳುಗಳಲ್ಲಿ
ಐದು ಚಾತುರ್ಯಗಳನ್ನಿಟ್ಟುಕೊಂಡವನೇ
ಮಾಸ್ಟರ್ ಮೈಖಲೇಂಜಲೋ
ಕರೆದು ಕೂಗಿ ಹೇಳು ಮಿತ್ರ-ಶತ್ರುಗಳಿಗೆಲ್ಲ
ಒಂದೇ ಬಗೆ
ಏಕೆಂದರೆ ಅವನು ಪ್ಯಾರಿಸ್ಸಿನ ತುಂಬ ಗದ್ದಲವನ್ನೆಬ್ಬಿಸಿದ್ದ
ಏಕೆಂದರೆ ಚೀನೀ ರಾಯಬಾರಿಯ ಕಿಟಕಿಗೆ ಅಪ್ಪಳಿಸಿದ್ದ
ಜಿಯೋಕೊಂಡಳ ಪ್ರಿಯಕರ
ಫ್ರಾನ್ಸ್‌ನಿಂದ ಹೊರತಳ್ಳಲ್ಪಟ್ಟ ....

ಚೀನಾದ ನನ್ನ ಪ್ರಿಯಕರ ಚೀನಾಗೆ ವಾಪಸು ಹೋಗಿದ್ದಾನೆ.....
ನಾನೀಗ ತಿಳಿದುಕೊಳ್ಳಲು ಬಯಸುತ್ತೇನೆ
ಯಾರು ರೋಮಿಯೋ, ಯಾರು ಜೂಲಿಯೆಟ್
ಅವನು ಷರಾಯಿತೊಟ್ಟ ಜೂಲಿಯಟ್ ಅಲ್ಲದಿದ್ದರೆ
ನಾನು ಸ್ಕರ್ಟ್‌ತೊಟ್ಟ ರೋಮಿಯೋ ಅಲ್ಲ .....
ಓಹ್, ನನಗೆ ಅಳಲು ಸಾಧ್ಯವಾಗಿದ್ದಿದ್ದರೆ
ನನಗೆ ಸಾಧ್ಯವಾಗಿದ್ದಿದ್ದರೆ ......

೧೨ ಮೇ

ಯಾರೋ ತಾಯಿಯೊಬ್ಬಳ ಮಗಳ ಸವೆದ ಕನ್ನಡಿಯಲ್ಲಿ
ನನ್ನನ್ನು ಒಂದು ಕ್ಷಣವೊಂದರ ನೋಟದಲ್ಲಿ ಕಂಡೆ
ಅವಳು ನನ್ನೆದುರು
ಅವಳ ನೆತ್ತರೊಸರುವ ಬಾಯಿಯ ಬಣ್ಣ
ತೀಡುತ್ತಾ ಇದ್ದಳು
ನನ್ನ ಖ್ಯಾತಿಯ ತಗಡು ಕಿರೀಟ
ನನ್ನ ತಲೆಯ ಮೇಲೇ ಬಿತ್ತು ಪುಡಿಯಾಗಿ
ಅಳುವ ಹಂಬಲ ನನ್ನೊಳಗೇ ನುಲಿಯುತ್ತಿದೆ
ನಾನು ನಗುತ್ತೇನೆ ಪ್ರತಿಭಟನೆಯ ಉಚಿತ ಅಭಿವ್ಯಕ್ತಿಯಾಗಿ
ತುಂಬಿದ ಹಂದಿಯ ಮುಖದಹಾಗೆ
ನನ್ನ ವಿಕಾರಮುಖ ನಗುತ್ತಲೇ ಇರುತ್ತದೆ ....
ಲಿಯೊನಾರ್ಡೋ ದ ವಿಂಚಿ
ನನ್ನನ್ನು ಕೊರಳಿಗೆ ಕೈಹಾಕಿ ಹಿಡಿಯಲು
ಒಬ್ಬ ಕ್ಯೂಬಿಸ್ಟ್ ಚಿತ್ರಕಾರನಿಗೆ ಸಾಧ್ಯವಾಗುವ ರೀತಿ
ನಿನ್ನ ಮೂಳೆಗಳು ಅವನ ಕೈಲಿ ಕುಂಚವಾಗಲಿ
ಬಣ್ಣ ಸೋರುವ ನಿನ್ನ ಕೈಗಳು
ನನ್ನ ಬಾಯೊಳಗೆ ಅಂಟಿಸುವ
ಚಿನ್ನದ ಮುಲಾಮಿನ ಹಲ್ಲಿನಂತೆ
ಆ ಶಾಪದ ನಸುನಗುವು

ಭಾಗ : ಎರಡು

ಯಾನ

ಲೇಖಕನ ನೋಟ್ ಪುಸ್ತಕದಿಂದ :

ಓಹ್ ಗೆಳೆಯರೇ,
ಜಿಯೋಕೊಂಡ ತುಂಬ ದುಃಸ್ಥಿತಿಯಲ್ಲಿದ್ದಾಳೆ
ನನ್ನ ಮಾತು ಕೇಳಿ
ದೂರದಿಂದ ಸುದ್ದಿ ಬರುವ ನಂಬಿಕೆ ಇಲ್ಲದಿದ್ದರೆ
ಈ ವೇಳೆಗೆ
ಅವಳು ಕಾವಲುಗಾರನ ಪಿಸ್ತೂಲನ್ನು ಕದ್ದು ಬಿಟ್ಟಿರುತ್ತಿದ್ದಳು
ಮತ್ತು ತನ್ನ ತುಟಿಗಳ ಶಾಪಗ್ರಸ್ತ
ನಗೆಗೆ ಸಾವಿನ ಬಣ್ಣ ಕೊಡಲು
ಪಿಸ್ತೂಲಿನ ಗುಂಡುಗಳನ್ನು ಕ್ಯಾನ್‌ವಾಸಿನ ತನ್ನದೆಯಲ್ಲಿ
ಬಸಿದುಕೊಳ್ಳುತ್ತಿದ್ದಳು

ಜಿಯೋಕೊಂಡಳ ದಿನಚರಿಯಿಂದ :

ಓಹ್ ಆ ಲಿಯೋನಾರ್ಡೋ ದ ವಿಂಚಿಯ ಕುಂಚ
ಚೀನಾದ ಬೆಲ್ಲೆಸೂರ್ಯನ ಅಡಿಯಲ್ಲಿ
ನನ್ನನ್ನು ಒಡಲುದುಂಬಿಸಿಕೊಂಡಿತ್ತು
ನನ್ನ ಹಿಂದಿರುವ ಬಣ್ಣಬಳಿದ ಬೆಟ್ಟ
ಬೆಲ್ಲದಚ್ಚಿನ ಹಾಗಿತ್ತು
ನನ್ನ ಉದ್ದದ ಮುಖದ ನಸುಗೆಂಪು ಬಿಳಿ ಬಣ್ಣ
ಮಾಸಿಹೋಗಬಹುದು
ನನ್ನ ಕಣ್ಣುಗಳು ಬಾದಾಮಿಯ ಹಾಗಿವೆ
ಒಂದುವೇಳೆ ನನ್ನ ನಗೆಯು
ನನ್ನ ಎದೆಯಲ್ಲಿರುವುದನ್ನು ತೋರುವಂತಿದ್ದರೆ
ದೂರ ದೂರವಿರುವ ಅವನ ತೋಳಿನಾಸರೆಯಲ್ಲಿ
ನಾನು ಚೀನಾದ ತುಂಬೆಲ್ಲ ತಿರುಗುತ್ತಲಿದ್ದೆ

ಲೇಖಕನ ನೋಟ್ ಪುಸ್ತಕದಿಂದ :

ನಾನಿವತ್ತು ಜಿಯೋಕೊಂಡಳ ಜೊತೆ ಮನಬಿಚ್ಚಿ ಮಾತಾಡಿದೆ
ಘಳಿಗೆಗಳು ಒಂದಾದಮೇಲೊಂದರಂತೆ
ಹಾರಿಹೋದವು
ತುಂಬ ಕುತೂಹಲದ ಪುಸ್ತಕದ ಹಾಳೆಗಳಂತೆ
ನಾವು ಕೈಗೊಂಡ ನಿರ್ಧಾರಗಳು
ಜಿಯೋಕೊಂಡಳ ಬದುಕನ್ನು
ಚಾಕುವೊಂದರಿಂದ ಇಬ್ಭಾಗ ಕೊಯ್ದಂತೆ
ಕೊಯ್ದುಬಿಡುತ್ತವೆ
ನಾಳೆಯ ಇರುಳು ನಾವದನ್ನು
ಮಾಡಿಯೇಬಿಡುವುದನ್ನು
ನೀವು ನೋಡುವಿರಿ ....

ಲೇಖಕನ ನೋಟ್ ಪುಸ್ತಕದಿಂದ :

ನೋತ್ರೆದಾಮ್‌ನ ಗಡಿಯಾರ
ಮೊಳಗುತ್ತಿದೆ ನಡುರಾತ್ರಿಯನ್ನು
ನಡುರಾತ್ರಿ
ನಡುರಾತ್ರಿ

ಯಾರಿಗೆ ಗೊತ್ತು ಈ ಕ್ಷಣದಲ್ಲಿ
ಯಾವ ಕುಡುಕ ತನ್ನ ಹೆಂಡತಿಯನ್ನು
ಕೊಲ್ಲುತ್ತಿರುವನೆಂದು
ಯಾರಿಗೆ ಗೊತ್ತು ಈ ಕ್ಷಣದಲ್ಲಿ
ಯಾವ ಮಹಲಿನಲ್ಲಿ ಯಾವ ದೆವ್ವ
ಜನರನ್ನು ಕಾಡುತ್ತಿರುವುದೆಂದು

ಯಾರಿಗೆ ಗೊತ್ತು ಈ ಕ್ಷಣದಲ್ಲಿ
ಯಾವ ಕಳ್ಳ
ಹತ್ತಲಾಗದ ಯಾವ ಗೋಡೆಯನ್ನು
ಹತ್ತುತ್ತಿರುವನೆಂದು
ನಡುರಾತ್ರಿ ನಡುರಾತ್ರಿ

ಯಾರಿಗೆ ಗೊತ್ತು ಈ ಕ್ಷಣದಲ್ಲಿ ....
ನನಗೆ ಗೊತ್ತಿದೆ
ಎಲ್ಲ ಕಥೆಗಳಲ್ಲು ಇದು ಅತ್ಯಂತ
ಕರಾಳ ಗಳಿಗೆಯೆಂದು
ಯಾರಿಗೆ ಗೊತ್ತು ಈ ಕ್ಷಣದಲ್ಲಿ
ನಡುರಾತ್ರಿ
ಎಲ್ಲ ಓದುಗರ ಎದೆಗಳಲ್ಲು ನಡುಕವನ್ನು ಬಿತ್ತುತ್ತದೆ
ನಾನೇನು ತಾನೇ ಮಾಡಬಲ್ಲೆ
ನನ್ನ ಜೊತೆರೆಕ್ಕೆಗಳ ವಿಮಾನ
ಲಾವರೆಯ ಚಾವಣಿಯ ಮೇಲೆ ಇಳಿದಾಗ
ನೋತ್ರೆದಾಮ್‌ನ ಗಡಿಯಾರ
ನಡುರಾತ್ರಿ ಹೊಡೆದಿತ್ತು
ವಿಚಿತ್ರವೆಂದರೆ ನಾನು ಅಂಜಿಕೊಂಡಿರಲಿಲ್ಲ
ನನ್ನ ವಿಮಾನದ ಅಲ್ಯೂಮಿನಿಯಂ ಕುಂಡೆಯನ್ನೊಮ್ಮೆ
ತಟ್ಟಿ ಚಾವಣಿಯ ಮೇಲೆ ಕಾಲಿಟ್ಟೆ
ನನ್ನ ನಡುವನ್ನು ಸುತ್ತಿರುವ
ಐವತ್ತು ಮಟ್ಟು ಆಳದಷ್ಟು
ಉದ್ದ ಹಗ್ಗದ ಸುರುಳಿ ಬಿಡಿಸುತ್ತಾ
ಸ್ವರ್ಗಕ್ಕೂ ನರಕಕ್ಕೂ ನಡುವೆ
ಸೇತುವೆಯ ಕಟ್ಟಿದ ಹಾಗೆ
ಜಿಯೋಕೊಂಡಳ ಕಿಟಕಿಯಲ್ಲಿ ಇಳಿಬಿಟ್ಟೆ
ನನ್ನ ಒಡಕು ಶಬ್ದದ ಪೀಪಿಯನ್ನು
ಮೂರು ಬಾರಿ ಊದಿದೆ
ಆ ಒಡಕು ಶಬ್ದದ ಪೀಪಿಯ ಮೂರು ಕರೆಗಳಿಗೆ
ತಕ್ಷಣವೆ ಪ್ರತಿಕ್ರಿಯೆ ದೊರಕಿತ್ತು
ಜಿಯೋಕೊಂಡ ತೆರೆದುಬಿಟ್ಟಳು ಕಿಟಕಿಯನ್ನು
ವರ್ಜಿನ್‌ಮೇರಿಯ ಹಾಗೆ ಚಿತ್ರಿಸಲ್ಪಟ್ಟ
ಈ ಬಡರೈತನ ಮಗಳು
ಗದ್ದದಲ್ಲಿ ತನ್ನ ಮೆರುಗಿನ ಚೌಕಟ್ಟನ್ನು ಹಿಡಿದು
ಹಗ್ಗವ ಸೆಳೆದು ಏರಿಹೋದಳು

ಸಿ-ಯಾ-ವು
ಸಿಂಹದೆದೆಯ ಹೆಣ್ಣಿನೊಡನೆ
ಪ್ರೇಮದೊಳು ಸಿಲುಕಿದ
ನೀನು ನಿಜಕ್ಕು ಭಾಗ್ಯಶಾಲಿ

ಜಿಯೋಕೊಂಡಳ ದಿನಚರಿಯಿಂದ :

ವಿಮಾನವೆಂದು ಕರೆಯಲಾಗುವ ಈ ವಸ್ತು
ರೆಕ್ಕೆಗಳುಳ್ಳ ಕುದುರೆ
ನಮ್ಮಡಿಯಲ್ಲಿ ಪ್ಯಾರಿಸ್
ಅದರೊಂದಿಗೆ
ಚೂಪು ಮೂಗಿನ ಸಿಡುಬು ಕಲೆಗಳ, ತಿಂಗಳ ಮುಖದ
ಐಫೆಲ್ ಗೋಪುರ
ನಾವು ಏರುತ್ತಿದ್ದೇವೆ
ಮೇಲೆ ಮೇಲಕ್ಕೆ
ಆಗ್ನೇಯಾಸ್ತ್ರದಂತೆ
ನಾವು ಸೀಳುತ್ತಿದ್ದೇವೆ
ಕಗ್ಗತ್ತಲನ್ನು
ಮೇಲೆ ಸ್ವರ್ಗ ಸುಯ್ದಾಡುತ್ತಿದೆ
ಹತ್ತಿರ ಹತ್ತಿರವಾಗಿ
ಆಕಾಶ ಮೈತುಂಬ ಹೂಮುಡಿದ ಹುಲ್ಲುಗಾವಲಿನಂತೆ
ನಾವು ಏರುತ್ತಿದ್ದೇವೆ
ಮೇಲೆ ಮೇಲಕ್ಕೆ
....
ನಿದ್ದೆ ಮಾಡಿಬಿಟ್ಟೆನೇನೋ ನಾನು
ಕಣ್ಣುತೆರೆದೆ
ಹೊತ್ತಾರೆಯ ವೈಭವದ ಬೆಳಗು ಕ್ಷಣ
ಆಗಸ ಕಡಲಿನಂತಿದೆ
ನಮ್ಮ ವಿಮಾನವೊಂದು ಜಹಜು
ಚೆಂದಾಗಿ ಅಲುಗದೆ ಸಾಗುವ ಇದನ್ನು
ಬೆಣ್ಣೆಯಂತೆ ಎನ್ನುತ್ತೇನೆ ನಾನು

ನಮ್ಮ ಹಿಂದೆ ನಮ್ಮ ವಿಮಾನ
ಬಿಟ್ಟ ಹೊಗೆಯ ಹಾದಿ
ನಮ್ಮ ಕಣ್ಣುಗಳು ಬಿಲ್ಲೆಗಳು
ಹೊಳೆವ ನೀಲಿಯ ಖಾಲಿಯನ್ನು
ಅಳೆಯುತ್ತವೆ
ನಮ್ಮ ಅಡಿಯಲ್ಲಿ ಭೂಮಿ
ಸೂರ್ಯನ ಬೆಳಕಿಗೆ ಹೊಂಬಣ್ಣ ತಳೆವ
ಜಫ್ಫಾದ ಕಿತ್ತಳೆಯಂತೆ
ಅದಾವ ಮಾಯಾಚಮತ್ಕಾರದಿಂದ ನಾನು
ನೆಲದಿಂದ ಮೇಲಕ್ಕೆ ಏರಿದ್ದೇನೆ
ನೂರಾರು ಮಿನಾರುಗಳಿಗಿಂತ ಮೇಲೆ
ಆದರೂ, ನೆಲದತ್ತ ನೋಡಿದರೆ
ಬಾಯಲ್ಲಿ ನೀರೂರುತ್ತದೆ ನನಗೆ ......

ಲೇಖಕನ ನೋಟ್ ಪುಸ್ತಕದಿಂದ :

ಆಫ್ರಿಕಾದ ಮೇಲೆಲ್ಲ ಸುಂಯ್ ಸುತ್ತುತ್ತಿರುವ
ಬಿಸಿ ಗಾಳಿಯ ಅಲೆಗಳೊಳಗೆ ಸಾಗುತ್ತಿದೆ ನಮ್ಮ ವಿಮಾನ
ಮೇಲಿಂದ ನೋಡಿದರೆ
ದೊಡ್ಡ ಪಿಟೀಲಿನ ಹಾಗೆ ತೋರಿಬರುತ್ತದೆ ಆಫ್ರಿಕಾ
ಸತ್ಯವಾಗಿಯು ಅವರು ಚಾಯ್ಕೊವೆಸ್ಕಿಯ ಸಂಗೀತವನ್ನು
ರುದ್ರವೀಣೆಯ ಮೇಲೆ ಬಾರಿಸುತ್ತಿದ್ದಾರೆ-
ಕುದಿಯುತ್ತಿರುವ ಕಪ್ಪು ದ್ವೀಪದ ಮೇಲೆ
ತನ್ನ ರೋಮಗಳಿಂದಾವೃತ್ತವಾದ ಕೈಗಳ ಬೀಸುತ್ತಾ
ಗೊರಿಲ್ಲಾ ಬಿಕ್ಕುತ್ತಿದೆ ....

ನಾವು ಹಿಂದೂ ಮಹಾಸಾಗರವನ್ನು ದಾಟುತ್ತಿದ್ದೇವೆ
ಆಕಾಶದ ವಿಮಾನದಲ್ಲಿ ಗೊತ್ತಿಲ್ಲದ ರುಚಿಯ
ಕಟು ದ್ರವವೊಂದನ್ನು ಕುಡಿಯುತ್ತಾ
ನಮ್ಮ ದೃಷ್ಟಿಯನ್ನು ಹಳದಿ ದೀಪದ ಮನೆಯ ಮೇಲೆ ನೆಟ್ಟು
ಆಸ್ಟ್ರೇಲಿಯಾವನ್ನು ಬಲಕ್ಕೆ ಬಿಟ್ಟು
ಮಡಗಾಸ್ಕರ್‌ನ ಎಡಕ್ಕೆ ಬಿಟ್ಟು

ಟ್ಯಾಂಕಿನಲ್ಲಿರುವ ತೈಲದ ಮೇಲೆ
ನಂಬಿಕೆಯನ್ನಿಟ್ಟು
ನಾವೀಗ ಸಾಗುತ್ತಿದ್ದೇವೆ
ಚೀನಾ ಸಮುದ್ರದ ಕಡೆಗೆ ....

ನಿತ್ಯವರದಿಯ ಪುಸ್ತಕದಿಂದ :
ಚೀನಾ ಸಮುದ್ರದ ಮೇಲೆ ಸಾಗುತ್ತಿರುವ
ಜಾನ್ ಅಬೋರ್ಡ್ ಎಂಬ ಹಡಗಿನ ಪರಿಚಾರಕನ

ಒಂದಿರುಳು
ನೀಲಿಯೊಳಗಿಂದ ತೂಫಾನು ಎದ್ದಿದೆ
ಅಯ್ಯಾ
ಎಂಥ ಚಂಡಮಾರುತವದು
ಹಳದಿ ದೆವ್ವದ ಮೇಲೆ
ಕೂತು ನೆಲದಾಯಿ
ತಿರಿತಿರಿ ತಿರುಗುತ್ತಾಳೆ
ಗಾಳಿಯನ್ನು ಕಡೆಯುತ್ತಾ
ನನ್ನ ಅದೃಷ್ಟ ಬರೆದಿರುವ ಹಾಗೆ
ನಾನು ನಿಂತಿದ್ದೇನೆ
ಜಹಜಿನ ಮೇಲೆ
ಈ ಬೃಹದಾಕಾರದ ಜಹಜು
ನನ್ನ ಕೆಳಗೆ ಮತ್ತಷ್ಟು ದೊಡ್ಡದಾಗಿ ತೋರುತ್ತಿದೆ
ಗಾಳಿ ಗರ್ಜಿಸುತ್ತಿದೆ ಅಪ್ಪಳಿಸಿ ಅಪ್ಪಳಿಸಿ
ಅಪ್ಪಳಿಸಿ ಅಪ್ಪಳಿಸಿ
ಹಾಯಿ ಕಂಪಿಸುತ್ತಿದೆ ಕೀಳುವಂತೆಳೆದ ತಂತಿಯ ಹಾಗೆ
(ಅಲ್ಲೇನು ಕೆಲಸ ನಿನಗೆ, ಏ ಮನುಷ್ಯ ? ಏಕಲ್ಲಿ ಹೋದೆ,
ಓಹ್ ದೇವರೇ, ಸ್ಟಾರ್ಕ್ ಹಕ್ಕಿಯ ಹಾಗೆ ?-ನ.ಹಿ)

ಊಹ್ ! ನಾವೀಗ ತೂರಿಹೋಗುತ್ತಿದ್ದೇವೆ
ನನ್ನ ತಲೆ ಮೋಡಗಳನ್ನು ಸೀಳುತ್ತಿದೆ
ಊಹ್ ! ನಾವೀಗ ಪಾತಾಳಕ್ಕೆ ಮುಳುಗುತ್ತಿದ್ದೇವೆ
ನನ್ನ ಬೆರಳುಗಳು ಸಾಗರತಳವನ್ನು ಬೆದಕುತ್ತಿವೆ

ನಾವು ಬಾಗುತ್ತಿದ್ದೇವೆ ಎಡಕ್ಕೆ, ಬಲಕ್ಕೆ
ದೇವರೇ ! ನಾವು ಮುಳುಗಿಹೋದೆವು
ಇಲ್ಲ. ಈ ಬಾರಿಯಂತು ನಾವು ತಳಸೇರುವುದು
ಖಂಡಿತ
ಅಲೆಗಳು ನನ್ನ ತಲೆಯಮೇಲೆ ಹಾರಿಬರುತ್ತಿದೆ
ಬಂಗಾಳದ ಹುಲಿಗಳ ಹಾಗೆ
ಜಾವಾದ್ವೀಪದ ಕಾಫಿಬಣ್ಣದ ಹಾದರಗಿತ್ತಿಯ ಹಾಗೆ
ಭಯ ನನ್ನ ಸೆಳೆದೊಯ್ಯುತ್ತಿದೆ
ಇದು ತಮಾಷೆಯಲ್ಲ ಇದು
(ಹಡಗಿನ ಪರಿಚಾರಕನಿಗೆ ಅಂಜಿಕೊಳ್ಳಲು ಕಾರಣಗಳಿವೆ
ಚೀನಾ ಸಮುದ್ರದ ಅಬ್ಬರವನ್ನು
ಲಘುವಾಗಿ ತೆಗೆದುಕೊಳ್ಳಲಾಗದು-ನ.ಹಿ)

ಆಯಿತು. ಅದನ್ನಷ್ಟು ಬಿಟ್ಟುಬಿಡುವುದು ಲೇಸು
ಧುಪ್ !!
ಏನದು ?
ಆಕಾಶದಿಂದ ಕಾಗೆಯ ಗೂಡೊಳಕ್ಕೆ ಬೀಳಿಸಿದ
ಚೌಕಾಕೃತಿಯ ಕ್ಯಾನವಾಸಿನ ತುಂಡು
ಕ್ಯಾನವಾಸು ಒಂದು ನಮೂನೆಯ ಹೆಣ್ಣು
ಈ ಆಗಸದಿಂದಿಳಿದ ಮದಾಂ
ಹಡಗಿನಲ್ಲಿ ದುಡಿಯುವವರ ಮತೊಂದನ್ನೂ
ಅರಿಯಲಾರಳು ಎಂದು ನನಗನ್ನಿಸಿದೆ
ಹಡಗಿನಲ್ಲಿ ದುಡಿಯುವವರ ನಡತೆಯೊಂದನ್ನೂ
ಆಕೆ ಅರಿಯಲಾರಳು ಎಂದು ನನಗನ್ನಿಸಿದೆ

ನಾನಿಳಿದು ಬಂದೆ
ಅವಳ ಕೈಯನ್ನು ಮುದ್ದಿಸಿದೆ
ಕವಿಯೊಬ್ಬ ಮಾಡುವಹಾಗೆ ನಾನು ರೋಧಿಸಿದೆ:
ಓ ಆಗಸದಿಂದ ಬಿದ್ದ ಕ್ಯಾನವಾಸಿನ ಹೆಣ್ಣೇ
ಹೇಳು ನಿನ್ನನ್ನು
ಯಾವ ದೇವತೆಗೆ ಹೋಲಿಸಲಿ ನಾನು ?

ಇಳಿದು ಬಂದೆಯೇಕೆ ನೀನು?
ಯಾವ ಕಾರ್ಯಕಾರಣ ಎಳತಂದಿತು
ಇಲ್ಲಿಗೆ ನಿನ್ನನ್ನು ?

ಅವಳು ಉತ್ತರಿಸಿದಳು :
ಐನೂರೈವತ್ತು ಅಶ್ವಬಲದ ವಿಮಾನದಿಂದ
ನಾನು ಬಿದ್ದೆ
ನನ್ನ ಹೆಸರು ಜಿಯೋಕೊಂಡ
ನಾನು ಫ್ಲಾರೆನ್ಸಿನಿಂದ ಬಂದೆ
ಆದಷ್ಟು ಬೇಗ ಹೋಗಬೇಕಿದೆ ನನಗೆ
ಷಾಂಗೈಗೆ.

ಜಿಯೋಕೊಂಡಳ ದಿನಚರಿಯಿಂದ:

ಗಾಳಿಯಬ್ಬರವಿಳಿಯಿತು
ಶಾಂತವಾಯಿತು ಸಾಗರ
ಮುಂದೆ ಸಾಗಿತು ಜಹಜು
ಷಾಂಗೈ ಕಡೆಗೆ
ಕನಸುಕಾಣುತ್ತಿದ್ದಾರೆ ನಾವಿಕರು
ತಮ್ಮ ಗಂಟುಮೂಟೆಗಳ ಕೈಲಿಹಿಡಿದು ಆಡಿಸುತ್ತ
ಅವರು ಮಾಂಸಲ ದಪ್ಪತುಟಿಗಳ ಮೇಲೆ
ಹಿಂದೂ ಮಹಾಸಾಗರದ ಹಾಡೊಂದು ನಲಿಯುತ್ತಿದೆ
ಇಂಡೋಚೀನಾದ ಸೂರ್ಯನ ಕಿಚ್ಚು
ಮಲಕ್ಕಾ ವೈನಿನಂತೆ ನೆತ್ತರನ್ನು ಬೆಚ್ಚಗಾಗಿಸುತ್ತದೆ
ಅವು ಆ ಇಂಡೋಚೀನಾದ ಇರುಳುಗಳು
ಮೋಡಿಮಾಡಿ ಸೆಳೆದುಕೊಳ್ಳುತ್ತವೆ
ಮೆರುಗಿನ ತಾರೆಗಳತ್ತ
ಯಾರ ಇರುಳುಗಳತ್ತ

ಬೋರ್ನಿಯೋದ ಮಾಲುಗಣ್ಣಿನ
ಜಹಜಿನ ಕೆಲಸಗಾರ ಹುಡುಗರು
ಸಿಂಗಪುರದ ಬಾರುಗಳಲ್ಲಿ
ಚೂರಿ ಹಾಕಿಸಿಕೊಂಡವರು

ಕಬ್ಬಿಣದ ಪಟ್ಟಿ ಬಿಗಿದ ಬ್ಯಾರಲ್ಲುಗಳಿಗೆ
ರಕ್ತಗೆಂಪಿನ ಬಣ್ಣ ಬಳಿಯುತ್ತಾರೆ
ಆ ಇಂಡೋಚೀನಾದ ಇರುಳುಗಳು
ಆ ಇಂಡೋಚೀನಾದ ಇರುಳುಗಳು

ಒಂದು ಹಡಗು ನೆಲದ ಬಳಿಸಾರುತ್ತದೆ.
ಐವತ್ತೈದುಸಾವಿರ ಟನ್ ಭಾರ
ಆ ಇಂಡೋಚೀನಾದ ಇರುಳುಗಳು ......
ಮೇಲಾಗಸದಲ್ಲಿ ಸ್ವರ್ಗದಲ್ಲಿ
ಚಂದಿರ ಈಸುತ್ತಿದ್ದಾನೆ
ಹಡಗಿನ ಮೇಲೆಸೆದ
ನೀಲಿಗಣ್ಣಿನ ನಾವಿಕನ ಹೆಣದಂತೆ
ಮೊಣಕೈಯೂರಿ ಮುಂಬೈ ನೋಡುತ್ತಲಿದೆ
ಮುಂಬೈನ ಚಂದಿರ
ಅರಬ್ಬೀ ಸಮುದ್ರ
ಇಂಡೋಚೀನಾದ ಸೂರ್ಯನ ಕಿಚ್ಚು
ಮಲಕ್ಕಾ ವೈನಿನಂತೆ ನೆತ್ತರನ್ನು ಬೆಚ್ಚಗಾಗಿಸುತ್ತದೆ
ಅವು ಇಂಡೋಚೀನಾದ ಇರುಳುಗಳು
ಮೆರುಗಿನ ತಾರೆಗಳತ್ತ
ಮೋಡಿಮಾಡಿ ಸೆಳೆದುಕೊಳ್ಳುತ್ತವೆ
ಆ ಇಂಡೋಚೀನಾದ ಇರುಳುಗಳು
ಆ ಇಂಡೋಚೀನಾ ಇರುಳುಗಳು

ಭಾಗ : ಮೂರು

ಜಿಯೋಕೊಂಡಳ ಅಂತ್ಯ

ಷಾಂಗೈ ಎಂಬ ನಗರ

ಷಾಂಗೈ ಬಲು ದೊಡ್ಡ ಬಂದರು
ಬಲು ಒಳ್ಳೆಯ ಬಂದರು
ಅದರ ಜಹಜುಗಳು ಗೋಪುರಗಳುಳ್ಳ
ಮಂಡಾರಿನ್ ಮಹಲುಗಳಿಗಿಂತ ದೊಡ್ಡವು

ಅಬ್ಬಾ ! ಎಂಥಾ ವಿಚಿತ್ರಸ್ಥಳ
ಈ ಷಾಂಗೈನಗರ
ನೀಲನದಿಯ ದೋಣಿಯಲ್ಲಿ
ಜೊಂಡಿನ ಹಾಯಿ ಪಟ ಹಾರುತ್ತದೆ
ಹಾರುವ ಜೊಂಡಿನ ಹಾಯಿ ಪಟದ ದೋಣಿಯಲ್ಲಿ
ಬೆತ್ತಲು ಕೂಲಿಗಳು ಭತ್ತವನ್ನಾರಿಸುತ್ತಾರೆ
ಒಕ್ಕಿದ ಭತ್ತದ ರಾಶಿ
ಅಬ್ಬಾ ! ಎಂಥಾ ವಿಚಿತ್ರ ಸ್ಥಳ
ಈ ಷಾಂಗೈ ನಗರ

ಷಾಂಗೈ ಬಲು ದೊಡ ಬಂದರು
ಬಿಳಿಯರ ಜಹಜುಗಳು ದೊಡ್ಡವು
ಹಳದಿ ಜನರ ಜಹಜುಗಳು ಸಣ್ಣವು
ಕೆಂಪು ತಲೆಯ ಮಗುವನ್ನು ಒಡಲಲಿಟ್ಟುಕೊಂಡು
ಷಾಂಗೈ ಬಸುರಾಗಿದೆ
ಅಬ್ಬಾ !

ಲೇಖಕನ ದಿನಚರಿಯಿಂದ :

ಕಳೆದಿರುಳು
ಜಹಜು ಬಂದರು ತಲುಪಿದಾಗ
ಜಿಯೋಕೊಂಡಳ ಪಾದ ನೆಲವ ಮುದ್ದಿಸಿತು
ಷಾಂಗೈ ಸೂಪು, ಅವಳು ಚಮಚ
ಮೇಲೆ ಕೆಳಗೆಲ್ಲ ಬೆದಕಾಡಿದಳು ಅವಳು
ಸೂಪಿನಲ್ಲಿ ತನ್ನ ಸಿ-ಯಾ-ವುಗಾಗಿ

ಚೀನೀ ಕೃತಿ ಜಪಾನೀ ಕೃತಿ
ಇಬ್ಬರು ಮಾತ್ರವೇ ಇದನ್ನು ಮಾಡುವುದು
ಒಬ್ಬ ಗಂಡಸು ಒಬ್ಬಳು ಹೆಂಗಸು

ಚೀನೀ ಕೃತಿ ಜಪಾನೀ ಕೃತಿ
ಲೀ-ಲೀ- ಫುನ ಇತ್ತೀಚಿನ
ಕಲಾಕೃತಿಯನ್ನು ನೋಡು

ತನ್ನ ಗಂಟಲಿನ ತಾರಸ್ವರದಲ್ಲಿ
ಅರಚುತ್ತಿದ್ದಾನೆ ಲೀ, ಚೀನೀ ಜಾದೂಗಾರ
ಹಚ್ಚಗೆ ಜೇಡನ ಬಲೆಯಂತೆ ಸುಕ್ಕುಗಟ್ಟಿದ ಅವನ ಕೈ
ಗಾಳಿಯಲ್ಲಿ ಚೂರಿಗಳನ್ನೆಸೆಯುತ್ತಿದೆ
ಒಂದು ಇನ್ನೊಂದು
ಒಂದು ಇನ್ನೊಂದು
ಐದು ಇನ್ನೊಂದು

ಗಾಳಿಯಲ್ಲಿ ಮಿಂಚನ್ನು
ಹೋಲುವ ವೃತ್ತಗಳ ಬರೆಯುತ್ತ
ಅವನ ಚೂರಿಗಳು
ಸತತವಾಗಿ ಮೇಲಕ್ಕೆ ಹಾರುತ್ತಿವೆ
ಜಿಯೋಕೊಂಡ ನೋಡುತ್ತಾಳೆ
ನೋಡುತ್ತಲೇ ಇರುತ್ತಾಳೆ
ಆಕೆಯಿನ್ನೂ ನೋಡುತ್ತಲೇ ಇರಬಹುದು
ರಂಗಿನ ದೊಡ್ಡ ಚೀನೀಲಾಂದ್ರದಂತೆ
ಜನಜಂಗುಳಿ ತೂಗುತ್ತದೆ, ಗೊಂದಲಕ್ಕೆ ಸಿಲುಕುತ್ತದೆ
ಹಿಂದೆ ಬನ್ನಿ, ದಾರಿಬಿಟ್ಟು ದೂರಸರಿಯಿರಿ
ಚಿಯಾಂಗ್ ಕೈ ಷೇಕ್‌ನ ಹಂತಕ
ಹೊಸ ತಲೆಯನ್ನು ಹುಡುಕುತ್ತಿದ್ದಾನೆ, ಬೇಟೆಗೆ
ಹಿಂದೆ ಬನ್ನಿ ದೂರಸರಿಯಿರಿ ದಾರಿಬಿಟ್ಟು

ಮುಂದೆ ಇದ್ದವನೊಬ್ಬ
ಅನತಿ ಹಿಂದೆಯೇ ಇದ್ದವನೊಬ್ಬ
ಈ ಇಬ್ಬರು ಚೀನೀಯರು ನುಗ್ಗುತ್ತಿದ್ದಾರೆ ಮಿಂಚಿನಂತೆ
ಮುಂದೆ ಇದ್ದವನು ನುಗ್ಗಿದ್ದಾನೆ ಜಿಯೋಕೊಂಡಳತ್ತ
ಅವನೆ, ಅವನು, ಅವನೇ ಹೌದು
ಅವಳ ಸಿ-ಯಾ-ವು
ಅವಳ ಬೆಳ್ಳಕ್ಕಿ
ಸಿ-ಯಾ-ವು
ಅವರನ್ನಾವರಿಸಿ ಸ್ಟೇಡಿಯಂನ ಒಳಗೆಲ್ಲ

ಒಂದು ನಿರುತ್ಸಾಹದ ಸದ್ದು ಸುತ್ತಿಕೊಂಡಿದೆ
ಹಳದಿ ಏಶಿಯಾದ ಕೆಂಪುನೆತ್ತರು ಕರೆಗಟ್ಟಿದ
ಕ್ರೂರ ಇಂಗ್ಲಿಷ್ ಭಾಷೆಯಲ್ಲಿ
ಅರಸ ಅರಚುತ್ತಾನೆ :
ಹಿಡಿಯಿರಿ ಅವನನ್ನು
ಅವನು ಹೆಚ್ಚುತ್ತಿದ್ದಾನೆ
ಹಿಡಿಯಿರಿ ಅವನನ್ನು
ಅವನು ಅವಳನ್ನು ಸಮೀಪಿಸುತ್ತಿದ್ದಾನೆ
ಹಿಡಿಯಿರಿ ಅವನನ್ನು

ಜಿಯೋಕೊಂಡಳ ತೋಳುಗಳಿಂದ
ಮೂರು ಹೆಜ್ಜೆ ಮಾತ್ರವಿದ್ದ
ಚಿಯಾಂಗ್ ಕೈ ಷೇಕ್‌ನ ಹಂತಕ
ಹಿರಿದೇಬಿಟ್ಟ ಒರೆಯಿಂದ
ಝಳಪಿಸಿತು ಅವನ ಖಡ್ಗ
ಕತ್ತರಿಸಿದ ಮಾಂಸ ನೆಲಕ್ಕುರುಳುವ ಸದ್ದು
ಕತ್ತರಿಸಿದ ಮೂಳೆ ನೆಲಕ್ಕುರುಳುವ ಸದ್ದು

ನೆತ್ತರಲ್ಲದ್ದಿದರೆ ಹಳದಿ ಸೂರ್ಯನಂತೆ
ಸಿ-ಯಾ-ವುನ ತಲೆ
ಅವಳ ಪಾದದ ಮೇಲೆ ಉರುಳಿತ್ತು

ಈ ಮರಣದ ದಿನ
ಫ್ಲಾರೆನ್ಸ್‌ಗಿಂತಲೂ ಪ್ರಖ್ಯಾತವಾಗಿದ್ದ
ಜಿಯೋಕೊಂಡಳ ನಗೆ
ಷಾಂಗೈಯಲ್ಲಿ ಕಳೆದುಹೋಯಿತು

ಒಂದು ಚೀನೀ ಬಿದಿರಿನ ಚೌಕಟ್ಟು
ಚೌಕಟ್ಟಿನೊಳಗೊಂದು ಚಿತ್ರ
ಚಿತ್ರದ ಕೆಳಗೊಂದು ಹೆಸರು
ಲಾ ಜಿಯೋಕೊಂಡ....
ಚೌಕಟ್ಟಿನೊಳಗೊಂದು ಚಿತ್ರ
ಚಿತ್ರದ ಕಣ್ಣುಗಳು ಉರಿಯುತ್ತಿವೆ

ಉರಿಯುತ್ತಿವೆ
ಚೌಕಟ್ಟಿನೊಳಗೊಂದು ಚಿತ್ರ
ಚೌಕಟ್ಟಿನೊಳಗಿನ ಚಿತ್ರ ಜೀವತಳೆದಿದೆ
ಜೀವ
ಥಟ್ಟನೆ ಚೌಕಟ್ಟಿನೊಳಗಿಂದ
ಚಿತ್ರ ಹೊರನೆಗೆದಿದೆ
ಕಿಟಕಿಯೊಳಗಿಂದಲೆಂಬಂತೆ
ಅವಳ ಪಾದ ನೆಲವ ತಾಗಿದೆ
ನಾನು ಅವಳ ಹೆಸರಹಿಡಿದು ಕರೆದೊಮ್ಮೆಗೇ
ಅವಳೆದ್ದು ನಿಲ್ಲುತ್ತಾಳೆ ನನ್ನೆದುರಿಗೆ
ಮಹಾನ್‌ಸಂಗ್ರಾಮದ ಅತಿ ದೊಡ್ಡ ಹೆಣ್ಣು
ಮುಂದೆ ಮುಂದೆ ನಡೆದಳು ಅವಳು
ನಾನವಳ ಹಿಂದೆ
ಉರಿವ ಕೆಂಪು ಟಿಬೇಟನ್ ಸೂರ್ಯನಿಂದ
ಚೀನಾ ಸಮುದ್ರದವರೆಗೂ
ನಾವು ಹೋದೆವು, ಬಂದೆವು
ನಾವು ಬಂದೆವು, ಹೋದೆವು
ನಾನು ನೋಡಿದೆ
ಜಿಯೋಕೊಂಡ
ಶತ್ರುಗಳ ವಶದಲ್ಲಿರುವ ಪುರದ್ವಾರದ ಮೂಲಕ
ಕಗ್ಗತ್ತಲ ಮುಸುಕಿನಲ್ಲಿ ನುಸುಳಿಹೋಗುವುದನ್ನು
ಅವಳನ್ನು ನಾನು ನೋಡಿದೆ
ಹಿರಿದ ಬಯೋನೆಟ್ಟುಗಳು
ಒಂದಕ್ಕೊಂದು ಸೆಣಸುವುದನ್ನು
ಅವು ಬ್ರಿಟಿಶ್ ಅಧಿಕಾರಿಯೊಬ್ಬನ
ಉಸಿರಕಟ್ಟಿಸಿ ಕೊಲ್ಲುವುದನ್ನು
ಅವಳನ್ನು ನಾನು ನೋಡಿದೆ
ಜಿಯೋಕೊಂಡ
ತಾರೆಗಳೊಂದಿಗೆ ಈಸುತ್ತಿರುವ ನೀಲಿ ನೀರಧಾರೆಯಲ್ಲಿ

ತನ್ನ ಕೂರೆಗಳ ತೊಳೆಯುತ್ತಿದ್ದ ಅವಳನ್ನು ನಾನು ನೋಡಿದೆ ....

ಬುಸುಗುಟ್ಟುತ್ತ ಹೊಗೆಕಾರುತ್ತ ಇದ್ದಿಲು ಉರಿಯುವ ಎಂಜಿನ್ನು
ತನ್ನ ಹಿಂದೆ ತಲಾ ನಲವತ್ತು ಜನ ಕೂರುವ
ನಲವತ್ತು ಕೆಂಪುಬೋಗಿಗಳನ್ನು ಎಳೆಯುತ್ತಿತ್ತು
ಬೋಗಿಗಳು
ಒಂದಾದ ಮೇಲೊಂದರಂತೆ ಸಾಗಿ ಸಾಗಿಹೋದವು
ಕೊನೆಯ ಬೋಗಿಯಲ್ಲಿ ಅವಳು ನಿಂತುನೋಡುತ್ತಾ
ಸಮೆದ ಕುರಿತೊಗಲಿನ ಹ್ಯಾಟು ಅವಳ ತಲೆಯಮೇಲೆ
ಪಾದದಲ್ಲಿ ಬೂಟುಗಳು
ಬೆನ್ನಮೇಲೆ ಜಾಕೆಟ್ಟು

ಲೇಖಕನ ನೋಟ್ ಪುಸ್ತಕದಿಂದ :

ಆಹ್ ನನ್ನ ಸಾವಧಾನಿ ಓದುಗನೇ
ನಾವೀಗ ಷಾಂಗೈನ ಫ್ರೆಂಚ್ ಮಿಲಿಟರಿ ಕೋರ್ಟ್‌ನಲ್ಲಿದ್ದೇವೆ
ಬೆಂಚ್‌ನಲ್ಲಿ ನಾಲ್ಕು ಜನರಲ್‌ಗಳು
ಹದಿನಾಲ್ಕು ಕರ್ನಲ್‌ಗಳು
ಮತ್ತು ಒಂದು ಶಸ್ತ್ರಸಜ್ಜಿತ ಕಾಂಗೋಲೀಸ್ ರೆಜಿಮೆಂಟು
ಆರೋಪಿ
ಜಿಯೋಕೊಂಡ
ಆರೋಪಿಯ ಪರ ಅಟಾರ್ನಿ
ತುಂಬ ಆತ್ಮನಾಶವಾಗಿ ಹೋದ
ಅಂದರೆ ತುಂಬ ಕಲಾತ್ಮಕವಾಗಿಬಿಟ್ಟಿರುವ
ಫ್ರೆಂಚ್ ಕಲಾವಿದ
ಎಲ್ಲ ಸನ್ನದ್ಧವಾಗಿದೆ
ನಾವು ಬಿಟ್ಟಕಣ್ಣಿಂದ ನೋಡುತ್ತಿದ್ದೇವೆ
ಅಟಾರ್ನಿ ತನ್ನ ವಾದವನ್ನು ಮಂಡಿಸುತ್ತಾನೆ
ಆರೋಪಿಯ ಪರ
ಮಹಾಶಯರೇ
ನಿಮ್ಮೆದುರು ಆರೋಪಿಯ ಸ್ಥಾನದಲ್ಲಿ

ನಿಂತಿರುವ ಈ ಮಹಾನ್ ಸೃಷ್ಟಿ
ಮಹಾನ್ ಕಲಾವಿದನೊಬ್ಬನ ಹೆಸರಾಂತ ಪುತ್ರಿ
ಮಹಾಶಯರೇ
ಈ ಮಹಾನ್ ಸೃಷ್ಟಿ ....
ಮಹಾಶಯರೇ
ನನ್ನ ಮನಸ್ಸಿಗೆ ಕಿಚ್ಚು ಬಿದ್ದಿದೆ
ಮಹಾಶಯರೇ
ಈ ಮಹಾನ್ ಸೃಷ್ಟಿ ....
ಎರಡನೆಯಬಾರಿಗೆ ಈ ಮಹಾನ್ ಸೃಷ್ಟಿ
ಮಹಾಶಯರೇ, ಸಮವಸ್ತ್ರ ಧರಿಸಿರುವ ಮಹಾಶಯರೇ ....

ನಿ..ಲ್ಲಿ..ಸು
ಸಾಕು ನಿಲ್ಲಿಸು
ಕೆಟ್ಟುಹೋದ ಮೆಷಿನ್‌ಗನ್ನಿನ ಹಾಗೆ
ಕಟಕಟಿಸುವುದನ್ನು
ಬೇಲಿಫ್ ಓದು ತೀರ್ಪನ್ನು

ಬೇಲಿಫ್ ಓದುತ್ತಾನೆ ತೀರ್ಪನ್ನು :
ಚೀನಾದಲ್ಲಿ ಉಲ್ಲಂಘಿತವಾಗಿದೆ ಫ್ರಾನ್ಸಿನ ಕಾನೂನು
ಈ ಜಿಯೋಕೊಂಡಳಿಂದ,
ಲಿಯೊನಾರ್ಡೋ ಎಂಬುವವನ ಮಗಳಿಂದ
ಹಾಗಾಗಿ ನಾವು ಆರೋಪಿಯನ್ನು ಶಿಕ್ಷೆಗೆ ಗುರಿಮಾಡುತ್ತೇವೆ
ಮರಣದಂಡನೆಗೆ
ಸುಟ್ಟು ಹಾಕುವ ಶಿಕ್ಷೆಗೆ
ಮತ್ತು
ನಾಳೆ ರಾತ್ರಿ
ಚಂದ್ರೋದಯದ ಸಮಯಕ್ಕೆ
ಸೆನೆಗಲ್‌ನ ತುಕಡಿಯೊಂದು ಮಿಲಿಟರಿ ಕೋರ್ಟಿನ
ಈ ಶಿಕ್ಷೆಯನ್ನು ಜಾರಿಗೊಳಿಸಲಿದೆ.

ದಹನ :

ಷಾಂಗೈ ದೊಡ ಬಂದರು
ಬಿಳಿಯರ ಜಹಜುಗಳೆಲ್ಲ ದೊಡ್ಡದಾಗಿವೆ
ಹಳದಿಜನಗಳ ಜಹಜುಗಳು ಸಣ್ಣವು
ಒಂದು ಜೋರು ಶಿಳ್ಳೆ
ಒಂದು ಕ್ಷೀಣ ಚೀನೀ ಆರ್ತನಾದ
ಬಂದರಿನೊಳಕ್ಕೆ ಬರುತ್ತಿರುವುದೊಂದು ಜಹಜು
ನೀರಿನಲ್ಲಿ ಮುಳುಗುತ್ತಿರುವ
ಜೊಂಡು ಹಾಯಿಯ ದೋಣಿ
ಬೆಳದಿಂಗಳು
ರಾತ್ರಿ
ಕೈಕೋಳ ಧರಿಸಿರುವ ಜಿಯೋಕೊಂಡ ಕಾಯುತ್ತಾಳೆ
ಬೀಸು ಗಾಳಿಯೇ ಬೀಸು

ಒಂದು ಸ್ವರ :

ಸರಿ ಸರಿ ಲೈಟರ್...
ಸುಟ್ಟುಹೋಗು ಜಿಯೋಕೊಂಡ
ಸುಟ್ಟುಹೋಗು
ಛಾಯೆಗಳು ಹತ್ತಿರವಾಗುತ್ತಲಿವೆ
ಕಿಡಿಹೊತ್ತಿದ ಬೆಳಕು
ಅವರು ಲೈಟರನ್ನು ಹೊತ್ತಿಸುತ್ತಾರೆ
ಜಿಯೋಕೊಂಡಳಿಗೆ ಕಿಚ್ಚಸ್ನಿಕ್ಕುತ್ತಾರೆ
ಉರಿಯ ನಾಲಗೆಗಳು ಜಿಯೋಕೊಂಡಳಿಗೆ
ಕೆಂಬಣ್ಣದ ಸಿಂಗರವನಿಕ್ಕುತ್ತವೆ
ಅವಳು ತನ್ನ ಮನದಾಳದಿಂದ ಹೊಮ್ಮಿದ
ನಗೆಯನ್ನು ನಗುತ್ತಾಳೆ
ಜಿಯೋಕೊಂಡ ಬೇಯುತ್ತಾ ನಗುತ್ತಾಳೆ ......
ಆಹಾ ಕಲೆ ಕ್ಷಲೆ ಮಹಾನ್ ಸೃಷ್ಟಿ ......
ಮ್ಹಹಾ..ನ್ ಸೃಷ್ಟಿ....ಹೀ..ೀ..ೀ..ಗೆ
...ಹೀ..ೀ...ೀ.ಗೆ...ಹೀ..ೀ..ೀ..ೀ.ಗೆ

...ಹೀ...ೀ..ೀ.ಗೆ ೀ..ೀ.ನೆ
ಅಮರತ್ವ ... ಅನಂತತೆ ...
ಹೀ ೀ..ೀ ೀ..ೀ. ೀ..ೀ. ೀ..ೀ. ೀ..ೀ. ೀ..ೀ. ೀ..ೀ. ೀ..ೀ.

ಇಲ್ಲಿಗೆ ನನ್ನ ಕಥೆಯ ಯುದ್ಧ ಮುಗಿದಿದೆ
ಉಳಿದಿದ್ದು ಮುಕ್ತಾಯವಿಲ್ಲದ್ದು
ಮುಗಿಯಿತು.

ಟಿಪ್ಪಣಿಗಳು :

ನಜೀಂ ಹಿಕ್ಮತ್ : ೧೯೦೨ರಲ್ಲಿ ಸ್ಪೇನಿನಲ್ಲಿ ಹುಟ್ಟಿದ ನಜೀಂ ಹಿಕ್ಮತ್ ಜೂನ್ ೩, ೧೯೬೩ರಲ್ಲಿ ಮಾಸ್ಕೋ ನಗರದಲ್ಲಿ ತೀರಿಕೊಂಡ. ಅವನ ತಂದೆ ವಿದೇಶೀ ಸೇವೆಯಲ್ಲಿದ್ದಾತ. ಹಿಕ್ಮತ್ ಇಸ್ತಾಂಬುಲ್ ನಗರದಲ್ಲಿ ಬೆಳೆದ. ಅವನ ತಾಯಿ ಕಲಾವಿದೆ. ಅವನ ತಾತ ಕವಿತೆ ಬರೆಯುತ್ತಿದ್ದ. ಟರ್ಕಿ ಪೌರತ್ವವನ್ನು ಕಿತ್ತುಕೊಂಡ ಬಳಿಕ ಅವನು ಪೋಲೆಂಡಿನ ಪ್ರಜೆಯಾದ. ೧೯೬೩ರಲ್ಲಿ ಹೃದಯಾಘಾತದಿಂದ ನಿಧನನಾದ. ಅವನ ಮರಣಾನಂತರ, ೧೯೬೫ ಮತ್ತು ೧೯೬೬ರಲ್ಲಿ, ಟರ್ಕಿಯಲ್ಲಿ ಅವನ ಕೃತಿಗಳು ಪ್ರಕಟವಾಗಲಾರಂಭಿಸಿದವು.

ಜಿಯೋಕೊಂಡ ಮತ್ತು ಸಿ-ಯಾ-ವು :

ಸಿ-ಯಾ-ವು, ಸಿ-ಯಾ-ವೋ ಸಾನ್ (ಜನನ ೧೮೯೬). ಚೀನೀ ಕ್ರಾಂತಿಕಾರಿ ಮತ್ತು ಲೇಖಕ. ಹಿಕ್ಮತ್ ಅವನನ್ನು ೧೯೨೨ರಲ್ಲಿ ಭೇಟಿಯಾಗಿದ್ದ. ೧೯೨೭ರಲ್ಲಿ ಷಾಂಗೈ ಬಂಡುಕೋರರ ಹುಟ್ಟಡಗಿಸಲು ನಡೆಸಿದ ರಕ್ತಪಾತದಲ್ಲಿ ಪ್ಯಾರಿಸ್ ಮೂಲಕ ಚೀನಾಗೆ ಬಂದ ಅವನನ್ನು ಕೊಲ್ಲಲಾಗಿದೆ ಎಂದು ಹಿಕ್ಮತ್ ನಂಬಿದ್ದ. ಅದೇ ಸಮಯ ಪ್ಯಾರಿಸ್ಸಿನ ಲಾವರೆ ಸಂಗ್ರಹಾಲಯದಿಂದ ಮೊನಾಲಿಸಾ ಕಣ್ಮರೆಯಾಗಿತ್ತು. ೧೯೫೧ ರಲ್ಲಿ ವಿಯೆನ್ನಾದಲ್ಲಿ ಈ ಇಬ್ಬರು ಗೆಳೆಯರ ಪುನರ್‌ಸಮಾಗಮವಾಯಿತು. ಅವರಿಬ್ಬರೂ ಜೊತೆಯಾಗಿ ೧೯೫೨ರಲ್ಲಿ ಪೀಕಿಂಗ್‌ಗೆ ಹೋದರು. ಈ ಕವಿತೆ ಚೀನೀ ಭಾಷೆಗೆ ಅನುವಾದಗೊಂಡಿತ್ತು. ಸಾಂಸತಿಕ ಕ್ರಾಂತಿಯ ಸಂದರ್ಭದಲ್ಲಿ ಸಿಯಾವೋನ ಕೃತಿಗಳ ಜೊತೆ ಈ ಕವಿತೆಯನ್ನೂ ಸುಡಲಾಯಿತು.

– ಅನುವಾದಕ

□

ಆರ್. ವಿಜಯರಾಘವನ್, ಸೀನಿಯರ್ ಮೇನೇಜರ್, ಕೋಲಾರ್ ಗ್ರಾಮೀಣ ಬ್ಯಾಂಕ್ ಬ್ರ್ಯಾಂಚ್, ಗೀತಾ ರಸ್ತೆ, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್., ಕೋಲಾರ ಜಿಲ್ಲೆ.

ಚಿಣ್ಣಾಳ ಮತ್ತು ರಾಜಕುಮಾರಿ ವಿದ

ಮೂಲ : ಇರುಳಿಗರ ಜಾನಪದ ಕಥೆ
ವಕ್ತೃ : ಗುಡ್ಡಯ್ಯ ಅಣಕಡಬೂರು
ಸಂಗ್ರಹ : ಡಾ. ಎಂ. ಭೈರೇಗೌಡ

ನೀಲಾವತಿ ಅಂತ ಒಂದು ಪಟ್ನ. ನೀಲಸಂಕ್ರಾಯ ಅನ್ನತಕ್ಕಂತವನು ಒಬ್ಬ ರಾಜ. ಆ ರಾಜುನ್ಗೆ ಒಬ್ನೆ ಬಾಲಕ. ಹುಡ್ಗುನ್ಗೆ ಅವ್ರ ದೇವತೆ ಗುರುಗೊಳ್ನ ಕರೆಸಿ ಬೇಕಾದಂಗೆ ಅನ್ನದಾನ, ಬಟ್ಟೆದಾನ, ವಸ್ತ್ರ-ಆಭರಣ, ಪೀತಾಂಬರ ದಾನವೆಲ್ಲಾ ಕೊಟ್ಟು ಪುರೋಹಿತರನ್ನ ಕರೆಸಿ ನಾಮಕರಣ ಮಾಡಿಸುದ್ರು. ಬೇಕಾವಂತ ದಾನ ಧರ್ಮ ಪರೋಪಕಾರ ಕೊಟ್ಟು ನಾಮಕರಣ ಮಾಡುದ್ರು.

ಚಿಣ್ಣಾಳ ಎಂಬುದಾಗಿ ಬಾಲುಕುನ್ಗೆ ಎಸ್ರು ಕಟ್ಟುದ್ರು. ಆ ಹುಡ್ಗನ್ಗೆ ಸಾಮಾನ್ಯವಾಗಿ ಹತ್ತನ್ನೊಂದು ವರ್ಷ ವಯಸ್ಸಾಗ್ತಾ ಬಂತು. ವಿದ್ಯಾಭ್ಯಾಸ ಕೊಡಿಸ್‌ಬೇಕು ತಾನೆ? ಆ ನೀಲಸಂಕ್ರಾಯ ತನ್ ಮಂತ್ರಿನ್ ಕರುಸ್ಕೊಂಡು 'ಮಂತ್ರಿ ಇವತ್ತು ನಮ್ಮುಡ್ಗುನ್ನ ಪಾಟಸಾಲೆಗ್ ಕಳಿಸ್‌ಬೇಕು, ನಿಮ್ಮುಡ್ಗುನ್ನು ನಮ್ಮುಡ್ಗುನ್ ಜೊತೆಲೆ ಇಸ್ಕೋಲ್‌ಗಾಕ್‌ಬುಡುವ. ನಾಳೆಕಾಲ ದೇಶ ಆಳಿ ನಾವು ರುದ್ದಾಪ್ಯ ಆಗಿ ಪ್ರಾಣ ಬಿಟ್ಟಂತ ಕಾಲ್ದೆಲಿ ನನ್ನ ಮಗ ಚಿಣ್ಣಾಳ ಅನ್ನತಕ್ಕಂತವನು ರಾಜತ್ವ, ನಿನ್ ಮಗುನ್ಗೇ ಮಂತ್ರತ್ವ' ಅಂತೇಳಿ ಒಂದೇ ಇಸ್ಕೋಲೆಲಿ ಪಾಟುಕ್ಕಾಕುದ್ರು.

'ಆಗ್ಲಿ ಸ್ವಾಮಿ' ಅಂತ ಮಂತ್ರಿ ಒಪ್ಕೊಂಡ. ರಾಜುನ್ ಮಗ್ನು ಮಂತ್ರಿ ಮಗ್ನು ಇಬ್ರು ಬೆಳಿಗ್ಗೆ ಎದ್ದು ಸ್ನಾನ ಮಡಿ ಮಾಡ್ಕೊಂಡು ಊಟ ಮಾಡ್ಕೊಳ್ಳೋದು ಪುಸ್ತಕ ಸಾಮಾಗ್ರಿ ಅವುರ್ಗೇನೇಸ್ ಬೇಕೋ ಎತ್ಕೊಂಡು ಪಾಟಸಾಲೆಗೊಂಟೋಗೋದು. ಹೀಗೆ ಆ ಉಡುಗ್ರು ಇದ್ಯೆದಲ್ಲಿ ಅಭಿವೃದ್ಧಿಯಾಗಿ ಬೆಳುದ್ರು. ಮಕ್ಳು ವಿದ್ಯೆ ಕಲುತ್ರು. ಅಷ್ಟೆಲಿ ಎಷ್ಟೊರ್ಷ ಆಯ್ತು ? ಈ ಚಿಣ್ಣಾಳ ಅನ್ನತಕ್ಕಂತ ದೊರೆ ಮಗುನ್ಗೆ ಒಂದಿಪ್ಪತ್ತೊಂದು ವರ್ಷ ವಯಸ್ ಬತ್ತು. ಈ ನೀಲಸಂಕ್ರಾಯ ಅಂತಕ್ಕಂತವುನ್ಗೆ ವಯ್ಸು ಮೀರ್ತಾ ಬತ್ತು. ಇಂದಾಯ್ತ ಬಂದ ಈ ರಾಜ. ತನ್ನ ಎಡ್ತೀನ ಕುಂದ್ರುಸ್‌ಕೊಂಡು ಮುತ್ತು ರತ್ನ ಹೂಮಾಲೆ ಮ್ಯಾಲ್ಕುಂಡ್ರಿಸ್ಕೊಂಡು ನಾಲ್ಕು ಮೂಲ್ಗು ನಂದಾ ದೀವಿಗೆಯನ್ನ

ಅತ್ತಿಸ್‌ಬುಟ್ಟು ತಾಂಬೂಲ ಆಕ್ಕೊಂಡು ಎದ್ದಿ ಗಂಡ ವಿನೋದವಾಗಿ ಏನಂತ ಮಾತಾಡ್ತಾ ಇದ್ದಾರೆ :

'ಆದ್ರೆ ಎಣ್ಣೆ ನಾವು ರುದ್ದಾಪ್ಯ ಆಯ್ತು ಬಂದೋ. ಮಗನಾದ ಚಿಣ್ಣಾಳುನ್ಗೆ ವಯ್ಸ್ ಬತ್ತು. ಅವುನ್ಗೆ ನಗ್ನ ಮಾಡ್ಬುಟ್ಟು ರಾಜ್‌ಬಾರದ ಅದ್ಕಾರ ಅವುನ್ಗೆ ವಯಿಸ್‌ಬುಡಬೇಕು! ಅವ್ನ ಸುಖವಾಗಿ ರಾಜ್‌ಬಾರ ಮಾಡ್ಲಿ. ಮಂತ್ರಿನು ಇಂದಾಯ್ತ ಬಂದ. ಮಂತ್ರಿ ಮಗನ್ನು ನಮ್ ಬಾಲ್ಕುನ್ ವಯ್ಸೆ. ಮಂತ್ರತ್ವ ಮಂತ್ರಿ ಮಗುನ್ಗೊಗ್ಯಿಸ್ಲಿ ಅವ್ರಿಬ್ರುನು ರಾಜ್‌ಬಾರ ಮಾಡ್ಲಿ' ಅಂತ ತನ್ನ ಎಣ್ತೆವೊಂದ್ಗೆ ದೊರೆ ಏಳ್ದ. 'ಆಗ್ಲಿ ಸ್ವಾಮಿ ನಿಮಿಷ್ಟದಂತೆ ಆಗ್ಲಿ' ಅಂತ ದೊರೆಸಾನಿ ಏಳುದ್ಲು.

'ಮದುವೆ ಮಾಡ್‌ಬೇಕು. ನಮ್ಮ ಮಗ್ನಾದ ಚಿಣ್ಣಾಳುನ್ಗೆ ಯಾವ್ ಬಾಲೆ ಅವುನ್ಗೆ ಅನ್ವಯಿಸ್‌ವಂಗೆ ಅವುನ್‌ರೂಪ್ಗೆ, ಅವುನ್ ರೇಕೆಗೆ ತಕ್ಕಾದ ವದುನುಡ್ಕಿ ಬೇರೆ ವೇಸ್‌ದೆಲಿ ಚಂಚರಣೆ ಮಾಡಿ ಉಡ್ಕಿ ಮದ್ವೆ ಮಾಡ್‌ಬೇಕು' ಅಂತೇಳಿ ಏನ್ ಮಾಡುದ್ರು ಮಂತ್ರಿ ಕರುಸ್ಕೊಂಡುದ್ದುನು. ಆನೆ ಮ್ಯಾಲೆ ಬೇಕಾದ ದುಡ್ಡು ಕಾಸು ಅಕ್ಕೊಂಡುದ್ದುನು ಲೋಕ ಚಂಚರಣ ಮಾಡುದ್ರು ಎಣ್ಣುಡಿಕೊಂಡು. ಅತ್ತಾರ್ ದೇಸ ಚಂಚರಣೆ ಮಾಡಿದ್ದಾರೆ. ಈ ಚಿಣ್ಣಾಳನಗ್ ತಕ್ಕ ಎಣ್ಣು ದೊರಿಲಿಲ್ಲ. ಅವಾಗೇನ್ ಮಾಡುದ್ರು ? ತಿರ್ಗ ಮಂತ್ರಿ ರಾಜ ಇಬ್ರುನು ಪಟ್ಣುಕ್ ಬಂದುದ್ದನು ತಾನ ಮಡಿ ಮಾಡ್ಕೊಂಡು ಊಟ ಮಾಡ್ಕೊಂಡು ಮಂಚುದ್ ಮ್ಯಾಲ್ ಕುಂತ್ಕೊಂಡು ಮಂತ್ರಿನು ದೊರೆ ಏನಂತ ಮಾತಾಡ್ತಾರೆ :

'ಆದರೆ ಮಂತ್ರಿ ಬಹು ದಿವಸ ಕಾಲ ನಾವು ಲೋಕ ಚಂಚರಣೆ ಮಾಡುದ್ವಿ. ನಮ್ ಮಗುನ್ಗೆ ತಕ್ಕ ಬಾಲೆ ದೊರಿಲಿಲ್ಲ. ಈವಾಗ ನಮ್ಮ ಮಂದಿ ಮಾರ್ಬಲ, ದಂಡು ದಾಳಿ ಆನೆಸಾಲು, ಒಂಟೆ ಸಾಲು ಸಹಿತವಾಗಿ, ಚಿಣ್ಣಾಳನ ರೂಪು ರೇಕೆ ಅವ್ನ ಯಾವ ತರದೇಲಿದ್ದಾನೆ ಅದೇ ತರದೇಲಿ ನಾವು ಬಂಗಾರದ ಪೋಟೋ ಬರೆಸಿ ದಂಡು ಸಮೇತ ದೇಸಾಂತರ ಕಳಿಸ್ ಬುಡಬೇಕು ಕಾಣ್ ಮಂತ್ರಿ' ಅಂದ. 'ಆಗ್ಲಿ ಸ್ವಾಮಿ' ಅಂತೇಳಿ ಮಂತ್ರಿ ಒಪ್‌ಕೊಂಡ. ಬಂಗಾರ್ದೆಲಿ ಮಗುನ್ ರೂಪು ಯಾವ್ ತರದೇಲಿದೆ ಅದೇ ರೂಪ್‌ನೆಲಿ ಒಂದು ಪೋಟೋ ಬರೆಸಿ ಎಲ್ಲ ತಿದ್ದವಳಿ ಮಾಡುದ್ದೆ ಪೋಟೋ ಕಳಸ್‌ಬುಟ್ರು ದೇಸುದ್ ಮ್ಯಾಲೆ.

ದಂಡು, ದಾಳಿ, ಮಂದಿ ಮಾರ್ಬಲ, ಆನೆ ಸಾಲು, ಕುದುರೆ ಸಾಲು, ಒಂಟೆ ಸಾಲು, ಕಾಲಾಳು ಇಷ್ಟೆಲ್ಲಾ ಒಯ್ತಾ ಇದ್ದಾರೆ ದೇಸುದ್ ಮ್ಯಾಲೆ. ಅವುರ್‍ಗೂಟುಕ್ಕೆ ಯಾವ ಹಣ ಬೇಕು, ಬ್ಯಾಳೆ ಬೇಕೆ, ಅಕ್ಕಿ ಬೇಕೆ ಏನೆಲ್ಲಾ ಸಾಮಾನ್ ಬೇಕೋ ಅದ್ನೆಲ್ಲ ಆನೆ ಮ್ಯಾಲಂಬಾರಿ ಆಕ್ಬುಟ್ರು. ಪೋಟೋನ ಒಂದಾನೆ ಮ್ಯಾಲೆ ಮಡ್ಗಿ ನೀಲಸಂಕ್ರಾಯಿನ್ ಕಡೆ ದಂಡು ಹೋಗ್ತಾ ಇದ್ದಾರೆ. ಸಾಮಾನ್ಯವಾಗಿ ಒಂದು ಎರ್ಡೊರ್ಷಕಾಲ ಲೋಕ ಚಂಚರಣೆ ಮಾಡುದ್ರು. ಈ ದಂಡು ದಾಳಿ ಸಂಸಾರ ಸಮೇತರಾಗಿ ಮಕ್ಳು ಮರಿ ಆದಾಯ ವೆಚ್‌ವೇನು ನಮ್ಮೊಲ ಏನು ಯಂಗೆ ಎತ್ತ ಏನೂ ಅಸ್ವಂಗಿಲ್ಲ. ದೊರೆ ಯಂಗೇಳಿದ್ದಾರೆ ಆಗೆ ಎಣ್ ಪತ್ತ ಮಾಡ್‌ಕೊಂಡು ಬರಬೇಕು. ಎಣ್ ಪತ್ತ ಮಾಡ್ಕೊಬಂದ್ ಬುಟ್‌ಮ್ಯಾಲೆ ಅವುರ್ಗೆಲ್ಲ ಅನಂತರ ಸಂಬ್ಳ ಉಂಟು. ಒಂದ್ ಕೋಟಿ ಕೇಳ್ಲಿ ಒಬ್ ಮನುಸ್ಯ ಕೊಡುಕ್ ತಯಾರು. ಮಗುನ್ಗೆ ತಕ್ಕಾದುಡ್ಗಿನ ಉಡಿಕೊ ಬರಬೇಕು.

ಅಲ್ಲಿಗೆ ದೊರೆ ಕಳಿಸಿದ್ನಲ್ಲ ಊಟಕ್ಕೆ, ಅಡಿಗೆಗೆ ಉಪಚರಣೆಗೆ ತೀರೋಯ್ತು. ಒಂದೊತ್ತುನ್ ಬತ್ತ ಮಾತ್ರ ಅದೆ. ಅಲ್ಲಿ ದೊಡ್ಡದಾಗಿ ಒಂದು ಕಾವೇರಿ ಒಳೆ. ಏನ್ ಮಾಡ್ತಿದ್ದಾನೆ ಒಬ್ಬ "ಕರ್ನಲ್ಲು" ನಿಮ್ಮಂತ ಒಬ್ಬ ಯಜಮಾನ 'ಸೋಡ್ರಯ್ಯ ದೊರೆ ಕೊಟ್ಟಿದ್ದಂತ ದುಡ್ಡು, ಅಕ್ಕಿ ಬ್ಯಾಳೆ, ಸಾಮಾನು ಎಲ್ಲ ತೀರೋಯ್ತು. ಈ ದಿವ್ಸ ಒಂದೊತ್ತುನ್ ಬತ್ಯ ಮಾತ್ರ ಇದೆ. ನಾವು ಸ್ನಾನ ಮಾಡಿ ಸಂಧ್ಯಾವಂದ್ನೆಗೊಳ್ ಮಾಡ್ಕೊಂಡು ಈ ಇರತಕ್ಕಂತ ಬತ್ಯವೆಲ್ಲ ಅಡ್ಗೆ ಮಾಡಿ ಊಟ ಮಾಡ್‌ಬುಟ್ಟು ವರ್ಷಾನ್ ಕಾಲ ಚಂಚರಣೆ ಮಾಡಿದ್ದೀವಿ. ನಮ್ ಪಟ್ಣಕ್ಕೊರುಟ್ ಬುಡ್‌ಬೇಕು ಕಾಣ್ರಯ್ಯ' ಅಂತ ಕರ್ನಲ್ಲು ಕೇಳ್ಕೊಂಡ್ರು. ಆಗ್ಲಪ್ಪ ಅಂದ್‌ಬುಟ್ಟುದ್ದ್ನೆ ಬೇಕಾದಂಗೆ ಅಲ್ಲಿ ತಾನ ಮಾಡೋರು ಮಾಡ್ತಾರೆ. ಬಟ್ಟೆ ಒಗಿಯೋರು ಒಗಿತಾರೆ. ಸರಿ ಬೆಂಕಿ ಹತ್ತಿಸ್ಕೊಂಡು ಅಡ್ಗೆ ಮಾಡೋರು ಮಾಡ್ತಾ ಅವ್ರೆ. ಇಷ್ಟು ನಡಿತಾ ಅದೆ ಅಲ್ಲಿ. ಇವ್ರ ಒಂದು ಜಾತ್ರೆ ಅಂದ್‌ವಾಗೋಯ್ತು. ಈ ನೀಲಸಂಕ್ರಾಯುನ್ ದಂಡು ಆ ಸಮುದ್ರದಿಂದೀಚೆ ಕೆರೆ ವಾಡೇಲಿ ಸುಮಾರಾಗಿ ಒಂದು ಜಾತ್ರೆ ತರ ಆದಂಗಾಗೊಯ್ತು.

ಅಮರಾವತಿ ಅಂತಕ್ಕಂತದೊಂದು ಪಟ್ಣ. ಆ ಪಟ್ಣದೆಲಿ ಆಮ ಸಂಕ್ರಾಯ ಅಂತ ಅನ್ನೊನೊಬ್ಬ ರಾಜ. ಆತುನ್ಗೆ ಒಬ್ಳೆ ಎಣ್‌ಬಾಲೆ. ಅವುಳ್ಗೆ ಏನಂತ ಎಸ್ರು ಕಟ್ಟಿದ್ದಾರೆ, 'ವಿಧ' ಅಂತ ಎಸ್ರು ಕಟ್ಟಿದ್ದಾರೆ. ಆ ಉಡ್ಗಿನು ಪಾಟಸಾಲೆಗೋಗಿ ಬೇಕಾದಂಗೆ ವಿದ್ಯ ಕಲ್ತು ಅವುಳ್ಗೆ ದಾದಿರುಂಟು. ತಾಯಿ ತಂದೆ ಅವುಳ್ ಕಷ್ಟ ಸುಖ ಏನೂ ನೋಡ್‌ವಂಗಿಲ್ಲ. ದಾದಿರ್ ನೋಡ್ಬೇಕು. ತಾನ ಮಾಡ್ಸೊದು ದಾದಿ, ಬಟ್ಟೆ ಒಕ್ಕೊಡೋಳು ದಾದಿ. ಹೂವ ತಂದ್‌ಕೊಡೋಳು ದಾದಿ. ಪುಸ್ಮ ತಂದ್‌ಕೊಡೋಳು ಒಬ್ಬು ಹೂವಾಡಗಿತ್ತಿ. ಅವುಳ್ಗೆ ಅಡ್ಗೆ ಮಾಡೂಟುಕ್ಕಿಕ್ಕೊಳು ಒಬ್ ದಾದಿ. ನಿಜ್ಜಾಲುನು ತೂಗ್ ಮಂಚ್‌ದೆಲ್ ತೂಕ್ಕೊಂಡು ಅವುಳ್ ಪಡಸಾಲಿನಿಂದ ಬತ್ಲೆ, ತೂಕ ಮಾಡಿ ಒಂದ್ ರಾತ್ರಿಗೆ ಒಂದ್ ದಿವ್ಸಕ್ಕೆ ಇಷ್ಟು ಕೆ.ಜಿ. ಅವ್ಳೆ ಅಂತ ತೂಕ ಮಾಡೋರೆ ಬ್ಯಾರೆ. ಇಷ್ಟೆಲ್ಲ ಬರ್ಕೊಂಡು ಬೆಳಿಗ್ಗೆ ದೊರೆಗೆ, ಆಮ್‌ಸಂಕ್ರಾಯ ಅಂತಕ್ಕಂತೋರ್ಗೆ ಯೇಳೋರು. ಈ ಉಡ್ಗಿಗೆ ಅನ್ನೆಳ್ಡೊ ರ್ಸ ವಯಸ್ಸಾಯ್ತು. ಉಡ್ಗಿ ಎಣ್ಣಾಗಿ ಬಂದ್‌ಬುಡ್ತು. ಆಮ್‌ಸಂಕ್ರಾಯ ಎಡ್ತಿನ್ ಕುಂಡ್ರಿಸ್‌ಕೊಂಡು ಹೇಳ್ತಾನೆ :

'ಆದ್ರೆ ನೋಡೆ ಇನ್ನು ಮಗ್ಳುನ ತಡ್ಕೊಳ್ಳುಕ್ಕಾಗಲ್ಲ, ನಾವ ಎಷ್ಟೆ ದುಡ್ ಕರ್ಚಾಗ್ಲಿ ಸಾಮಾನ್ಯವಾಗಿ ನಾವು ದೇಸ ಚಂಚರಣೆ ಮಾಡಿ ನಮ್ಮ ಬಾಲಕಿಗೆ ತಕ್ಕಂತ ಪುರಸನ್ನ ಪತ್ತಮಾಡಿ ಎಷ್ಟೇ ಕೋಟಿ ವರದಕ್ಷಿಣೆ ಕರ್ಚಾಗ್ ಬುಡ್ಲಿ, ಲಗ್ನ ಮಾಡ್ ಬುಡಬೇಕು' ಅಂತೇಳ್ದ. 'ಆಗ್ಲಿ ಸ್ವಾಮಿ' ಅಂದ್‌ಬುಟ್ಟುದ್ದುನು ಸರಿ ಯಾರ್ನೋ ನಾಲ್ಕಾರ್ ಜನ ದೊರೆವೊಂದುಗ್ ಕರ್ಕೊಂಡುದ್ದು ಹತ್ತಾರಿಪ್ಪತ್ ದೇಸ ಸುತ್ತುದ್ರು. ಒಂದೆಂಟ್ ದಿಸ ಯಾರೂ ದೊರಿಲಿಲ್ಲ. ಅವರೇನ್ ಮಾಡಿದ್ದಾರೆ ದೊರೆಸಾನ್‌ಗಿತ್ತಿ ದೊರೆ ಇಬ್ರು ಕೂತ್ಕೊಂಡು ಮಾತಾಡ್ತಿದ್ದಾರೆ. 'ನಮ್ಗೆ ಇದೆಲ್ಲ ಸರೋಗೋದಿಲ್ಲ. ಬೇಕಾದಷ್ಟ್ ದಿನ ದಂಡು ದಾಳಿ ಮಂದಿ ಮಾರ್ಬಲ ಸಹಿತ ಮಗುಳ್ಗೆ ರೂಪುಗ್ ತಕ್ಕಾದ್ ಚಿನ್ನುದ್ ಪೋಟ ತಗ್ಸಿ ಇವುರ್ನ ದೇಸಾಂತ್ರ ಕಳಿಸ್‌ಬುಟ್ಟು ಈ ಬಾಲ್ಕಿಗೆ ಯಾವ್ ಗಂಡ್ ಸಿಕ್ತನೊ ಪತ್ತೆ ಮಾಡ್ಕೊ ಬರ್ಲಿ' ಅಂದ್‌ಬುಟ್ಟುದ್ದು ಚಿನ್ನುದ್ ಪೋಟೋ ತಗ್ಸಿ ದಂಡು ದಾಳಿ ಸಮೇತ 'ಹತ್ತೊರ್ಸ ಕಾಲ ಆಗ್ಲಿ

ಹದಿನೈದ್ದೊರ್ಷ ಕಾಲ ಆಗ್ಲಿ ನಮ್ಮ ಬಾಲಕಿಗೆ ತಕ್ಕ ಪುರುಷನ್ನು ಪತ್ತೆ ಮಾಡ್ಕೊ ಬರತಕ್ಕದ್ದು' ಅಂತೇಳಿ ಕಳಿಸ್‌ಬುಟ್ರು.

ಸರಿ ಅದ್ರಂತೆ ಮಕ್ಕು ಮರಿ ದಂಡೆಲ್ಲ ಹೊರುಟ್ರು. ಊಟಕ್ಕೆ, ತಿಂಡಿಗೆ, ಬಟ್ಟೆ, ಬರಿ ಏನ್ ಸಾಮಾಗ್ರಿ ಬೇಕೋ ಅದೆಲ್ಲ ದೊರೆ ಕೊಟ್ಟ. ಹೋದ್ರೂ ಹೋದ್ರು ಬೇಕಾದಷ್ಟು ದೇಸಾನೆಲ್ಲ ಸುತ್ತುದ್ರು. ಅವುರ್ಗ್ಗು ದೊರಿಲಿಲ್ಲ. ಹತ್ತಾರ್ ದೇಸುಕ್ಕೆಲ ಕಾಣ್ವಂಗೆನೆ ಪೋಟೋ ಮಡಿಕೊಂಡವರೆ. ಈ ಪೋಟೊದೆಲಿ ನಂಬರ್ ಒಡೆದವರೆ 'ನೋಡ್ರಪ್ಪ ನಮ್ಮಲ್ಲಿ ಈವೆಣ್ಣದೆ. ಈವೆಣ್ಣುಗ್ ತಕ್ಕಾದಂತ ಗಂಡ್ ಬೇಕು. ಇಂಥ ಕಡೆದು ಈವೆಣ್ಣು' ಅಂತೆಲ್ಲ ಬರ್ದದೆ. ಅವ್ರಂಗೆನೆ ಹತ್ತಾರು ವರ್ಷಕಾಲ ಇವುರ್ಗ್ಗು ಸಿಕ್ಕಿಲ್ಲ. ಒಂದೊಳೆ ಆಗ್ಲೆ ಏಳುದ್ನಲ್ಲ ಕಾವೇರಿ ಹೊಳೆ ಅದೆ ಒಳೆ ದಡ್ಡೆಲಿ ಅಂದ್ರೆ ಆಚೆಗೆರೆಲಿ ಗಂಡುನ್ ಕಡೆಯೋರು ; ಈಚೆಗೆರೆಲಿ ಎಣ್ಣುನ್ ಕಡೆಯೋರು. ತಾನ ಮಡಿ ಮಾಡ್ಕೊಂಡು ಈ ಗಂಗೇಲಿ ಧರ್ಮುವೋ ಕರ್ಮುವೋ ಕಳ್ಕೊಂಡು ನಮ್ ಪಟ್ಣುಕ್ಕೆ ಒರುಟ್ ಬುಡ್‌ಬೇಕು ಅಂತ ಮೇಸ್ತ್ರಿನ ಕೇಳುದ್ರು.

ಏನಾಯ್ತಪ್ಪ ಅಂದ್ರೆ : ನನ್ನಂಥೊನೊಬ್ಬ ಬೀಡಿಲಿ ಬಾಳ ಬ್ರಮೆಗಾರ. ಬೀಡಿ ತೀರೋಯ್ತು. ಗೋರಾರಣ್ಯುದೆಲಿ ಕಾವೇರಿ ನದಿ ಅತ್ರ ಇದ್ದಾರೆ. ಅಲ್ಲಂಗ್ಡಿ ಎಲ್ ಬರಬೇಕು. 'ಸ್ವಾಮಿ ಯಾರೋ ಆ ಕಡೆ ಬಾಳ ಜನ ಇದ್ದಾರೆ; ನಂಗೆ ಒಂದ್ ಬೀಡಿ ಬೇಕು. ಅವುರ್ನ ಕೇಳಿ ಒಂದ್ ಬೀಡಿ ಈಸ್ಕೊಂಡು ಸೇದ್ಕೊಂಡು ನನ್ ಪ್ರೇಮ ಕಳ್ಕೊಂಡ್ ಬತ್ತೀನಿ ಸ್ವಾಮಿ' ನಿಮ್ಮಂತ ಮೆಂಬರ್‌ದಾರ್ರುನ ಕೇಳ್ಕೊಂಡ. 'ಊಂ ಹೋಗಪ್ಪ' ಅಂದ ಆ ಕರ್ನಲ್ಲು. ಇವ್ನೇನ್ ಮಾಡ್ತಾನೆ ಮೀಜ್‌ಕೊಂಡೊಯ್ತಾನೆ. ತಮಾಸ್ಕೆ ಆ ಕಡೆ ಎಣ್ಣೋರು ಕಡೆಯೋನು ಮೋಜುಗ್ ಮೀಜ್‌ಕೊ ಬಂದ. ಅವ್ನು ತಮಾಸ್ಕೆ ಮೀಜ್‌ಕೊ ಬಂದುದ್ದು. ಇವ್ನ ಬೀಡಿಗ್ ಸಲುವಾಗಿ ಬಂದೋನು. ಇಬ್ರು ಮಧ್ಯ ಬಂದು ಕಲ್‌ಮ್ಯಾಲ್ ಕೂತ್ಕೊಂಡು 'ಯಾವೂರಪ್ಪ ಎನ್ ಸಮಾಚಾರಾ ಇಷ್ಟೊಂದ್ ಜನ ಬಂದಿದ್ದೀರಿ' ಅಂತ ಯಾರ್ ಕೇಳ್ದೋರು ? ಎಣ್ಣುನ್ ಕಡೆಯೋನು ಗಂಡುನ್ ಕಡೆಯೋನ್ನ.

'ಅಪ್ಪಾ ಏಳ್ತಿನಿ ಒಂದ್ ಬೀಡಿ ಕೊಡಯ್ಯ.' 'ತಕೊಳ್ಳಯ್ಯ' ಅಂತ ಬೀಡಿ ಬೆಂಕಿಕಡ್ಡಿಯಲ್ಲ ಕೊಟ್ಟ. ಸೇದ್ಬುಟ್ಟು 'ನೋಡಪ್ಪ ! ನಾವು ನೀಲಾವತಿ ಪಟ್ಣ. ನೀಲಸಂಕ್ರಾಯ್ನುಗೆ ಒಬ್ನೆ ಮಗ. ಅವ್ನೆಸ್ರು ಚೆಣ್ಣಾಳ. ನಾವು ಅವುನ್ ಪೋಟೋ ಧರಿಸ್‌ಕೊಂಡು ಎಣ್ ಪುರುಷೆನ ಉಡ್ಕೊಂಡ್ ಬಂದಿದ್ದೀವಿ ದೇಸುದ್ ಮ್ಯಾಲೆ ನೀವ್ಯಾರು' ? 'ಅಪ್ಪಾ ನಾವು ಅಮರಾವತಿ ಪಟ್ಣುದ್ ಆಮ್‌ಸಂಕ್ರಾಯುನ್ ದಂಡು. ನಮ್ ರಾಜುನ್ಗೆ ಒಬ್ಬೆ ಎಣ್ ಮಗ್ಳು, ವಿಧ ಅಂತ ಆಕೆ ಎಸ್ರು. ಅವುಳ್ಗೆ ನಾವು ಗಂಡ್ ತಡಿಕೊಂಡು ಚಿನ್ನುದ್ ಪೋಟೋ ಇಡುಸ್ಕೊಂಡು ಬಂದಿದ್ದೀವಿ' ಅಂದ. 'ಆಗಾದ್ರೆ ಸಿವ ಏನಾದ್ರು ಗಂಡ್ಗು ಎಣ್ಣು ಜೋಡಿ ಸರಿಮಾಡಿದ್ರೆ ಇಲ್ಲೆ ಸರೋಗ್ಲಪ್ಪ. ನೀವು ಊಟ ಮಾಡ್ಕೊಂಡು ಈಚೆ ಗೆರೆಗ್ ಬಂದ್‌ಬುಡಿ' ಅಂತ ಗಂಡ್ನೋನ್ ಏಳ್ಬುಟ್ಟ. ಬಂದಿ ಕರ್ನಲ್‌ಗೇಳ್ದ 'ಯಾರೋ ಅಮರಾವತಿ ಪಟ್ಣ ಆಮ್‌ಸಂಕ್ರಾಯುನ್ಗೆ ಒಬ್ಬೆ ಮಗ್ಳಂತೆ, ಅವ್ಳೆಸ್ರು ವಿದ ಅಂತೇಳಿ, ಗಂಡ್ ತಡಿಕೊಂಡು ಬಂದಿದ್ದಾರಂತೆ' ಅಂತೇಳ್ದ.

ಸ್ವಲ್ಪ ಕುಸಿಯಾಯ್ತು. ಈ ಕಡೆ ಎಣ್ಣೋರ್ ಕಡೆಯೋರ್ಗು ಕುಸಿ ಆಯ್ತು. ದಪ್ಪದಾರ ಬೇಸಿದ್ದು ತಿನ್ಕೊಂಡ್ರು. 'ದೊರೆ ಕಳ್ಸದ್ ಸಾರ್ಥಕ ಆಗ್ಲಿ, ನಾವ್ ಬಂದು ಹತ್ತಾರು ವರ್ಷಕಾಲ ಆಯ್ತು. ನಮ್ಮುಕ್ಳು ಮರಿ ಎಡ್ತಿರೆಲ್ಲ ಯಂಗಿದ್ದಾರೋ ? ಬಂದ್ ಕಾರ್ಯ ಆದ್ರೆ ನಾವು ಒಂಟೋಗ್ ಬೇಕು' ಅಂತೇಳಿ ಯೋಚನೆ ಮಾಡ್ತಾ ಅವ್ರೆ. ಈಚೆ ಕಡೆ ಬಂದ್ರು. ಆ ಚಿನ್ನದ್ ಪೋಟೋ ಈ ರನ್ನದ್ ಪೋಟೋ ಜೋಡಿಸುದ್ರು. ಅಚ್‌ಕಟ್ಟಾಗಿ ಒಂದ್ಕೊಂದು ಮ್ಯಾಚಾಗೋಯ್ತು. ಸರಿ ಈ ಪುರೊಹಿತ್ರು ಸಂಗ್ತಾನೆ ಪಂಚಾಂಗ ಜ್ಯೋತಿಸ್ಯ ಎಲ್ಲ ತಂದಿದ್ರು. ಅಲ್ಲೆ ಅವಾಗ್ಲೆ ಪಂಚಾಂಗ, ಜ್ಯೋತಿಸ್ಯಯಲ್ಲ ಓದುದ್ರು. ಎಸ್ರುಬಲ, ಸಾಸ್ತ್ರೋಕ್ತುವೆಲ್ಲ ಅಚ್‌ಕಟ್ಟಾಗಿ ಒಂದ್ಕೊಬುಡ್ತು. ಅಲ್ಲೆನೆ ಲಗ್ನ ಕಟ್ಬುಟ್ರು. ಒಂದಿಪ್ಪತ್ತೈದು ದಿಸುಕ್ಕೋ ಒಂದಸ್ಯೈದ್ ದಿಸಕ್ಕೋ ಮಹೂರ್ತ ನೋಡಿ ಲಗ್ನ ಕಟ್ಬುಟ್ರು. ಗಂಡ್ನೋರು ಎಣ್ಣೋರ ಪೋಟ ಇಸ್ಕೊಂಡ್ರು. ತಮ್‌ಪೋಟೋನೆ ಎಣ್ಣೋರುಗ್ ಕೊಟ್ಬುಟ್ರು. ಇಷ್ಟು ದಿನುಕ್ಕೆ ಅಂತ ವಾಯ್ದೆ ಕಟ್ಕೊಂಡು ಅವ್ರವ್ರ ಪಟ್ಣುಗೊಳ್ಗೆ ಒಂಟೋದ್ರು.

ಏನಿವತ್ತು ಸಂದೆವೊತ್ತುಗ್ ಬೇಕಾದ್ರೆ ಮಾಡ್ಕೋದು. ದೊರೆಚಿತ್ತೊ ಪರಿಚಿತ್ತೊ ಅಂದಂಗೆ. ದೇವ್ರು ಬೇಕಾದ್ ಭಾಗ್ಯಾನೆ ಕೊಟ್ಟಿದ್ದಾನೆ. ನಮ್ಮಂತೆ ಬಡರೈತರೇ ಅವ್ರು? ಆಸ್ಥಾನುಕ್ ಬಂದ್ ಬುಟ್ಟು ಪೋಟೋ ತಕೊಂಡೋಗಿ ಎಣ್ಣಾತ್ರ ಮಡ್ಗುದ್ರು. ಏನೊಳ್ಳೆ ಎಳ್ಳು ಅಕ್ಕಿ ಬೆರ್ತಂಗೆ ಬಾಳ ಅಚ್‌ಕಟ್ಟಾಗಿ ಮ್ಯಾಚಾಯ್ತು. ಎಣ್ಣುನ್ ಪೋಟೋ ತಂದಿ ಗಂಡತ್ರ ಮಡ್ಗುದ್ರು. ಇದು ಮ್ಯಾಚಾಗೋಯ್ತು. ನೀಲಸಂಕ್ರಾಯ ಮಂತ್ರಿಗೇಳ್ತಾ ಅವ್ನೆ 'ಮಂತ್ರಿ ನಮ್ ದಂಡೋಗಿತ್ತಲ್ಲ ಎಣ್ಣುಡಿಕೊಂಡು ಬಂದಿದ್ದಾರೆ ಲಗ್ನ ಕಟ್ಟಿಸ್ಕೊಂಡು, ಇಷ್ಟು ದಿನುಕ್ಕೆ ಮದ್ವೆ ಅಂತ ಇಟ್ಕೊಂಡಿದ್ದಾರೆ. ಇಷ್ಟು ದಿನುಕ್ಕೆ ಎಣ್‌ಕರ್ಕೊಂಡು ಬತ್ತಾರೆ. ಮದ್ವೆ ಮಾಡ್‌ಬೇಕು' ಅಂತಾನೆ.

ಈ ಮಂತ್ರಿ ಸಾಯಂಕಾಲುದ್‌ವರ್ಗು ರಾಜುನ್ ಜೊತೆಲೆ ಇದ್ದು, ಸಾಯಂಕಾಲ ಒಂಟೋದ ತನ್ನರಮನೆಗೆ. ಎಡ್ತಿ ಜೊತೆಲಿ ಏನೇಳ್ತಾನೆ 'ಆದ್ರೆ ಎಣ್ಣೆ ದೊರೆ ಮಗುನ್ಗೆ ಮದ್ವೆ ಮಾಡ್ತಾನೆ. ಮದ್ವೆ ಆದೆರುಡ್ ತಿಂಗಳ್ಗೊ ಮೂರ್ ತಿಂಗುಳ್ಗೋ ರಾಜಾಧಿಕಾರ ವಹಿಸ್ತಾನೆ. ರಾಜ್ ಪಟ್ಟಾಭಿಸೇಕ ಕಟ್ಬುದ್ ಮ್ಯಾಲೆ ನಮ್ಗೆ ನಮ್ಮಗುನ್ಗೆ ಬರೋ ಭಾಗ್ಯ ಏನು ? ನಾವೇನಾದ್ರು ಮಾಡಿ ಆ ಚಿಣ್ಣಾಳುನ್ನ ಸಾಯಿಸ್‌ಬುಟ್ರೆ ರಾಜಾಧಿಕಾರ ನಮ್ಮಗುನ್ಗೆ ಕಟ್ಬೋದು' ಅಂದ. 'ಯಾವ್ ತರದೆಲಿ ಸ್ವಾಮಿ ಆ ರಾಜ್ ಮಗ್ನ ಸಾಯ್ಸೋದು ?' ಅಂದ್ಲು ಮಂತ್ರಿ ಎಡ್ತಿ.

'ಅಯ್ಯೋ ಹುಚ್ಚೀಂಗ್ಸೆ ಸ್ವಲ್ಪುದ್ರಲೆ ಅದೆ, ಆದ್ರೆ ಗಂಡುಗ್ ನೀರೂದ್ ಮ್ಯಾಲ್ಕೆ ಮದನ್‌ಬುಡು ಅಂತೇಳಿ ಅವುನ್ ಸರಿ ನಂಟುಸ್ಥಾನ್‌ದೊರೆಲ್ಲ ಗಂಡ್ಗೆ ಊಟುಕ್ ಬಡುಸ್ತಾರೆ. ಇವತ್ತೊಂದ್ ಮನೆಲಿ ಒಬ್ಬಿಟ್ ಮಾಡೋದು, ವಡೆ ಮಾಡೋದು, ಕಜ್ಜಾಯ ಮಾಡೋದು ಇಂಥೆ ಕಣ್ಣುಗ್ ಬೇಕಾದಷ್ಟೆ ಮಾಡಿ ಬಡಿಸ್ತಾರೆ. ನಮ್ಮನೆಗೂ ಊಟುಕ್ಕರ್ಯೋದು. ದೊರೇನ ನಮ್ಮನೆಗೂ ಊಟುಕ್ ಕಳಿಸ್ಬೇಕು ಅಂದ್ರೆ ಮಂತ್ರಿ ಮನೆಗ್ಯಂಗ್ ಕಳ್ಸೋದು ಅಂತ ಅಬ್ಯಂತರ ಪಟ್ಕೊಂಡಾನ್ಯೆ ದೊರೆ ? ಇಲ್ಲ ! ಮತ್ತು ಬಾಳ ಸಂತೋಷ ಪಟ್ಕೊಂಡು ನಗ್ ನಗ್ತಾನೆ ಕಳಿಸ್ಕೊಡ್ತಾನೆ. ವಿಸುದ್ ಕಜ್ಜಾಯ ಮಾಡ್‌ಬುಡು, ಸಾಮಾನೆಲ್ಲ ತಂದ್ಕೊಡ್ತೀನಿ. ಊಟ ಮಾಡುದ್ ತಕ್ಷಣ ದೊರೆ ಮಗ ಅವುನ್ ರೂಂಗೋಗಿ ಮಲಿಕೋತಾನೆ. ತಂದೆ ತಾಯಿ ಜೊತೆಲಿ ಮಾತಾಡೊದಿಲ್ಲ, ಕತೆ ಆಡೋದಿಲ್ಲ.

ಬೆಳ್ಕರಿಯೊತ್ಗೆ ಕಾಲಿ ಆಗೊಯ್ತಾನೆ. ಅದೇ ಎಣ್‌ತಂದು ನನ್‌ಮಗುನ್ಗೆ ಮದ್ವೆ ಮಡ್ಕೊಬುಡುವ, ರಾಜಾಧಿಕಾರ ನನ್ ಮಗನ್ಗೊಯಿಸ್ ಬುಡುವ' ಅಂತೇಳಿ ಎಂಡ್ತಿ ಜೊತೇಲಿ ಏಳ್ಬುಟ್ಟ ಮಂತ್ರಿ.

ಐದಾರ್ ದಿಸ ಬೇಕ ಬೇಕಾದೋರು ಬೇಕಾದಡ್ಗೆ ಮಾಡಿ ಬಡ್ಸುದ್ರು. ಅವತ್ತೊಂದಿನ ಮಂತ್ರಿ ಹೋದ. 'ಸ್ವಾಮಿ ದೊರೆಯೆ' ! 'ಏನಪ್ಪ'? ಸಾಯಂಕಾಲ ಐದು ಗಂಟೆಗೆ ತಮ್ ಮಗನ್ನ ನಮ್ ಮನೇಗೆ ಊಟುಕ್ ಕಳಿಸ್ಬುಡ್ರಿ. 'ಇಲ್ಲ ಅನ್ನುಕ್ಕಾದಾತೆ ? ಆಗ್ಲಿ ಹೋಗ್ರಿ.' ಸರಿ ಈ ಅರಮನೆಗೆ ಊಟುಕ್ಕೋಗಿದ್ದ ಚಿಣ್ಣಾಳ ಅಂತಕ್ಕಂತ ಉಡುಗ ಊಟ ತೀರಸ್ಕೊಂಡು ಬಂದ. ಅವುನ್ ರೂಮೆಲಿ ಮಂಚುದ್ ಮ್ಯಾಲ್ ಮಲ್ಗಿದ್ದ. ಮಲ್ಗಿದ್ದಂಗೆನೆ ಇವ್ನ ಸ್ವಪ್ನ ಕಂಡ್‌ಬುಟ್ಟ! ಹ್ಯಾಗ್ ಸ್ವಪ್ನ ಕಂಡ ? 'ಇವೊತ್ತು ನಿಮ್ ತಂದೆ ಮಂತ್ರಿ ಮನೆಗೆ ಊಟುಕ್ಕೆ ಕಳಿಸ್ತಾನೆ. ಆ ಮಂತ್ರಿ ಏನ್ ಮಾಡಿದ್ದಾನೆ ವಿಸುದ್ ಕಜ್ಜಾಯ ಮಾಡಿಸಿದ್ದಾನೆ. ಆ ವಿಸುದ್ ಕಜ್ಜಾಯ ಊಟ ಮಾಡ್ಬುಟ್ಟು ಬಂದ್ ತಕ್ಷಣಾನೆ ಮಲಗಿ ಬೆಳುಗ್ಗೆ ಒತ್ಗೆ ಸಾಯ್ತಿಯ' ಅಂತ ಯಾರು ಯಮಧರ್ಮರಾಯ ಸ್ವಪ್ನದೆಲ್ಲಿ ಏಳ್ಬುಟ್ಟ.

'ನಾನಾಗ್ ನಿನ್ ತರುಕ್ಕೆ ಸಾದ್‌ವಿಲ್ಲ. ನಿನ್ ವಾಯ್ದೆ ನನಗ್ ಸಿಕ್ಕಿಲ್ಲ. ಆದರೆ ಮಧ್ಯದಲ್ಲಿ ಇಂಥ ಕೆಟ್‌ಕೆಲ್ಸ ಮಾಡುದ್‌ರಿಂದ ನೀನು ಪ್ರಾಣತ್ಯಾಗ ಮಾಡ್ಲೆಬೇಕು' ಅಂತ ಯಮಧರ್ಮರಾಯ ಏಳ್ಬುಟ್ಟ. ಇವ್ನ ಜೋತಿಸ್ಯ ಚನ್ನಾಗೋದ್ಕೊಂಡಿದ್ ಮನುಸ್ಯ, ಅರಿವಾಗೊಯ್ತು. ಎಚ್ಚರವಾದ್ನೊ ಇಲ್ವೊ ಅಂತ ಬಂದು ಬಂದು ನೋಡುತ್ಲೆ ಇದ್ದ ತಂದೆ. ಕಣ್‌ಬುಟ್ಕೊಂಡು ಯೋಚ್ನೆ ಮಾಡ್ತಾ ಅವ್ನೆ. 'ಏನ್ ಮಾಡೋದು ಇಂಗ್ ಸ್ವಪ್ನ ಕಂಡ್ನಲ್ಲ ! ಮಂತ್ರಿ ಮನೆಗೋಗ್ದೆ ಇದ್ದೀಯಾ ನಮ್ ತಂದೆಗೂ ಮಂತ್ರಿಗೂ ವಿರೋಧ ಉಂಟಾಯ್ತುದೆ. ಊಟುಕ್ಕೋದ್ರೆ ನನ್ನ ಪ್ರಾಣತ್ಯಾಗ ಮಡ್ಕೊಳ್ ಬೇಕಾಯ್ತುದೆ. ಅಷ್ಟೊತ್ಗೆ ಏಳ್‌ಗಂಟೆ ಟೇಮು. ಇವ್ನ ಮಂತ್ರಿ ಎಂಡ್ರು ಗಂಡ ದೊರೆಮಗ ಬರ್ಲಿಲ್ವಲ್ಲ ಅನ್ಕೊಂಡು ಇಷುದ್ ಕಜ್ಜಾಯ ಮಾಡ್ಕೊಂಡು ಕೊಪ್ಪರ್ಕೆಲಿ ನೀರ್ ಕಾಸ್ಕೊಂಡು, ಅರಿಸಿಣ-ಕುಂಕುಮ ಯಲ್ಲ ರೆಡಿ ಮಾಡ್ಕೊಂಡು ಅವುನ್ ಸ್ನಾನ ಮಡಿ ಮಾಡ್ಸಿ ಅವುನ್ಗೆ ಊಟುಕ್ಕಿಕ್ ಬೇಕು' ಅಂತ ಕಾಯ್ಕೊಂಡವರೆ. ಸರಿ ತಂದೆ ಬಂದು :

'ಅಪ್ಪಾ ಮಂತ್ರಿ ಮನೆಗೂಟುಕ್ಕೋಗಪ್ಪ' ಅಂದ, ತಂದೆ ! ಇನ್ನೊಸಿ ಒತ್ ಬುಟ್ಕೊಂಡ್ ಒಯ್ತಿನಿ, ನೀವೋಗಿ ನನ್ಗೆ ಹಸಿವಿಲ್ಲ ಈಗ್ಲೆ. ನಾನೊಯ್ತಿನಿ ಆಮ್ಯಾಲೆ ಹೋಗಿ' ಅಂದ. ಅಷ್ಟೆ ಮಾತು, ಇನ್ನ ಪ್ರತಿಮಾತ್ನ ಮಗುನ್ಗೆ ಹೇಳ್ವಂಗಿಲ್ಲ ದೊರೆ. ಮಗ ತಂದೆ ಮಾತ್ಗೆ ಪ್ರತಿ ಏಳ್ವಂಗಿಲ್ಲ. ಸರಿ ಅಷ್ಟೇಳ್‌ಬುಟ್ಟು ದೊರೆ ಓಗ್ಬುಟ್ರು. ಈ ದೊರೆ ಮಗ ಯೋಚ್ನೆ ಮಾಡ್ಕೊಂಡು ಮಲಗಿದ್ದ. ಏಳು ಏಳೂವರೆ ಎಂಟ್ ಗಂಟೆ ಆಗ್‌ಬುಡ್ತು. ಕಡ್ದೋನೆ ಕುದುರೆ ಕೊಟ್ಟಿಗೆಗೋದ. ಲಾಯುಕ್ಕೆ ತೆಂಗುನ್ ಕಾಯಿ, ಅರಿಸಿಣ, ಕುಂಕುಮ ಪೂಜೆಗ್ ಬೇಕಾದ್ ಸಾಮಾನೆಲ್ಲ ತಕೊಂಡ. ಕುಸುಮ ತಕೊಂಡು ಕಣ್ಣುಗ್ ಬೇಕಾದ್ದೊಂದು ಕುದುರೆ ಇಡ್ಕೊಂಡ. ಆ ಕುದ್ರೆ ಪಾದುಕ್ಕೆ ಅರುಸ್ನ, ಕುಂಕುಮ, ಪುಸ್ಮ ಮಡ್ಗಿ ಕಾಯೊಡ್ದಿ, ಗಂದುದ್‌ಕಡ್ಡಿ ಅಚ್ಚಿ ಪೂಜೆ ಮಾಡಿ ಎಲ್ಲಾ ದೇವತಾಪೂಜೆ ಮಾಡ್ದಂಗೆ ಕುದುರೆಗೆ ಪೂಜೆ ಮಾಡಿ ಆ ಕುದುರೆ ಪಾದುಕ್ ನಮುಸ್ಕಾರ ಮಾಡ್ದ. 'ಆದ್ರೆ ಲಕ್ಷ್ಮಿ ಸರುಸ್ವತಿ ನೀನು ಗೋರಾರಣ್ಯುಕ್ಕೆ ಕರ್ಕೊಂಡೋಗಿ ನನ್ ಸಿರಸಾಗ್ಣೆ ಮಾಡು ಅಥವಾ ಪಟ್ಟುಣ್ಕಾದ್ರು

ಕರ್ಕೊಂಡೋಗಿ ನನ್ ಪ್ರಾಣ ಉಳಿಸು. ಯಾವ್ ದೇಸುಕ್ಕಾದ್ರು ನಾನ್ ಬರುಕ್ ತಯಾರವ್ವ' ಅಂತ ಏಳಿ ಕುದ್ರೆ ಮ್ಯಾಲ್ ಕುತ್ಕೊಬುಟ್ಟ.

ಕುದುರೆ ಏನ್ ಮಾಡ್ತಪ್ಪ ಅಂದ್ರೆ ಈಗ ನಾವು ಬೆಟ್ಟ ಗುಡ್ಡ ಹತ್ ಬಂದು ಈ ಆಲುದ್ ಮರುದ್ ಕೆಳ್ಗೆ ಈ ಸಿಶ್‌ರಾತ್ರಿಲಿ ವಾಸ ಮಾಡ್ತಿದ್ವಿವಲ್ಲ ಅಂಗ್ ಬರಲಿಲ್ಲ. ಅಮರಾವತಿ ಪಟ್ಟದ ಆಮ್‌ಸಂಕ್ರಾಯ ಇದ್ಮಲ್ಲ. ಆ ದೊರೆ ಪಟ್ಟುದ್ ದಾರೀನ್ ಇಡುದ್‌ಬುಡ್ತು ಕುದುರೆ. ಕಾಡ್ನಾದಿ, ಬೆಟ್‌ದಾದಿ ಆ ಊರ್‌ಗೋಗೋದು ಇಂಥ ದಾರಿನೆಲ್ಲ ಬುಟ್‌ಬುಡ್ತು. ಪಟ್ಣದಾದಿನೆ ಇಡುದ್‌ಬುಡ್ತು. ಸರಿ ಹೋಗಿ ಆ ಊರ್ ಮಂಬಾಗ್‌ದೆಲಿ ಇಸ್ಕೋಲು. ಆ ಇಸ್ಕೋಲೆಲಿ ಜೊತೆ ಉಡುಗ್‌ರೊಂದ್ಗೆ ಓದುಕ್ ಬಂದದೆ ಆ ಉಡ್ಗಿ. ಈ ಉಡ್ಗುರ್‌ನೆಲ್ಲ ಬುಟ್‌ಬುಟ್ಟು ಕಡ್ದೊಂಟೋದ್ರು ಮೇಷ್ಟು. ಉಡುಗ್ರೆಲ್ಲ ಬೇಗ ಬೇಗ ಹೋಯ್ತಾ ಅವ್ರೆ. ಆ ಇಸ್ಕೋಲ್ ಮುಂಬಾಗ್ದಲಿ ಕುದ್ರೆ ನಿಂತ್ಕೊತು. ಕುದುರೆ ಇಳ್ದು ಕಲ್‌ಕಂಬುಕ್ ಕಟ್‌ಬುಟ್ಟು ಈಟಿ ಎಡಚರುಕ್ ಬಾಕ್ದು; ಬಲಚರುಕ್ಕೆ ಬ್ಯಾಗೆತ್ಕೊಂಡು ಇವ್ನು ಗ್ವಾಡೆ ಒರಿಕೊಂಡು ಶಿವಾಯನಮಃ ಅಂತ ಕೂತ್ಕೊಂಡ, ಯಾರು ಈ ಚಿಣ್ಣಾಳ !

ವಿದ ಎಂಬ್‌ತಕ್ಕಂತ ಎಣ್ಣು ಯಲ್ಕಿಂಟ ಇಂದಾಗ್ ಬತ್ತು. ಬಂದ್ ನೋಡ್ತು ಕುದುರೆ ನಿಂತದೆ ! ಜಗ್ಲಿ ಮ್ಯಾಲೆ ದೊರೆಮಗ ಕುಂತವ್ನೆ. ಉಡ್ಗಿ ದೃಷ್ಟಿಸ್‌ನೋಡ್ತು. 'ಅದ್ರೆ ನನ್ನರ ಮನೆಲಿರತಕ್ಕಂತ ರನ್ನುದ್ ಫೋಟು ಈ ದೊರೆ ಮಗ ಎರಡೂ ಒಂದೆ ಆಗದಲ್ಲಾ? ಈ ದೊರೆಮಗ ಯಾವ್ ಪಟ್ಣುದೋನು ? ಇವ್ನು ಇಲ್ಲಿರಬೇಕಾದ್ರೆ ಕಾರಣ ಏನು ? ಇವುನ್ ರೂಪ ನೋಡುದ್ರೆ ಯಂಗ್ ಮಾತಾಡ್ಲಿ ನಾನು ? ಸ್ತ್ರೀಯಾಗಿರತಕ್ಕಂತ ಎಣ್‌ಜನ್ಮ ನಂದು. ಪುರುಸುರ್ ಜೊತೆಲಿ ಏನಂತ ಮಾತಾಡ್ಲಿ ? ಅವ್ರು ಏನ್ ತಿಳ್ಕೊಂಡಾರೋ ಕಾಣ್ನಲ್ಲ ಅದ್ರೆ ಮಾತಾಡಿಸ್ಲಿ' ಅಂತೇಳಿ ಆ ನಿಲ ಒರಿಕ್ಕೊಂಡು ಹಾಗೇ ನಿಂತ್‌ಬುಡ್ತು.

ಇವ್ನು ತಲೆ ಬಗ್ಗಿಸ್ಕೋಂನು ಅಂಗೇ ಕೂತವ್ನೆ. ಎಷ್ಟೊತ್ತು ಅಂತ ನಿಂತ್ಕೊತುದೆ ಈ ಉಡ್ಗಿ. ಇವನೆ ತಲೆ ಎತ್ ನೋಡ್ತಾನೆ ! 'ಓಹೋ ನನ್ನತ್ರ ಇರೋ ಚಿನ್ನುದ್ ಫೋಟೋ ಈ ಎಣ್ಣುನ್ ರೂಪು ಎರಡೂ ಒಂದೇ ಆಗಿದೆ. ಈಕಿನ ಹ್ಯಾಗ್ ಮಾತಾಡಿಸ್ಲಿ ನಾನು ? ನಾನಾದ್ರೊ ದೇಶಾನ್‌ದೇಸ ಬಂದಿರೋನು. ಪರದೇಸುದ್ ಸ್ತ್ರೀಯನ್ನ ನಾನು ಮಾತಾಡಿಸುದ್ರೆ ಯಾವುದಾದ್ರು ಅಂಕೃತ್ಯ ಅನ್ಕೊಂಡು ಕೇಡ್ ಮಾತಾಡುದ್ರೆ ಜನ ತುಂಬ್ಕೊಂಡು ನನ್ ಪ್ರಾಣ ಬುಟ್ಟಾರೆ ? ಮಾತಾಡೋದು ಸರಿ ಅಲ್ಲ' ಅಂತೇಳಿ ತನ್ ಬ್ಯಾಗುಗ್ ಕೈ ಆಕಿ ಒಂದ್ ಪೆನ್ಸಿಲ್ಲು ಪುಸ್ತಕ ತಕ್ಕೊಂಡು ಏನೋ ಬರ್‍ಯೊನಂಗೆ ಬರಿತಾ ಕೂತ್ಕೊಂಡ.

ಈ ಉಡ್ಗಿ ಅಷ್ಟೊತ್ ಇಷ್ಟೊತ್ ನೋಡಿ ಪೆನ್ಸಿಲ್ ಕಿತ್ಕೊಂತು ಕೈಯಿಂದ. ಸರಿ ಪುನರಪಿ ಇನ್ನೊಂದ್ ತಕೊಂಡು ಬರಿತಿದ್ಕಂಗೆ ಅದ್ನು ಕಿತ್ಕೋತು. ಇಂಗೆ ನೂರಾರ್ ಪೆನ್ಸಿಲ್‌ಗೊಳ್ನೆಲ್ಲ ಕಿತ್ಕೊಬುಟ್ಟು. ಅವಾಗೇಳ್ದ 'ಅದ್ರೆ ಎಣ್ಣೆ ನಾನು ಬರಿತಕ್ಕಂತ ಪೆನ್ಸಿಲ್‌ಕಡ್ಡಿಯಲ್ಲ ಕಿತ್ಕೊಬುಟ್ಟಲ್ಲ ಯಾತಕ್ಕಾಗಿ ಕಿತ್ಕೊಂಡೆ ಕೊಡೆಣ್ಣೆ' ಅಂದ. 'ಅದ್ರೆ ಸ್ವಾಮಿ ! ನೀವು ಯಾವ್ ದೇಸುದ್ ದೊರೆ ಮಗ? ನಿಮ್‌ತಂದೆ ಎಸ್ರೇನು ನಿಮ್ಮೆಸ್ರೇನು ? ನೀವಿಲ್ಲಿಗೆ ಬರಬೇಕಾದ್ರೆ ಕಾರಣವೇನು ? ನಿಮ್

ಕಷ್ಟ ಸುಖ ನನ್ ಜೊತೆಲಿ ಏಳ್ಲೇಬೇಕು ಸ್ವಾಮಿ' ಅಂದ್ಲು. 'ಆದ್ರೆ ಎಣ್ಣೆ ನಾನು ನೀಲಾವತಿ ಪಟ್ನ ನೀಲ್ ಸಂಕ್ರಾಯುನ್ ಮಗ. ನನ್ನೆಸ್ರು ಚಿಣ್ಣಾಳ, ಏನೋ ಕಷ್ಟ ನನುಗ್ ಬರಲಾಗಿ ಆ ಕಷ್ಟ ಪರಿಹರಿಸ್ಕೊಳುಕ್ ದೇಸಾಂತ್ರ ಬಂದಿದ್ದೇನೆ. ನನ್ ಪೆನ್ಸಿಲ್‌ಕೊಡು ಅಂತ ಕೇಳ್ದ.' 'ಆದ್ರೆ ಸ್ವಾಮಿ ನಾನು ಹತ್ತು ನಿಮಿಸ ಮನ್ಗೋಗಿ ಬರ್ತೀನಿ. ಅಲ್ಲಿಗಂಟಾನು ನೀವು ಈ ಪಡಸಾಲೆಲೆ ಕುಂತಿರಬೇಕು' ಅಂದ್ಲು. 'ಆಗ್ಲಿ ಎಣ್ಣೆ ಕುಂತಿರ್ತೀನಿ.' 'ನಾನಾಗೊಪ್ಪಲ್ಲೆ ಸ್ವಾಮಿ ನನ್ಗೆ ಬಲಗೈ ಬಾಷೆ ಕೊಡಿ' ಅಂದ್ಲು. ಬಲಗೈ ಭಾಷೆ ಕೊಟ್ಟ.

ಬಾಷೆ ತಕೊಂಡುದ್ದು ದಡ-ದಡ-ದಡ-ದಡ ಅರಮನೆಗೋದ್ಲು. ಊಟ ಮಾಡ್ಲಿಲ್ಲ. ಸ್ನಾನ ಮಾಡ್ಲಿಲ್ಲ. ಮಡಿ ಮಾಡ್ಲಿಲ್ಲ. ಅವ್ರುಟ್ಟಿರತಕ್ಕಂತ ಪೀತಾಂಬರ ಸಹಿಯವಾಗೇನೆ ಏನ್ ಸಾಮಾನೆತ್ಕೊಂಡವಳೆ. ತನ್ ಪೋಟೋ ಎತ್ಕೊಂಡವಳೆ. ಒಂದ್ ಪಟ್ಬುದ್ ಕತ್ತಿ. ಒಂದೆರುಡ್ ಸೇರು ಸುಣ್ಣ. ಎರುಡ್ ಮೂರ್ ಸೇರ್ ಅಕ್ಕಿ, ಎರುಡ್ ದಬ್ರೆ, ಅಡ್ಗೆ ಊಟುಕ್ಕೆ ಎಷ್ಟು ಸಾಮಾನು ಬೇಕೋ ಅಷ್ಟೆತ್ಕೊಂಡುದ್ದುನು ಸರಿ ಬೇಕಾದುಂಗೆ ಮುತ್ತು ರತ್ನ ಬ್ಯಾಗುಗ್ ತುಂಬ್ಕೊಂಡು ದಡ್ ದಡ್ನೆ ಬಂದ್ಲು. ಅವುನ್ ಪಾದುಕ್ ನಮುಸ್ಕಾರ ಮಾಡುದ್ದುನು ಪೋಟೋ ತಂದು ತೋರ್‍ಸುದ್ಲು. 'ಓಹೋ ಇದು ನನ್ನ ಪೋಟ್ವೆ' ಅಂತ ಸಂತೋಸ ಆಗೋಯ್ತು ಇವುನ್ಗೆ.

'ಹಾಗಾದ್ರೆ ಸ್ವಾಮಿ ನಿಮ್ಮಿಷ್ಟುದ್ ಪ್ರಕಾರ ಕುದ್ರೆ ಹತ್ತಿ ನಡಿಸ್‌ಬೇಕು ಸ್ವಾಮಿ' ಅಂತೇಳಿ ಸರಣಾಗತಳಾದ್ಲು. ಇವ್ನ ಕುದ್ರೆ ಮ್ಯಾಲೆ ಇಂಚಿರೆ ಇವುಳ್ನ ಕುಂಡ್ರಿಸ್‌ಕೊಂಡದ್ದು. ಮುಂಚಿರೆ ಇವ್ನು ಕೂತ್ಕೊಂಡುದ್ದುನು ಕುದುರೆಗೆ ಚಪ್ಪಾಳೆ ಹೊಡ್ದುದ್ದೆನೆ ಓಡಿಸ್ತಾನೆ. ಆ ಕುದ್ರೆ ಭೂಮಿಲೆ ನಡಿತಾ ಇಲ್ಲ. ಮೇಲೆ ಮಾರ್ಗದೆಲೆ ಎತ್ಕೊಂಡು ಹೊಯ್ತಾ ಅದೆ. ಒಯ್ತಾ ಇದ್ ಕುದ್ರೆನ ಗೋರಾರಣ್ಯುದ್ ಮಧ್ಯುದೆಲಿ ಇಳಿಸ್‌ಬುಟ್ಟು ಉಸ್ ಅಂತ, ಇವ್ನು ಇಳುದ್‌ಬುಟ್ಟ. 'ಯಾಕ್ ಸ್ವಾಮಿ ?' ಅಂದ್ಲು ಇದ. 'ಆದ್ರೆ ಎಣ್ಣೆ ತಕ್ಷಣ ನನ್ಗೇನಾರ ಆಹಾರ ಕೊಟ್ರೆ ಪ್ರಾಣ ಉಳಿತುದೆ. ಇಲ್ದೆ ಇದ್ರೆ ನನ್ನ ಪ್ರಾಣ ಉಳಿಯೊಲ್ಲ' ಅಂದ.

ಬೆಂಕಿ ಅಚ್ಚುವ ಅಂತ ನೋಡ್ತಾಳೆ, ಬೆಂಕಿಕಡ್ಡಿ ಇಲ್ಲ. ಅಲ್ಲೆ ಗಂಗಾಭವಾನಿ ಅರಿತಿದ್ದಾಳೆ. ದಬ್ರೆ ಬೆಳುಗ್‌ಬುಟ್ಟು ದಬ್ರೆಗೆ ಎಷ್ಟು ಬೇಕೋ ಅಷ್ಟು ನೀರೂದುದ್ದೆನೆ ಅದ್ರೂಳಿಕ್ಕೆ ಎಷ್ಟು ಬೇಕೋ ಅಷ್ಟು ಅಕ್ಕಿ ಹಾಕಿ ಇನ್ನೊಂದ್ ದಬ್ರೆ ತಕೊಂಡು ಅದ್ರೊಳಿಕ್ಕೆ ಸುಣ್ಣ ಹಾಕಿ ನೀರೂದ್ಲು. ಅದ್ರ ಮ್ಯಾಲೆ ತಗ್ಡಿ ಅನ್ನುಕ್ಕಿಟ್ಳು. ಈ ಸುಣ್ಣ ಕೊತ ಕೊತ ಕುದಿತಿತ್ತಲ್ಲ ಒಂದ್ ಕ್ಷಣದೆಲಿ ಅಡ್ಗೆ ಆಯ್ತು. ಅವಾಗೆದ್ದು ಊಟ ಮಾಡುದ್ರು. 'ಅಯ್ತೆ ಸ್ವಾಮಿ, ನಾವು ಜರೂರಾಗಿ ಕುದ್ರೆ ಬುಟ್ಕೊಂಡೋಗ್ದೆ ಇದ್ರೆ ನಮ್ ತಂದೆ ಪಟ್ಣುದೊರು ದಂಡ್ ಸಮೇತ ಬಂದ್ರೆ ನಮ್ಮ ಸುಮ್ನೆ ಬುಡ್ತಾರೆಯೇ ?' ಅನ್ನೊ ಭಯುಕ್ಕೋಸ್ಕರ 'ಕುದ್ರೆ ಎಷ್ಟು ಜೋರಾಗೊಯ್ತುದೋ ಅಷ್ಟು ಬಲದಿಂದ ನಡ್ಸಿ' ಅಂದ್ಲು. ಸರಿ ರಾತ್ರಿ ಬೆಳ್ಗಾನ ಹೋಯ್ತಾ ಇದೆ. ಹೀಗೇನೆ ನಾಲ್ಕೈದು ತಾವು ಅಡ್ಗೆ ಮಾಡ್ಕೊಳೊದ್ರೊಳ್ಗೆ ಸುಣ್ಣ ತೀರೊಯ್ತು. ಅಕ್ಕಿ ಊಳ್ಕೊಂತು. ಇನ್ನು ಮುಂದೆ ಒಂದ್ ಗೋರಾರಣ್ಯುದೆಲಿ ಹೋಗಿ ಕುದುರೆ ಇಳುದ್‌ಬುಡ್ತು. ಅನ್ನ ಕೇಳ್ದ ! ಸುಣ್ಣ ಇಲ್ವಲ್ಲ ಅನ್ನ ಯಾವುದ್ರೆಲಿ ಮಾಡ್ಕೊಡ್ತಾಳೆ ಎಣ್ಣು. ಈ ದೊರೆ ಮಗ ತಂದು ಗೋರಾಣ್ಯುದೆಲಿ ಕುದ್ರೆ ಇಳ್ಸಿ ಊಟ ಕೇಳ್ತಾ ಅವ್ರೆ. ನಾನಡ್ಗೆ ಯಾತ್ರೆಲಿ ಮಾಡ್ಕೊಡ್ಲಿ.

ಸುಣ್ಣ ತೀರೊಯ್ತು. ಬೆಂಕಿ ಕಡ್ಡಿ ಇಲ್ವಲ್ಲ ಅಂತ ಯೋಚನೆ ಮಾಡ್ತಾ ಅವ್ನೆ. ಈ ದೊರೆ ಮಗ ಅಂಗೆ ಮಲುಗ್‌ಬುಟ್ಟವ್ನೆ. ಕಣ್ಣಲ್ಲಿ ನಿದ್ರೆ ಬಂದು ಚನ್ನಾಗ್ ನಿದ್ರೆ ಮಾಡ್ತಾ ಅವ್ನೆ. ಈ ವಿದ ಎಂಬತಕ್ಕಂತ ಎಣ್ಣು ಸುತ್ತ ಸಂಚರಿಸಿ ನೋಡುದ್ಲು. 'ಎಲ್ಲಾದ್ರು ಹೊಗೆ ಕಂಡ್ರೆ ಒಂದ್ ಕ್ಷಣದೆಲಿ ಬೆಂಕಿ ತಂದ್ ಬುಡ್ತೀನಿ' ಅಂತ ಉಡುಕ್ತಾ ಅವ್ಳೆ. ಅವಾಗೇಳೇಳೆದ್ನಾಲ್ಕು ಬೆಟ್ಟದಲಿ, ಅದ್ರಾಚೆ ಹದಿನೈದು ಬುಟ್ಟುದ್ ತುದಿ ನೆತ್ತಿ ಮ್ಯಾಲೆ ಸೂಜಿ ಗಾತ್ರ ಹೊಗೆ ಕಾಣ್ತು. ಆಗ ತಾನು ಟ್ಟಿರತಕ್ಕಂತ ಪೀತಾಂಬ್ರನ ಬಂದೊಬಸ್ತಾಗಿ ಗುಡುಜ್ಗೆ ಮಾಡ್ಕೊಂಡು ಈ ಬೆಟ್ಟ ಹತ್ತೋದು ಆ ಬೆಟ್ಟ ಇಳಿಯೋದು ಇಂಗೇ ಆ ಪರ್ವತುಕ್ಕೆ ಓದ್ಲು.

ಅಲ್ಲಿ ಭಾರಿ ಗವಿ. ಅಲ್ಲಿ ಇಬ್ರು ಮಕ್ಳು, ಒಬ್ಳು ತಾಯಿ. ಮೂರ್‌ಜನ ವಾಸಸ್ಥಾನ. ಆ ಮಕ್ಳುದೇನ್ ಕೆಲ್ಸ ಅಂದ್ರೆ ಬೆಳ್ಕರಿಯೊದ್ರಲಿ ದಾರಿ ಕಾಯ್ದು ಬೆಳ್ಕರುದ್ ಮ್ಯಾಲೆ ನೀರುಗ್ ಬರೋರ್ನ, ಸೌದೆಗೆ ಬರೋರ್ನ ಆಗ್ಲಿ ಅವ್ರ ಆಭರಣ, ಪೀತಾಂಬ್ರ ಹಾಕ್ಕೊಂಡು ಬಂದ್ರೆ ಅವ್ರನ್ನೊಡಿಯೋದು, ಕೊಲ್ಲೋದು, ವಡವೆ ವಸ್ತುಗೊಳ್ನೆಲ್ಲ ಬಿಚ್ಕೊಂಡು ಗವಿಗೆತ್ಕೊಂಡೋಗೋ ಅಂತ ಭಾರಿ ಕಳ್ರು ಅವ್ರು. ಕಷ್ಟಪಟ್ಟು ಗೆಯ್ಯೊ ಅಂಗಿಲ್ಲ.

ಗವಿ ಹತ್ರ ಹೋಗಿ 'ಅಮ್ಮ ಬೆಂಕಿ ಕೊಡಮ್ಮ' ಅಂದ್ಲು. ಈ ವೃದ್ಧಾಪ್ಯ ಕಾಲುದ್ ಮುದ್ಕಿ ಈಚೆ ಬಂದು ಬಗ್ಗಿ ನೋಡುದ್ಲು. 'ಹೋ ನನ್ ಮಕ್ಕಿಬ್ರು ದೇಶ್ ದೇಶ ತಿರುಗಿ ಕೊಲೆ ಮಾಡಿ ಸುಲಿಗೆ ಮಾಡಿ ತತ್ತಾರೆ ಸಂಪತ್ನ. ಇವತ್ತು ಬಂಗಾರದ ಗಟ್ಟೀನೆ ನಮ್ಮ ಗವಿತಾಕ್ ಬಂದದೆ. ನನ್ನಿಬ್ರು ಮಕ್ಳುಗು ಇವ್ಳು ಎಂಡ್ತಿ. ಇವುಳ್ ಮೈಮ್ಯಾಲಿರತಕ್ಕಂತ ಪೀತಾಂಬ್ರನ ನೂರಾರೊರ್ಸ ಮಾರ್ಕೊಂಡು ಕೇರ್ಕೊಂಡ್ ಸಾಯೊಗಂಟ ತಿಂದ್ರು ಸಮುರಿತಿರ್ಲಿಲ್ಲ. ಇಂಥ ಎಣ್ಣೆ ಬೆಂಕಿ ಕೊಟ್ ಬುಟ್ರೆ ಎತ್ಕೊ ಒಂಟೊಯ್ತುದಲ್ಲ ! ಏನ್ಮಾಡೋದಿವಾಗ ? ಒಂದ್ ಸೇರ್ ಸ್ಯಾಮೆ, ಎರುಡ್ ಸೇರ್ ಎಣ್ಣೆ ಊದ್‌ಬುಟ್ಟುದ್ದೆ ಚನ್ನಾಗ್ ಕಲ್ಸುದ್ಲು. ಯಾತ್ಕಾಗಿ ? ಅದು ಚನ್ನಾಗಿ ನುಣುಪ್ ಬರ್ಲಿ ಅಂತ. ಇದು ಕುಟ್ಟುದ್ರೆ ಅಕ್ಕಿ ಆಗ್ದೆ ಹೋಗ್ಲಿ. ಸಮುರಿದೆ ಹೋಗ್ಲಿ 'ಅಂತ.

'ಅವ್ವಾ ಮಗ್ಳೆ ನಿನ್ನಾಗೆ ನನ್ನೊಟ್ಟೆಲಿ ಒಬ್ಳು ಎಣ್ಮಗ್ಳುಟ್ಟಿದ್ಲು. ಬೇಕಾದಂಗೆ ಬತ್ತ ಕುಟ್ಟೋದು. ಸ್ವಾಮೆ ಕುಟ್ಟೋದು, ಬಟ್ಟೆ ಇಂಡೋದು, ಅಡ್ಗೆ ಮಾಡೋದು ಎಲ್ಲ ಮಾಡಿ ನನ್ನ ಉದ್ದರಿಸ್ತಾ ಇದ್ಲು. ನನ್ ಮಗ್ಳು ಸತ್ತೋಗ್‌ಬುಟ್ಳು ಕಾಣವ್ವ. ನಾನೂಟ ಮಾಡಿ ಮೂರ್ ದಿವ್ಸ ಆಯ್ತು. ತಾನ ಮಾಡಿ ಮೂರ್ ತಿಂಗ್ಳಾಯ್ತು. ಬಟ್ಟೆ ಇಂಡಿ ಮೂರ್ ತಿಂಗ್ಳಾಯ್ತು. ಈ ಸ್ವಾಮೆನ ಕುಟ್ಟಿ ಕೊಟ್ರೆ ನಾನೊಂದೊತ್ತು ಸಂಪತ್ತಾಗಿ ಊಟ ಮಾಡ್ಕೊತಿನಿ ಕಾಣ್ ಮಗ್ಳೆ, ನನ್ ಮಗ್ಳುನ ನೆನಸ್ಕೊಂಡು ನಿನ್ನು ನೆನಸ್ಕೊಂಡು' ಅಂದ್ಲು.

ಸರಿ ಈ ಸ್ವಾಮೆ ಕುಟ್ಕೊಡ್ದೆ ಹೋದ್ರೆ ಈ ಮುದ್ಕಿ ಬೆಂಕಿ ಕೊಡಲ್ಲ ಅಂತೇಳಿ ಸ್ವಾಮೆ ಕುಟ್ತಾ ಅವ್ಳೆ. ಕೈಯೆಲ್ಲಾ ಒಪ್ಪೆ ಎದ್‌ಬುಟ್ವೊ. ರಕ್ತ ಬಂದ್‌ಬುಡ್ತು. ನನ್ ಗಂಡ ಆಗೋನು ಏನಾದ್ರೊ ಎತ್ತಾದ್ನೊ ನಾನು ಸರನೆ ಬೆಂಕಿ ಎತ್ಕೊಂಡೋಗಿ ಅಡ್ಗೆ ಮಾಡ್‌ಕೊಡ್‌ಬೇಕು ಅನ್ನೊ ಆತುರ್‌ದೆಲಿ ಕುಟ್ಟುದ್ಲು. ಕೈ ನೋಡ್ಕೊಳ್ಳೀ ಇಲ್ಲ. ಸ್ವಾಮೆ ಅಕ್ಕಿ ಆಗ್ಲೇ ಇಲ್ಲ. ನುಣುಪು ಎಣ್ಣೆ ಆಕಿರೊವಲ್ವೆ ?

ಅವಾಗ ನೋಡುದ್ಲು, ಸ್ವಾಮಿ ಎತ್ಕೊಂಡು 'ಓಹೋ ಇದೇನೋ ಮುಂದೆ ಅಚಾತುರ್ಯ ಅದೆ, ನಾನು ಒಬ್ಬ ತಾಯಿ ಒಬ್ಬ ತಂದೆಗೆ ಉಟ್ಟಿದ್ರೆ, ಒಬ್ಬ ಪುರುಸುನ್ಗೆ ಮಾತ್ರ ಸೆರಗಾಸಿದ್ರೆ ಕ್ಷಣ ಮಾತ್ರುದಲಿ ಮೂರೇಟ್‌ನೊಳಗೆ ಅಕ್ಕಿ ಆಗ್ಲಿ ಶಿವ್ನೆ" ಅನ್ಕೊಂಡು ಈಸ್ಪುರನ್ ನೆನುಸ್ಕೊಂಡು ಮೂರೇಟಾಕುದ್ಲು. ಅಕ್ಕಿ ದೂಳ್ ದೂಳಾಯ್ತು. ಅಪ್ಪಣ ಅಕ್ಕಿನೆ ಆಗೊಯ್ತು. ಎತ್ತಿ ಕೊಟ್ಟುದ್ದೇನೆ, 'ಬೆಂಕಿ ಕೊಡವ್ವ' ಅಂದ್ಲು.

ಈ ಸ್ವಾಮಿ ಕುಟ್ತಿದ್ದಂಗೇನೆ ದೊರೆ ಮಗ್ಳು, ಈ ಮುದ್ಕಿ ಒಂದ್ ಪಾಳ್‌ಗುಳಿ ಅದ್ರು ಮ್ಯಾಲೆ ಬೆಂಕಿ ಹಚ್ಚಿ ಅದ್ರು ಮ್ಯಾಲೆ ಒಂದ್ ಹಳಗೆ ಮಡುಗವಳೆ. ಅದುಕ್ಕೆ ಮೂರು ತೂತು ಮಾಡವಳೆ. 'ಅವ್ವಾ ಅಕ್ಕಿ ಆಯ್ತು ಅಡ್ಗೆ ಮಾಡ್ತೀನಿ. ನೋಡಲ್ಲಿ ಹಳಗೆ ಒಡ್ಡಿದ್ದೀನಿ ಒಲೆಮ್ಯಾಲೆ ಮೂರ್ ಬಿಂದ್ಗೆ ನೀರ್ ಸೇದೂದ್‌ಬುಡವ್ವ ಸ್ನಾನ ಮಾಡ್ಕೊತಿನಿ.' ಅಂತಾಳೆ, ಮಕ್ಳು ಅಷ್ಟೊತ್ಗೆ ಬಂದ್ ಬುಡ್ಲಿ ಅಂತೇಳಿ. ಈ ವಿದ ಬಾವಿಯಿಂದ ನೀರ ಸೇದಿ ಸೇದಿ ಉಯ್ತಾ ಅವ್ಳೆ. ಈ ಕೆಳಗಿರೋ ಪಾಳುಗುಳಿ ತುಂಬೊಯ್ತೆ ಹೊರತಾಗಿ ಅಳ್ಗೆ ತುಂಬ್ಲೇ ಇಲ್ಲ. ಕೆಳ್ಗೆ ಚಲ್ಕೊಯ್ತಾ ಅದೆ. 'ಏನಿದು ಇಷ್ಟು ಬಿಂದ್ಗೆ ನೀರೂದ್ರು ಈ ಹಳಗೆ ತುಂಬ್ತ ಇಲ್ವಲ್ಲ' ಅಂತ ಬಗ್ ನೋಡ್ತಾಳೆ, ತೂತು ! ಆಗ ತಾನುಟ್ಟಿರತಕ್ಕಂತ ಪೀತಾಮ್ರನ ಅರಿದು ಮೂರು ತಿಬ್ಣ ಮಾಡಿ ಮೂರೆಜ್ಜುಕ್ಕು ಇಕ್ಕಿ ಮುರ್ ಬಿಂದ್ಗೆ ನೀರೂದ್ಲು. ತುಂಬ್ಕೊತು. ಸರ್ರುನ್ ಬಂದು ಬೆಂಕಿ ಕೊಡ್ ಮುದ್ಕಿ ಅಂದ್ಲು.

'ಎತ್ ನಿಮ್ಮಪ್ಪಾನಿ..., ಎಲ್ಲಿ ನಿಂಗ್ ಬೆಂಕಿ ಕೊಡೋದು, ನನ್ಗಿಬ್ರು ಗಂಡ್‌ಮಕ್ಳವ್ರೆ ಭೀಮ ಅರ್ಜುನ ಇದ್ದಂಗೆ. ಅವ್ರು ಇಬ್ಬರ್ಗು ನೀನು ಎಂಡ್ತಿಯಾಗಿ, ಅವುರ್ಗೆ ನೀರ್ಯಾಕಸೂದಿ. ಬಟ್ಟೆ ಇಂಡ್ ಕೊಡಬೇಕು. ಸೌಖ್ಯವಾಗಿ ಅಡ್ಗೆ ಮಾಡಾಕ್‌ಬೇಕು, ಎಲ್ಲೋದಿಯೇ ನಿಮ್ಮಪ್ಪನ್ನೀ ಅಂದುದ್ದೆ ಹೇಳ್ತಾಳೆ. ಈ ವಿದ ತನ್ನ ಮುಷ್ಟಿಯಿಂದ ಈ ಮುದ್ಕಿಗೆ ಒಡ್ದುದ್ದೆ ಒಳುಕ್‌ನುಗ್ಗಿ ಬೆಂಕಿ ಎತ್ಕೊಂಡುದ್ದೆ ಓಡ್‌ಬುಟ್ಟು ಡಬ್ಬಲ್ ದೌಡೆಲಿ. ತಂದುದ್ದೆ ಅಡ್ಗೆ ಮಾಡಿ ಊಟ ಕೊಟ್ಟು 'ಸ್ವಾಮಿ ಕ್ಷಣ ಮಾತ್ರುದಲಿ ಜಾಗ ಬುಡಬೇಕು, ಕುದ್ರೆ ಹತ್ತಿ' ಅಂದ್ಲು. ಇಂಗಾಯ್ತು ಅಂತ ಹೇಳ್ಲೇ ಇಲ್ಲ.

ಸರಿ ಊಟ ಮಾಡಿ ಕುದ್ರೆ ಬುಟ್ಕೊಂಡು ಹೋಯ್ತಾ ಅವ್ರೆ. ಅಷ್ಟರಲ್ಲಿ ಈ ಮುದ್ಕಿ ಮಕ್ಳು ಕಳ್ರು ದೂತ್ರು ಹೊಂಟೋದ್ರು ಎಲ್ಲಿಗೆ ? ಏಳೇಳು ಹದಿನಾಲ್ಕು ಬೆಟ್ಟುದ್ ನೆತ್ತಿಗೋಗಿ ಹದಿನೈದ್ನೆ ಬೆಟ್ಟುಕ್ಕೆ. ಅವತ್ತೇನು ದೊರಿಲಿಲ್ಲ. ಊಸ್ಸೊ ಅಂತ ಕೂತ್ಕೊಂಡು 'ತಕೊಂಡ್ ಬಾಮ್ಮ ನೀರ. ಅಡಿಗೆ ಆಗಿದ್ದಾತೆ ?' ಅಂದ್ರು. ಕಸಿನ್ ಮುಂಡಿ ತಕೊಂಡುದ್ದೆ ಅವುನ್ಗೊಂದ್ ನಾಲ್ಕು ಇವುನ್ಗೊಂದ್ ನಾಲ್ಕು ಬಿಗುದ್ಲು. 'ನನ್ ಮಕ್ಳ ಯಾವ್ ದೇಸುಕ್ಕೊಗಿದ್ರೋ, ಅಪರಂಜಿ ಗಟ್ಟಿಯಂಥ ಎಣ್ಣು ನಮ್ ಗವಿ ತಾಕ್ ಬಂದಿತ್ತಲ್ರೋ. ನಿಮ್ಮಿಬ್ರುಗು ದಾದಿಯೋಗೋಳು, ಎಂಡ್ತಿ ಆಗೋಳು ಅವುಳ್ ಮೈಮ್ಯಾಲಿದ್ದೊಡ್ವೆ ವಸ್ತ್ರ ನಿಮ್ಮಕ್ಳು, ಮೊಮ್ಮಕ್ಳು ತಲೆಗಂಟ ಆಗೋದಲ್ರೊ, ಆಗ್‌ಬೋದೇನ್ರೋ ಇಂಥೆ ಕೆಲ್ಸ ಮಾಡುದ್ರಲ್ಲ' ಅಂದ್ಲು. ಇವರ್ಗೆ ಬಾರಿ ಕ್ವಾಪ ಬಂದ್ ಬುಡ್ತು. 'ಅಮ್ಮಾ ಯಾವಾದಿಲೋದ್ಲು, ಎತ್‌ಕಡೆಗೋದ್ಲು ಏನ್ ಸಮಾಚಾರ' ಅಂದ್ರು.

'ಸೋಡಿದೇಆದಿಲೋದ್ಲು' ಮಕ ತೊಳಿಲಿಲ್ಲ. ಊಟ ಮಾಡ್ಲಿಲ್ಲ. ನೀರ್ ಕುಡಿಲಿಲ್ಲ. ಆಳ್ಗೊಂದು ಚಂದ್ರಾಯ್ದ ಎಂತ್ಕೊಂಡುದ್ದೆ ಹೊಯ್ತಾ ಅವ್ರೆ. ಏನಾಗ್ತಾ ಇದೆ ಅಂದ್ರೆ ಅವ್ರು ಬರೋ

ದಾರಿವೊಳ್ಗೆ ಕೆಂದೂಳೇಳ್ತಾ ಅದೆ. ಆ ಬೆಟ್ಟ ಲೆಕ್ಕ ಇಲ್ಲ. ಕಲ್ಲು ಅನ್ನೋವು ಅವುರ್ ಕಣ್ಣಿಗೆ ಕಾಣ್ತಾ ಇಲ್ಲ. ಮುಳ್ಳು ಅನ್ನೋದು ಅವುರ್ ಕಣ್ಣಿಗೆ ಕಾಣ್ತಾ ಇಲ್ಲ. ಏನ್ ಬಂದ್‌ಬುಟ್ರು ನಾಗಾಲ್ ಮೇಗಾಲಲಿ. ಅಷ್ಟೊತ್ತಿಗೆ ಬೇಕಾದಷ್ಟು ಯೋಜನ ಕುದ್ರೆ ವೊಡ್ಸಿದ್ದ. ಗೋರಾರಣ್ಯದೆಲಿ ಕುದುರೇನ ಅಡ್ಡಗಟ್‌ಬುಟ್ರು. 'ಲೇ ಎಲ್ಲೋ ಹೋಗೋದು ನಿಲ್ಲೊ' ಅಂದ್ರು. ಕುದ್ರೆ ಮ್ಯಾಲ್ ಕೂತಿದ್ದಂಗೆ ಚಂದ್ರಾಯ್ದನ ಶಾಪಕೊಟ್ಟು ಚಿಣ್ಣಾಳುನ್ ಕೈಗೆ ಕೊಟ್ಟು. ಕುದ್ರೆ ಮ್ಯಾಲಿಂದ ಇಳಿದೆನೆ ದೊಡ್ಡೋನ್ನ ವೊಡ್ದ. ಕತ್ನೆ ಕತ್ರಿಸ್‌ಬುಟ್ಟ. ಇವ್ನೇನ್ ಮಾಡಿದ್ವಾನೆ ಚಿಕ್ಕೋನು; 'ಅಹಾ ನಮ್ಮಣ್ಣ ಇಷ್ಟು ಸಕ್ತಿವಂತ ! ಅವುನ್ನೆ ಸಾಯಿಸ್‌ಬುಟ್ಟು ಇನ್ನ ನಾನ್ಯಾವ ಲೆಕ್ಕ ? ನಾನೇನರ ಸಾಂತಿಯಾಗಿ ಮನುಸ್ಸುನ್ನ ತಿರುಗಿಸಿ ಮಂಕುಮಾಡಿ ಇವುನ್ ಪ್ರಾಣತ್ಯಾಗ ಆಗ್ವಂಗ್ ಮಾಡಬೇಕಲ್ಲ' ಅಂತ ಯೋಚ್ನೆ ಮಾಡ್ತಿದ್ವಾನೆ. ಒಂಟ್ ಕಾಲೆಲ್ ನಿಂತ್ಕೊಂಡು ಕೈಲಿ ಅಂಚಿಕಡ್ಡಿ ಇಡ್ಕೊಂಡು ಸರಣಾಗತನಾದ. ಅವಾಗ ಇವ್ನ ಚಂದ್ರಾಯ್ದನ ಎತ್ತಿದ್ದೋನು ಇಳುಕ್‌ಬುಟ್ಟ.

ಆ ವಿದ ಏಳ್ತಾಳೆ 'ಸ್ವಾಮಿ ಚಂದ್ರಾಯ್ದನ ಈ ತಕ್ಷಣ ಇಳುಕ್‌ಬ್ಯಾಡಿ, ಅವುನ್ನ ಪ್ರಾಣತ್ಯಾಗ ಮಾಡಿ, ಇಲ್ಲದಿದ್ರೆ ಬಾರಿ ಅನಾವುತ ಅನುಭವಿಸ್ ಬೇಕಾಯ್ತುದೆ' ಅಂದ್ಲು. 'ಏ ಛೇ ಒಂಟ್ ಕಾಲೆಲ್ ನಿಂತವನೆ. ಅಂಚಿಕಡ್ಡಿ ಕೈಲಿಡ್ಡವನೆ. ಇವ್ನ ನಮ್ಮ ಬಂದು ಬಳ್ಗದ್ ಸಂಬಂಧ ಕರುಳೆಲಿ ರಕ್ತ ಸಂಬಂದ ಬೆರ್ತದೆ. ಆ ದೆಸೆಯಿಂದ ನನ್ನ ಪ್ರಾಣ ಹೋದ್ರುನು ಇವುನ್ ಪ್ರಾಣ ತ್ಯಾಗ ಮಾಡೋದಿಲ್ಲ' ಅಂದ್‌ಬುಟ್ಟ.

ಕುದುರೆ ಕಡಿವಾಣದಗ್ಗ ಅವುನ್ ಕೈಯಿಕ್ಕೊಟ್ಟ. ಕುದ್ರೆ ಯಳ್ಕೊಂಡು ಅವ್ನ ಮುಂದೆ ಹೋಗೋದು, ಇವ್ರೆದ್ದಿಗುಂಡ ಇಬ್ರು ಕುದುರೆ ಮ್ಯಾಲ್‌ಕೂತ್ಕೊಂಡು ಜೋಡಿಲಿ ಹೋಗ್ತಾ ಅವ್ರೆ. ಹೋಗ್ತಾ ಇರಬೇಕಾದ್ರೆ ಅಲ್ಲೊಂದು ಕೊಣ. ಆ ಕೊಣದತ್ರ ಕಕ್ಸುಕ್ಕೆ ಅವಸರ ಆಯ್ತು ಚಿಣ್ಣಾಳುನ್ಗೆ. 'ವಿದ !' 'ಏನ್ ಸ್ವಾಮಿ ?' 'ಕಕ್ಸುಕ್ಕೋಗ್ವಂಗಾಯ್ತುದಲ್ಲ'? 'ಅದುಕ್ಕೇನಂತೆ ಹೋಗಿ ಸ್ವಾಮಿ'. ಕುದುರೆ ಇಡ್ಡಿ ಒಂದ್ ಮೆಳುಗ್ ಕಟ್ಟಾಕ್‌ಬುಟ್ಟು ಆ ಕಳ್ಳ ಈ ಚಿಣ್ಣಾಳ ಇಬ್ರು ಹೋದ್ರು. ಇವ್ನ ಕಕ್ಸ ಮುಗ್ಸಿ ನೀರ್ ತಕೋಬೇಕಲ್ಲ ಕೊಣಕ್ಕಿಳ್ದ. ಚಂದ್ರಾಯ್ದ ಇವುನ್ ಸೊಂಟ್ದೆಲದೆ. ನಡಿನೆಲ್ ತಗ್ಲಕ್ಕೊಂಡವನೆ ಕಳ್ಳ. ಚಿಣ್ಣಾಳುನ್ಗೆ ಇದು ಗೊತ್ತಿಲ್ಲ. ದೊರೆ ಮಗುಳ್ಗ ಗೊತ್ತಿಲ್ಲ. ಇವ್ನ ನಿಕ್ಕರ್ ಬಿಚ್ಕೊಂಡೋಗಿ ಬಕ್ಕೊಂಡು ನೀರ್ ತಕೊತಿದ್ದ. ಕೂಡ್ಲೆ ಈ ಕಳ್ಳ ನಡಿನೆಲಿದ್ದ ಚಂದ್ರಾಯ್ದ ತಕೊಂಡುದ್ದು ಎತ್ತುದ್ದೆ ಎಕ್ಕತ್ತುನ್ ಶಿರುಕ್ಕೆ ಹೊಡುದ್‌ಬುಟ್ಟ. ಎರುಡ್ ತುಂಡಾಗಿ ಆ ಗಂಗೆವೊಳ್ಗೆ ಸೇರ್ಕೋಬುಟ್ಟು ಮುಳ್ಗೋಯ್ತು ಯಣ.

ಅವಾಗ ಈ ಕಳ್ಳ ಬಂದುದ್ದುನು 'ಮುಂಡೆ ನಿನ್‌ದೆಸಿಂದ ನಮ್ಮಣ್ಣುನ್ ಪ್ರಾಣತ್ಯಾಗ ಆಯ್ತು. ನನ್ ಪ್ರಾಣತ್ಯಾಗ ಮಾಡು ಅಂತಾನು ಏಳ್ದೆ. ನಾನೇ ಅವುನ್ನ ಕೊಂದಾಕ್‌ಬುಟ್ಟೆ. ನಡಿ ನಮ್‌ಗವಿಗೋಗುನ' ಅಂದ. ಆಗ ಯೋಚನೆ ಮಾಡಿ 'ನೋಡಿ ಸ್ವಾಮಿ ಇನ್ನ ನನುಗ್ಯಾನೆ ಯಾರ್ ದಿಕ್ಕು ? ತಾಯಿಲ್ಲ, ತಂದಿಲ್ಲ, ಬಂಧಿಲ್ಲ, ಬಳಗಿಲ್ಲ, ಹಿಂದಿಲ್ಲ, ಮುಂದಿಲ್ಲ. ಸರ್ವು ಮೂವತ್ತು ಬಳಗಾನು ನೀವೆನೆ. ಆದ್ರೆ ಈ ನೀರೆಲಿ ಬಿದ್ದಿರೋ ಶವನೆತ್ತಿ ಉತ್ತರ ಕ್ರಿಯಾದಿಗೊಳ್ನ ಮಾಡಿ

ಮುಂದುಕ್ಕೋಗುನ ಸ್ವಾಮಿ' ಅಂದ್ಲು. ಅದ್ರಂತೆ ಮುಳ್ಗಿ ಎತ್ಕೊಂಡ. ಆ ಗಂಗೆಲ್ ಬಿದ್ದಿದ್ದ ದೇಹಾನು ಸಿರಾನ್ನು ಎತ್ಕೊಂಡು ಈಚೆ ಮಡುಗ್ದ. ಮಡುಗ್‌ಬುಟ್ಟು 'ಏನ್ ಮಾಡ್ಬೇಕೆಣ್ಣೆ?' ಅಂದ.

'ಸೌದೆ ಕಡಿಬೇಕು ಸ್ವಾಮಿ'. ಬರೀ ಗಂಧುದ್ ಸೌದೆನೆ ಕಡುದ್‌ಬುಟ್ಟ. 'ಒಟ್ಕೊಡ್ಡಿ' ಅಂದ್ಲು. ಒಟ್ಕೊಡ್ದಾ. 'ಈ ಸವ ಎತ್ತಿ ಮಡ್ಗಿ ಸ್ವಾಮಿ' ಅಂದ್ಲು. ಎತ್ ಮಡುಗ್ದ. 'ಬೆಂಕಿ ಹಚ್ಚಿ'. ಸರಿ ಬೆಂಕಿ ಹಚ್ಚುಕ್ಕೋದ. ಕಳ್ಳನತ್ರ ಇರೋದು ಒಂದೇ ಒಂದು ಬೆಂಕಿಕಡ್ಡಿ. ಇನ್ನದ್ದಿಲ್ಲ ಬದ್ದಿಲ್ಲ. ಕೆಟ್ಟೋದ್ರೆ ಮುಗ್ದೋಯ್ತು. ಪುಳ್ಳೆ ಪುಸ್ಕೆ ಉಡ್ಕಿ ಗುಡ್ಡೆ ಹಾಕ್ಕೊತ ಅವ್ನೆ. 'ಇನ್ನತ್ಸಿ ಸ್ವಾಮಿ' ಅಂದ್ಬುಟ್ಟು ಕುಂತವ್ಳೆ ಸುಮ್ನೆ. ತನ್ ಗಂಡುನ್ ಚಂದ್ರಾಯ್ದ ಇಟ್ಕೊಂಡವಳೆ. ಸರಿ ಇವ್ನು ಪುಳ್ಳೆ ಪುಸಿ ಗೋರಾಕಿ ಬೆಂಕಿಯಲ್ಲ ಹತ್ತಿಸ್ದ. ಪುರ್ ಪುರ್‌ನತ್ತುದ್ದೆ ಕೆಟ್ಟೋಯ್ತು.

ತಿಕ ಮ್ಯಾಕ್ ಮಾಡ್ಕೊಂಡು ಉರುಬ್ತಾ ಅವ್ನೆ. ತಲೆ ಬಗ್ಗಿಸ್ಕೊಂಡು ಉಫ್ ಉಫ್ ಅಂತ ಉರುಬ್ತಾ ಇದ್ದ . ಇವ್ಳು ಹಾಕುದ್ಲು ಚಂದ್ರಾಯ್ದ ಎತ್ತಿ. ಯಾವಾಗ ಚಂದ್ರಾಯ್ದ ತಕೊಂಡು ಒಂದೇ ಏಟ್ಕೊಡುದ್ಲು ತುಂಡಾಗಿ ಬಿದ್ದೋದ. ಸವ ಎತ್ತಿ ಸೌದೆ ಮ್ಯಾಕ್ ಮಡಿಕೊಂಡುದ್ದುನು ಗಂಡುನ್ ಸವ ಎತ್ತಿ ಕೆಳುಕ್ ಮಡಿಕೊಂಡುದ್ದುನು ಉರ್ರುದ್ದೆ ಬೆಂಕಿ ಹಚ್ಬುಟ್ಟು ಕಳ್ಳುನ್ನ ಕಾಷ್ಟ ಮಾಡ್ಬುಟ್ಳು. ಗಂಡುನ್ ಪ್ರಾಣ ಹತ್ಯೆನು ಆಯ್ತು. ಇರೋಳೊಬ್ಳು, ಎಣ್ಣೆಂಗ್ಸು ಆ ಗೋರಾರುಣ್ಯುದೆಲಿ ಯಾವ್ ತರ್‌ದಲಿ ಮಾಡ್ಬೇಕು ಸ್ವಾಮಿ.

ಹೂಂ ಇರ್ಲಿ ಅಂತ ದುಃಖ ಮಾಡ್ತಾ ಅವ್ಳೆ. ಗಾರ್‌ಗೋರ್ ದುಃಖ ಮಾಡ್ತಾ ಅವ್ಳೆ ಗೋರಾರಣ್ಯುದೆಲಿ. ಕಣ್ಣೀರು ಕಾವೇರಿಯಾಗಿ ಹರಿತಾ ಅದೆ. ಅಂತ ದುಃಖ ಮಾಡ್ತಾ ಇರೋ ಕಾಲ್ದಲಿ ಪಾರ್ವತಿ ಪರಮೇಶ್ವರರು ಮೇಲೋಕ್ದಲಿ ಲೋಕ ಚಂಚರಣೆ ಹೋಯ್ತಾ ಇದ್ರು. ಇವ್ಳು ಮಾಡ್ತಕ್ಕಂತ ದುಃಖ ಕೈಲಾಸುಕ್ಕೆ ಬೆಂಕಿ ಜ್ವಾಲೆಯಾಗಿ ಉರಿತಾ ಅದೆ. ಪಾರ್ವತಿ ಹೇಳುದ್ಲು 'ಸ್ವಾಮಿ ಪತಿವ್ರತಾ ಸಿರೋಮಣಿಯಾದುಂತ ಎಣ್ಣು ಬಾಲೆ ನಮ್ಮ ಕೈಲಾಸ ದೇವಲೋಕವೇ ದಿಗ್ಮಯವಾಗುರಿತಾ ಅದೆ. ತಕ್ಷಣ ರಥ ಇಳ್ಸುದ್ರೆ ಸಮ, ಇಲ್ದೆ ಇದ್ರೆ ನಾನು ಇಲ್ಲೆ ನಾಲ್ಗೆ ಇರ್ಕೊಂಡು ನಿಮ್ ಪಾದುದ್ ಮ್ಯಾಲ್ ಬಿದ್ದು ಪ್ರಾಣತ್ಯಾಗ ಮಾಡ್‌ಕೊಬುಡ್ತೀನಿ' ಅಂದ್ಲು. ಆವಾಗ 'ಎಣ್ಣೆ, ಬ್ಯಾಡ, ಗಾಳಿಯೋ, ಪೀಡೆಯೋ, ಪಿಶಾಚಿಯೋ, ಬುಡು ನಾವು ಮುಂದ್ಲಾದಿ ನೋಡುವ' ಅಂದ ಪರಮೇಶ್ವರ.

'ಸ್ವಾಮಿ ಈರೇಳು ಎಂಬತ್ತು ಕೋಟಿ ಜೀವರಾಸಿ ಇರುವೆ, ಅಕ್ಕಿ, ಪಕ್ಷಿ, ಜೀವಜಂತು ಸಹಿತವಾಗಿ ನಾವೆ ತಿಟ್ಣೆ ಮಾಡಿರೋದೆ ಹೊರತಾಗಿ ಬೇರೆ ಯಾರೂ ಇಲ್ಲ. ಅವುದ್ರ ಕಷ್ಟ ಸುಖ ನೋಡ್ಲೆಬೇಕು. ಅದ್ರಿಂದ ಇಳಿಸ್ಲೆಬೇಕು' ಅಂದ್ಲು ಪಾರ್ವತಿ. ಆಗ್ಲಿ ಅಂತೇಳಿ ಈಸ್ಪುರ ಪಾರ್ವತಿ ಬಂದ್ರು. ಇಳ್ದು ನೋಡುದ್ರು. ಮಂಡ ದೇಹ ಒಂದ್ಕಡೆ, ತಲೆ ಒಂದ್‌ಕಡೆ ಬಿದ್ದದೆ. ಇವ್ಳು ದುಃಖ ಮಾಡ್ತಾ ಕುಂತವಳೆ. ಈಸ್ಪುರ ನೋಡ್ದ ದಿಟ್ಟಿಸಿ, 'ಆದ್ರೆ ಎಣ್ಣೆ ನಿನ್ನ ಸತ್ಯಕ್ಕೆ ನಾನು ಮೆಚ್ಚಿದೆ. ನಿನ್ನ ಮುತ್ತೈದೆ ಸ್ತಾನ ಉಳ್ಸಿದ್ರೆ ನಾನು ಕೇಳುದ್ ಕೊಟ್ಟೀಯಾ ?' ಅಂದ ಗೋರಾರಣ್ಯುದೆಲಿ. ಎಸ್ರಿಕ್ಕಿ ಇಂತೆದ್ದು ಅಂತೇಳ್ಳಿಲ್ಲ. ಇಂತಾದ್ ಕೊಡ್‌ಬೇಕಂತೇಳ್ಳಿಲ್ಲ. 'ನಾನ್ ಕೇಳುದ್‌ಕೊಡ್ತಿಯಾ ನಿನ್ ಮುತ್ತೈದ್‌ಸ್ತಾನ ಉಳ್ಸುದ್ರೆ' ಅಂದ. 'ಆಯ್ತು ಸ್ವಾಮಿ ಕೊಡ್ತೀನಿ' ಅಂದ್ಲು.

ಸರಿ ಆ ತಕ್ಷಣಾನೆ ಮೂರೀಬತ್ತಿ ಉಂಡೆನ ಮಂತ್ರಿಸ್ ಕೊಟ್ಟ. ಮುಂಡಾನು ದೇಹಾನು ಸೇರಿಸ್ದ. ತಲೆ ತಾವ್ಕೊಂದಿಡಿಸ್ದ. ಒಂದೀಬತ್ತಿ ಉಂಡೆ ಏದೆ ಮ್ಯಾಲಿಡಿಸ್ದ. ಒಂದೀಬತ್ತಿ ಉಂಡೆನ ಕಾಲತ್ರ ಒಡ್ಡಿಸ್ದ. ಉಸ್ಸಂತ ಮ್ಯಾಲಕ್ಕೆದ್ದ ಜೀವ ಬಂತು. 'ಊಂ ಓಗಿ ಈಗ ನೀವು ಯಾವ್‌ದೇಸ್ದೆಲ್ ಕಾಲ ಅರಣೆ ಕಳಿಬೇಕೋ ಕಳಿಹೋಗಿ' ಅಂದ. ಮಾಯವಾಗಿ ಬರ್‌ಅಂತ ಪಾರ್ವತಿ ಪರಮೇಸ್ಪುರ ಮೇಲೋಕುಕ್ಕೆ ಹೋಗ್‌ಬುಟ್ರು. ಏನಾರು ಕೇಳ್ಡಂಗು ಆಗಿಲ್ಲ. ಇವ್ರು ಕೊಟ್ಟಂಗು ಆಗಿಲ್ಲ. ಇದು ಪೆಂಡಿಂಗೆಲೆ ಇದ್‌ಬುಡ್ತು. ಮುಂದೆ ಹೋದ್ರು ಅಲ್ಲಿ.

ಪದ್ಮಾವತಿ ಸೂಳೆ ಪಟ್ನ ಎಂಬತಕ್ಕಂತ ಒಂದು ದೊಡ್ಡ ಪಟ್ನ. ಆ ಪಟ್ಣದ ಮುಂಬಾಗ್ದಲೆ ಒಂದು ದೊಡ್‌ಕೆರೆ. ಆ ಕೆರೆ ತಾವ್ರ ಒಂದ್ ಪಾಳು ದೇವುಸ್ಥಾನುದ್ ಚಾವಡಿ ಮುಂಬಾಗ್ಲಲ್ಲಿ ಕೆರೆವೊಳ್ಗೆ ಕುದ್ರೆ ಕಟ್ಟಾಕ್ಬುಟ್ಟ. ಅಲ್ಲಿಗೆ ಎರಡು ತಿಂಗ್ಳು ಕಾಲ ಕಳ್ದಿರ್‌ಬೋದು. ಅಲ್ಲೀತನ್ಕಾನು ಒಂತೊಟ್ಟು ನೀರು ಕುಡ್ದಿಲ್ಲ. ಊಟ ಮಾಡಿಲ್ಲ. ಮಕ ತೊಳ್ದಿಲ್ಲ. ಕುಂಕುಮ ಅಂತ ಇಕ್ಕಿಲ್ಲ. ಪತಿವ್ರತಾ ಧರ್ಮದಿಂದ ಊಳ್ಕೊಂಡವಳೆ. ಅವತ್ತು ಏಳ್ತಾಳೆ 'ಸ್ವಾಮಿ ನನ್ಗೆ ಬಾಳ ಹಸಿವಾಯ್ತಾ ಅದೆ ! ಈ ಪಟ್ನಕ್ಕೋಗಿ ಅಕ್ಕಿ ಬ್ಯಾಳೆ ತಕೊಂಡ್‌ಬನ್ನಿ' ಅಂತೇಳಿ ಕಾಸ್ಕೊಟ್ ಕಳಿಸುದ್ಲು. ಅವ್ನ ಉಟ್ಟಿರೋ ಪೀತಾಂಬ್ರನೆಲ್ಲ ಕಳ್ಚಿ ಒಂದು ಬ್ಯಾಗ್ನಲಿಟ್ಟು ಬೇರೆ ಪೀತಾಂಬ್ರ ಉಟ್ಕೊಂಡು ಬ್ಯಾಗ್ನ ಕೈಲಿಡ್ಕೊಂಡು ಆ ಪದ್ಮಾವತಿ ಸೂಳೆ ಪಟ್ನದೆಲಿ ಬೀದಿ ತಿಬ್ಬ ಹೋದ. ಆ ಪದ್ಮಾವತಿ ಕೇರಿ ತಿಬ್ಬ ಹೋಗಿ ಏನಪ್ಪ ಕೇಳ್ತಾನೆ ಅಂದ್ರೆ : 'ಬ್ಯಾಳೆ ಯಂಗಪ್ಪ ಕೇಜಿಗೆ' ಅಂತಾನೆ ಹತ್ತೊ ಅದಿನೈದೋ ಅಂತಾನೆ ಅಂಗಡಿಯೋನು.

'ಹೋಗುಯ್ಯೋ ಹತ್ತೋ ಅದಿನೈದೋ ಕೊಟ್ಕೊ ಬ್ಯಾಳೆ ಅಕ್ಕಿ ತಕೊಂಡೋಗ್‌ಬೇಕೆ ಅನ್ಕೊಂಡು ಅಲ್ಲಿ ಅಕ್ಕಿ ಕೇಳೋದು. ಬ್ಯಾಳೆ ಕೇಳೋದು ಬರೀ ಕೇಳ್ಕೊಂಡೇ ಹೊಂಟೋದ. ತಕೊಳ್ಳೆ ಇಲ್ಲ. ಅಲ್ಲಿ ವೂವ್ವಾಡಗಿತ್ತಿ ಅನ್ಕೊಳೊಬ್ಳು ಸೂಳೆ. ಅವ್ಳು ನೂರೊಂದು ಕುಸುಮ ಮಡಿಕೊಂಡಿದ್ದಾಳೆ. ಅಲ್ಲೋಗಿ ವೂವುನ್ ಬೆಲೆ ಕೇಳುದ್ರೇನೇಳ್ತಾಳೆ ಗೊತ್ತೇ ?' ಅಪ್ಪಾ ವೂವುನ್ ಬೆಲೆ ಅಂಗಿರ್ಲಿ ! ಈ ಪುಸ್ಪ ಮೂಸಿ ಗಮ್ಲ ನೋಡಿ ನೀನು ಕಾಸ್‌ಕೊಟ್ಟು ವೂವತಕೊಂಡೋಗಪ್ಪ ಅಂತಾಳೆ. ಚಿಬ್ಲೆಲ್ ಮಡ್ಗವಳಲ್ಲ ಆ ವೂವ್ವ ಎತ್ತಿ ಇಂಗೆ ಮೂಸೂದ್ರೆ ಆ ಮೂಸತಕ್ಕಂತವನು ದೊರೆ ಮಗ್ನೆ ಆಗಿರ್ಲಿ, ಬಡುವ್ನೆ ಆಗಿರ್ಲಿ, ಬಲಗಾರ್ನೆ ಆಗಿರ್ಲಿ ಅವ್ನೇನಾಗ್ ಬೇಕು ಅಂತ ತಿಳ್ಕೊಂಡಿದ್ದೀರಾ ? ಒಂದಂದಿ ಆಗ್‌ಬೇಕು, ಇಲ್ದಿದ್ರೆ ನರಿಯಾದ್ರು ಆಗ್‌ಬೇಕು, ಇಲ್ದಿದ್ರೆ ಒಂದ್ ಟಗರಾದ್ರು ಆಗ್‌ಬೇಕು. ಒಟ್ನಲಿ ಒಂದುವ್ವ ಮೂಸೂದ್ರೆ ಒಂದು ಜೀವ ಜಂತು ಆಗ್‌ಬುಡ್‌ಬೇಕು. ಆಮ್ಯಾಲೆ ಇವ್ಳ ಅದ್ಕೆ ಒಂದುಕ್ಕುನ್ ಸರಪಣಿ ಆಕಿ ಕಟ್ಟಾಕ್ತಿದ್ಲು ಗಾಜುನ್ ಕಂಬುಕ್ಕೆ. ಅವುನ್‌ಮ್ಯಾಲೆ ಪ್ರೇಮ ಉಟ್ಟುದ್ರೆ ಮನ್ಸುನ್ ಮಾಡ್ತಿದ್ಲು. ಇಲ್ದೆ ಇದ್ರೆ ಹಗ್ಲು ರಾತ್ರಿ ಮಳೆಲೆಲ್ಲ ಅಲ್ಲೇ ಬಿದ್ದಿರಬೇಕಾಗಿತ್ತು. ಮನ್ಸು ಸಮಾಧಾನ ಆದ್ರೆ ಮನ್ಸುನ್ ಮಾಡಿ ಮಗ್ಲಲ್ ಮನ್ಗಿಸ್ಕೊಂಡು ಮುದ್ದಾಡೊಳು. ಇಲ್ದೆ ಇದ್ರೆ ಅದಂಗೆ ಕಣ್ಣೀರ್ ಸುರಿಸ್ಕೊಂಡು, ಜೂಗ್ಟುಸ್‌ಕೊಂಡು ಹಾಗೇ ನಿಂತಿರಬೇಕು. ನೂರೊಂದು ಕುಸುಮ್‌ದೆಲಿ ಅಷ್ಟೊಂದು ಆಕಾರವಾಗಿ ಮಡಿಕೊಂಡು ಅದೇ ಕಸುಬು.

ಸರಿ ಈ ದೊರೆ ಮಗಾನು ಈ ಹೂವ್ವ ನೋಡ್‌ಬುಟ್ಟು ಬಾಳ ಸಂತೋಸ್‌ವಾಗ್ ಬುಡ್ತು

ಆಹಾ ಎಳ್ಡು ತಿಂಗ್ಳಿಂದ ನನ್ನ ವಿದ ಎಂಬತಕ್ಕಂತ ಎಣ್ಣು ತಲೆ ಬಾಚ್ಲಿಲ್ಲ, ಪುಸ್ಪ ಮುಡಿಲಿಲ್ಲ. ಹಣೆಗೆ ಅರಿಸಿಣ ಕುಂಕುಮ ಇಟ್ಕೊಂಡಿಲ್ಲ, ಇವತ್ತುವ್ವ ತಕೊಂಡೋಗಿ ಅವುಳ್ ಕೈಗೆ ಕೊಟ್ಟು ತಲೆ ಬೋರ್ಸ್ಲಿ, ಅರಿಸಿಣ ಕುಂಕುಮ ಮುಖಕಿಟ್ಟು ಅವುಳ್ ತುರುಬಿಗೆ ವೂವ ಮುಡಿಸ್‌ಬೇಕು' ಅಂದುದ್ದೆ 'ಅಮ್ಮಾ ಈ ವುವ್ವಕ್ಕೆಷ್ಟಾಯ್ತದೆ ?' ಅಂತ ಎಲ್ಕಿಂತ ಮಿಗಿಲಾದುವ್ವ ಕೈಗೆತ್ಕೊಂಡ.

'ಸ್ವಾಮಿ ವುವ್ವದ್ ಬೆಲೆ ಹಾಗಿರ್ಲಿ. ನೀವು ಆ ಹೂನ ಮೂಸಿ ಗಮ್ಲ ನೋಡಿ ಹೂವ ತಕೊಳ್ಳಿ' ಅಂದ್ಲು. ಮೂಗ್ಗಿಡ್ಡ. ಒಂದು ಒಳ್ಳೆ ಕೊಂಬಿನ ಟಗರಾಗೋದ. ಎರುಡ್ ಸರಪಣೆ ತಂದುದ್ದು ಎರುಡ್ ಕಡೆನು ಮೊಕರಂಬೆ ಆಕ್ಬುಟ್ಟು ಎರುಡ್ ಗಾಜುನ್ ಕಂಬಕ್ಕೆ ಕಟ್ಬುಟ್ಟು ಹಿಡ್ದುದುದೆ. ಹಿಡ ಹಾಕ್ದೋರಿ ಆಕ್ದಂಗ್ ಕಟ್ಬುಟ್ಳು. ಅದ್ರು ಮ್ಯಾಲೆ ಇವುಳ್ಗೆ ಬಾಳ ಪ್ರೇಮ ಹುಟ್ಬುಡ್ತು. 'ಇವ್ನು ಬಾರಿ ದೊರೆಮಗ. ನಾನು ಬೇಕಾದಷ್ಟು ಜೀವ ಜಂತುನೆಲ್ಲ ಮಾಡಿವ್ನಿ. ಯಾವ್ ದೊರೆ ಮಗ್ನು ಇಲ್ಲ ಮಂತ್ರಿ ಮಗ್ನು ಇಲ್ಲ ಇಂಥ ರೂಪಸ್ಥ. ಬೇಕಾದಷ್ಟು ಸುಖ ಸಂಪತ್ತುಗಳನ್ನು ನಾನು ಬೇಕಾದಷ್ಟು ಅನುಭವಿಸ್‌ಬೇಕು' ಅಂದುದ್ದನು ಇವುಳ್ಗೆ ಬಾರಿ ಪ್ರೇಮ ಹುಟ್ಬುಡ್ತು.

ಈಗ ಇವ್ನ ಇಲ್ಲಿ ಟಗರಾಗ್ ಸೇರ್ಕೊಂಡ. ಈ ವಿದ ಎಂಬತಕ್ಕಂತ ಎಣ್ಣು ಎಲ್ ಸೇರ್ಕೊಂಡ್ಳು? ಪಾಳುಚಾವಡಿ ಆ ಕೆರೆವೊಳ್ಗೆ ಸೇರ್ಕೊಂಡ್ಳು. ಅಷ್ಟೊತ್ ನೋಡುದ್ಲು. ಇಷ್ಟೊತ್ ನೋಡುದ್ಲು ದೊರೆ ಮಗ ಬರ್ಲಿಲ್ಲ. ಈಗ ಏನ್ಮಾಡುದ್ಲು ಅಂದ್ರೆ ತಾನು ಮೈಮ್ಯಾಲೆ ತೊಟ್ಟಿರತಕ್ಕಂತ ಆಭರಣ ಡ್ರೆಸ್ಸು ಎಲ್ಲ ಕಳ್ದು ಒಂದ್ ಬುತ್ತಿ ಕಟ್ ಮಡುಗ್‌ಬುಟ್ಳು. ತನ್ ಗಂಡುನ್ ಡ್ರೆಸ್ಸಿತ್ತಲ್ಲ ಆ ಡ್ರೆಸ್ಸೆಲ್ಲ ಟ್ರೌಜರ್ರು, ಕೋಟು, ಪೇಟಯಲ್ಲ ಗಂಡ್ ದರ್ಸು ದರಿಸ್‌ಬುಟ್ಳು. ಒಂದ್ ಕೊಕ್ ದೊಣ್ಣೆ ಕೈಲಿಡ್ಕೊಂಡು ರಾಜಾ ಅಂತ ತಿರ್ಗಾಗ್ತ ಅವ್ಳೆ. ಅಲ್ಗೆ ಎಣ್ ರೂಪೊಯ್ತು ಗಂಡ್ ರೂಪ್ ಬಂದ್‌ಬುಡ್ತು. ಇನ್ನೇನಿದ್ರು ಗಂಡುಸ್ರು ಸುದ್ದಿನೆ ಆಡಬೇಕು.

ಅಷ್ಟೈಲಿ ಆ ಪಟ್ಟುಣದೆಲಿ ಮೂಡ್ಲಾಗಿ ಒಂದ್ ಪರ್ವತ. ಆ ಪರ್ವತುದ್ ಗುಹೆಲಿ ಒಂದ್ ಯೇಗ್ರ. ಆ ಯೇಗ್ರ ಏನ್ ಮಾಡೋದು ಅಂದ್ರೆ ಪ್ರತೀ ದಿವ್ಸಾನು ಆ ಕೆರೆತಾಕ್‌ಬಂದು ಒಬ್ ಮನುಸ್ಯುನ್ನ ಎತ್ಕೊಂಡೋಗಿ ಊಟ ಮಾಡ್ಲೆಬೇಕು. ಊಟ ಮಾಡ್ದೆ ಇದ್ರೆ ಅದ್ಕೆ ನೆಮ್ಮದೀನೆ ಇಲ್ಲ. ಹೀಗೆ ಶತಕೋಟಿ ಜನಾನ ತಿಂದಾಕ್‌ಬುಟ್ಟಿರ್ತುದೆ ಈ ಯೇಗ್ರ. ಯೇಗ್ರ ಅಂದ್ರೇನು ? ಹುಲಿ.

ಸರಿ ಆ ಪದ್ಮಾವತಿ ಸೂಳೆ ಪಟ್ಟುದ್ ರಾಜುನ್ಗೆ ಒಬ್ಳೆ ಎಣ್‌ಮಗ್ಳು. ಅವ್ಳೇನ್ ಮಾಡಿದ್ದಾಳೆ? 'ನಮ್ ಪಟ್ಟುಣದೆಲಿ ಜನಾನ ಸಂಹಾರ ಮಾಡಿ ಊಟ ಮಾಡ್ತಕ್ಕಂತ ಯೇಗ್ರನ್ನ ಯಾರು ಸಂಹಾರಿಸ್ತಾರೋ ಅವ್ರುನ್ನೆ ನಾ ಮದ್ವೆ ಆಗ್‌ಬೇಕು ಮತ್ತು ನಮ್ ರಾಜ್ಯುದೆಲಿ ಅರ್ಧ ರಾಜ್ಯ ದಾನ ಬರಿಬೇಕು. ನಮ್ ರಾಮ ಲಕ್ಷ್ಮಣ್ರು ಕಣುಜ್ದೆಲಿ ಒಂದ್ ಕಣಜ ದಾನ ಕೊಡ್ತೀವಿ. ರಾಜಾಧಿಕಾರ ಅವ್ರುನ್ಗೆ ವಯಿಸ್ತೀವಿ' ಅಂತೇಳಿ ರಾಡ್‌ಬಾಕ್ಲೆಲಿ ಬೋರ್ಡಾಕ್ಸಿದ್ದಾಳೆ, ಆ ಪದ್ಮಾವತಿ ಸೂಳೆಪಟ್ಟುದ್ ರಾಜುನ್ ಮಗ್ಳು. 'ಎಲೆಲೆ ಇಷ್ಟೆಲ್ಲ ಭಾಗ್ಯ ಬರುವಾಗ ಈ ಯೇಗ್ರ ಸಂಹರಿಸುಕ್ಕಾಗಲ್ವೆ ಅದೆಷ್ಟು ಮಾತ್ರುದೆಲಿ ಅದು' ಅಂತೇಳಿ ಬಂದೂಕ್‌ದೊರು, ಈಟಿಯೋರು, ಭರ್ಜಿಯೋರು ಇಷ್ಟು ಜನಯಲ್ಲ ಕಾದವರೆ.ಯೇಗ್ರ ತಿಂದು ಮೃತಪಟ್ಟೋರು ಪಟ್‌ಬುಟ್ಟವರೆ. ಇದ್ರೆಲಿ ವಾಯ್ದೆ ಮೀರಿ ಯೇಗ್ರ

ಸಾಯಿಸ್ಬೆ ಇರೋರು ಅವ್ರುಳ್ ಮಲ್ಲಿ ಬಚ್ಚು ಬಳ್ಕೊಂಡು, ಸ್ನಾನುಕ್ಕೆ ನೀರೊರೊದು, ಬಟ್ಟೆ ತೊಗಿಯೋದು, ಅವ್ಮೆಮ್ಮೆ ಮೇಸೋದು, ಕುದ್ರೆ ಮೇಸೋದು, ಈ ತರವಾಗಿ ಜೀತ ಮಾಡ್ಕೊಂಡು ಕೋಟಾಂತ್ರ ದೊರೆಮಕ್ಳು, ರಾಜ್‌ಮಕ್ಳು, ಮಂತ್ರಿ ಮಕ್ಳು ಇಂಥವರೆಲ್ಲ. ಆ ಊರೆಲಿ ಮಡ್ವಾಳಯ್ಯ 'ಯೇಗ್ರನ್ನ ನಾ ಸಂಹರಿಸ್ತೀನಿ, ನಾಸೊಡ್ವಾಕ್ ಬುಡ್ತೀನಿ ನನ್ಗೆ ಇಳ್ಳೀವ್ ಕೊಡಿ' ಅಂತೇಳಿ ಇಳ್ಳೀವ್ ತಕೋಬುಟ್ಟವ್ನೆ.

ಸರಿ ಊರೆಲಿ ಒಂದಬ್ವೊ. ಹುಣ್ಣಿಮೆಯೋ ಬಿಳ್ತು. ಬಟ್ಟೆಗೊಳ್ನೆಲ್ಲ ಎತ್ತಿ ಹುಬ್ಬೆ ಬೆಂಕಿ ಹಾಕಿ ಚೌಳು ಮಣ್ಣಲದ್ದಿ ಹುಬ್ಬೆಗಾಕವ್ನೆ. ಅವತ್ತು ರಾತ್ರಿ ಕಲ್ಲು ನೀರು ಕರ್ಕೊಗ್ಹೊತ್ನೆಲಿ ಯೇಗ್ರ ನೋಡ್ತು. ಏನದ್ಕೆ ಗಮ-ಗಮ-ಗಮ-ಗಮ ಅಂತ ಏನು ಅಪರಂಜಿ ಗಮ್ಲು ಹೊಡ್ತಂಗೆ ಹೊಡಿತಾ ಅದೆ. ಈ ರಾಜುನ್ ಮಗುನ್ ವೇಸ ಹಾಕ್ಕೊಂಡಿರೋ ವಿದ ಅನ್ನೋ ಹುಡ್ಗಿದು. ಬಾಳ ಸಂತೋಷವಾಗೋಯ್ತು ಈ ಹುಲಿಗೆ. ಆ ಪರ್ವತುದ್ ಮ್ಯಾಲ್ ಕೂತ್ಕೊಂಡು ನೋಡ್ತು. 'ಆಹಾ ಇಂತೆ ರುಚಿಕರವಾದ ಪದಾರ್ಥ ನನುಗ್ಯಾವ್ದು ಸಿಕ್ಕಿರ್ಲಿಲ್ಲ, ಅಂಥೆ ಆಹಾರ್ವೆ ಸಿಕ್ಕಿರಲಿಲ್ಲ ಈಗ್ಲೆ ಹೋಗಿ ಅದ್ನೆತ್ಕೊ ಬಂದು ಗವಿಲ್ ಮಡಿಕೊಂಡು ಸಂಪತ್ತಾಗೂಟ ಮಾಡ್‌ಬೇಕು' ಅನ್ಕೊಂಡುದ್ದೆನೆ ಆಗರಿಸ್ಕೊಂಡು ಬೋಗರಿಸ್ಕೊಂಡು ಆ ಊ ಆ ಊ ಅನ್ಕೊಂಡು ಬತ್ತಾ ಅದೆ. ಬರುವಾಗ ಈ ದೊರೆ ಮಗ್ಳು ಕೂತ್ಕೊಂಡ್ ನೋಡುದ್ಲು. ಬರ್ಲಿ ಅನ್ಕೊಂಡು ಹತ್ರ ಬಂದಾಗ ಚಂದ್ರಾಯ್ದ ಕೈಗೆ ತಕೊಂಡು ಆ ಆ ಅಂತ ಒಂದೇಟ್ಗೆ ಬಾಯ್ಗೆ ಸರಿಯಾಗಿ ಒಡುದ್‌ಬಿಟ್ಳು. ತಲೆಯೇ ಬೇರೆ ಮುಂಡಾನೆ ಬೇರೆ ಆಗೋಯ್ತು.

ಅವಾಗ ಕೊನೆ ಮೀಸೆ, ಕೊನೆ ಬಾಲ, ಕೊನುಗ್ರ ಎಲ್ಲ ಕುಯ್ದುದ್ನು ಬುತ್ತಿ ಕಟ್ಟಿ ಬ್ಯಾಗ್ ಬಿಸಾಕ್‌ಬುಟ್ಟುದ್ದನು ಸುಖವಾಗೋದ್ವೆನೆ ಚಾವಡಿಗೋಗಿ ಮಲಿಕ್ಕೊಂಡ್ಳು. ನಿವ್ ಬಂದ್‌ಬುಡ್ತು ಚೆನ್ನಾಗಿ. ಈ ಯೇಗ್ರ ಎಲ್ಲಿದೆ ? ಒಳ್ಳೆ ಮಧ್ಯೆ ಕೆರೆವೊಳ್ಗೆ ಎಮ್ಮೆ ಬಿದ್ದಂಗೆ ಬಿದ್ದವೆ. ಅದ್ರು ಮ್ಯಾಲೆ ಬೆಳಕರ್ಯ ಬೆಳಕರಿಯ ಹೊತ್ತುಡೋ ಜಾವ್‌ದೆಲಿ ಈ ಕುಂಬಾರಕೋಳಿ ಅಂತ ಇದೆ ನೋಡಿ ಬೆಳ್ಳಗೆ, ಆ ಕುಂಬಾರಕೋಳಿ ಕುಂತ್ಕೊಂಡು ಕಣ್ ಕಿಳ್ತಾ ಅದೆ. ಆ ಯೇಗ್ರಾನ್ ಕಣ್ಣು. ಅಷ್ಟೆಲಿ ಈ ಮಡಿವಾಳಯ್ಯ ಇಳ್ಳೀವ್ ತಕೊಂಡಿದ್ನಲ್ಲ ಅವ್ನು ಬಟ್ಟೇನ ಕತ್ತೆ ಮ್ಯಾಲೇರಾಕ್ಕೊಂಡು ಕೆರೆಕಡೆ ಬಟ್ಟೆನ್ ಇಂಡುಕ್ಕೋದ. ಅವಾಗ ಈ ಕತ್ತೆಗೋಳು ಯೇಗ್ರಾನ ವಾಸ್ನೆ ಇಡ್ಕೊಬುಟ್ಟು ಬಟ್ಟೆ ಒತ್ಕೊಂಡುದ್ವೆ ಈ ಮೆಳ್ಗೊಂದು, ಆ ಮೆಳ್ಗೊಂದೊಯ್ತವೆ. ಆ ಬಟ್ಟೆ ಅರ್ದೋಗೋವೇಷ್ಟೋ, ಬಿದ್ದೋಗೋವೆಷ್ಟೋ ಇಂಗ್ ಮಾಡ್ತಾ ಅವೆ.

ಈ ಅಗಸ ಯೋಚ್ನೆ ಮಾಡ್ತಾನೆ, ಯಾಕೆ ಕತ್ತೆಗೋಳು ಇಂಗ್ ಮಾಡ್ತಾ ಅವಲ್ಲ ! ಅನ್ಕೊಂಡು ನೋಡ್ತಾನೆ ಯೇಗ್ರ ಕೆರೆವೊಳುಗ್ ಬಿದ್ದದೆ. ಈ ಕುಂಬಾರಕೋಳಿ ಕುಂತ್ಕೊಂಡು ಕಣ್‌ಕಿಳ್ತಾ ಅದೆ. ಇವುನ್ಗೆ ಜ್ಞಾಪಕ ಬಂದ್‌ಬುಡ್ತು. ಓಹೋ ನಾನು ಇಳ್ಳೀವ್ ತಕೊಂಡಿದ್ದೆ. ಯೇಗ್ರ ಅಲ್ ಬಿದ್ದದೆ. ಕುಂಬಾರಕೋಳೀ ಕೂತ್ಕೊಂಡು ಕಣ್ ಕಿಳುಕ್ಕೆ ಕಾರಣ ಏನು ? ಇದು ಮೃತ್‌ಪಟ್‌ಬುಟ್ಟದೆ. ಇದೇ ಒಳ್ಳೆ ಸಮಯ ಅಂತ ದಡ-ದಡ-ದಡ-ದಡ ಅಂತ ಮನೆಗೋದ. ಈ ಮಡಿವಾಳಮ್ಮ ಇದ್ಲಲ್ಲ 'ಎದ್ದಿ' ಅಂತ ಬಂದ ವಾಪ್ಸಿ. ಕೇಳುದ್ಲು ಮಡಿವಾಳಮ್ಮ 'ಏನ್ ಸ್ವಾಮಿ ಸಮಾಚಾರ' ಅಂತ. 'ಏನರ ಆಗ್ಲಿ ಕುಡ್ಲು ಕೊಡೆ' ಅಂತ ಕುಡ್ಲಿಸ್ಕೊಂಡು ಒಂದೆ ಉಸ್ರುಗ್ ಬಂದ. ಒಳ್ಗೆರಲ್ ಬಿದ್ದಿತ್ತಲ್ಲ

ಆ ಹುಲಿ ಅದ್ರುದು ಮೊಂಡುಗ್ರು, ಮೊಂಡ್‌ಮೀಸೆ, ಮೊಂಡ್‌ಬಾಲಯಲ್ಲ ಕೊಯ್ಕೊ ಬಂದ್‌ಬುಟ್ಟ. ಬಟ್ಟೆ ಇಲ್ ಬುಟ್‌ಬುಟು, ಕತ್ತೆನು ಬುಟ್‌ಬುಟ್ಟ. ದಡದಡ ಅಂತ ಒಂದೆ ಉಸ್ರುಗ್ ಬತ್ತಾ ಅವ್ನೆ. ದಾರಿಲಿ ನಮ್ಮಂತೋರು 'ಏನಯ್ಯ ಮಡಿವಾಳಯ್ಯ ಒಂದೇ ಉಸ್ರಿಗೊಯ್ತಿ, ನೀನು ಬಟ್ಟೆ ಇಂಡಾಗೊಯ್ತೆ ಇಷ್ಟು ಬೇಗ್ನೆಯೇ ?' ಅಂದ್ರೆ 'ಏಯ್ ಸೂಳೆ ಮಕ್ಳ ಯಾರು ಮಡಿವಾಳಯ್ಯ, ದೊರೆ ಅಳಿಯ ಅನ್ನಿ. ನಾನು ಊರಿನ್ ಜನಾನ್ನ ತಿಂತಾ ಇದ್ ಯೇಗ್ರನಾ ಕೆರೆವೊಳ್ಗೆ ಒಡ್ದು ಕೆಡ್ವಿದ್ದೀನಿ. ನಾನು ದೊರೆ ಮಗುಳ್ನ ಮದ್ವೆ ಆಗ್ಬೇಕು. ದೊರೆ ದಂಡು, ದಾಳಿ, ಮಂದಿ ಮಾರ್ಬಲಯಲ್ಲ ಭಾಗ ತಕೋಬೇಕು. ಇಲ್ಲಿಂದೀಚೆಗೆ ಯಾರಾರಾ ಮಡಿವಾಳಿ ಅಂದ್ರೀ ನಿಮ್ ಸಿರಸಾಗ್ಣೆ ಮಾಡವಂಗೆ ನಾನಾಡ್ತು ಕೊಟ್‌ಬುಡ್ತೀನಿ' ಅಂದುದ್ದನು ಬಂಚತ್ ಅಂತ ಗುಡಿಕೊಂಡೋಗ್ತಾ ಇದ್ದಾನೆ. ಯಾರೂ ಈ ಮಡಿವಾಳಯ್ಯ. ಹೋಗಿದ್ದೆ ಅರಮನೆ ಮುಂಬಾಗ್ಲಲಿ ನಿಂತ್ಕೊಂಡುದ್ದುನು 'ಏಯ್ ಯಾರಲ್ಲಿ?' ದ್ವಾರ್‌ದೆಲಿ ಪೋಲೀಸ್‌ನೋರ್‍ನ ಕಾವುಲ್‌ಗಿಟ್ಟವುರಲ್ಲ ! ಅವ್ರು 'ಏನಪ್ಪ ಮಡಿವಾಳಯ್ಯ'? 'ಏಯ್ ನನ್ನ ಮಡಿವಾಳಿ ಅಂತೀಯ? ನಾನು ಮಡಿವಾಳಿ ಅಲ್ಲ ದೊರೆ ಅಳಿಯ ಅನ್ನಿ'. 'ಏನ್ ಸಮಾಚಾರ'? ಅಂದ್ರು.

'ಏನ್ ಸಮಾಚಾರನು ಇಲ್ಲ ! ಯೇಗ್ರ ಸಂಹರಿಸ್ತೀನಿ ಅಂತ ಇಳ್ಳೇವ್ ತಕೊಂಡಿದ್ದೆ ರಾತ್ರಿ. ಅದ್ರಂತೆನೆ ರಾತ್ರಿಯಲ್ಲ ಕಾಯ್ಕೊಂಡಿದ್ದು ಸಂಹಾರ ಮಾಡ್‌ಬಂದಿವ್ನಿ. ಕೆರೆವೊಳ್ಗೆ ಆ ಯೇಗ್ರ ಬಿದ್ದದೆ. ಬೇಕಾದ್ರೆ ಹೋಗ್ ನೋಡ್ಕೊ ಬನ್ನಿ. ನನ್ಗೇನಿದ್ರುನು ದೊರೆಮಗ್ಳು ಕೊಟ್ಟು ಮದ್ವೆ ಮಾಡ್ಬೇಕು. ದೊರೆ ರಾಜ್ಯುಬಾರ್‌ತನ ಕೊಡಬೇಕು. ರಾಮ ಲಕ್ಷ್ಮಣ್ರು ಕಣ್ಣ ದಾನ, ಅವುರ್ ದಂಡು, ದಾಳಿ, ಮಂದಿ, ಮಾರ್ಬಲ ಸಹಿತವಾಗಿ ನಂಗೆ ದಾನ ಕೊಡಬೇಕು' ಇನ್ನು ಪೋಲೀಸ್‌ನೋರು ಮಾತ್ ಮೀರ್‍ವಂಗಿಲ್ಲ. ಈ ಮಡಿವಾಳಯ್ಯುನ್ನ ಬುಡ್ಲೆಬೇಕು ಅರಮನೆಗೆ. ಅರಮನೆಗೋದ. ದೊರೆ ವುಪ್ಪಾಲೆ ಮ್ಯಾಲ್ ಕುಂತ್ಕೊಂಡು ವುಪ್ಪಾಲೆ ಆಡ್ತಾ ಇದ್ದಾನೆ. ಹೋದೋನೆ ಇವ್ನ 'ಮಾವ' ಅಂದ.

'ಯಾರಪ್ಪ ನೀನು ?' 'ಯಾರಪ್ಪ ನೀನು ಅಂತ ಕೇಳ್ತಾ ಇದ್ದೀಯಾ ? ನಾನು ನೆನ್ನೆ ಸಾಯಂಕಾಲ ಇಳ್ಳೇವ್ ತಕೊಂಡೋಗಿಲ್ವೆ ? ಯೇಗ್ರ ಸಂಹರಿಸ್ತೀನಿ ಅಂತೇಳಿ. ಅದ್ರಂತೆ ಯೇಗ್ರ ಒಡ್ದಿವ್ನಿ ಕೆರೆವೊಳುಗ್ ಬಿದ್ದದೆ. ಈಗ ನಿನ್ನ ಮಗ್ಳು ಕೊಟ್ಟು ಮದ್ವೆ ಮಾಡು ಜಲ್ದಿ.' ದೊರೆಗೇಚ್ನೆ ಬಂತು. 'ಆಹಾ ಮೈಲ್ಗೆ ಬಟ್ಟೆನೆಲ್ಲ ಇಂಡ್ತಕ್ಕಂತ ಮಡಿವಾಳಿಗೆ, ಅರಸನಾದ ನಾನು ನಮ್ ಬಾಲಕಿಯನ್ನು ಕೊಟ್ಟು ಮದುವೆ ಮಾಡಿ, ನಮ್ ದೇಸುದ್ ಧನ, ದಾನ್ಯವೆಲ್ಲ ಭಾಗ ಕೊಟ್ರೆ ನಾನಿದ್ರೇನು ? ಸತ್ರೇನು ?' ಅಂತ ದೊರೆಗ್ ದುಃಖ ಬಂತು. ಅವಾಗ ಮಗ್ಳು ಕರಿಸ್ದ.

'ಏನವ್ವ ನಾವು ಬೋಡ್ರಾಕಿದ್ದು ಹಾಗೇನೆ, ಮಡಿವಾಳಯ್ಯ ಮೈಲ್ಗೆ ಎತ್‌ತಿದ್ದುದು ಹಾಗೆನೆ. ಈ ಯೇಗ್ರಾನ ಸಾಯ್ಸಿ ಒಳಗೆರೆವೊಳುಗ್ ಬಿದ್ದಿರೋದು ಹಾಗೆನೆ. ನಿನ್ ಮಗ್ಳು ಕೊಟ್ ಲಗ್ನ ಮಾಡು, ನಾನೇಗ್ರ ಸಂಹಾರ ಮಾಡಿವ್ನಿ ಅಂತ ಏಳ್ತಾನೆ ಇದುಕ್ಕೇನಮ್ಮ' ಅಂದ. 'ಅಪ್ಪಾ ಯಾವ್ ಜಾತಿ ಯಾವ್ ಕುಲವಾದರೇನು ? ಆದ್ರೆ ನಮ್ಮ ದಂಡು ದಾಳಿ ಉರಿನ್ ಜನಾನೆಲ್ಲಾ ಸಂಹರಿಸಿ ಅದು ಊಟ ಮಾಡ್ತಾ ಇತ್ತು. ಆ ಯೇಗ್ರನ ಸಂಹರಿಸಿ ನಮ್ ದೇಸುದ್ ಸಂಕ್ಟನ ಪರಿಹರಿಸ್ದೋನು ಯಾವ್ ದೇಸ್ದೋನಾದ್ರೇನು ? ಯಾವ್ ಕುಲ್ದೋನಾದ್ರೇನು ? ನಮ್ ವಾಗ್ದಾನುಕ್ ತಕ್ಕಾಗಿ ನನ್ನ

ಕೊಟ್ ಲಗ್ನ ಮಾಡು. ನೀನು ದೇಸ ಕೋಸ ಭಾಗ ಬರಿಯಪ್ಪ' ಅಂದ್ಲು. ವಾಗ್ದಾನ ಮೀರುಕ್ಕಾದಾತೆ? ಅವ್ಳು ಪತಿವ್ರತಾ ಸಿರೋಮಣಿ ತಾನೆ ?

ಅವಾಗ ಆಕಾಸ ಚಪ್ರ ಮಾಡಿ, ಭೂಮಿನೆ ಹಸೆ ಜಗ್ಲಿ ಮಾಡಿ ಪುರೋಹಿತ್ರು ಕರೆಸಿ, ಸುಬಮಹೂರ್ತ ಕಟ್ಸಿ ಮದುವ್‌ಗೆ ಏರ್ಪಾಟ್ ಮಾಡುದ್ರು. ಮದ್ವೆಗೆ ಚಪ್ರ ನಡಿತಾ ಅದೆ. ಅವಾಗ ಬೇಕಾದಂತ ಅನ್ನದಾನ, ವಸ್ತ್ರದಾನ, ಭಾಗ್ಯದಾನ್ವೆ ನಡಿತಾ ಅದೆ. ಕುಂಟ್ರುಗೆ ಕೋಲ್ಕೊಟ್ಟು ಅಸುಮಕ್ಳುಗಾಲ್ಕೊಟ್ಟು, ಶಿಸುಮಕ್ಳುಗೆ ಬೆಲ್ಲ ಕೊಟ್ಟು, ಸೂಳೇರ್ ಮೇಳ, ಕಾಳಾರೋಟ್ ವಾದ್ಯ ಬೇಕಾದಂತ ವಾದ್ಯ ನಡಿತಾ ಅದೆ. ಮುತ್ತು ಬಂಗಾರುದ್ ತ್ವಾರುಣ್ವೆ ಕಟ್ಟದೆ. ಈ ಮಡಿವಾಳಯ್ಯ ರಾಜ್ರತ್ರ ಒಂದೆರುಡ್ ಕೋಟಿ ದುಡ್‌ತಕೊಂಡ. ಅವುರ್ ಜನಾಂಗ ಎಲ್ಲೆಲ್ಲದೆ ಅಲ್ಲಿಗೆಲ್ಲ ಪೇಪರ್ ಒಡಿಸ್‌ಬುಟ್ಟ.

"ಇಂಥೆ ಪದ್ಮಾವತಿ ಸೂಳೆ ಪದ್ಮವತಿ ರಾಜುನ್ ಪಟ್ಣದೆಲಿ ಯೇಗ್ರ ಸಂಹರಿಸಿದ್ದೀನಿ, ರಾಜುನ್ ಮಗ್ಳು ಮದ್ವೆ ಆಯ್ತಾ ಇದ್ದೀನಿ. ರಾಜಾಧಿಕಾರ ನಂಗೊಯಿಸ್ತಾರೆ, ಅವ್ರು ದಂಡು, ದಾಳಿ, ಮಂದಿ, ಮಾರ್ಬಲಯಲ್ಲ ಭಾಗ ಕೊಡ್ತಾರೆ. ನಮ್ಮ ಜಾತಿಗೆ ಬೇಕಾದಷ್ಟು ಬಹುಮಾನ ಬಂದುಂಗಾಯ್ತುದೆ. ಎಲ್ಲಿರ್ತುದೆ ನಮ್ ಜಾತಿ ಜನಾಂಗವೆಲ್ಲ ಬರಬೇಕಾದ್ದು" ಅಂತೇಳುದ್ವೆ ಪೇಪರ್‌ಗೊಳು ಕಾರ್ಡುಗೊಳು ಇದೆಲ್ಲ ಏನೇನ್ ಮಾಡ್‌ಬೇಕೋ ಕರ್ತವ್ಯಗೊಳು ಇವ್ನೆಲ್ಲ ಮಾಡ್‌ಬುಟ್ಟ.

ಅವುರ್ ಜನುಕ್ಕೆ ಬಾಳ ಸಂತೋಸ ಆಗ್‌ಬುಡ್ತು. ಅಗಸ ಅರಸು ಮನೆಲಿ ಹೆಣ್ ತಂದ್ರೆ! ನಾವು ಭಿನ್‌ವಾದ ಬಟ್ಟೆ ಸಣೆತಕ್ಕಂತ ಮನಸ್ರು. ಅತ್ತು ಜನುಕ್ಕು ಮಕ್ಳು ಸಮಾನ ಇರತಕ್ಕಂತ ಕುಳ ನಾವು. ಇಲ್ಲಿಗೆ ಈ ಬಾಬು ನಮ್ಗೆ ಮರ್ರೊಯ್ತುದೆ. ನಾವು ಸೇಷ್ಟುವಾದ್ ಜಾತಿ ಆಯ್ತಿವಿ ಅಂತೇಳಿ ಏನೋ ಒಂಥರ ಎಗ್‌ಬುಟ್ರು, ಬೆಳುದ್‌ಬುಟ್ರು ಮ್ಯಾಕ್ ಮುನ್ನಾಗಿ. ಅವುರ್ ಜನವೆಲ್ಲ ತುಂಬೋಗ್‌ಬುಡ್ತು. ಇವುನ್ಗೆ ಕಂಕ್ಣ ಕಟ್ಟವರೆ. ಈ ದೊರೆಗೆ ಯೋಚ್ನೆ. ಅವಾಗ ಸೂಳೇರ್ ಮೇಳ, ಕಾಳಾರೋಟ್‌ವಾದ್ಯ, ಪಾಲಿಕ, ಪಲ್ಲಕ್ಕಿ ಮುತ್ತು ರತ್ನುದ್ ಆರತೀನೆ ಮಾಡ್ಕೊಂಡು ಹೋಗ್ತಾ ಅವ್ರೆ ಎಲ್ಲಿಗೆ ? ಪಾಳು ಚಾವಡಿಗೆ.

ಯಾರೋ ಏಳುದ್ರು ನಮ್ಮಂತೋರು 'ಆದ್ರೆ ಸ್ವಾಮಿ ಯೇಗ್ರ ಬಿದ್ದಿರೋದು ಸರಿ. ಮಡಿವಾಳಯ್ಯ ಇಳ್ಳೇವ್ ತಕೊಂಡುದ್ದು ಸರಿ. ಯೇಗ್ರ ಸಂಹರಿಸಿದ್ದು ಸರಿ. ಆದರೆ ಆ ಪಾಳು ಚಾವಡಿಲಿ ಒಂದು ಕಂಬುಕ್ಕೆ ಕುದುರೆ ಮಾತ್ರ ಕಟ್ಟಿದೆ ! ಒಬ್ಬ ರಾಜಕುಮಾರ ಇದ್ದಾನೆ. ಆ ಕೆರೆಯಲ್ಲ ದಿಗ್ಮಯವಾಗಿ ಉರಿತಾ ಅದೆ. ಕಣ್ಣಲ್ ನೋಡುಕ್ ಸಾಲಲ್ಲ ಅವುನ್ ರೂಪು. ಆದರೆ ಕೈಲಿ ಕೊಕ್‌ದೊಣ್ಣೆ ಇಡಕೊಂಡು ಹಗಲು ರಾತ್ರಿಯಲ್ಲ ಆ ಕೆರೆಯಲ್ಲಿ ಚಂಚರಣೆ ಮಾಡ್ತಾ ಇದ್ದಾನೆ. ಆ ದೊರೆ ಮಗ್ನೆ ಸಂಹರಿಸಿದ್ದಾನೋ ಅಥವಾ ಮಡಿವಾಳೈನೆ ಸಂಹರಿಸಿದ್ದಾನೋ ಗೊತ್ತಿಲ್ಲ. ಇವತ್ತು ಈ ಸುಖ ಸಂತೋಷದಿಂದ ಕಾರ್ಯ ಮಾಡೋ ಸಂದರ್ಭದೆಲ್ಲಿ ಆ ದೊರೆ ಮಗ್ನ ಬಿಟ್ಟು ಕಾರ್ಯ ಮಾಡೋದು ಸರಿಯಲ್ಲ. ಅವುನ್ನ ಕರ್ಕೊರ್ಂ ಬರ್‌ಬೇಕು ನಿಮ್ಮರಮನೆಗೆ ಅಂತ ದೊರೆಗೇಳುದ್ರು.

ಆಗ ದೊರೆಗೊಂದ್ ಸ್ವಲ್ಪ ಧೈರ್ಯ ಬಂತು. 'ಅಂತೆ ರಾಜ್‌ಕುಮಾರ ಅಲ್ಲಿರಬೇಕಾದ್ರೆ ಯಾರ್ ಸಂಹಾರ ಮಾಡಿದ್ದಾರೋ ನೋಡ್ಲೆಬೇಕು, ನಿಜ ಏನು ಅಂತ ಹುಡುಕ್ಲೆಬೇಕು' ಅಂತೇಳಿ ಸೂಳೇರ್ ಮೇಳದ್ ಸಹಿತ ಪಾಲಕಿ, ಪಲ್ಲಕ್ಕಿ ಸಹಿತವಾಗಿ ಕೆರೆತಾಕೋಗಿ ಆ ಕುದುರೆ ಮ್ಯಾಲೆ ದೊರೆಮಗುನ್ನ ಕುಂಡ್ರಿಸ್ಕೊಂಡು ಹೂಮಾಲೆ ಹಾಕಿ, ಕರ್ಕೊಬಂದ್ರು ಈ ರಾಜನರಮನೆ ತಾಕೆ, ಮದುವೆ ಮನ್ಗೆ. ಕುರ್ಚಿ ಹಾಕುದ್ರು. ಕುರ್ಚಿ ಮ್ಯಾಲ್ಕೂತ್ಕೊಂಡು ಆವೆಣ್ಣು ಗಂಡುಧರಿಸ್ನೆಲಿ ರೋದ್ರಿಂದ ಕೇಳುದ್ಲು: 'ಏನ್ ಸ್ವಾಮಿ ಇದೇನು ನೀವ್ ಮಾಡ್ತಾ ಇರೋ ಕಾರ್ಯ ? ಬಹಳ ಸಂತೋಷದಿಂದ ಮಾಡಿದ್ದೀರಿ' ಅಂತ. 'ಸ್ವಾಮಿ ನಮ್ಮುಡ್ಗಿ ಮದ್ವೆ' ರಾಜ ಅಂದ. 'ಹ್ಯಾಗೆ ಮದ್ವೆ ?' ನಾವು ಹಿಂದಿನಿಂದ್ಲುನು ನಮ್ಮ ತಂದೆ ತಾತ ಹಿರಿಯೋರ್ ಕಾಲ್ದಿಂದಾನು ಒಂದು ಯೇಗ್ರ ಪಳಿಕ್ಕೊಂಡು ಊರಿನ ಬೇಕಾದಷ್ಟು ಜನಾನ್ ತಿಂದ್‌ಬುಡ್ತಾ ಇತ್ತು. ಅವಾಗ ನನ್ನಲಿದ್ದ ಬಾಲಕಿ ಏನೆಸ್ರಿಟ್ಟಿದ್ದಾಳೆ, ಬೋರ್ಡ್ರಾಕಿದ್ದಾಳೆ. ಅಂದ್ರೆ "ಯಾವ್ ಜಾತಿ, ಯಾವ್ ಕುಲವಾರ ಆಗಿರಲಿ, ಈ ಪರ್ವತುದೆಲಿರೋ ಯೇಗ್ರಾನ, ಯಾರ್ ಸಂಹರಿಸ್ತಾರೋ ಪಟ್ಣ ಲೂಟಿ ಮಾಡ್ತಕ್ಕಂತ ಯೇಗ್ರಾನ ಆತುನ್ನ ನಾನು ಲಗ್ನ ಆಯ್ತಿನಿ" ಅಂತ ಬೋರ್ಡ್ರಾಕಿಸಿದ್ದಾಳೆ. ನನ್ ರಾಜ್‌ಬಾರ ಅವುನ್ಗೊಯ್ಕೋದು, ನಮ್ ರಾಮ ಲಕ್ಷ್ಮಣ ಕಣ್ಣದೆಲಿ ಒಂದ್ ಕಣ್ಣ ಭಾಗ ಕೊಡೋದು ಅಂತ ಬೋರ್ಡ್ರಾಕ್ಸಿದ್ದಾಳೆ. ಇವತ್ತುನ್‌ದಿನ ಪಟ್ಣದಲಿ ಇಂತ ಮಡಿವಾಳಯ್ಯ ಯೇಗ್ರ ಸಂಹರಿಸಿದ್ದಾನಂತೆ ಸ್ವಾಮಿ. ಆತುನ್ಗೆ, ನಮ್ಮುಡ್ಗಿ ಕೊಟ್ಟು ಲಗ್ನ ಮಾಡ್ತಿದ್ದೀವಿ ಸ್ವಾಮಿ. ಅದುಕ್ಕಾಗಿ ತಮ್ಮನ್ನ ಇಲ್ಲಿಗೆ ಕರಿಸ್ದೆ ಸ್ವಾಮಿ ಅಂದ.

'ಓಹೋ ಹಾಗೋ ಸಮಾಚಾರ, ಸರಿ ಸಂತೋಷ. ರಾಡ್‌ಬಾಕ್ಲುಗೊಳೆಲ್ಲ ಬಂದ್ ಮಾಡ್‌ಬುಡಿ. ಕ್ವಾಟೆಲಿ ಒಳಗಿರೋರು ಹೊರಗೋಗ್ ಕೂಡದು. ಹೊರಗಿನೋರು ಒಳುಗ್ ಬರ್‌ಕೂಡ್ದು. ಎಲ್ಲ ಬಂದ್ ಮಾಡ್ಬುಡಿ' ಅಂದ್ಲು ಈ ವಿದ ಅಂತಕ್ಕಂತ ಹೆಣ್ಣು. ಈ ದೊರೆಮಗ ಪೋಲೀಸ್‌ನೋರ್ನ ಕರೆದು 'ನೋಡ್ರಪ್ಪ ಕೆರೆವೊಳಗಿಂದ ತಂದಿರತಕ್ಕಂತ ಇಂಥ ಬ್ಯಾಗ್ನೆಲಿ ಒಂದ್ ಗಂಟಿದೆ ಎತ್ಕೊಬರ್ರಪ್ಪ' ಅಂದ್ಲು. ಓದ ಒಬ್ಬ ಪೋಲೀಸ್‌ನೋನು. ಅಲ್ಲೊಂದು ಬ್ಯಾಗ್ ಇತ್ತು. ಅದ್ರೆಲಿ ಈ ಗಂಟಿತ್ತಲ್ಲ ಯಾವ್ದು ? ಈ ಕೊನೆಮೀಸೆ, ಕೊನೆ ಉಗ್ರು, ಕೊನೆ ಬಾಲ ಇಂತಾದ್ದು ಗಂಟೆತ್ಕೊಂಡ್ ಬಂದ್ರು. ಜೋಬೆಲ್ ಗಂಟ್ ಮಡಿಕೊಂಡು 'ಮಡಿವಾಳಪ್ಪ ಬಾರಯ್ಯ ಇಲ್ಲಿ' 'ಏಯ್ ಯಾವ್‌ಸೀಮೆ ದೊರೆ ಮಗ್ನಯ್ಯ ನೀನು ? ಮಡಿವಾಳಪ್ಪ ಬಾರಯ್ಯ ಇಲ್ಲಿ ಅಂತೀಯ, ಮಡಿವಾಳಪ್ಪ ಅನ್ನೋದ್ನ ಮರುತ್‌ಬುಡು, ದೊರೆ ಅಳಿಯ ಅನ್ನೋದ್ನ ಮುಂತಕೋ. ಇಲ್ಲಿಂದೀಚೆಗೆ ಮಡಿವಾಳಯ್ಯ ಅಂದೀಯ ಉಸಾರ್ ನಾನು ಯೇಗ್ರ ಕೊಂದಿಲ್ವ? ನೀನು ರಾಜ್‌ಮಗನಾದ್ರೇನು, ಮಂತ್ರಿ ಮಗನಾದ್ರೆ ನನಗೇನಯ್ಯ ? ದೊರೆ ಅಳಿಯ ಅನ್‌ಬೇಕು ನನ್ನ' ಅಂತ ಜೋರ್ ಮಾಡ್ತಾನೆ.

'ಆಂ ಆಗ್ಲಿ ಬಾರಪ್ಪ. ಈ ಯೇಗ್ರಾನ ಸಂಹರಿಸಿದ್ದು ಸರಿ. ನೀನೆ ಆದ್ರೆ ಏನ್ ಗುರ್ತಿಕ್ಕೊಂಡಿದ್ದಿ ಕೊಡು ನನ್ಗೆ' ಅಂದ. ಆಗ ಅವುರ್ ಜನಾಂಗದೊನೊಬ್ಬುನ್ನ ಕಳಿಸ್ದ 'ಲೇ ಲೇ ಲೇ ಓಡೋ ಓಡೋ, ಅಲ್ಲಿ ಅಕ್ಕುನ್ ಕೈಗೆ ಒಂದ್ ಗಂಟ್‌ಕೊಟ್ಟೆ ಒಂದ್ ಪೆಟ್ಗೆಗಾಕ್ಸಿ ಮಡುಗ್ಸಿದ್ದೀನಿ. ಎತ್ಕೊಂಡ್ ಬರೋಗೋ' ಅಂದ. ಯಾರೋ ಅವುರ್ ಜನದೋನು ಓಡೋದ. 'ಅಕ್ಕ ಅಕ್ಕ' ಅಂದ. 'ಏನಪ್ಪ?' 'ಮಾವ ಇಂಥ ಗಂಟ್ ಕೊಟ್ಟಿದ್ದಾನಂತಲ್ಲ. ಪಟ್ಗೆಲ್ ಮಡ್ಗಿದ್ದಿಯಂತಲ್ಲ ಕೊಡು' ಅಂದ. ಓಡ್‌ಬಂದುದ್ದೆ

ಆ ಗಂಟ್ನ ಮಡಿವಾಳಿ ಕೈಯಿಗ್ ಕೊಟ್ಟ. ಮಡಿವಾಳಿ ಎನ್ ಮಾಡ್ದ, ಈ ಕೆರೆಲಿದ್ ಮಗುನ್ ಕೈಯಿಗ್ ಕೊಟ್ಟ.

ಏನು ಬೇಕಾದಂಗೆ ಜನವೆಲ್ಲ ಇರ್ತಾರೆ. ಆ ಮಂಟಪ ಇಡಿಸ್‌ನಾರದು. ಅವುರ್ನೆಲ್ಲ ಕುಂಡ್ರಿಸ್ ಬುಟ್ಟು ಸುತ್ತ ಪೋಲೀಸ್ರುನ ಕಾವ್ಲಿಟ್ಟು 'ಯಾರ್ನು ಬುಡಬೇಡಿ ಇಲ್ಲಿರೋ ಜನಾನ' ಅಂತೇಳ್ದ. ಮಡಿವಾಳಿ ಕೊಟ್‌ಬುತ್ತಿ ಬಿಚ್ದ ! ಯಲ್ಲ ಮೊಂಡುಗುರು, ಮೊಂಡ್‌ಬಾಲ, ಮೊಂಡ್ ಮೀಸೆ. 'ಏನಪ್ಪ ಮಡಿವಾಳಯ್ಯ ಈ ಬಾಲ ಎರುಡ್ ಕಡೆ ಮೊಂಡಾಗ್ ಬೇಕಾದ್ರೆ ಕಾರಣ ಏನು? ಈ ಉಗುರು ಮಂಡಾಗ್‌ಬೇಕಾದ್ರೆ ಕಾರಣ ಏನು ? ಈ ಮೀಸೆ ಮೊಂಡಾಗ್‌ಬೇಕಾದ್ರೆ ಕಾರಣ ಏನು?' ಅಂದ.

ಮಡಿವಾಳಯ್ಯುನ್ಗೆ ಉಸ್ರು ನಿಂತೋಯ್ತು. ಈ ದೊರೆಮಗ ಏನ್ಮಾಡ್ದ, ತನ್ನತ್ರ ಇದ್ದುದ್ ಗಂಟ್ ಬಿಚ್ಚುದ್ದೆನೆ ಮಡುಗ್ದ. ಮಡಿವಾಳಯ್ಯ ಏನು ಮಾತಾಡುಕಾಗ್ಲಿಲ್ಲ. ಅವುರ್ ಜನಾಂಗ್ಳು ಮಾತಾಡುಕ್ಕಾಗ್ಲಿಲ್ಲ. ಅವಾಗ ರಾಜ ಏನಾಜ್ಞೆ ಮಾಡಿದ್ದಾನೆ ಅಂದ್ರೆ 'ಈ ಮಡಿವಾಳಸೆಟ್ಟಿನ ಯಳ್ಕೊಂಡೋಗಿ ಅಜಾಮ್ರು ಕರೆಸಿ ಪಟ್ಟೆ ತೆಗ್ಸಿ ಏಳೂರ ಬೀದಿಗೋಳೆಲಿ ಮೆರವಣಗೆ ಮಾಡ್ಸಿ ಸಿಗ್ಸಿ ಪಟ್ಣದ್ ರಾಡ್‌ಬಾಕ್ಲುಗೆ ತೋರಣ ಕಟ್ಟಿಸ್‌ಬುಡಿ' ಅಂತ ಆಜ್ಞೆ ಆಕಿಸ್‌ಬುಟ್ಟ.

ದಾರಿ ಒಡ್ಕೊಂಡೋದೊರೆಷ್ಟೋ, ಗೋಡೆ ಒಡಕೊಂಡೋದೋರೆಷ್ಟೋ? ಕಿಟಕಿ ಮುರ್ಕೊಂಡು, ಬಾಗ್ಲ ಮುರ್ಕೊಂಡು, ಕತ್ತಿ ಕಿತ್ ಬಿಸಾಕ್‌ಬುಟ್ಟು, ಬಿದ್ದೊಂಟೋದೋರು ಓದು. ಇವುನ್ನ ಸಿಗ್ದು ರಾಡ್‌ಬಾಕ್ಲುಗೆ ತೋರಣ ಕಟ್‌ಬುಟ್ರು, ಸುಳ್ಳೇಳ್ದೋನ್ನ. ಈಗ ಮದುವೆ ಯಾರುಗ್ ಮಾಡಬೇಕು ?

ಪದ್ಮಾವತಿ ಪಟ್ಣದ್ ರಾಜ 'ನಮ್ಮಗ್ಳುನ ನೀವೆ ಲಗ್ನ ಆಗ್‌ಬೇಕು' ಅಂದ. ಈಗ ಇವ್ಳು ಸ್ತ್ರೀ, ಅವ್ಳು ಸ್ತ್ರೀ, ಅವಾಗೇನ್ ಮಾಡ್ದ, 'ದೊರೆ ನಾನು ಒಂದು ಗೌರಿ ವ್ರತ ಅಂತ ಹಿಡ್ದಿದ್ದೀನಿ ಇಷ್ಟೊರ್ಷ ಅಂತ. ಅಲ್ಲಿಗಂಟಾನು ನಾನು ಪರಸ್ತ್ರೀಯರೊಂದಿಗೆ ಕೂತ್ಕೊಳ್ಳಂಗಿಲ್ಲ. ಮಾತಾಡ್ದಂಗಿಲ್ಲ ಇಗೊಳ್ಳಿ ನನ್ ಪಟ್ಟುದ್‌ಕತ್ತಿ ಕೊಡ್ತೀನಿ. ಅದ್ಕೆ ನಿನ್ ಮಗ್ಳು ಕೊಟ್ಟಿ ಧಾರೆ ಮೂರ್ತ ನಡಿಸ್‌ಬುಡ್ರಿ ಅಂತೇಳಿ ಕೈಲಿದ್ದ ಪಟ್ಟುದ್ ಕತ್ತಿ ಕೊಟ್ಬುಟ್ಟು ಕುದುರೆ ಹತ್ತಿ ತಟತಟತಟ ಅಂತ ಪಾಳು ಚಾವಡಿಗ ಬಂದ್‌ಬುಟ್ಟು ಸೇರ್ಕೊಂಡ್ಳು. ಈ ಪಟ್ಟುದ್ ಕತ್ತಿಗೆ ಲಗ್ನ ಆಗೋಯ್ತು.

ಸರಿ ಹೀಗೆ ಒಂದಾರ್ ತಿಂಗ್ಳು ಮೂರ್ ತಿಂಗ್ಳು ಕಾಲ ನಡೀತು. 'ಇಲ್ಲಿ ನಾನ್ ಸೇರ್ಕೊಂಡೆ ಈ ಪದ್ಮಾವತಿ ಪಟ್ಣದ್ ರಾಜುನ್ ಮಗ್ನ ಮದೆವ ಆಗಿ ನನ್ ಪಟ್ಟುದ್ ಕತ್ತಿಗ್ ಮದ್ವೆ ಆಯ್ತು ನಾನು ನಂಬಿ ಬಂದ ರಾಜನ್ ಮಗ್ನ ಅಡ್ರಸ್ಸೆ ಇಲ್ದಂಗಾಯ್ತು. ಈತನನ್ನ ಪತ್ತೆ ಮಾಡ್‌ಬೇಕಾದ್ರೆ ಯಾವ್ ತರ ಮಾಡಬೇಕು ? ನಾವು, ಸ್ತ್ರೀಯಾಗಿರತಕ್ಕಂತ ನಾವಿಬ್ರು ಅವುಳ್ ಪಾಡಿಗವ್ಳಿರ್ಲಿ ನನ ಪಾಡುಗ್ ನಾನಿರ್ತಿನಿ. ಒಂದ್ರೂಮೆಲಿರಬೇಕು. ಒಂದ್ ಮಾಡಿವೊಳಗಿರಬೇಕು. ಮಾಡಿವೊ ಹತ್ತಾರ್ ರೂಮಿರ್ತವೆ. ಒಂದ್ ರೂಮೆಲಿ ಅವುಳ್ ಸ್ನಾನ ಮಡಿ, ಮಲ್ಗೋದು ಒಂದ್ ರೂಮೆಲಾಗ್ಲಿ ನನ್ ಸ್ನಾನ, ಮಡಿ, ಊಟಯಲ್ಲ ಒಂದ್ ರೂಮೆಲಾಗ್ಲಿ. ನಾನೊಂದ್‌ರೂಮೆಲ್ ಮಲ್ಗೋದು

ಅವ್ನೊಂದು ರೂಮೆಲ್ ಮಲಿಕ್ಕೊಳ್ಳೋದು. ಈತರ ಮಾಡಬೇಕು' ಅಂತ ದೊರೆಗೆ ಕಾಗದ ಬರುದ್ಲು.

"ನಾನು ನಿನ್ ಮಗ್ಳುನ ಲಗ್ನ ಆಗಿ ಮೂರು ತಿಂಗಳು ಕಾಲ ಆಯ್ತು. ನಾನು, ನಿನ್ನ ಮಗ್ಳು ಜೊತೆಯಾಗಿ ಸೇರಬೇಕು. ಆದ್ರೆ ಊರ ಮುಂಬಾಗ್ಲಲಿ ಏಳಂತಸ್ತಿ ಮಾಡಿ ಕಟ್ಸಿ ಆ ಮಾಡಿಗೆ ನಮುಗ್ ಬೇಕಾದ್ ಸಾಮಾಗ್ರಿನೆಲ್ಲ ತಂದಾಕ್‌ಬೇಕು. ಸುಖ ಸಂತೋಷದಿಂದ ನಿನ್ ಮಗ್ಳು ನಾವು ರಾಜ್‌ಬಾರ ಮಾಡಬೇಕು. ದೇಸನೆಲ್ಲ ಚಂಚರಿಸಬೇಕು. ಯಾವ್ ಬಡರೈತ್ರು, ಕಷ್ಟ ಸುಕನೆಲ್ಲ ವಿಚಾರಿಸ್‌ಬೇಕು. ನಿವಾರಣ ಮಾಡಬೇಕು, ಅದಕ್ಕಾಗಿ ಒಂದು ಮಾಡಿ ಕಟ್ಟಿಸ್‌ಕೊಡಬೇಕು" ಅಂತ.

ಆಗ ಎಂಟೇ ದಿನುಕ್ಕೆ ಆ ಪದ್ಮಾವತಿ ಪಟ್ಣುದ್ ದೊರೆ ಏಳಂತಸ್ತಿ ಮಾಡ್ ತಯಾರ್ ಮಾಡಿಸುದ್ದೆ ಅವುರ್ಗೆ ತಾನ, ಮಡಿಗೆ ದಾದಿರು, ಅಡಿಗೆ ಮಾಡಕ್ಕೆ ದಾದಿರು, ಮುತ್ತು ರತ್ನುದುವ್ವಾಲೆ ತೂಗುಕ್ಕೆ ದಾದಿರು, ನಾಕ್‌ಮೂಲೆಗು ಉವ್ವಾಲೆ, ನಂದಾದೀವಿಗೆ ಏನೇನ್ ಬೇಕೋ ಆ ಸಾಮಾನೆಲ್ಲ ಆ ಅರಮನೆವೊಳ್ಗೆ ತಯಾರ್ ಮಾಡ್‌ಬುಟ್ಟ. ಎಲ್ಲ ತಕೊಂಡೋಗಿ ಸೇರಿಸ್‌ಬುಟ್ಟ. ಈ ದೊರೆ ಮಗ ಕುದ್ರೆ ಮ್ಯಾಲೆ ಕೂತ್ಕೊಂಡು ಕುದುರೆ ಒಡಕೊಂಡು, ಅವುರ್ ಮನೆಗೆ ಬೇಕಾದಂತ ಚಪ್ರ ಹಾಕ್ಸಿ, ಸಾದು ಸತ್ಪುರುಸುರ್ಗೆ ಕರ್ಸಿ ಆ ಮನೆಗೆ ಬೇಕಾದಂತ ನಾಮಕರಣ ಮಾಡ್ಸಿ, ಸರಿ ಕುಂಟ್ರುಗೆ ಕೋಲ್ ಕೊಟ್ಟು, ಯಳುವುರ್ಗೆ ದೊಣ್ಣೆ ಕೊಟ್ಟು, ಕಣ್‌ಕಾಣ್ದ ಕುರುಡರ್ಗೆ ದಾನ ಕೊಟ್ಟು ಆ ಅರಮನೆ ಸೇರುದ್ರು. ಯಾರೂ ? ದೊರೆ ಮಗಳು ಈ ಪಾಳು ಚಾವಡಿಲಿದ್ಲಲ್ಲ ಆಮ್‌ಸಂಕ್ರಾಯುನ್ ಮಗ್ಳು ಗಂಡುಡ್ಗೆಲಿದ್ದೋಳು.

ಇವ್ನು ಏಳುದ್ಲು ಈ ಹುಡ್ಗುನ್ ರೂಪ್ದೆಲಿರೋಳು 'ಆದರೆ ಎಣ್ಣೆ ನನ್ನ ವ್ರತದೇಲಿ ಈಗ ನಾಕ್‌ತಿಂಗ್ಳು ಕಳೆದಿದೆ. ಇನ್ನೊಂದು ತಿಂಗ್ಳು ಮಾತ್ರ ಉಳಿದಿದೆ. ಆ ಒಂದು ತಿಂಗ್ಳು ಕಳೆದೋದ್ರೆ ನಾನು ನೀನು ಜೋಡಿ. ಅಲ್ಲಿತನಕ ನಂಗು ನಿಂಗು ಎರುಡ್‌ಮೊಳ ಎಡೆ ಇರಬೇಕು. ನಿನ್ ಬಟ್ಟೆ ನನುಗ್ ಸೋಕ್‌ಬಾರ್ದು. ಮಾತ್ ಬೇಕಾದ್ರೆ ಯಂಗಾದ್ರು ಆಡ್ಕೊ' ಇಂಗ್ನ ಮಾಡ್‌ಬುಟ್ಳು. ಒಂದ್ ದಿನ ಸ್ನಾನ ಮಡಿ ಮಾಡ್ಕೊಂಡು, ಊಟ ಮಾಡ್ಕೊಂಡು, ಕಾಲುಗ್ ಬೂಡ್ಸಾಕೊಂಡು, ಚತ್ರಿ ಕೈಲಿಡ್ಕೊಂಡು 'ನಿಮ್ ಪಟ್ಣನ ನಾನು ಬಂತಾವಿಂದ ಚಂಚರಿಸಿಲ್ಲ. ಇವತ್ತು ನಿಮ್ಮ ಪಟ್ಣಾನೆಲ್ಲ ಚಂಚರಿಸ್ಕೊಂಡು ಬರುವ ನಡಿ ಎಣ್ಣೆ' ಅಂದ್‌ಬುಟ್ಟು ಕಡುದ್ರು.

ತಮಾಸೆಯಾಗಿ ನಗ್ನಾಡ್ಕೊಂಡು ಹೋಯ್ತಾ ಅವ್ರೆ. ಆ ಪಟ್ಣದ್ ಜನ ಏನಂತಾರೆ 'ಆಹಾ ಏನಪ್ಪ ದೊರೆ ಅಳಿಯಾನು, ದೊರೆ ಮಗ್ಳು ಬರ್‍ತಾರೆ. ನಮ್ಮ ಪಟ್ಣುವೆಲ್ಲ ದಿಗ್ಮಯವಾಗಿ ಉರಿತುದಲ್ಲ? ಯಾವ್ ರಾಜುನ್‌ಮಗ, ಯಾವ್ ದೇವ ಕನ್ನಿಕೆ ಒಟ್ಟೆಲುಟ್ಟಿದ ಮಗ ಇವ್ನು? ಇಂಥ ರೂಪಸ್ತ, ದೊರೆ ಮಗ್ಳು ವೇಗ್ರ ಕೊಂದೋನ್ನ ಮದ್ವಾಯ್ತಿನಿ ಅಂತ ಬೋರ್ಡಾಕ್ಸುದುನು ಒಳ್ಳೆ ಸಾರ್ಥಕವಾದ ದೊರೆ ಮಗುನ್ನ ಪಡುದ್ಲು. ಇಲ್ಲಿಂದೀಚೆಗಾದ್ರು ನಮ್ ದೇಸ ಸುಖ ಸಂತೋಸ್‌ವಾಗ್ ನಡೀಲಿ ಅಂತೇಳಿ ಎಣ್ಣೆ ಅರಿಶಿಣ ಕುಂಕುಮ ಮುಡಿಸೋದು ಮಕ್ಕೆ, ವುವ್ವ ತುರುಬ್‌ಗಿಕ್ಕೋದು, ಇವುನ್ಗೆ

ಬೇಕಾದಂತ ಹೂಮಾಲೆ ಹಾಕ್ತಾ ಅವ್ರೆ. ಇಂಗೆ ನೋಡ್ಕೊಂಡ್ ನೋಡ್ಕೊಂಡು ಎಲ್ಲಿಗೋದ ಈ ಪದ್ಮಾವತಿ ಹೂವಿನ ಸೂಳೆ ಅರಮನೆ ತಾಕೋಗಿ ನಿಂತ್ಕೊಂಡ್ರು.

'ಏ ಎಣ್ಣೆ ಸ್ವಲ್ಪ ನಿಂತ್ಕೊ ಇಲ್ಲಿ. ಈ ಕುಸುಮ ನೋಡುದ್ರೆ ಬಾಳ ಸಂತೋಸ ನನ್ಗೆ.' ಅವುಳ್ಗರಿವಾಗೋಯ್ತು, ಮೊದಮೊದಲೇ ದೃಷ್ಟಿ ಬಿದ್ದೋಯ್ತು. ಈ ಮೊಳ್ ಮೊಳ್‌ದುದ್ದ ಕೊಂಬುನ್ ಟಗ್ರು ಕಟ್ಟಿದ್ದಲ್ಲ, ಕಣ್ಣಲ್ ನೀರ ಸುರಿಸೋದು. ಕಣ್ಣಲ್ಲ ಗೀಜ್‌ಗಟ್ಟಿದ್ದಾಗ್ಲೆ ಅರಿವಾಗೊಯ್ತು. ಇದೆ ನಮ್ ದೊರೆಮಗ, ಇವ್ನು ಇದೇ ರೂಪೇಲಿ ಜೀವಜಂತುಗೊಳ್ನೆಲ್ಲ ಕಟ್ಟವಳೆ ಅನ್ನೋದು ಅರಿವಾಗೊಯ್ತು. ಪತಿವ್ರತಾಸಿರೋಮಣಿ ಅಲ್ವೆ ಅವ್ಳು. ವೂವಾಡ್‌ಗಿತ್ತಿನ 'ಹೂವಾಡಗಿತ್ತಿ ಒಂದು ಜಾತಿ ಪುಷ್ಪ ಎಷ್ಟಾಗುತ್ತೆ ?' ಅಂದ್ಲು. 'ಸ್ವಾಮಿ ಎಲ್ಲೊ ನಿಂತ್ಕೊಂಡು ವೂವುನ್ ಬೆಲೆ ಕೇಳುದ್ರೆ ಏನಾಗುತ್ತೆ ಸ್ವಾಮಿ? ಕುಸುಮ ಎತ್ತಿ ಮೂಸಿ ನೋಡಿ. ಆದ್ರೆ ಗಮಲ ನೋಡಿ ಯಾಪಾರ ಮಾಡುದ್ರೆ ಸರಿ. ಎಲ್ಲೊ ನಿಂತ್ಕೊಂಡ್ ಕೇಳುದ್ರೆ ಏನಾಯ್ತುದೆ ಸ್ವಾಮಿ ? ಅಂದ್ಲು. 'ಎಲಾ ಚಂಬೇಲ್ ಮುಂಡೆ ನಿನುಗ್ ಮಾಡ್‌ಕೊಡ್ತೀನಿ' ಅನ್ಕೊಂಡು ಮನುಸ್ನಲಿ 'ಇಲ್ಲಿ ಕಟ್ಟಾಕಿರೋ ಜೀವ ಜಂತುಯಲ್ಲ ಎಲ್ಲಿಂದ ಬಂದೊ, ಏನಿದೆಲ್ಲಾ' ಅಂದ್ಲು.

'ಅಯ್ಯೋವ್ ಯಾಸೀಮೆ ದೊರೆ ಮಗ್ನಯ್ಯ ನೀನು ? ಈ ಜೀವ ಜಂತು ಕಟ್ಕೊಂಡು ನಿನ್ಗೇನಾಗಬೇಕು, ನಿನುಗ್ ಬೇಕಾಗಿರೋದು ವುವ್ವ ! ವುವ್ವ ಮೂಸ್‌ನೋಡು, ಯಾಪಾರ ಮಾಡು ಬೇರೆ ಮಾತಾಡ್‌ಬ್ಯಾಡ' ಅಂದ್ಲು ಯಾರೂ ಈ ಹುವಾಡ್ ಸೂಳೆ. 'ಏಯ್ ಚಂಬಾಲಿ ಅಲ್ಲಕಟ್ಟಾಕಿರೋ ಆ ಟಗರು, ಅದುನ್ನ ಜಲ್ದಿ ಮನುಷ್ಯನ್ ಮಾಡ್ದ ಸಮ. ಇಲ್ಲದಿದ್ರೆ ಈ ಕ್ಷಣಾನೆ ದೂತ್ರುನ ಕರೆಸಿ ನಾವು ಏಳ್‌ಪಟ್ಟೆ ತಗ್ದು, ಏಳೂರೆಲ್ಲೆ ಮೆರುಣ್ಗೆ ಮಾಡ್ಸಿ, ನಿನ್ನುನ್ನ ಸಿಗುದ್ ತೋರಣ ಕಟ್ತೀವಿ ನೋಡು ಲೌಡ್ ಮುಂಡೆ, ಯಾರು ಅಂತ ತಿಳ್ಕಿದ್ದೀಯೆ' ಅಂದ್ಲು.

ದೊರೆ ಮಗ್ಳು, ದೊರೆ ಆಗ್ನೆ, ದೊರೆ ಅಳಿಯ ಬೇರೆ. ಮಾತಾಡುದ್ರೆ ಕೆಲಸ ಮುಗ್ದೋಯ್ತು. ಸರಿ ಬೋರ್ಡ್ಸ್ತುದ್ದೆ ಮುಂಚಿರೆ ಮಡುಗ್ದ ದೊರೆ ಮಗ. ಭಯ ಬಂದ್ ಬುಡ್ತು ಈ ವೂವಾಡಗಿತ್ತಿ ಸೂಳೆಗೆ. ಅರಮನೆಗೋಗಿದ್ದೆ ಅರಮನೇಲಿ ಬೇರೆ ಇತ್ತು ನೂರೊಂದು ಜಾತಿ ಪುಸ್ಪ ಅವ್ ತಂದ್ ಮೂಸುದ್ರೆ ಮಾತ್ರ ಮನುಸ್‌ರೂಪ ಬತ್ತುದೆ ಇಲ್ಲಿರೋ ಯಾವ್ ಯಾವ್ ಜಾತಿ ಪುಷ್ಪಾನೋ ಮೂಸುದ್ರೆ ಜಂತು ಆಯ್ತವೆ. ಅವಾಗ ಅರಮನೆಗೋಗಿ ತಂದು ಆ ಹುವ್ವನ ಮೂಸಿಸ್ತಾರೆ. ಅನ್ನ ಇಲ್ಲ ಆರ ಇಲ್ಲ ಅಂಗೆದಣ್ಕೋಗ್‌ಬುಟ್ಟಿದ್ದಾನೆ ಈ ಚಿಣ್ಣಾಳ. ಉಸ್ ಅಂತ ಅಂಗೆ ಮಕಾಡ ಬಿದ್ದೋದ.

ಆ ಕೂಡ್ಲೆ ಬಾಚಿ ಅನಾಮತ ಎತ್ತಿ ತೊಡೆಮ್ಯಾಲ್ ಮಲ್ಗಿಸ್‌ಕೊಂಡ್ಳು. ಓಟ್ಲಿಂದ ನೀರ್ ತರಿಸಿ ಎದೆ ಬಾಯಿಗ್ ತಟ್ಟಿ ಟೀ ತರ್‍ಸಿ ಕುಡಿಸುದ್ರು. ಆಗ ಅವ್ನ ಊಸ್‌ನೆದ್ ಕುಂತ್ಕೊಂಡ. ಏನ್ ಮಾಡ್ಬುಟ್ಟ 'ನೋಡಿಲ್ಲಿರತಕ್ಕಂತ ಜೀವ ಜಂತುನೆಲ್ಲ ಮನುಸ್ರು ಮಾಡ್ದ ಸಮ, ಇಲ್ದೆ ಇದ್ರೆ ಕ್ಷಣಮಾತ್ರುದಲಿ ನಿನ್ ಪ್ರಾಣತ್ಯಾಗ ಮಾಡ್‌ಬುಡ್ತೀನಿ' ಅಂತ ಕುಂತ್ಕೊಂಡ್ಳು. ಅವಾಗೆಲ್ಲಾ ಕುಸ್ಮ ಮೂಸ್ಸಿ ಸಾವ್ಕಾರ್ರು ಮಕ್ಳು, ಬಡರೈತ್ರು, ಅಲ್ಲಕ್ ಬಾರ್ದೋರು, ಏನೇನ್ಕು ಬಾರ್ದೆ ಇರೋರು ಎಲ್ಲಾರ್‍ನು ಮನುಸ್ರು

ಮಾಡ್‌ಬುಟ್ಟು. ಇವುಳ್ಗೆ ನೆನಿಬಾರ್ದೊನ್ನ ಕರೆಸಿ ಮೂರ್‌ಪಟ್ಟೆ ತೆಗ್ಸಿ ಕತ್ತೆ ತರಿಸಿ ಮೆರುಣ್ಗೆ ಮಾಡ್ಸಿ ಊರ್ ಬಾಕ್ಲುಗೆ ಸಿಗ್ದು ತೋರಣ ಕಟ್ಟಿಸ್‌ಬುಟ್ಟು. ಆ ಹೂಗೊಳ್ನೆಲ್ಲ ಬೆಂಕಿ ಹಾಕಿ ಸುಟ್ಟಿ ಕಾಸ್ತಕ ಮಾಡ್ಸಿ ಅವಾಗ್ಲೆ ಚಿಣ್ಣಾಳ ದೊರೆ ಮಗುನ್ನ ಮಧ್ಯ ನಿಲ್ಲುಸ್ಕೊಂಡು ಈ ಕಡೆ ಈ ಎಣ್ಗ ಹೇಳ್ದ. ಯಾವೆಣ್ಗೇ ? ಪದ್ಮಾವತಿ ರಾಜುನ್ ಮಗುಳ್ಗೆ 'ಇಡ್ಕೋ ಕೈಯ' ಅಂತ. ಅವ್ನು ಬಲುಕ್ಕೆ ಇಡ್ಕೊಂಡ್ಳು. ಇವ್ನು ಎಡಗೈ ಇಡ್ಕೊಂಡು ಆವಾಗ ಪಟ್ಣುವಾದ್ ಪಟ್ಣುವೆಲ್ಲ ಚಂಚರಿಸಿ ಆ ಏಳಂತಸ್ತಿನ್ ಮಾಡಿಗ್ ಬಂದ್ರು.

ಆ ಮಾಡಿಲಿ ಅವುನ್ಗೆ ಬೇಕಾದಂಗೆ ಸ್ಥಾನ ಮಾಡ್ಸಿ, ಮಡಿ ಬಟ್ಟೆ ಕೊಟ್ಟು, ಬಂದ ಅತ್ತಾರ್ ದಿಸುದ್ ಕಾಲ ಚಂದಾಗ್ ಪೋಷಣೆ ಮಾಡುದ್ಲು ಈ ವಿದ ಅಂತಕ್ಕಂತ ರಾಣಿ. ಇವುಳ್ಗೆ 'ಇದೇನು ಈತರ ಮಾಡ್ತಾನಲ್ಲ ! ಈ ದೊರೆ ಮಗ. ಯಾರೋ ದೊರೆ ಮಗ ಏನೋ ಟಗರು ಮಾಡಿ ಕಟ್ಟಿದ್ದುನ್ನ ಈ ಸೂಳೆ ಹುವಾಡಗಿತ್ತಿನೆಲ್ಲ ಸಂಹಾರ ಮಾಡ್ದ. ಜೀವ ಜಂತುಗೊಳ್ನಲ್ಲ ಬದ್ಕಿಸ್ದ ! ಈ ದೊರೆ ಮಗುನ್ನ ನನ್‌ಕೈ ಹಿಡಿಸ್ದ. ಅವ್ನು ಕೈ ಇಡ್ಕೊಂಡ್ರ. ಇನ್ನೂ ಡ್ರೆಸ್ ಬಿಚ್ಚಾಕಿಲ್ಲ ಅವ್ನು. ಧರಿಸಿರೋ ಗಂಡು ಡ್ರೆಸ್ಸಲೆ ಅವ್ಳೆ.'

ಪದ್ಮಾವತಿ ಸೂಳೆ ಪಟ್ಣುದ್ ದೊರೆ ಮಗುಳ್ಗೆ ಅನುಮಾನ. ಸರಿ ಯಲ್ಲ ಆಯ್ತು. ಒಂದದಿನ್ನೈದು ದಿವಸ ಆಗೋ ಅಷ್ಟ್ರಲಿ ಚಂದಾಗಿ ಇವುನ್ಗೆ ಪೋಷಣೆ ಮಾಡುದ್ಲು. ಕುಂತ್ಕೊಂಡು ವುವ್ವಾಲೆ ಮ್ಯಾಲೆ ಹಿಂದೆ ಪೋಟೋ ಇಡ್ಡಿದ್ರಲ್ಲ ಅತ್ತೆ ಮಾವಯಲ್ಲ ಇವುರ್ ತಾಯಿ, ತಂದೆ ಹಿಂದೆ ಇವ್ಳೆನೇನ್ ಕಷ್ಟ ಮಾಡುದ್ಲು ಇವೆಲ್ಲ ನಕ್ಲೆತ್ಕೊಂಡು ಎಲ್ಲ ಬರ್ಕೊಂಡು ಬುಟ್ಟಿದ್ಲು. ಹೋಗಿ ಸ್ನಾನ ಮಾಡ್ಕೊಂಡು, ಧರಿಸಾಕ್ಕೊಂಡು ಗಂಡ್ ದರ್ಸೆಲ್ಲ ಬಿಚ್ಚಾಕಿ ಅವುಳ್ ತಂದೆ ತಾಯಿ ಮನೆಲುಟ್ಟಿದ್ದಲ್ಲ ಆಭರಣ, ಮುತ್ತು, ರತ್ನ, ಬಂಗಾರಾನೆ ಸೀರೆಗೆ ಅಂಚು ಒಲಿಸಿದ್ರಲ್ಲ ಆ ಸೀರೆ ಧರಿಸ್ಕೊಂಡು ಪಾಲ್ಕಿ-ಪಲ್ಲಕ್ಕಿ, ಕಾಳಾರೋಟು ವಾದ್ಯ ತಕ್ಕೊಂಡು ಮೇಳ ತಕ್ಕೊಂಡು ಬೇಕಾದಂತ ಮುತ್ತು ರತ್ನದ ಆರತಿ ತಕ್ಕೊಂಡು ಎಡಗಡೆ ಪದ್ಮಾವತಿ ಸೂಳೆ ಪಟ್ಣುದ್‌ರಾಜುನ್ ಮಗ್ಳು, ಬಲಗಡೆ ವಿದ, ಮಧ್ಯ ಚಿಣ್ಣಾಳ. ವಾದ್ಯ ಸಹಿತವಾಗಿ ಹೋಗ್ತಾ ಇದ್ದಾರೆ ರಾಜುನ್ ತಾಕೆ. ಕರ್ಕೊಂಡ್ಹೋದ್ಲು. ಈ ರಾಜ ಹೂವಾಲೆ ಮ್ಯಾಲೆ ಕುಂತಿದ್ದ. ಸರಣಾಗತಳಾದ್ಲು ವಿದ.

"ಆದ್ರೆ ತಂದೆ, ನೀವ್ ತಂದೆ. ನಾನು ಮಗ್ಳು. ಯಾಕೆ ಅಂದ್ರೆ ಹೂವಾಡಗಿತ್ತಿ ಸೂಳೆ ಅಕ್ಕಿ ಬ್ಯಾಳೆ ತರುಕ್ಕೆ ಅಂತ ಕಳಿಸಿದ್ ನಮ್ಮ ದೊರೆ ಮಗುನ್ನ ಕುಸುಮ ಮೂಸಿಸಿ ಬಾರಿ ಟಗರು ಮಾಡಿ ಗಾಜಿನ ಕಂಬಕ್ಕೆ ಕಟ್ಟುಬಿಟ್ಟಿದ್ಲು. ಅದ್ರು ದೆಸೆಯಿಂದ ನಾನು ಆ ಚಾವುಡಿವೊಳ್ಗೆ ಈ ಎಣ್ ದಿರ್ಸೆಲಿರೋದು ಸರಿಯಲ್ಲ ಅಂದ್‌ಬುಟ್ಟು ನನ್ನ ಗಂಡನ ಆಭರಣ ಪೀತಾಂಬರವನ್ನ ಧರಿಸ್ಕೊಂಡು ನಾನು ಗಂಡು ರೂಪೆಲಿದ್ದೆ. ಇದುಕ್ಕಾಗಿ ಯೇಗ್ರ ಸಾಯಿಸ್ದೋಳು ನಾನೇ. ಈ ಪಟ್ಣುದ್ ಕತ್ತಿಗೆ ನಿಮ್ಮಗ್ಳು ಕೊಟ್ಟಿ ಲಗ್ನ ಮಾಡಿದ್ದೀರಿ. ತಿರ್ಗ ನೀವು ಸಕ್ತಿ ಸಾಮರ್ಥ್ಯಇದ್ರೆ ನನ್ ಗಂಡುನ್ಗೆ ಲಗ್ನ ಮಾಡ್ಬೋದು. ರಾಜ್‌ಪಟ್ಟಾಬಿಷೇಕ ಮಾಡ್ಬೋದು. ನಾನು ನಿನ್ ಮಗ್ಳೆನೆ" ಅಂತ ಸರಣಾಗತಳಾದ್ಲು.

ಈ ಪುಸ್ತಕ ಎತ್ತಿ ಕೊಟ್ಳು. ಈ ದೊರೆಗೆ ಬಾಳ ಸಂತೋಷ ಆಯ್ತು. ತಕ್ಷಣಾನೆ ಪಟ್ಣ ತಾರ್ಸಿ.

ಪಟ್ನ ಗುಡಿಸಿ, ಆಕಾಶ ಚಪ್ರ ಮಾಡಿ, ಭೂಮಿನ ಹಸ ಜಗುಲಿ ಮಾಡಿ ಬೇಕಾದಂತ ಮುತ್ತು ರತ್ನ ಸುಂಗಾರ ಮಾಡ್ಸಿ ಕುಂಟ್ರುಗೆ ಕೋಲ್‌ಕೊಟ್ಟು ಮುತ್ತುರತ್ನ ಕೊಟ್ಟು ದಾನಕೊಟ್ಟು ಚಿಣ್ಣಾಳುನ್ಗೆ ಮದ್ವೆ ಮಾಡುದ್ರು. ಈಡೀ ರಾಜ್‌ಬಾರನೆ ಇವ್ರುನ್ಗೆ ವಹಿಸ್‌ಬುಟ್ರು. ರಾಜ್‌ಬಾರ ಮಾಡ್ತಿದ್ದಾನೆ ಚಿಣ್ಣಾಳ. ಈ ವಿದ ಎಂಬತಕ್ಕಂತ ಎಣ್ಣೇನ್ ಮಾಡ್ತಿದ್ದಾಳೆ ? ಅಂದ್ರೆ ಮಾಡಿ ಮ್ಯಾಲೆ ನಿಂತ್ಕೊಂಡು, ಏಳ್ ಮಾರುದ್ದ ಮಂಡೇನ ಸಿಕ್ಕೊಡಿತಿದ್ಲು ಬಾಚಣಿಗೆ ತಕ್ಕೊಂಡು. ಆ ಟೇಮಲಿ ಒಳ್ಳೆ ಅನ್ನೆರುಡ್‌ಗಂಟೆ ಟೇಮು. ಈಸ್ಪುರ ಏನ್ ಮಾಡ್ದ? ಕಾವಿ, ಕಮಂಡಲ ಧರಿಸ್‌ಕೊಂಡು ರುದ್ರಾಕ್ಷಿಹಾಕ್ಕೊಂಡು, ತಿರ್ಸೂಲ ಕೈಲಿಡ್ಕೊಂಡುದ್ದುನು ಒಂದ್ ಜೋಳಿಗೆ ಕಂಕ್ಳುಗಾಕ್ಕೊಂಡುದ್ದುನು ಬಂದ.

ಆ ಮಾಡಿ ತಾವ್‌ಬಂದ್ ನಿಂತ್ಕೊಂಡು 'ಕ್ವಾರಣ್ಯ ಬಿಕ್ಸಾ' ಅಂದ. ಈ ವಿದ ಮಂಡೆ ಸಿಕ್ಕೊಡಿತಿದ್ದೋಳು ಇಂಗ್ ಬಾಗಿನೋಡುದ್ಲು. 'ಓಹೋ ಯಾರೋ ಸಾದು ಸತ್ಪುರುಸ್ರು ಬಂದವರೆ, ಬಂಗಾರುದ್ ಮೊರ್ದಲಿ ಬಂಗಾರನೆ ತುಂಬ್ಕೊಡಬೇಕು ದಾನಾನ' ಅಂತ ದಡ ದಡ ದಡ ಬಂದುದ್ದುನು ಬಂಗಾರುದ್ ಮುತ್ಲೆತ್ಕೊಂಡು, ಬಂಗಾರ ತುಂಬ್ಕೊಂಡು 'ತಕ್ಕೊಳ್ಳಿ ಸ್ವಾಮಿ ದಾನ' ಅಂದ್ಲು. 'ಛೀ ಎಣ್ಣೆ ನಿನ್ ಮುತ್ತು, ರತ್ನ ಬಂಗಾರದ ದಾನ ಯಾರುಗ್‌ಬೇಕು ? ನನಗೇನ್‌ಬೇಕಾಗಿಲ್ಲ'. 'ಮತ್ತೇನ್ ಬೇಕ್ ಸ್ವಾಮಿ ?' 'ಮತ್ತೇನು ಬ್ಯಾಡ, ಆದ್ರೆ ಗೋರಾರಣ್ಯದಲಿ ನಿನ್ಗಂಡುನ್ ಸಿರಸಾಗ್ಣೆ ಮಾಡಿರ್ಲಿಲ್ವೆ?' 'ಹೌದು ಸ್ವಾಮಿ'. 'ಅಲ್ಲಿ ನಿನ್ ಮುತ್ತೈದೆ ಸ್ತಾನ ಉಳಿಸ್ಲಿಲ್ವೆ ?' 'ಹೌದು ಸ್ವಾಮಿ'. 'ನಾನ್ ಕೇಳುದ್ ಕೊಡ್ತೀಯ ಅಂತ ಕೇಳಿರಲಿಲ್ವೆ, ನೀನು ವಿದ ಅಂತಕ್ಕಂತ ಎಣ್ಣಲ್ವೆ, ಯೋಚಿಸಿ ನೋಡು' ಅಂದ.

"ಆದ್ರೆ ಸ್ವಾಮಿ ಗೋರಾರಣ್ಯದಲಿ ನೀವು ನನ್ನ ಮುತ್ತೈದೆತನ ಉಳಿಸುದ್ರಿ. ಇಂತಾದ್ ಕೊಡು ಅಂತ ಬಾಯ್‌ಬುಟ್ ಕೇಳ್ಲಿಲ್ಲ. ನಾನು ಬಾಯ್‌ಬುಟ್ಟೇಳ್ಲಿಲ್ಲ. ನಾನ್ ಕೇಳುದ್ ಕೊಟ್ಟೇಯ ಅಂದುದ್ದೆ ಆಯ್ತು ಕೊಡ್ತೀನಿ ಸ್ವಾಮಿ ಅಂತ ಏಳ್ಬುಟ್ಟೆ. ಈಗೇನಂತ ಕೊಡ್ಲಿ ನೀವು ಕೇಳ್ದಿರ" ಅಂತ ಯತೆ ಪಡ್ತಾ ಇದ್ದಾಳೆ. 'ಸರಿ ನೀವು ಇಂತಾದ್ದು ಕೊಡು ಅಂತ ಕೇಳ್ಲಿಲ್ಲ ಸ್ವಾಮಿ ಗುಟ್ಟೆಲೇಳ್ಬುಟ್ರಿ ಏನಂತ ಕೊಡ್ಲಿ ?' ಅಂದ್ಲು. 'ನೋಡೆಣ್ಣೆ ನಿನ್ ಬಂಗಾರ ಬ್ಯಾಡ, ನಿನ್ ಕೋಟಿ ಐಶ್ವರ್ಯ ಬ್ಯಾಡ, ಆದ್ರೆ ನಿನ್ನ ನಾನೇನ್ ಕೇಳ್ತಿನಿ ಅಂದ್ರೆ ನಿನ್ ಗಂಡನನ್ನ ಅವುನ್ ಜೀವುದ್ ನೆಲೆ ಎಲ್ಲದೆ ಅಂತ ಕೇಳ್ಕೊಂಡು ಒಂದ್ ಮಾತು ನನ್ಗೆ ಏಳ್ಬೇಕು' ಅಂದ.

'ಆಗ್ಲಿ ಸ್ವಾಮಿ ಕೇಳ್ತಿನಿ' 'ನಾನು ನಾಳೆ ಇಲ್ಲ ನಾಳಿದ್ದು ಬತ್ತೀನಿ. ನಿನ್ ಗಂಡುನ್ ಜೀವುದ್ ನೆಲೆ ಕೇಳ್ಕೊಂಡು, ಇಂತ ತಾವದೆ ಅಂತ ಹೇಳ್ತಾನೆ, ಅದ್ನ ನೀನು ನನಗೇಳ್‌ಬೇಕು' ಅಂತೇಳಿ 'ಜೈ ಪರಮೇಸ್ಪುರ' ಅಂತೇಳಿ ಮಾಯ್ವಾದ.

ಸಾಯಂಕಾಲ ಆಯ್ತು. ಮಂತ್ರಿಮಗ ಅವುನ್ ಮನ್ಗೊಂಟೋದ. ದೊರೆ ಇವುರ್ ಮನುಗ್ ಬಂದ. ಬೇಕಾದಂತ ಚಿನ್ನುದ್ ತಪ್ಲೆಲಿ ಬಂಗಾರದಂತ ನೀರ್ ತಂದು ಕಾಲು ಕೈ ತೊಳ್ಕೊಂಡ. ಅರಿಸಿಣ, ಕುಂಕುಮ, ಗಂಧಯಲ್ಲ ಇಕ್ಕಿ ಪಾದುಕ್ಕೆ ಕಾಯೊಡ್ಡಿ ಪೂಜೆ ಮಾಡುದ್ರು. ವಾರೋರ್‌ಗಿತ್ತೀರು ಸರಣಾಗತರಾದ್ರು. ತಮ್ಮರಮನೆಗೆ ಕರ್ಕೊ ಬಂದು ಊಟ ಇಕ್ಕಿ, ವುವ್ವಾಲೆ ಆಡ್ಕೊಂಡು ಸರಸ, ಲಲ್ಲೆಯಲ್ಲ ನಡೀತು. ಮಲುಕ್ಕೊಳ್‌ಬೇಕಾದ್ರೆ ಅವ್ನು ಅವುಳ್ ರೂಮಲಿ ಇವ್ನು ಇವುಳ್ ರೂಮಲಿ

ಮಲುಕ್ಕೊಬೇಕು. ದೊರೆ ಮಗುನ್ಗೆ ಯಾರ್ ಮ್ಯಾಲೆ ಪ್ರೇಮ ಬತ್ತುದೆ ಅವಾಗ ಅವ್ಳತ್ರ ಓಗೋದು ನಡಿತಿತ್ತು. ದೊರೆ ಒಬ್ನೆ ಮಲ್ಗಿರ್ತಾನೆ. ವಿದ ಹೋದ್ಲು ಚಿಣ್ಣಾಳ ಮಲಗಿರೋ ಸ್ತಾನುಕ್ಕೆ. 'ಸ್ವಾಮಿ' 'ಏನೆಣ್ಣೆ ವಿದ'? 'ನಾನು ಒಂದ್ ಕೋರಿಕೆ ನಿಮ್ಮತ್ರ ಬೇಡ್ಕೊತಿನಿ.' 'ಏನ್ ಸಮಾಚಾರ ? ನೀನ್ ಕೇಳಿದ್ ವಿಸ್ಯಾನ ನಮ್ ತಾಯಿ ತಂದೆ ಪಾದ ಸಾಕ್ಷಿಯಾಗುನು ನಾನೇಳುಕೆ ತಯಾರಿದ್ದೀನಿ. ನಿನ್ನಲ್ಲಿ ಸುಳ್ಳು ತಟವಟ ಇಲ್ಲ. ನನ್ನಲ್ಲಿ ಮರ್ಮ ಇಲ್ಲದ ರೀತಿಲಿ ಕೇಳ್ಕೊಬುಡೆಣ್ಣೆ'.

'ಆದ್ರೆ ಸ್ವಾಮಿ ನಿನ್ನ ಜೀವುದ್ ನೆಲೆ ಎಲ್ಲದೆ ಅಂತ ಹೇಳ್ಬೇಕು'. 'ಬೇರೆ ಯಾವ್ದಾದ್ರು ಕೇಳು, ಕೊಡುಕ್ ತಯಾರು. ಆದ್ರೆ ಅದೊಂದು ವಿಚಾರ ಮಾತ್ರ ಕೇಳಬ್ಯಾಡ ಹೋಗು' ಅಂತ ಏಳ್ಬುಟ್ಟ. ಮಂಚದಿಂದ ಕೆಳಗ್‌ಬಿದ್ಬುಟ್ಲು. ಬೇಜಾರ್ ಮಾಡ್ಕೊಂಡು ಹೋಗಿ ರೂಮೆಲ್ ಮಲುಗ್ಬುಟ್ಲು. ಇವ್ನು ಮಲಿಕೊಂಡ. ಬೆಳ್ಗಾಯ್ತು. ಮಕ ತೊಳಿಲಿಲ್ಲ, ಸ್ನಾನ ಇಲ್ಲ, ಸಂದಾನ್‌ಗೊಳಿಲ್ಲ, ಬ್ಯಾರೆ ಬಟ್ಟೆಗೊಳ್ ಧರಿಸ್ಲಿಲ್ಲ. ಮಂತ್ರಿ ಕರ್ಕೊಂಡೋದ್ದೆ, ಅದೇ ಮಕ ದೇಸ ಸಂಚಾರಣೆ ಒಂಟೋದ, ಮಾರನೇ ದಿನುಕ್ಕೆ ಬರಬೇಕು ಪರಮೇಶ್ವರ. ಅದ್ರಂತೆ ಬಂದ.

'ಏನೆಣ್ಣೆ ಸಮಾಚಾರ ?' 'ಸ್ವಾಮಿ ನಾನು ಮರುತ್‌ಬುಟ್ಟೆ ಸ್ವಾಮಿ, ಏನು ಕೇಳ್ಲಿಲ್ಲ.' 'ಛೀ ಗಂಡ ಎಡ್ತಿರಿಬ್ರುಗುನು ಸಾಪ ಕೊಡ್ತಿನಿ. ನಾನೇಳುದ್ ಮಾತ್ಗೆ ಕೇಳೋ ಸಕ್ತಿ ಇಲ್ವೆ ನಿಮ್ಗೆ. ಸಾಪ ಕೊಡ್ತಿನಿ ಹಾಗೆ ಹೀಗೆ' ಅಂತ ಗುಡಿಕೊಂಡು ಒಂಟೋದ್ರು ಈಸ್ಪುರಸ್ವಾಮಿ.

ಸಾಯಂಕಾಲ ಗಂಡ ಬಂದ. ವಾರೋರಗಿತ್ತೀರಿಬ್ರು ಬಂದುದ್ದುನು ಪಾದಪೂಜೆ ಮಾಡುಕ್ಕೆ ಪನ್ನೀರೆಲಿ ತೊಳುದ್ರು. ಗಂಧ, ಬೇಕಾದಂಗೆ ಅರಿಸ್ನ, ಕುಂಕುಮ ಬಳುದ್ರು. ಹೂವ ಮುಡ್ಸುದ್ರು, ಕಾಯೊಡುದ್ರು. ಪೂಜೆ ಮಾಡಿ ಸರಣಾಗತರಾದ್ರು.ಸರಿ ಪದ್ಮಾವತಿ ಸೂಳೆ ರಾಜುನ್ ಮಗ್ಳು ಮುಂಚೆರೆ ಹೊಯ್ತಾಳೆ. ಇವ್ಳು ಇಂಚೆರೆ ಹೋಗ್ವಾಗ 'ಸ್ವಾಮಿ ನಾನ್ ಕೇಳುದ್ ಮಾತ್ನ ಹೇಳ್ಳಿಲ್ಲ. ನೀವು ವಿನಾಯ್ಸೊದಾದ್ರೆ ಈ ಕ್ಷಣದೆಲೆ ನಾಲ್ಗೆ ಇರ್ಕೊಂಡು ನಿಮ್ಮ ಪಾದುದ್‌ಮ್ಯಾಲೆ ಬಿದ್ದು ಪ್ರಾಣ ಬುಡ್ತೀನಿ' ಅಂತ ಅಡ್‌ಗಟ್ಕೊಂಡು ನಿಂತ್ಕೊಂಡ್ಳು.

'ಆದ್ರೆ ಎಣ್ಣೆ ಏನ್ ಕೇಳುದ್ರು ಆ ವಿಚಾರ ಕೇಳಬ್ಯಾಡ.' 'ಇಲ್ಲ ಸ್ವಾಮಿ ಏಳ್ಬೆಬೇಕು'. 'ಏಳ್ಬೆಬೇಕೆ ಎಣ್ಣೆ ?' 'ಏಳ್ಳೇಬೇಕು ಸ್ವಾಮಿ'. 'ಹೋಗು, ಅರಮನೆಗೋಗಿ ಪೂಜೆ ಸಾಮಾನ್ ತಕೊಬಾ.' ಹೋದ್ಲು ಅರಮನೆಗೆ. ಬಂಗಾರುದ್ ತಟ್ಟೆಲಿ ಒಂದ್ ಕಾಯಿಡಿಸ್ಕೊಂಡು ಹಣ್ಣಿಡಿಸ್‌ಕೊಂಡು, ಗಂಧುದ್‌ಕಡ್ಡಿ, ಅರಿಸಿಣ-ಕುಂಕುಮ ಇಡಿಸ್ಕೊಂಡು ಬಂದ್ಲು. 'ನಡೀ ಗಂಗಾಸ್ನಾನುಕ್ ನಡಿ' ಅಂದ. ಎಲ್ಲೊ ಆ ಕೆರೆ ತಾಕೆ ಆ ವೇಗ್ರ ಸಂಹರಿಸಿದ್ನಲ್ಲ ಆ ಕೆರೆ ತಾಕೋದ್ರು. ಏನ್ ಗಂಗಮ್ಮ ತುಂಬಿ ಉದ್ಮದದೆಲದೆ. ಅವ್ನು ಯಾಚೆರೆ ನಿಂತ್ಕೊಂಡ, ಅಂದ್ರೆ ಇದು ಏರಿ ಗಂಗಸ್ಥಾನ ಹಿಂದ್ಕಿದೆ. ಹಿಂದುಕ್ ಬೆನ್ ಮಾಡ್ಕೊಂಡ್ ನಿಂತ್ಕೊಂಡು 'ಮಾಡೆಣ್ಣೆ ಪೂಜೆಯ' ಅಂದ.

ಸರಿ ಇವ್ಳು ಮೂರ್ ಕಲ್ಲೊಡ್ಡುದ್ಲು. ಅರಿಸಿಣ-ಕುಂಕುಮ, ಪುಸ್ಮ ಮುಡಿಸುದ್ಲು. ಗಂಧುದ್ ಕಡ್ಡಿ ಅಚ್ಚಿ ಕಾಯೊಡಿಸ್ದ, ಕರ್ಪೂರ ಹಚ್ಚಿ ಗಂಗಾಭವಾನಿಗೆ ಸರಣಾಗತಳಾದ್ಲು. 'ಹಾಂ ಏನೆಣ್ಣೆ ಸಮಾಚಾರ ?' 'ನಿಮ್ ಜೀವುದ್ ನೆಲೆ ಹೇಳಿ'. 'ನನ್ ಜೀವುದ್ ನೆಲೆ? ಹೇಳ್‌ಬೇಕೋ?

'ಊಂಸ್ವಾಮಿ'. ಓಂದುಕ್ ಮುನ್ನಾಗಿ ನಿಂತವ್ನೆ. ಒಂದೆಜ್ಜೆ ಹಿಂದುಕ್ಕೋದ. ನೀರೆಲ್ಲಿಗ್ ಬತ್ತು ಅಂದ್ರೆ ಗಂಟ್ಲುಗೂಡಿತಾ ಅದೆ. 'ಏಳ್‌ಬೇಕೇನೆಣ್ಣೆ ನನ್ ಜೀವುದ್ ನೆಲೆನ ?' 'ಏಳ್ಬೇಕು ಸ್ವಾಮಿ'. ಬಲಗಾಲೆತ್ತಿ ಇನ್ನೊಂದೆಜ್ಜೆ ಓಂದುಕ್ ಮಡುಗ್ದ. ಮುಳಿಕೊಂಡ ! ಮುಳಿಕೊಳ್ವಾಗ ಹೇಳ್ದ, 'ಎಣ್ಣೆ ನಾನು ಈಸ್ಪುರನ ತಲೆಗೆ ತಲೆದಿಂಬು, ಬೆನ್ಗೆ ಒರುಗ್‌ದಿಂಬು ಮತ್ತು ತಲೆಗೆ ಏಳು ತಲೆ ಸರ್ಪ ಆಗಿದ್ದೀನಿ, ಇಷ್ಟೆ ನನ್ ಜೀವುದ್ ನೆಲೆ' ಅಂತೇಳಿ ಒಂಟೋದ ಈಸ್ಪುರನ್ ಹತ್ರುಕ್ಕೆ.

ಅಲ್ಲೋಗಿ ಏಳುತಲೆ ಸರ್ಪನಾಗೋದ. ತಲೆಗೆ ಎಲ್ಲಾರ ಕುಂತಿರ್‍ಲಿ ಇಂಗಾಡಬೇಕು. ಬೆನ್ನಿಗೆ ಒರಗುದಿಂಬಾದ, ತಲೆಗೆ ತಲೆದಿಂಬಾದ, ಈಸ್ಪುರನ್ ಬಳಿ ಸೇರ್‍ಕೊಂಡ. ಇವ್ನ ಆ ಪಟ್ಣುದೆಲಿರೋ ಜನ್ವೆಲ್ಲ ಕರಿಸ್‌ಬುಟ್ಟು ಹುಡ್ಕಕ್ಕೆ. ಆ ಕೆರೆ ಬದಿಯಲ್ಲ ಕಲ್ಡಾಕ್‌ಬುಟ್ರು. ಅವ್ನೆಣಾನು ಸಿಕ್ಕಿಲ್ಲ. ಅವುನ್ ಜಲ್ಮಾನು ಸಿಕ್ಲಿಲ್ಲ ! ಸೋಸಾಡ್‌ಬುಟ್ಟು ಅರಮನೆಗೆ ದುಃಖ ಮಾಡ್ಕೊಂಡೋದ್ರು.

ಸರಿಯಾಗಿ ಊಟ ಸ್ನಾನ ಇಲ್ಲ, ನಿದ್ರೆ ಇಲ್ಲ, ದುಃಖ ಮಾಡ್ತಾ ಅವ್ರೆ. ಇವ್ನ ಆನಂದವಾಗಿ ಈಸ್ಪುರ್‌ನತ್ರ ಸೇರ್‍ಕೊಂಡ. ಇಂಗೇ ಬೋದಿಸುದ್ ಕಾಲವಾಯ್ತು. ಏದ 'ನನ್ ಗಂಡ ನಾನ್ ಕೇಳುದ್ಕೆ ಈ ತರ ಏಳ್ಬುಟ್ಟು ಮಾಯವಾದ್ರಲ್ಲ. ಗಂಗಭವಾನಿಲಿ ಮುಳ್ಗೋಗಿದ್ರೆ ದೇಹ ಸಿಕ್‌ಬೇಕಲ್ಲ! ಅದು ಸಿಕ್ಕಿಲ್ಲ. ಇದು ಏನೋ ಸಾಪ್‌ದಿಂದ ಇದೆಲ್ಲ ಆಗಿರೋದು. ಈ ಸಾಪ ಇಮೋಚನೆ ಆಗ್ಲಿ' ಅಂದ್‌ಬುಟ್ಟುದ್ದೆನೆ ಕುಂಟ್ರು, ಕುರೂಪ್ರು, ಮುದುಕ್ರು, ಕಣ್ ಕಾಣ್ದೆ ಇರೋರು, ಕೈಲಿ ಕೆಲಸ ಆಗ್ದೆ ಇರೋರು-ಇವ್ರುನ್ಗೆಲ್ಲ ಬಂಗಾರುದ್ ಮುತ್ಲೆಲಿ ಬಂಗಾರನೇ ದಾನ ಕೊಡುಕ್ ಸುರುವಾದ್ಲು. ಬೋಡ್ರಾಕ್‌ಬುಟ್ಳು. 'ಯಾರೂ ಗತಿ ಇಲ್ಲದೋರು, ಅರಮನೆಗ್ ಬಂದು ಬಂಗಾರ ತಕ್ಕೊಂಡು ಸುಖದಿಂದ ಕಾಲ ಕಳಿಬೋದು' ಅಂತೇಳಿ ಬೋಡ್ರಾಕುಸ್‌ಬುಟ್ಳು. ಬೇಕಾದಂತೋರೆಲ್ಲ ಹೋಗಿ ಒಂದ್ ಸತಕೋಟಿ ಜನ ದಾನ ತಕೊಂಡೊಯ್ತಾ ಅವ್ರೆ. ಮುತ್ತು, ರತ್ನ, ಬಂಗಾರನೆ. ಇದೇನಾಗೋಯ್ತು. ದೇಸ ದೇಸಾನೆ 'ಇಂಗೆ ಪದ್ಮಾವತಿ ಪಟ್ಣುದ್ ಸೂಳೆ ರಾಜುನ್ ದೇಸ್ವಂತೆ, ಇಂಗೆ ದಾನ ಕೊಟ್ಟಾಳಂತೆ ಬಂಗಾರನ ಮುತ್ಲೆಲಿ ತುಂಬಿ. ಇದರಿಂದ ಬುಡುವ್ರು ಬಗ್ರು ಬೇಕಾದಷ್ಟು ಜನ ಕಾಲ ಕಳಿತಾ ಇದ್ದಾರಂತೆ' ಅಂತೇಳಿ ಪ್ರಸೂರ ಆಗೋಗ್‌ಬುಡ್ತು.

ಪ್ರಸೂರ ಆಗೋಗ್ ಬುಡುತ್ಲೆ ಯಾವ್ದೊ ಕಣ್‌ಕಾಣುದ್ ಮುದ್ಕಿ ತಮಿಳ್‌ನಾಡ್ ಕಡೆದು, ಆ ಮುದ್ಕಿಗೆ ಏಳ್‌ಜನ ಎಣ್ ಮಕ್ಳು. ಅವುಳ್ಗೆ ಈ ವರ್ತಮಾನ ಬಿದ್ದು ದಾನ ಇಸ್ಕೊಂಡು ಬರಬೇಕು ಅಂತ ಬತ್ತಾ ಇದ್ದಾಳೆ. ಅವ್ಳು ಬೆಟ್ಟ ಅತ್‌ಬೇಕು. ಬೆಟ್ಟ ಇಳಿಬೇಕು. ವೃದ್ಧಾಪ್ಯಕಾಲ. ಮುದ್ಕಿ ಬರಬೇಕಾದ್ರೆ ಸುತ್ತೂ ಬೆಟ್ಟ, ಇದೊಂದಗ್ಗು. ಆ ಹುಗ್ಗ್ ಬರೊತ್ಗೆ ಸಾಯಂಕಾಲ ಆಗ್‌ಬುಡ್ತು. ಕಣ್‌ಬ್ಯಾರೆ ಕಾಣ್ಸಲ್ದು. ಇನ್ನ ಮುಂದ್ಕೆ ಯಂಗೋದಾಳು ? ಆ ಮುದ್ಕಿ. ಅಗ್ಗಲಿ ಇಂತೆದೊಂದು ಆಲದಮರ. ಆ ಆಲುದ್ ಮರುಕ್ಕತ್ತುಬಟ್ಳು. ಮ್ಯಾಲ್ ಸೇರ್‍ಕೊಂಡು ತಾನುಟ್ಟಿರೊ ಸೀರೆನ ಅರಿದು ತುಂಡ್ ಮಾಡಿ ದೇಹ ಸೇರ್‍ಸಿ ಕಟ್‌ಬುಟ್ಳು. ಯಾಕೆ ? ನಿದ್‌ಗಿದ್ದೆ ಬಂದು ಕೇಳಕ್‌ಬಿದ್ದೋಗಿ ಪ್ರಾಣ ಬುಟ್ ಬುಟ್ರೆ ನನ್ ಮಕ್ಳು ಗತಿಯೇನು ? ಅಂತೇಳಿ ಮರುಕ್ ಕಟ್ಬುಟ್ಟು ಕುಂತಿದ್ದಾಳೆ.

ಅಲ್ಲಿ ಅನ್ನೆರಡೆತ್ತಿನ ಕಳದ ಬಾರಿ ಒಂದ್ ಕಳ. ಆ ಅಗ್ಗಲಿದ್ ಕಳದೆಲಿ ದೇವ ಕನ್ನಿಕೆರು

ಮೂರು ಜನ ಒಳ್ಳೆ ಕಲ್ಲು ನೀರು ಕರ್ಗೋ ಹೊತ್ತೆಲಿ ಬರೋದು. ಅಲ್ಲಿ ತಾರ್ಸಿ-ಗುಡ್ಸಿ ನಿಂತ್ಕೊಳ್ಳೋದು, ಒಬ್ಬು ಏನ್ ಮಾಡೋದು ನಾಲ್ಕು ಮೂಲ್ಗು ನಂದಾದೀಪಕ್ಕೆ ಬತ್ತಿ ಹಾಕಿ, ಎಣ್ಣೆ ಬುಟ್ಟು ದೀಪ ಹತ್ಸಿ ಒಂದ್ ಕಡೆ ನಿಲ್ಲೋದ್. ಇನ್ನೊಬ್ ಕನ್ನಿಕೆ ಏನ್ ಮಾಡ್ತಾಳೆ ? ನಾಲ್ಕು ಮೂಲ್ಗು ನಾಲುಕ್ ಕಾಯಿ ಎಂಟಣ್ ಮಡ್ಗಿ, ಅರುಸ್ನ ಮಡ್ಗಿ, ಕುಂಕುಮ ಧರ್ಸಿ, ಪೂಜೆ ಮಾಡಿ ಸರಣಾಗತರಾಗೋದು. ಸರಣಾಗತರಾಗಿ ಮೂರು ಜನಾನು ಜೈ ಪರಮೇಶ್ವರ ಅಂತೇಳಿ ಕೈಲಾಸುಕ್ಕೊರುಟ್ ಬುಡೋದು. ಅವ್ರು ಓದೊಂದತ್ ನಿಮುಸ್ದೆಲಿ ಒಂದ್ ಕಡಿಂದ ಒಬ್ಬ. ಇನ್ನೊಂದ್‌ಕಡಿಂದ ಒಬ್ಬ, ಇನ್ನೊಂದು ಕಡಿಂದ ಒಬ್ಬ ಮೂರ್ ದಿಕ್ನಿಂದ್ಲು ಮೂರ್ ಜನ ಬರೋದು. ಅವುರ್ ಯಾರೂ ? ವಿಷ್ಣು, ಈಸ್ಪುರ, ಬ್ರಹ್ಮ ತ್ರೈಮೂರ್ತ್‌ಗೊಳು. ಈ ಮೂರ್ ಜನ ತ್ರೈಮೂರ್ತ್‌ಗೊಳು ಆ ಸ್ಥಳುಕ್ ಬಂದ್ ಕುಂತ್ಕೊಳ್‌ಬೇಕು. ಎಡಗಡೆ ವಿಷ್ಣು. ಬಲಗಡೆ ಬ್ರಹ್ಮ, ಮಧ್ಯ ವೀಸ್ಪುರ. ಏಳಿಕೆ ಕೊಡೊರ್‍ರ್ಯಾರು ಬ್ರಹ್ಮ, ವಿಷ್ಣು ಆದ್ರೆ ಈಸ್ಪುರ ಲೆಕ್ಕ ಬರ್‍ಯೋದು. ಸ್ವಾಮಿಯವರು ಅವೇಳದೊತ್ತೆಲಿ ಕೆಬ್ಬೆದೊಡಿಗೋಗ್‌ಬೇಕು ಅಂತ ಹೋದ್ರು. ಆದ್ರೆ ದಾರಿ ತಪ್ಪೋಗಿ ಅಲುದ್ ಮರ್ದಡಿಲಿ ಕಥೆ ಏಳ್ಕೊಂಡು, ಆ ಅಲುದ್ ಮರ್ದಡಿಲಿ ಕುಳ್ತಿದ್ರಂತೆ. ಸುಕ ಕ್ಷೇಮದಿಂದ ಊಟ ಮಾಡ್ಕೊಂಡು ನಿದ್ರೆ ಮಾಡ್‌ಬೊದಾಗಿತ್ತು. ಕೆಬ್ಬೆದೊಡ್ಡಿ ನೋಡ್ಲೆಬೇಕು ಅಂತೇಳಿ ಹಠಮಾಡಿ ಇಂಥ ಕಷ್ಟುಕ್ಕೆ ಗುರಿಯಾದ್ರು ಅಂತೇಳಿ ಲೆಕ್ಕ ಬರಿಯೋರ್‍ರ್ಯಾರು? ಈಸ್ಪುರ. ಲೈಕ ಕೊಡೋರು ಬ್ರಹ್ಮಾನು ವಿಷ್ಣು. ಈ ಥರದೆಲಿ ಧರ್ಮ ಕರ್ಮಯಲ್ಲಾ ಆಲೋಚನೆ ಮಾಡ್ತಿದ್ರು. ಸರಿ ಈ ಲೆಕ್ಕ ಕೊಡ್ತಿದ್ದಾಗ, ಎಲ್ಲ ಸರಿ, ಭೂಲೋಕ್‌ದಲಿ ಧರ್ಮ ಕರ್ಮ ನಡ್ತಿಸಿರೋದೆಲ್ಲ ಸರಿ 'ಈಸ್ಪುರುಂದೆ ತಪ್ಪು' ಅಂದ ಬ್ರಹ್ಮದೇವರು.

'ಯಂಗೇ ?' ವಿಷ್ಣು ಅಂದ. 'ಅಲ್ಲ ಕಾಣಯ್ಯ ! ಪತಿವ್ರತಾಶಿರೋಮಣಿಯಾದ ಸ್ತ್ರೀಜಲ್ಮ ಅವಳು, ಮುತ್ತೈದೆ ಸ್ಥಾನ ಉಳಿಸ್ಕೊಬೇಕು ಅಂತೇಳಿ ಎಷ್ಟು ಕಷ್ಟದಿಂದ ಉಳಿಸ್ಕೊಂಡ್ಳು ಆ ಗೋರಾರುಣ್ಯುದೆಲಿ ? ಯಾರಿಂದ ಉಳಿಸ್ಕೊಂಡ್ಳೊ? ಈಸ್ಪುರ ಕೊಟ್ಟ. ಕೊಟ್ಟು ಭಂಗ ಮಾಡ್ದೊನ್ಯಾರಯ್ಯ? ಈಸ್ಪುರುಂದೇ ಅಲ್ವೆ ತಪ್ಪು ?' ಅಂದ. ಈಸ್ಪುರ ಏಳ್ತಾನೆ 'ಹೇ ವಿಷ್ಣು ಬ್ರಹ್ಮದೇವರೆ ಈವಾಗ ಆ ಪತಿವ್ರತಾಶಿರೋಮಣಿಯಾದ ಬಾಲಿಕೆ ಬಂದು ನನ್ನ ಮುಂಚೆರೆ ಕೂತ್ಕೊಂಡು, ನನ್ನ ಮುತ್ತೈದೆಸ್ಥಾನ ದಾನ ಕೊಡಬೇಕು ಸ್ವಾಮಿ ಅಂತ ಅವ್ಳು ಮುತ್ತುನ್ ಸೆರ್ಗೊಡ್ದುದ್ರೆ ಮುತ್ತೈದ್‌ಸ್ತಾನ ದಾನ ಕೊಡ್ತೇನಿ ಕಾಣಯ್ಯ' ಅಂದ. ಅಷ್ಟುಕ್ಕೆ ಮಾಯವಾಗಿ ಈ ತ್ರೈಮೂರ್ತಿಗೊಳು ಮೂರ್‌ದಿಕ್‌ಗೂ ಮೂರ್ ಜನ ಹೊಂಟೋದ್ರು.

ಈ ಎಲ್ಲಾ ಮಾತುಗಳ್ನ ಮುದ್ಕಿ ಆಲುದ್ ಮರುದ್‌ಮ್ಯಾಲೆ ಕೂತಿದ್ಲಲ್ಲ ಕೇಳ್ಕೊಂಡ್ಳು. ಈ ಮುದ್ಕಿಗೆ ಅರಿವಾಗೋಯ್ತು. ಬೆಳಿಗ್ಗೆ ಆಯ್ತು. ಇಳುದ್ಲು ಆಲುದ್ ಮರದಿಂದ. ಏನು ಆ ಕಡೆಲಿ ಸಿಂಹ, ಸಾರ್ದೂಲ, ಆನೆ, ಹುಲಿಯಲ್ಲ ಗರ್ರ ಗರ್ರ ಅಂತ ಝೇಂಕಾರಿಸ್ತಾ ಇದ್ದುದ್ದು ನಿಂತೋಗಿತ್ತು. ಆ ಮುದ್ಕಿ ಎರ್ಗುದ್ದುನು ಬಂದ್‌ಬುಟ್ಳು ಈ ಪದ್ಮಾವತಿ ಪಟ್ಣುಕ್ಕೆ. ದಡ ದಡ್ನೆ ಆ ಮಾಡಿಗೋದ್ಲು. ಈ ಯಥೆ-ಗಿಥೆಯಲ್ಲ ಬುಟ್‌ಬುಟ್ಟು ದಾನ ಕೊಡ್ತಿದ್ದಂತ ಈ ವಿದ, ಸ್ಥಾನ ಮಾಡಿ ಮುಂಡೆ ಗೋಗಿ ತುರುಬ್‌ಕಟ್ಕೊಂಡು ದಾನ ಕೊಡ್ತಾ ಅವ್ಳೆ. ಅವತ್ತು ದಾನ ತಕೊಳ್ಳುಕ್ಕೆ ಯಾರೂ ಬಂದಿರಲಿಲ್ಲ. ಈ ಮುದ್ಕಿ ದಡ-ದಡ್ನೋದ್ಲು. ಒಳಕ್ಕೋಗಿ 'ಅವ್ವಾ, ಯಾರವ್ವ ಒಳಗಿರೋರು ತಾಯಿ ?' 'ಓಹೋ

ಅಮ್ಮಾ ಯಾರೂ ಇವತ್ತು ದಾನುಕ್ ಬರಲಿಲ್ಲ. ನೀನ್ ಬಂದಿದ್ದೀಯ ಬಾ ಕುಂತ್ಕೊ, ಊಟ ಮಾಡ್ಕೊ ಬಂದಿದ್ದೀಯಾ ತಾಯಿ?' 'ಇಲ್ಲ ಕಾಣವ್ವ'. 'ಮೊದ್ಲೂಟ ಮಾಡು, ಆಮ್ಯಾಲೆ ದಾನ ಇಸ್ಕೊಂಡೋಗುವಂತೆ.' 'ತಾಯಿ ಊಟುದ್ ಮಾತಂಗಿರ್ಲಿ, ನಿಮ್ ಪುರಸರೆಲ್ಲಿಗೋದ್ರು ?' 'ಅಯ್ಯೋ ದೊರೆ ಸುದ್ದಿ ಕಟ್ಕೊಂಡೇನಮ್ಮ ಆಗಬೇಕು ನಿನಗೆ? ಏನೂ ಬ್ಯಾಡ, ಊಟ ಮಾಡಿಕಂಡು, ದಾನ ಈಸ್ಕೊಂಡು ಹೋಗಮ್ಮ, ಅದ್‌ಬ್ಯಾರೆ ವ್ಯಥೆ ನನುಗ್ಯಾಕ್ ಉಂಟು ಮಾಡ್ತೀಯ ?' 'ಇಲ್ಲಮ್ಮ ನಿಮ್ಮ ದೊರೆ ವಿಚಾರ ನನ್ಗೇಳುದ್ರೆ ನಾನು ಮುಂದೆ ಹೇಳ್ತಿನಿ ತಾಯಿ' ಅಂದ್ಲು ಮುದ್ಕಿ.

ಹಿಂದುನ್ ಕಥೆಯಲ್ಲ ಹೇಳುದ್ಲು. ನನ್ನ ಗಂಡನ ಜೀವುದ್‌ನೆಲೆ ಕೇಳೋ ಕಾಲ್ದಲಿ ನಮ್ಮ ದೊರೆ ಗಂಗಾಸ್ನಾನದೇಲಿ ಪೂಜೆ ಮಾಡ್ಸಿ ಜೀವುದ್‌ನೆಲೆ ಏಳ್ಲೇಬೇಕೆ ಅಂತ ಹಿಂದುಕ್ಕೋಗಿ ಹೋಗಿ ಮೂರಾವರ್ತಿ ಹೋಗಿ ನಾಲ್ಕಾವರ್ತಿಲಿ, ನಾನು ಈಸ್ಪೂರನ ಏಳುತಲೆ ಸರ್ಪ, ಬೆನ್ಗೆ ಒರಗುದಿಂಬು, ತಲೆಗ್ ತಲೆದಿಂಬು ಅಂತ ಮೂರೊಚನ ಏಳ್ಬುಟ್ಟು ಇಂದುಕ್ ದಡಾರಂತ ಗಂಗೆಗ್ ಮುಳಿಕ್ಕೊಂಡ್ರು. ನಾನು ಪಟ್ಟುದೆಲಿರತಕ್ಕಂತ ಜನಾನೆಲ್ಲಾ ಬುಟ್ಟಿ ಶೋಧನೆ ಮಾಡ್ಸಿದ್ರು ನನ್ ಗಂಡುನ್ ದೇಹ ಸಿಕ್ಲಿಲ್ಲ ಅಂದ್ಲು. 'ಅಯ್ಯೋ ದೊರೆಸಾನಗಿತ್ತಿ, ನಿಮ್ಮ ದೊರೆ ಏಳ್ದಾಗನೆ ಆ ಈಸ್ಪುರುನ್ಗೆ ಏಳ್ ತಲೆ ಸರ್ಪ ಆಗವರೆ, ಬೆನ್ಗೆ ವರಗುದಿಂಬು, ತಲೆಗೆ ತಲೆದಿಂಬಾಗವರೆ. ನಾನು ಕಣ್ಣಾರೆ ನೋಡ್ಕೊ ಬಂದಿವ್ನಿ ಕಾಣಮ್ಮ'. 'ಅಮ್ಮ ಅವರಿರೋ ಸ್ಥಳ ತೋರ್‍ಕೊಟ್‌ಬುಟ್ರೆ ನನ್ ದೇಸ ಕೋಸನೆಲ್ಲ ಅರ್ಧಭಾಗ ಕೊಡ್ತೀನಿ' ಅಂದ್ಲು.

ಮಾರನೇ ದಿನ ಒಳ್ಳೆ ಟೈಮಲಿ ನಾಲ್ಕು ಮೂಲೆಗೂ ನಾಲ್ಕು ನಂದಾದೀವಿಗೆ ಹತ್ಸಿ, ಕಾಯಿ, ಹಣ್ಣು, ಅರುಸ್ನ, ಕುಂಕುಮ ಪೂಜೆ ಸಾಮಾನೆಲ್ಲ ಎತ್ತಿಸ್ಕೊಂಡು ಆಶ್ರಮಕ್ಕೆ ಕರ್ಕೊ ಒಂಟೋದ್ಲು. ಇಂತೆ ಟೇಮ್ಗೆ ಬತ್ತಾರೆ ಅಂತ ಅವ್ಳುಗ್ ಗೊತ್ತಿತ್ತುತಾನೆ ? ಕಣ್ಣೆಲ್ ನೋಡಿದ್ಲು. ಸರಿ ಓದುದ್ದುನು ದೇವಕನ್ನಿಕೇರು ಬರುಕ್ ಮುಂಚಿತವಾಗಿ ನಾಲ್ಕಾ ದಿಕ್ಕುಗು ನಂದಾದೀವ್ಗೆ ಹಚ್ಚಿ ಪೂಜೆ ಮಾಡ್‌ಬುಟ್ಟುದ್ದುನು ಮೆಳೆ ಮೊರೇಲಿ ಕುಂತ್ಕೊಂಡ ಐದ್ ನಿಮ್ಸದೊಳಗಾಗಿ ದೇವ ಕನ್ನಿಕೇರ್ ಬಂದ್ರು ಕೈಲಾಸದಿಂದ. ನೋಡುದ್ರು ! 'ಛೇ ಇದು ನರಜಲ್ಮ ಮಾಡಿರತಕ್ಕಂತದ್ದು. ಇನ್ನು ನಾವು ಅಲ್ಲಿ ಭಂಗಗೆಡ್ಸೋದು ಸರಿಯಲ್ಲ. ನಡೀರಿ' ಅಂತೇಳಿ ಕೈಲಾಸ್‌ಕೆ ಒಂಟೋದ್ರು. ಅವ್ರೋದತ್ ನಿಮುಸ್‌ದೊಳ್ಗೆ ಮೂರ್ ದಿಕ್‌ನಿಂದ ಇವ್ರು ಬಂದ್ರು. ಬಂದೋರೆ ಮೂಡಾಗ್ಗಿ ಮುಖಮಾಡಿ ಈಸ್ಪುರ ಕುಂತ್ಕೊಂಡ, ಎಡಚರೆ ವಿಷ್ಣು, ಬಲಚರೆ ಬ್ರಮ್ಮ ಕೂತ್ಕೊಂಡ್ರು.

ಈ ಈಸ್ಪುರ ಸ್ವಾಮಿ ಚಕ್ಕಬಕ್ಲೆ ಮಾಡಿ ಕುಂತವನೆ. ಇವ್ನ ಏಳುತಲೆ ಸರ್ಪವಾಗಿ ಬೆನ್ಗೆ ವರಗುದಿಂಬಾಗಿ, ತಲೆಗೆ ತಲೆದಿಂಬಾಗಿ ಕೂತವ್ನೆ ಆನಂದವಾಗಿ. ಇವರೆಲ್ಲ ಯಾರ್‍ಯಾರು ಏನೇನ್ ಪಾಪ ಪುಣ್ಯ ಮಾಡವರೆ ಏಳೋದು. ಈಸ್ಪುರ ಲೆಕ್ಕ ಬರಿಯೋದು ನಡಿತಾ ಅದೆ. ಜೀವಜಂತು, ನರಮನುಸ್ಯ, ಎಲ್ಲ ಮಾಡಿರೋ ಕರ್ಮ-ಧರ್ಮ, ಪಾಪ-ಪುಣ್ಯ.ಅದು-ಇದು ನೋಡೋತ್ರೊಳಗಾಗಿ ವಿದ ಅಂತಕ್ಕಂತ ಎಣ್ಣು ಅಯ್ಯೊ ಅಂತಕ್ಕಂತ ಸದ್ದು ಕೈಲಾಸವೇ ಮುಟ್ತಾ ಅದೆ ಕರ್ಮ. ಈಸ್ಪುರುಂದೆ ತಪ್‌ಕಾಣ್ತಾ ಅದೆ. ವಿಷ್ಣು, ಬ್ರಮ್ಮ 'ಹತ್ ಪೈಸುದ್ ಭಾಗ ಹಿಂದೆ ಮುಂದೆ, ಧರ್ಮ-ಕರ್ಮ, ಪಾಪ-ಪುಣ್ಯಯಲ್ಲ ಸರೋಯ್ತುದೆ. ಒಂದ್ರೂಪಾಯಿ ಭಾಗನು ತಪ್ಪು ಈಸ್ಪುರ ಸ್ವಾಮಿದೆ' ಅಂದ್ರು.

'ನೋಡ್ರಪ್ಪ, ತಿರ್ಗ ಅದ್ನೆ ಏಳ್ತೀರಿ. ಈಗ ಪತಿವ್ರತಾಸಿರೋಮಣಿ ಬಂದು ಅಂಗಂದ್ರೆ ಮುತ್ತೈದ್‌ತಾನ ಕೊಟ್ಟುಬುಡ್ತೀನಿ' ಅಂದ. ಈ ಮೆಳೆ ಮೊಲೆಲ್ ಕುತಿದ್ದಲ್ಲ ! 'ದೇಹೀ ಬಿಕ್ಷ ಸ್ವಾಮಿ, ನನ್ ಮುತ್ತೈದ್‌ತನ ಕೊಡಬೇಕು.' ಅಂತ ಸೆರಗೊಡ್ಡುದ್ಲು. 'ತಥಾಸ್ತು ಕೊಟ್ಟೆ' ಅಂದು ಮಾಯವಾಗೋದ.

ಅಲ್ಲುಳ್ಕೊಂಡೊನ್ಯಾರು ? ಏಳು ತಲೆ ಸರ್ಪ ಆಗಿ ತಲೆದಿಂಬು, ವರುಗುದಿಂಬಾಗಿದ್ನಲ್ಲ ಚಿಣ್ಣಾಳ, ವಿದ, ಮುದ್ಕಿ ಮೂರೇ ಜನ. ಇನ್ ಮೂರ್‌ಜನ ಮಾಯ. ಆವಾಗ ಎದೆ, ಬಾಯಿಗ್ ನೀರ್‌ತಟ್ಟಿ ಎಬ್ಸಿ ತನ್‌ಪಟ್ಣುಕ್ಕೆ ಕರ್ಕೊಂಡ್‌ಬಂದ್ರು. ಆಗ ಪಟ್ಣದೆಲಿ ಪದ್ಮಾವತಿ ಪಟ್ಣದ್ ರಾಜುನ್ ಕರುಸ್ಕೊಂಡು ಕಾಳಾರೋಟುನ್ನಾದ್ಯ, ಸೂಳೇರ್‌ಮೇಳ, ಬೇಕಾದ ಪಲ್ಲಕ್ಕಿ-ಪಾಲ್ಕಿ, ರಾತೋಡ್ಗಾಯಿ ಊರೆಲ್ಲ ಉತ್ಸವ ಮಾಡ್ಸಿ ಅವ್ನರ್ದಭಾಗ ರಾಜ್ಯನ ಭಾಗ ಮಾಡಿ ಮುದ್ಕಿಗ್ ಕೊಟ್ಟು 'ಅಮ್ಮ, ನಿನ್‌ಮಕ್ಳು ನೀವುಯಲ್ಲ ಸುಖದಿಂದ ಬಾಳಿ' ಅಂತೇಳಿ ಕಳಿಸ್‌ಬುಟ್ಟು ಸುಖದಿಂದ ಅವ್ರು ಬದುಕ್ತಾ ಅವ್ರೆ ಅಲ್ಲಿ.

□

ಡಾ. ಎಂ. ಬೈರೇಗೌಡ, ನಂ. ೧೧೯, ೩ನೇ ತಿರುವು, ೬ನೇ ಮುಖ್ಯರಸ್ತೆ,
ಆರ್.ಪಿ.ಸಿ. ಬಡಾವಣೆ, ಬೆಂಗಳೂರು-೪೦.

ಕೈಫಿ ಅಜ್ಮಿಯವರ ಎಂಟು ಗಜಲ್‌ಗಳು

೧.

ನಾನು ಬಯಸುವ ಆ ಜಗತ್ತು ಸಿಗುತ್ತಿಲ್ಲ
ಹೊಸ ಭೂಮಿ ಹೊಸ ಆಗಸ ಸಿಗುತ್ತಿಲ್ಲ

ಹೊಸ ಭೂಮಿ ಹೊಸ ಆಗಸ ದೊರೆತರೂ
ಹೊಸ ಮನುಷ್ಯರ ಗುರುತು ಸಿಗುತ್ತಿಲ್ಲ

ನನ್ನ ಕೊಲೆಗೈದ ಖಡ್ಗ ಸಿಕ್ಕರೂ ಕೂಡ
ಅಲ್ಲಿ ಕೊಲೆಗಾರನ ಕೈಯ ಗುರುತು ಸಿಗುತ್ತಿಲ್ಲ

ಅದು ನನ್ನೂರು ಅವು ನನ್ನೂರಿನ ಒಲೆಗಳು
ಅವುಗಳಲ್ಲಿ ಬೆಂಕಿಯಷ್ಟೇ ಅಲ್ಲ ಹೊಗೆ ಕೂಡ ಸಿಗುತ್ತಿಲ್ಲ

ದೇವರು ಸಿಗುತ್ತಿಲ್ಲವೆಂಬುದೇನು ಮಹಾದುರಂತವಲ್ಲ
ನನಗೆ ನನ್ನದೇ ಹೆಜ್ಜೆಗಳ ಗುರುತು ಸಿಗುತ್ತಿಲ್ಲ

ಅನಂತ ಕಾಲದಿಂದ ಜನಜಂಗುಳಿಯಲ್ಲಿ ನಿಂತಿದ್ದೇನೆ
ಎಲ್ಲೂ ನಿನ್ನ ಮೊಗದ ನಿಶಾನೆ ಕಾಣುತ್ತಿಲ್ಲ

೨.

ಶೋಕದಲ್ಲಿ ಕಣ್ಣೀರು ಹರಿಯುತ್ತಿತ್ತೇ ವಿನಃ ರಕ್ತವಲ್ಲ
ಇದು ಬೇರಾವುದೋ ಜಾಗೆಯಿರಬಹುದು ಲಖನೌ ಅಂತೂ ಅಲ್ಲ

ಇಲ್ಲಿ ನಾಲಿಗೆಗಿಂತ ಮೊದಲು ಚೂರಿಗಳೇ ಮಾತಾಡುತ್ತವೆ

ಇದು 'ಮೀರ್ ಅನೀಸ್'-'ಆತಶ್'ರ ಸಂಭಾಷಣೆಯಂತೂ ಅಲ್ಲ
ಎರಡು ಸಂಪ್ರದಾಯಗಳ ಗಾಯದಿಂದ ಹರಿಯುತ್ತಿದೆ ರಕ್ತ
ಸ್ವಲ್ಪ ಗಮನಿಸಿ, ಇದು 'ಇಸ್ಲಾಮ'ದ ರಕ್ತವಂತೂ ಅಲ್ಲ

ನಿಮಗೆ ಹೊಳೆವ ಸೂಕ್ತ ಹೆಸರು ಕೊಡಿ ಇದಕೆ
ನೆತ್ತರಿನೊಳಗೆ ನೀವು ಮಾಡಿದ್ದು 'ವಜೂ'*೧ ಅಂತೂ ಅಲ್ಲ

ನಿಮ್ಮ ನಿಲುವಂಗಿಯ ಅಂಚಿನಿಂದ ನೀವು ಆರಿಸುತ್ತಿರುವುದು
ನಿಮ್ಮ ಕನಸುಗಳ ದೀಪವಲ್ಲದೆ ಬೇರೇನೂ ಅಲ್ಲ

ನನ್ನದೆಂದು ತಿಳಿದು ನೀವು ಲೂಟಿ ಮಾಡಿದ ವಸ್ತು
ಓ ನೆರೆಯವರೆ, ಅದು ನಿಮ್ಮ ಮರ್ಯಾದೆಯಲ್ಲದೆ ಬೇರೇನೂ ಅಲ್ಲ

೩.

ನನ್ನ ಹೃದಯದ ಸ್ಥಿತಿ ಹೇಳಲು ನನಗೆ ಹಿಂಜರಿಕೆಯಿದೆ
ಈ ಕತೆಯಲಿ ನಿನ್ನ ಹೆಸರು ನಿನ್ನ ಸ್ಮರಣೆ ಮೂಡಲಿದೆ

ನಿನ್ನ ಮುಖದಿಂದ ಮುಸುಕು ಸರಿದ ಗಳಿಗೆ-ಹರಡಿದ್ದ
ಬೆಳದಿಂಗಳಿನ್ನೂ ಇದೆ ನನ್ನ ಗುಡಿಸಲಿನಲ್ಲಿ

ನನ್ನ ಪ್ರೇಮದ ಹಣೆಬರಹ ಬದಲಾಗಬಹುದಿತ್ತು
ನನ್ನ ಒಲವಿನಾಳ ಅಳೆಯಲು ನೀ ತಗೆದುಕೊಂಡ ಸಮಯದಲ್ಲಿ

ಕೊನೆಯ ಹೂ ಬಳ್ಳಿಯಿಂದುದುರುವಾಗ ಕೇಳಿತು
ವಸಂತನ ಆಗಮನಕ್ಕಿನ್ನೂ ಎಷ್ಟು ಸಮಯವಿದೆ ?

೪.

ಕೇಳುತ್ತಿರು ನನ್ನ ಪ್ರಾಣವೇ ಅವರಿವರ ಕತೆಗಳ
ಇಲ್ಲಿ ಎಲ್ಲರೂ ಅಪರಿಚಿತರು ಯಾರು ಯಾರನ್ನೂ ಅರಿಯರು

ಓ ಕಾಲ್ನಡಿಗೆಯ ಪಯಣಿಗರೆ ಈ ದಾರಿಯನ್ನು ಬಲು ಬೇಗ ದಾಟಿ
ಇದು ನನ್ನ ದಾಹದಿಂದ ಬೆಂದು ಬರಡಾದ ಭೂಮಿ

ನನ್ನ ಆರಾಧನೆಯ ಉನ್ಮಾದಕ್ಕೆ ಜನ ಬೇಸತ್ತು ಹೋಗಿದ್ದಾರೆ
ನಾನು ಮಂದಿರಗಳನ್ನು ಮುಚ್ಚಲಾಗುತ್ತಿರುವ ಸುದ್ದಿ ಕೇಳಿದ್ದೇನೆ

---

*೧. ನಮಾಜು ಮಾಡುವ ಮೊದಲು ಮುಸಲ್ಮಾನರು ಕೈ ಮುಖ ತೊಳೆದುಕೊಳ್ಳುವದು.

ಕೆಲವು ಕ್ಷಣಗಳ ಹಿಂದಷ್ಟೇ ಬಾಯಾರಿದವರು ಎದ್ದು ಹೋಗಿದ್ದಾರೆ
ಅಲ್ಲಿಯೇ ಗೆಳೆಯರು ಮೋಜಿಗೆ ಕುಳಿತಿದ್ದಾರೆ ಈಗ ಉಕ್ಕುತ್ತಿದೆ ನೊರೆ
ವಸಂತ ಬಂದರೆ ನನ್ನ ನಮಸ್ಕಾರ ಹೇಳು
ಇಂದು ನನ್ನನ್ನಂತೂ ಮರುಭೂಮಿ ಕರೆಯುತ್ತಿದೆ

'ಕೈಫಿ'ಯನ್ನು ಕಲ್ಲು ಹೊಡೆದು ಕೊಲ್ಲುವ ಆದೇಶವಿದೆ
'ಕಾಯುವ ಕ್ರಿಸ್ತ' ಎಲ್ಲಡಗಿದ್ದಾನೋ ಆ ಭಗವಂತನಿಗೇ ಗೊತ್ತು

೫.
ಒಮ್ಮೆ ಬಿಸಿಲಿನ ಹಾಗೆ ಮಗದೊಮ್ಮೆ ನೆರಳಿನ ಹಾಗೆ
ಕಾಣುವುದು ನನ್ನೂರು ನನಗೆ ಹಲವಾರು ಬಗೆ

ಈಗಲೂ ಯಾರಾದರೂ ನನ್ನೊಡನೆ ಕಟ್ಟಿದರೆ ಪಣ
ಹೋಗಿ ಕುಳಿತುಕೊಳ್ಳುವೆ ನನ್ನೂರಿನ ಆಲದ ಮರದ ಕೆಳಗೆ

ಒಂದು ರೊಟ್ಟಿಯ ಬೆಂಬತ್ತಿ ಬಂದಿದ್ದೇನೆ ಇಷ್ಟು ದೂರ
ನಡೆದ ಹೆಜ್ಜೆಗಳು ನನ್ನ ಹೆಜ್ಜೆಗಳಲ್ಲವೆನ್ನಿಸುತ್ತಿದೆ ನನಗೆ

ದಿನದ ರೊಟ್ಟಿಯ ಬಯಕೆ ಯಾರನ್ನು ತುಳಿಯುತ್ತಿದೆಯೋ
ಅಂಥವನ ಪ್ರತಿಭಟನೆ ಹೆದರಿದ ಬೆಕ್ಕಿನ ದನಿಯ ಹಾಗೆ

ಮುಂಬೈ ಶಹರದ ನಕ್ಷತ್ರಗಳ ತಣ್ಣನೆಯ ನೆರಳೆನಗೆ
ಹಳ್ಳಿಯ ದನಗಾಹಿಗಳಿಗೆ ಬೇಸಿಗೆಯ ಬಿಸಿಲುರಿ ಹೇಗೋ ಹಾಗೆ

೬.
ಮತ್ತದೇ ಮಾದಕ ಹೆಜ್ಜೆ ನನ್ನ ಕರೆತಂದಿದೆ ನಿನ್ನ ನಗರಕ್ಕೆ
ಮತ್ತೆ ಮಸೀದೆಗಳು ಮಯಖಾನೆಗಳಾಗಲಿವೆ ನಿನ್ನೂರಲ್ಲಿ

ನಿನ್ನ ಮನೆಯ ನಾಜೂಕು ಕಿಟಕಿಗಳು ಮುರಿಯಲಿವೆ
ಇಂದು ಮತ್ತೆ ಕಂಡಿದ್ದಾನೆ ಈ ಮರುಳ ನಿನ್ನೂರಲ್ಲಿ

ನಿನ್ನ ಗಲ್ಲಿಯಿಂದ ತಲೆ ತಗ್ಗಿಸಿ ಬರುವುದೇ ಅಪರಾಧ
ಕೊಲ್ಲಿಸಿಕೊಳ್ಳುವ ಭಯವೂ ಒಂದು ದೈವನಿಂದೆ ನಿನ್ನೂರಲ್ಲಿ

ಈ ಪ್ರಾಂತ್ಯದ ಎಲ್ಲ ಇಟ್ಟಿಗೆಗಳ ಮೇಲೆ 'ಶಾಹನಾಮ' ಬರೆದಿದೆ
ಪ್ರತಿ ಜಾಗದಲ್ಲೂ ಒಂದು ಕತೆ ಹೂಳಲಾಗಿದೆ ನಿನ್ನೂರಲ್ಲಿ

ಪ್ರಿಯತಮೆಯ ದ್ವಾರಕ್ಕೆ ಪ್ರವೇಶ ಪಡೆದ ದಾಸಿಯರು
ನನ್ನ ಬದುಕು ಮತ್ತು ಪ್ರೀತಿಯ ಗುರುತು ಕೇಳುತ್ತಿದ್ದಾರೆ ನಿನ್ನೂರಲ್ಲಿ

ರಾತ್ರಿ ಕೊನೆಯುಸಿರೆಳೆವಾಗ ಬೆತ್ತಲೆ ರಸ್ತೆಗಳಲ್ಲಿ ಅಲೆದಾಡಿ ನೋಡು
ಹೇಗೆ ಏಕಾಂತ ತೆವಳುತ್ತಿದೆ ಎಲ್ಲೆಡೆ ನಿನ್ನೂರಲ್ಲಿ

೭.

ಹುಲ್ಲುಗರಿಕೆಗಳು ಬೆಳೆಯಲಿ, ದಾರಿ ಸಾಗಲಿ
ನಾನು ದಣಿದರೂ ಪಯಣಿಗರು ಮುಂದೆ ಸಾಗಲಿ

ಸೂರ್ಯ-ಚಂದ್ರರೇ ನಮ್ಮ ಪೂರ್ವಜರ ದಾರಿ-ದೀವಿಗೆಗಳು
ಅವರು ಮುಳುಗಿದರೂ ಸರಿ, ಗಾಳಿಯಾದರೂ ಬೀಸಲಿ

ಓ, ನಗರದ ದೊರೆಗಳೇ ಇದು ಒಂದು ನಗರವೆ ?
ಮಸೀದೆಗಳು ಮುಚ್ಚಿವೆ ಸುರೆಮನೆಗಳೇಕೆ ತೆರೆದಿವೆ ?

ಇದಕ್ಕೆ ಧರ್ಮವೆನ್ನಿ ಅಥವಾ ರಾಜನೀತಿಯೆನ್ನಿ
ನಮಗೆ ಕಲಿಸುತ್ತ ನಡೆದಿದ್ದೀರಿ ನೀವು, ಆತ್ಮಹತ್ಯೆಯ ಕಲೆ

ಇಷ್ಟು ಶವಗಳ ಭಾರ ಹೇಗೆ ಹೊರಲಿ ನಾನು ?
ನೀವು ಇಟ್ಟಿಗೆಗಳ ಮಾನ ಉಳಿಸುತ್ತ ನಡೆದಿರಿ

ಸಲಿಕೆಗಳ ತನ್ನಿ, ಈ ಭೂಮಿಯನ್ನು ಆಳಕ್ಕೆ ಅಗೆಯಿರಿ
ನಾನೆಲ್ಲಿ ಹೂಳಲ್ಪಟ್ಟಿದ್ದೇನೆ, ಕೊಂಚ ನನಗೂ ಗೊತ್ತಾಗಲಿ

೮.

ನಾವಿಂದು ಚಂದ್ರನ ನಾಡಿನಿಂದ ಮರಳಿದೆವು
ಅಲ್ಲಿಯೂ ಕಲ್ಲು ದೇವರುಗಳ ಕಂಡೆವು

ಗೋಡೆಗಳು ಎಲ್ಲೆಡೆ ನಿಂತಿವೆ
ಎಲ್ಲಿ ಹೋಯಿತು ಕರುಣಾಮಯಿ ನೆರಳು

ಅಡವಿಯ ಗಾಳಿ ಸುಳಿಯುತ್ತಿದೆ ಇತ್ತ
ಜೋಕೆ ಈ ಕಾಗದದ ನಗರ ಹಾರಿ ಹೋದೀತು !

ಲೈಲಾ ಮತ್ತೊಮ್ಮೆ ಹುಟ್ಟಿ ಬಂದಿದ್ದಾಳೆ ಇಲ್ಲಿ
ಅವಳಿಗೆ ಹೃದಯ ಕೊಡಬಲ್ಲ ಛಾತಿಯ ಮಜನು ಇದ್ದಾನೆಯೆ ?

ಹೃದಯದಲ್ಲಿರುವಷ್ಟು ನೆತ್ತರ ತನ್ನಿ
ಈ ಭೂಮಿಗೆ ಇಂದು ಹೊಸ ಸ್ನಾನದ ತಹತಹ

ಮರುಭೂಮಿಗಳು ರಕ್ತದ ಮಡುವಿನಲ್ಲಿ ಕುದಿಯುತ್ತಿವೆ
ಮತ್ತೆ ಫರಾತ ನದಿ ತೀರದಿಂದ ಮರಳಿದ್ದಾರೆ ಬಾಯಾರಿದವರು

ಬುದ್ಧಿವಂತಿಕೆ

ಮೂಲ : ಅಲಿ ಸರ್ದಾರ್ ಜಾಫ್ರಿ

ನನ್ನ ಧಮನಿಗಳಲ್ಲಿ ಹಾಡುತ್ತಿರುವ
ರಕ್ತದ ಸದ್ದು ಕೇಳಿ
ಅಗಣಿತ ನಕ್ಷತ್ರಗಳು ವೀಣೆಯ ಮೀಟುತ್ತವೆ
ಪ್ರತಿ ಹನಿಯಲ್ಲೂ ಈ ಜಗತ್ತು ಹಾಡುತ್ತದೆ

ಪೂರ್ವ-ಪಶ್ಚಿಮ ಉತ್ತರ ಮತ್ತು ದಕ್ಷಿಣ
ಆಗಸ ಮತ್ತು ಪಾತಾಳಗಳೆಲ್ಲ ನೆತ್ತರಲ್ಲದ್ದಿದಂತೆ
ವಿಶ್ವದ ಮಧುರನಾದ
ಭುವಿಯ ಕ್ರಾಂತಿ
ಸೂರ್ಯ ಚಂದ್ರ-ನಕ್ಷತ್ರಗಳ
ಉದಯ ಅಸ್ತಮಾನಗಳು
ಸಂಜೆಯಾಗುವುದು ಹಗಲು ಕರಗುವುದು
ಎಲ್ಲವೂ ಈ ಸೃಷ್ಟಿಯ ಸೌಂದರ್ಯ
ಎಲ್ಲವೂ ನನ್ನ ನೆತ್ತರಿನ ಸರೋವರದೊಳಗೆ
ಕಮಲ ಅರಳಿದ ಹಾಗೆ
ನನ್ನ ಹೃದಯದಲ್ಲಿ ಈ ವಿಶ್ವ ಅಡಗಿದೆ
ಕ್ಷಿತಿಜದ ಮಡಿಲೊಳಗೆ ನಾನೊಂದು ಸಣ್ಣ ಅಣು
ಕಲ್ಪನೆಯ ಜಗದೊಳಗೆ ನಾನೊಂದು ಪುಟ್ಟ ಬಿಂದು
ನಾನೊಂದು ಹನಿ, ನನ್ನನ್ನೇ ಸಾಗರವೆಂದುಕೊಳ್ಳುತ್ತೇನೆ.
ಸೂರ್ಯನಂತೆ-ನನ್ನ ಸೌರಮಂಡಲದಲ್ಲಿ ನಾನು ಒಂಟಿ.
ನನ್ನ ಧಮನಿಗಳಲ್ಲಿ ಹರಿಯುತ್ತಿವೆ ವೇದಗಳು ಮತ್ತು ಖುರಾನ್
ಗಿಡಗಳು ಕಲ್ಲುಗಳು, ಮರುಭೂಮಿ ಮತ್ತು ಹೂದೋಟಗಳು.
ಆಧುನಿಕ ಮಾನವನ ಚರಿತ್ರೆಗೆ ನಾನು ಉತ್ತರಾಧಿಕಾರಿ

ನನ್ನ ಪ್ರತಿ ಹೆಜ್ಜೆಯಿಂದ
ನಾನು ಸ್ವರ್ಗವನ್ನು ದಾಟುತ್ತೇನೆ
ಪ್ರತಿ ಹೆಜ್ಜೆಯಿಂದ
ನರಕವನ್ನೂ.

ಸೃಷ್ಟಿಕರ್ತ

ಪಂಜಾಬಿ ಮೂಲ : ರಾಮಸಿಂಗ್ ಚಹಾಲ್

ನನಗೆ
ಬಹಳಷ್ಟು ಕಲಿಸಿದರು
ತಿಳಿಸಿ ಹೇಳಿದರು
ಮತ್ತು

ಆ ವಿಷಯದಲ್ಲಿ
ಸಾಕಷ್ಟು ಪುಸ್ತಕಗಳ
ಓದಿದ್ದಾಯಿತು

ದೇವರು
ನಿರಾಕಾರ
ಅಗೋಚರ
ಅಸಂಗತ
ಮತ್ತು ಏನೆಲ್ಲ...

ಒಂದು ದಿನ ಹೀಗೇ
ನಾನು ಹೊಲಗಳತ್ತ ನಡೆದೆ
ಮತ್ತು
ಮೊಳೆತ ಬೀಜಗಳ ನೋಡಿದೆ

ಎಂಥ ಅಗಾಧ ಪುಸ್ತಕ
ಎಂಥ ಅದ್ಭುತ ದೇವರು
ನಾನು ಕಂಡಿರಲಿಲ್ಲ

ಮತ್ತೆಲ್ಲಾದರೂ ನೀವು
ನೋಡಿದ್ದರೆ

ದಯವಿಟ್ಟು ನನಗೆ ತಿಳಿಸಿ
ನಾನು ಅವನನ್ನು ಭೇಟ್ಟಿಯಾಗುತ್ತೇನೆ

ಅನಿತಾ ನಾಯರ್ ಅವರ ನಾಲ್ಕು ಕವಿತೆಗಳು

ನನ್ನ ಆಕಾಂಕ್ಷೆ

ನಿನ್ನ ಜೊತೆ ಕುಳಿತುಕೊಳ್ಳಬೇಕೆನಿಸಿದೆ ತುಸು ಕೊಳಕಾದ ಗದ್ದಲದ ಕ್ಲಬ್ಬಿನಲ್ಲಿ
ತೊಡೆಗೆ ತೊಡೆ ತಾಕಿಸುತ್ತ ಪರಸ್ಪರ ತೋಳುಗಳನ್ನೊತ್ತಿ
ನಿನ್ನ ಉಸಿರಿನ ಬಿಸಿಗೆ ಈ ಹುಬ್ಬುಗಳ ಬೆವರಿನ ತೇವ ಆವಿಯಾಗಬೇಕು
ನನ್ನಧರಗಳ ಚುಂಬಿಸಿ, ನೀನದರ ಕಹಿಯ ಹೀರಬೇಕು
ನಿನ್ನ ಜೋಡಿ ಕಂಗಳು ಸದಾ ನನ್ನನ್ನೆ ಹುಡುಕಬೇಕು
ಎಲ್ಲ ಸದ್ದುಗಳ ನಡುವೆ ನಿನ್ನ ಪಿಸುದನಿಯ ಉನ್ಮಾದದ ಮಾತುಗಳ ನಾ ಕೇಳಬೇಕು

ನಿನ್ನೆಯಷ್ಟೆ ಬಣ್ಣ ಬಳಿದ ಬಿರುಕುಗಳಿರದ ಗೋಡೆಗಳ
ಬಾಲ್ಕನಿಯಲ್ಲಿ ಈ ಇರುಳು ನಿನ್ನ ಜೊತೆ ಕುಳಿತುಕೊಳ್ಳಬೇಕೆನ್ನಿಸಿದೆ
ರಾತ್ರಿಯ ಅವ್ಯಕ್ತ ಕರೆಯನ್ನು ಕೇಳುತ್ತ
ಈ ಸ್ವರ್ಗೀಯ ಗೋಡೆಗಳ ಮೇಲೆ ಸಮಯ ತೆವಳುವುದನ್ನು, ನಮ್ಮ ನೆರಳುಗಳಾಡುವುದನ
-ನಾ ನೋಡಬೇ

ನಮ್ಮ ಬೆರಳುಗಳು ಅನಾಯಾಸ ಬೆಸೆದುಕೊಂಡಿರಬೇಕು
ಯಾವುದೂ ರೂಢಿಯಾಗದಂತೆ ಎದೆಯ ತುಡಿತಗಳಿರಬೇಕೆನಿಸಿದೆ

ಮುಕ್ತ

ನಾನು ಇಷ್ಟಪಡುತ್ತೇನೆ
ಈ ದೇಹ ಪ್ರೀತಿಸಲ್ಪಡುವುದನ್ನು
ಸ್ಪರ್ಶಿಸಲ್ಪಡುವುದನ್ನು, ಕಚ್ಚಿಸಿಕೊಳ್ಳುವುದನ್ನು ಮತ್ತು ಬಯಸಲ್ಪಡುವುದನ್ನು.
ದೇಹದ ಎಲ್ಲ ಅಂಗಗಳ ಬಯಕೆಗಳನ್ನು

ತೀರಿಸಿಕೊಳ್ಳಲೆಂದೇ ಬದುಕಿದ ಹೆಣ್ಣು ನಾನು !
ಈ ದಿನಗಳಲ್ಲಿ ನಾನು
ಬಗೆ ಬಗೆಯ ಬಣ್ಣದಲ್ಲಿ
ಚಿತ್ರಿಸುತ್ತೇನೆ :
ಒಂಟಿ ಮೀನು,
ಮೂರು ಹೆಂಗಸರನ್ನು
ಕಂದು ಬಣ್ಣದಲ್ಲಿ
ನನ್ನ ಮನೆಯೆಂದರೆ
ಒಂದು ಭ್ರೂಣ
ಮುಖವಿಲ್ಲದ ಪಾದಗಳು
ಅಲೆಯುತ್ತವೆ ಮೇಲೆ ಕೆಳಗೆ
ಸಹನೆಯಿಲ್ಲದೆ
ನನ್ನ ಪತಿ
ಏಕಾಂತದ ಮೆಟ್ಟಿಲನ್ನು
ಹತ್ತುವುದರಲ್ಲಿ ವ್ಯಸ್ತ
ಮನೆಯ ಪತ್ರಗಳ ಪೆಟ್ಟಿಗೆ
ಕುಟುಂಬ ಕಲಹಗಳಿಂದ
ಅನುಪಯುಕ್ತ ಪತ್ರಗಳಿಂದ ತುಂಬಿದೆ
ನನ್ನ ಮಕ್ಕಳು
ಹೂಕುಂಡದಲ್ಲಿ ಬೆಳೆದ ಸಸಿಗಳು
ಅವರು ನನ್ನ ಮೊಗದೆದುರು
ಅಂಗೈಯಗಲಿಸಿ
ಅತೀ ಕಡಿಮೆ ಬಯಸುತ್ತಾರೆ

ಕೆಲವೊಮ್ಮೆ
ನಾನು ಕನಸು ಕಾಣುತ್ತೇನೆ
ಕನಸುಗಳನ್ನೇ ಹೆಚ್ಚು ಕಾಣುತ್ತೇನೆ
ಕಲ್ಲುಕೊಳದಲ್ಲಿ ಧುಮುಕಿ
ನೀರಿನಾಳದಲ್ಲಿ ಉಸಿರಾಡಿ
ಹವಳದ ಹೂದೋಟವ ಕಂಡು ಹಿಡಿಯುತ್ತೇನೆ
ಮತ್ತು ಒಲಿದ ಮತ್ಸ್ಯಕುಮಾರನನ್ನು
ನೀರಿನಾಳದ ರಹಸ್ಯ ಗುಹೆಗಳಿಗೆ
ಕರೆದೊಯ್ಯುತ್ತೇನೆ
ಬದುಕಲು ಮುಕ್ತವಾಗಿ

ನೀನು ಹೇಳಿದೆ ನಾನು ಒಪ್ಪಿದೆ

ನಾವು ಬರೀ ಗೆಳೆಯರಾಗಿರೋಣ ನೀನು ಹೇಳಿದೆ
ಆಯ್ತು ಬರೀ ಗೆಳೆಯರಾಗಿರೋಣ ನಾನು ಒಪ್ಪಿದೆ

ಇದಕ್ಕಿಂತ ಹೆಚ್ಚಿಗೇನೂ ಬೇಡ ನೀನು ಹೇಳಿದೆ
ಸರಿ ಇದಕ್ಕಿಂತ ಹೆಚ್ಚಿಗೇನೂ ಬೇಡ ನಾನು ಒಪ್ಪಿದೆ

ನಾನು ಪ್ರಮಾಣ ಮಾಡಲಾರೆ ಭಾಷೆ ನೀಡಲಾರೆ ನೀನು ಹೇಳಿದೆ
ನೀನು ಪ್ರಮಾಣ ಮಾಡಲಿಲ್ಲ ಭಾಷೆ ನೀಡಲಿಲ್ಲ ನಾನು ಒಪ್ಪಿದೆ

ಇದು ಸಣ್ಣ ಅನೈತಿಕತೆ ಅಡ್ಡದಾರಿ ನೀನು ಹೇಳಿದೆ
ಹೌದು ಇದೊಂದು ಸಣ್ಣ ಅನೈತಿಕತೆ ಅಡ್ಡದಾರಿ ನಾನು ಒಪ್ಪಿದೆ

ಹೀಗಾದಲ್ಲಿ ನಾನು ಏನೂ ಮಾಡಿದಂತಲ್ಲ ನೀನು ಹೇಳಿದೆ
ಅಥುದು ಏನೂ ಸಂಭವಿಸಿದಂತಲ್ಲ ನಾನು ಒಪ್ಪಿದೆ

ಪ್ರತಿಷ್ಟೆ ಹೊತ್ತೇ ಅದರಿಂದ ನಾವು ಹೊರಬಂದೆವು ನೀನು ಹೇಳಿದೆ
ನಿಜ ನಿಜ ಪ್ರತಿಷ್ಟೆ ಹೊತ್ತೇ ನಾವು ಹೊರಬಂದೆವು ನಾನು ಒಪ್ಪಿದೆ

ಸೈನಿಕನ ಹಾಡು

ನಾನು ಎತ್ತರದ ಗುಡ್ಡಗಳಲ್ಲಿ ನಡೆಯುತ್ತೇನೆ
ಭೂ ತಾಯಿಯ ದಟ್ಟ ಸೆರಗಲ್ಲಿ ಅಡಗಿಕೊಳ್ಳುತ್ತೇನೆ
ನಾನು ಮನೆಗೆ ಪತ್ರಗಳನ್ನು ಬರೆಯುತ್ತೇನೆ
ಎಲ್ಲವೂ ಸರಿಯಾಗಿದೆ ಎಂದೇ ಹೇಳುತ್ತೇನೆ
ನಾನು ನನ್ನ ಚಹ ಕುಡಿಯುತ್ತೇನೆ
ನನ್ನ ಬಂದೂಕನ್ನು ಸ್ವಚ್ಛಗೊಳಿಸುತ್ತೇನೆ
ನಾನು ಯೋಚಿಸಲು ಯತ್ನಿಸುವುದಿಲ್ಲ
ನನ್ನನ್ನು ಹೇಳವನನ್ನಾಗಿಸುವ ಭಯದಿಂದ ನಾನು ದೂರವಿರುತ್ತೇನೆ
ವೈರಿ ಎದುರಾದರೆ
ನಾನು ಅವನ ಕಣ್ಣುಗಳನ್ನು ನೋಡುವುದಿಲ್ಲ
ಕೊಲ್ಲಲು ಗುಂಡು ಹಾರಿಸುತ್ತೇನೆ
ಒಂದು ಗುಂಡಿಗೆ ಒಬ್ಬ ವೈರಿ ಸೈನಿಕ
ಅದನ್ನಷ್ಟೇ ನನಗೆ ಕಲಿಸಿದ್ದಾರೆ
ನಾನು ಹೋರಾಡುವುದೇ ಹೀಗೆ !

ಗುಲ್ಜಾರರ ಎರಡು ಕವಿತೆಗಳು

ಅನು : ಎಂ.ಡಿ. ಒಕ್ಕುಂದ

ಕವಿ

ಆತ ತೀರ
ವಿಚಿತ್ರ ಕವಿ
ಅಷ್ಟೇ ಸಮಾಧಾನಿ

ಕಣ್ಣುಗಳ ಕಿವಿ ಮಾಡಿ
ನಿಶ್ಶಬ್ದ ಮೌನದ
ಸೊಲ್ಲುಗಳ ಆಲಿಸುತ್ತಿದ್ದ
ಚಂದ್ರನ ನೆರಳು
ಇಬ್ಬನಿಯ ಹನಿ
ಗಳ ಸೆರೆ ಹಿಡಿಯುತ್ತಿದ್ದ
ಹಿಡಿತುಂಬ ಒಣಗಿದ
ಎಲೆಗಳನ್ನು ಹಿಚುಕಿ
ಪುಡಿ ಮಾಡುತ್ತಿದ್ದ

ಕಾಲನ ಕಪ್ಪುಕಾಡಲ್ಲಿ
ಕೆಲ ಹಸಿ ಕೆಲ ಮಾಗಿದ
ಕ್ಷಣಗಳ ಕೋಯುತ್ತಿದ್ದ

ದಿನವೂ ರಾತ್ರಿ ಆತ
ಚಂದ್ರನ ಗಲ್ಲಗಳ ಚುಂಬಿಸಲು
ತನ್ನನ್ನು ತಾನೇ ಎಳೆದುಕೊಂಡು ಹೋಗುತ್ತಿದ್ದ

ಆ ವಿಲಕ್ಷಣ ಕವಿ
ಕಳೆದ ರಾತ್ರಿ ಬೆಳದಿಂಗಳಿನಿಂದ
ಜಾರಿಬಿದ್ದು ಸತ್ತುಹೋದ

ಅದು ಆತ್ಮಹತ್ಯೆಯೆಂದು
ಜನ ಆಡಿಕೊಳ್ಳುತ್ತಿದ್ದಾರೆ

ಬೇಟೆ

ಹಗಲು ಕರಗಿ
ಸಂಜೆಯಾಗುತ್ತ ಬಂತು
ಆ ಜಿಂಕೆ ನನ್ನಿಂದ
ತಪ್ಪಿಸಿಕೊಂಡು ಹೋಯಿತು

ಆದರ ಗೋಣು ಅಸಂಖ್ಯ ಬಾಣ
ಗಳ ಗುರಿಯಿಂದ ಪಾರಾಯಿತು
ನಾನು ಹೊಂಚು ಹಾಕಿರುವ ಬೇಟೆಗಾರನೆಂದು
ಊಹಿಸುವಷ್ಟು ಅದು ಜಾಣೆಯಾಗಿತ್ತು

ಜಿಂಕೆ ಝಗ್ಗನೇ ಮಿಂಚಿ ಗಿಡಗಳ
ನಡುವೆ ಮಟಾಮಾಯವಾಯಿತು
ನಾನು ಗಿಡಗಳ ತಲುಪಿದಾಗ ಅದು
ಜಲಪಾತದ ಹತ್ತಿರವಿತ್ತು

ದೂರವನು ಲೆಕ್ಕಹಾಕುತ್ತ
ನಾನದರ ಮೇಲೆ ಕಣ್ಣಾಡಿಸಿದೆ
ನನ್ನ ಮೇಲೆ ಕಣ್ಣಾಡಿಸುತ್ತ ಅದೂ
ದೂರವನು ಲೆಕ್ಕ ಹಾಕಿತು

ಯಾರು ಬೇಟೆ ಬೇಟೆಗಾರ ಯಾರು
ಎಂದು ನನಗೆ ದಿಗಿಲಾಯಿತು
ಇಂದು ಈ ಕಾಡಿನಲ್ಲಿ ನಾನೇ ಬೇಟೆ
ಎಂದು ನನಗೆ ಖಾತ್ರಿಯಾಯಿತು

ಜಿಂಕೆಯ ತಲೆಯನ್ನು
ಪತಾಕೆಯಂತೆ ಪ್ರದರ್ಶಿಸುತ್ತ
ಶಹರವನು ಪ್ರವೇಶಿಸುವ

ಕನಸು ಕಂಡಿದ್ದೆ
"ಈ ಜಿಂಕೆ ಕೋಡುಗಳಲ್ಲಿ ನನ್ನನ್ನೇ ಎತ್ತಿ
ಬಂಧಿಸಿ ಎಳೆದೊಯ್ಯುವುದೇ ತನ್ನ ಗವಿಗೆ ?"
ಭಯ ಕಾಡುತ್ತಿದೆ
ಹಗಲು ಜಾರುತ್ತಿದೆ

□

ಂ.ಡಿ. ಒಕ್ಕುಂದ, ಮುಖ್ಯಸ್ಥರು, ಕನ್ನಡ ವಿಭಾಗ, ಶ್ರೀ ಸಿದ್ಧೇಶ್ವರ ಸರಕಾರಿ ಪದವಿ ಕಾಲೇಜು, ನರಗುಂದ,
ಗದಗ ಜಿಲ್ಲೆ.

ರಾಜ ಮತ್ತು ರಾಣಿ

ಮೂಲ : ರವೀಂದ್ರನಾಥ ಟಾಗೋರ್
ಭಾವಾನುವಾದ : ಎ. ಶ್ರೀನಿವಾಸ

ಬಿಪಿನ್‌ಕಿಶೋರ್ 'ಬಾಯಿಯಲ್ಲಿ ಬಂಗಾರದ ಚಮಚವನ್ನಿಟ್ಟುಕೊಂಡು ಹುಟ್ಟಿದವನು'. ಆದ್ದರಿಂದ, ಅವನು ಹಣವನ್ನು ದುಂದು ವೆಚ್ಚದಿಂದ ಪೋಲು ಮಾಡುವುದರಲ್ಲಿ ಎತ್ತಿದ ಕೈ. ಹಣವನ್ನು ಗಳಿಸುವುದಕ್ಕಿಂತ ಎರಡು ಪಟ್ಟು ಮಿಗಿಲಾದ ಖರ್ಚು. ಇದರಿಂದಾಗಿ, ಅವನು ತಾನು ಹುಟ್ಟಿದ ಮನೆಯಲ್ಲಿ ದೀರ್ಘ ಕಾಲ ಬಾಳಲು ಸಾಧ್ಯವಾಗಲಿಲ್ಲ.

ಅವನು ನಾಜೂಕಾದ, ಸ್ಫುರದ್ರೂಪಿ ಯುವಕ. ಸಂಗೀತದಲ್ಲಿ ಪ್ರವೀಣ, ವ್ಯವಹಾರದಲ್ಲಿ ದಡ್ಡ, ಬದುಕಿನ ಭಾರವನ್ನು ಹೊರಲು ಅನರ್ಹ. ಬಾಳ ಹಾದಿಯುದ್ದಕ್ಕೂ ಜಗನ್ನಾಥನ ರಥದ ಗಾಲಿಯಂತೆ ಉರುಳಿದ. ತನಗೆ ರೂಢಿಯಾಗಿದ್ದ ಮಹಾನ್ ವೈಭವದ ಜೀವನಶೈಲಿಯನ್ನು ಬಹುಕಾಲ ಉಳಿಸಿಕೊಳ್ಳಲಾಗಲಿಲ್ಲ.

ಅದೃಷ್ಟವಶಾತ್, ಪಾಲಕರ ಮಂಡಲಿಯಿಂದ ತನ್ನ ಆಸ್ತಿಯನ್ನು ಮರಳಿ ಪಡೆದಿದ್ದ ರಾಜ ಚಿತ್ತರಂಜನ್‌ನಿಗೆ ಹವ್ಯಾಸಿ ನಾಟಕ ಮಂಡಲಿಯೊಂದನ್ನು ಸ್ಥಾಪಿಸುವ ಮನಸ್ಸಾಯಿತು. ಬಿಪಿನ್ ಕಿಶೋರ್‌ನ ಚಿತ್ತಾಕರ್ಷಕ ಮುಖಭಾವ ಮತ್ತು ಗಾಯನ ಪ್ರತಿಭೆಗೆ ಮನಸೋತು ಮರುಳಾದ ರಾಜ ಅವನನ್ನು ಸಂತೋಷದಿಂದ ತನ್ನ ಮಂಡಲಿಗೆ ಸೇರಿಸಿಕೊಂಡ.

ಚಿತ್ತರಂಜನ್ ಬಿ.ಎ. ಪದವೀಧರ. ಆತ ಯಾವ ಅತಿರೇಕಗಳಿಗೂ ಹೋದವನಲ್ಲ. ಶ್ರೀಮಂತನ ಮಗನಾದರೂ, ಆತ ನಿಗದಿತ ವೇಳೆಯಲ್ಲಿ, ಅಷ್ಟೇಕೆ, ನಿಗದಿತ ಸ್ಥಳಗಳಲ್ಲಿಯೇ ಊಟ ಮಾಡುತ್ತಿದ್ದ, ಮಲಗುತ್ತಿದ್ದ. ಜನರು ಕುಡಿತದ ಸೆಳೆತಕ್ಕೆ ಒಳಗಾಗುವಂತೆ, ಅವನು ಥಟ್ಟನೆ, ಇದ್ದಕ್ಕಿದ್ದ ಹಾಗೆ, ಬಿಪಿನ್‌ನ ಸಮ್ಮೋಹಕತೆಗೆ ಪರವಶನಾಗಿಬಿಟ್ಟ. ಎಷ್ಟೋ ವೇಳೆ, ಆತ ಬಿಪಿನ್‌ನ ಗಾಯನವನ್ನು ಕೇಳುತ್ತ, ಆತನೊಡನೆ ಗೀತನಾಟಕಗಳ ಶ್ರೇಷ್ಠತೆಯ ಬಗ್ಗೆ ಚರ್ಚಿಸುತ್ತ ಕುಳಿತನೆಂದರೆ, ಊಟ ತಣ್ಣಗಾಗಿ ಬಿಡುತ್ತಿತ್ತು. ರಾತ್ರಿ ಹಳೆಯದಾಗಿಬಿಡುತ್ತಿತ್ತು. ಬಿಪಿನ್‌ಕಿಶೋರ್‌ನ ಮೇಲೆ ಇಟ್ಟಿದ್ದ ಅತಿಯಾದ ಪ್ರೀತಿಯೊಂದೇ ತನ್ನ ಒಡೆಯನ ಅನ್ಯಥಾ ಪರಿಪೂರ್ಣ ಶೀಲಕ್ಕೆ ಅಂಟಿದ ಏಕೈಕ ಕಳಂಕವೆಂದು ದಿವಾನ ಹೇಳುತ್ತಿದ್ದದ್ದುಂಟು.

ರಾಣಿ ವಸಂತಕುಮಾರಿಯಾದರೋ, ತನ್ನ ಗಂಡನೊಡನೆ ಉನ್ಮತ್ತಳಂತೆ ಕೂಗಾಡುತ್ತಿದ್ದಳು. ಆ ನಿರ್ಭಾಗ್ಯ ಕೋತಿಯ ಸಹವಾಸದಲ್ಲಿ ತನ್ನ ಗಂಡ ಹಾಳಾಗುತ್ತಿದ್ದಾನೆಂದು ಹಲುಬುತ್ತ, ಅವನನ್ನು ಎಷ್ಟು ಬೇಗ ತೊಲಗಿಸಿದರೆ ತನಗೆ ಅಷ್ಟು ಹಗುರವಾದೀತು ಎನ್ನುತ್ತಿದ್ದಳು, ಆಕೆ.

ಮೇಲ್ನೋಟಕ್ಕೆ ಎದ್ದು ಕಾಣುತ್ತಿದ್ದ ತನ್ನ ಯುವಪತ್ನಿಯ ಈರ್ಷ್ಯೆಯನ್ನು ಕಂಡು ರಾಜನಿಗೆ ಒಳಗೊಳಗೆ ತುಂಬ ಸಂತೋಷವಾಗುತ್ತಿತ್ತು. ಆತ ಮುಗುಳ್ನಗೆ ನಕ್ಕು, ಸ್ತ್ರೀಯರಿಗೆ ಭೂಮಿಯ ಮೇಲೆ ಗೊತ್ತಿರುವವನು ಒಬ್ಬನೇ-ತಾವು ಪ್ರೀತಿಸುವ ಪುರುಷ; ಉಳಿದ ಗಂಡಸರ ಯೋಗ್ಯತೆಯ ಬಗ್ಗೆ ಅವರೆಂದೂ ಯೋಚಿಸುವುದಿಲ್ಲ ಎಂದುಕೊಂಡ. ತಮ್ಮ ಅರ್ಹತೆಗಳಿಗಾಗಿ ಗೌರವಾರ್ಹರಾದವರು ಎಷ್ಟೋ ಮಂದಿ ಇರಬಹುದೆಂಬುದು ಮಹಿಳೆಯರ ಧರ್ಮಶಾಸ್ತ್ರಗಳಲ್ಲಿ ದಾಖಲಾಗಿಯೇ ಇಲ್ಲ. ಮಹಿಳೆಯ ದೃಷ್ಟಿಯಲ್ಲಿ, ಏಕೈಕ ಸತ್ಪುರುಷನೆಂದರೆ, ಆಕೆಯ ಪ್ರೀತಿ, ವಿಶ್ವಾಸ, ಪ್ರಸನ್ನತೆಗಳಿಗೆ ಪಾತ್ರನಾದ ಏಕೈಕ ವ್ಯಕ್ತಿಯೆಂದರೆ, ವಿವಾಹದ ಮಂತ್ರಗಳನ್ನು ಆಕೆಯ ಕಿವಿಯಲ್ಲಿ ಗಳಹಿರುವವನು. ತನ್ನ ಗಂಡನ ಭೋಜನದ ಮಾಮೂಲು ವೇಳೆಯಲ್ಲಿ ಒಂದು ಕ್ಷಣ ಹಿಂದಾದರೂ, ಆಕೆಯ ವ್ಯಾಕುಲ, ಕಳವಳ ಅಷ್ಟಿಷ್ಟಲ್ಲ. ಆದರೆ, ತನ್ನ ಪತಿಯ ಆಶ್ರಿತರಿಗೆ ಒಂದು ತುತ್ತು ಕವಳ ಸಿಕ್ಕಿತೇ ಇಲ್ಲವೇ ಎಂಬುದರ ಬಗ್ಗೆ ಆಕೆಗೆ ಕಿಂಚಿತ್ತು ಕಾಳಜಿ ಇಲ್ಲ. ಅಬಲೆಯರ ಈ ವಿವೇಚನಾರಹಿತ ಪಕ್ಷಪಾತದ ಬಗ್ಗೆ ಆಕ್ಷೇಪಿಸಬಹುದಾದರೂ, ಚಿತ್ತರಂಜನ್‌ನಿಗೆ ಮಾತ್ರ ಅದು ಅಪ್ರಿಯವೆನಿಸಲಿಲ್ಲ. ಹೀಗೆ, ಆಕೆಯ ಹಿತವಾದ ವಾಕ್ ಆರ್ಭಟವನ್ನು ಕೆರಳಿಸಲೆಂದೇ ಆತ ಆಗಾಗ ತನ್ನ ಪತ್ನಿಯ ಮುಂದೆ ಬಿಪಿನ್‌ನನ್ನು ಅತಿಶಯವಾಗಿ ಕೊಂಡಾಡುತ್ತಿದ್ದ.

ಆದರೆ, 'ರಾಜ' ದಂಪತಿಗಳಿಗೆ ಇದು ತಮಾಷೆಯಾದರೆ, ಬಡಪಾಯಿ ಬಿಪಿನ್‌ಗೆ ಮಾರಕವೆನಿಸಿತು. ತಮ್ಮ ಯಜಮಾನರ ಮಾತುಗಳಿಂದ ತಾವು ಯಾರ ಬಗ್ಗೆ ಹೇಗೆ ನಡೆದುಕೊಳ್ಳಬೇಕೆಂಬುದರ ಸೂಚನೆಯನ್ನು ಪಡೆದುಕೊಳ್ಳುವುದು ಸೇವಕರ ಪದ್ಧತಿ. ಅಂತೆಯೇ, ಮನೆಯ ಸೇವಕರು ರಾಣಿಯು ನಿರ್ಭಾಗ್ಯ ಆಶ್ರಿತನ ಬಗ್ಗೆ ತೋರಿಸುತ್ತಿದ್ದ ಔದಾಸೀನ್ಯ ಪೂರ್ಣ, ಉದ್ದೇಶಪೂರ್ವಕ ಅಲಕ್ಷ್ಯದಿಂದಾಗಿ, ತಾವೂ ಅವನ ವಿಷಯದಲ್ಲಿ ಉದಾಸೀನತೆಯಿಂದ ವರ್ತಿಸತೊಡಗಿದರು; ಉದ್ದೇಶಪೂರ್ವಕವಾಗಿ ಅಲಕ್ಷ್ಯಮಾಡತೊಡಗಿದರು. ಅವರು ಅವನ ಸೌಕರ್ಯಗಳನ್ನು ನೋಡಿಕೊಳ್ಳಲು ಮರೆತುಬಿಟ್ಟದ್ದರಿಂದ, ಬಿಪಿನ್‌ಗೆ ಅತೀವ ಖೇದ, ಹೇಳಲಾಗದಷ್ಟು ಕಷ್ಟ ಉಂಟಾಯಿತು.

ಒಮ್ಮೆ ರಾಣಿಯು ಸೇವಕ ಪುತೆಯನ್ನು ದಂಡಿಸಿ "ನೀನು ಕೆಲಸ ಮಾಡಲು ಹಿಂದೇಟು ಹಾಕುತ್ತಿದ್ದೀಯೆ ; ದಿನವೆಲ್ಲ ನೀನು ಏನು ಕೆಲಸ ಮಾಡುತ್ತೀಯೆ ?" ಎಂದು ಕೇಳಿದಳು. "ಅಮ್ಮನವರೆ, ಮಹಾರಾಜರ ಆದೇಶದಂತೆ, ಬಿಪಿನ್ ಬಾಬುವಿನ ಸೇವೆ ಮಾಡುವುದರಲ್ಲಿಯೇ ದಿನವೆಲ್ಲ ಕಳೆದುಹೋಗುತ್ತಿದೆ" ಎಂದು ಬಿಕ್ಕುತ್ತ ಹೇಳಿದ, ಬಡಸೇವಕ.

"ನಿಮ್ಮ ಬಿಪಿನ್ ಬಾಬು ಒಬ್ಬ ದೊಡ್ಡ ನವಾಬನೇನು ?" ಎಂದು ರಾಣಿ ಪ್ರತ್ಯಾಪಾದನೆ ಮಾಡಿದಳು. ಪುತೆಗೆ ಅಷ್ಟೇ ಸಾಕಾಯಿತು. ಅವನು ರಾಣಿಯ ಮಾತಿನಿಂದ ತನ್ನ ಕರ್ತವ್ಯವೇನೆಂಬುದನ್ನು ಕಂಡುಕೊಂಡ. ಮಾರನೆಯ ದಿನದಿಂದಲೇ ಅವನು ಬಿಪಿನ್ ಬಾಬುವಿನ ಎಂಜಲು ತಟ್ಟೆ-ಲೋಟಗಳನ್ನು ತೆಗೆಯುವುದನ್ನೇ ನಿಲ್ಲಿಸಿಬಿಟ್ಟ. ಕೆಲವೊಮ್ಮೆ ಅವನ ಊಟವನ್ನು ಮುಚ್ಚಿಡುವುದನ್ನೂ ಮರೆತುಬಿಟ್ಟ. ಮುಸುರೆ ತಿಕ್ಕಿ ಅನುಭವವಿಲ್ಲದ ಬಿಪಿನ್ ಎಷ್ಟೋ ವೇಳೆ ತನ್ನ ತಟ್ಟೆ-ಲೋಟಗಳನ್ನು ತಾನೇ ತೊಳೆದುಕೊಂಡ. ಆಗಾಗ್ಗೆ ಆತ ಉಪವಾಸ ಬೀಳುತ್ತಿದ್ದುದೂ ಉಂಟು.

ಆದರೆ, ತನ್ನ ಸ್ಥಿತಿಗಾಗಿ, ದುರ್ದೆಶೆಗಾಗಿ ಗೋಳಾಡುತ್ತ ರಾಜನಿಗೆ ಹೇಳುವುದು ಆತನ ಸ್ವಭಾವಕ್ಕೆ ಒಗ್ಗದು. ಸಣ್ಣ-ಪುಟ್ಟ ವಿಷಯಗಳಿಗಾಗಿ ಸೇವಕರೊಂದಿಗೆ ಜಗಳವಾಡಿ ತನ್ನ ಘನತೆಗೆ ಕುಂದನ್ನು ತಂದುಕೊಳ್ಳುವುದೂ ಆತನಿಗೆ ಇಷ್ಟವಿರಲಿಲ್ಲ. ಆತ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, ಎಲ್ಲವನ್ನೂ ಒಳ್ಳೆಯ ದೃಷ್ಟಿಯಿಂದಲೇ ತೆಗೆದುಕೊಂಡ. ಹೀಗೆ, ರಾಜನ ಪ್ರೀತಿ-ಪ್ರಸನ್ನತೆಗಳು ಹೆಚ್ಚಾದಂತೆಲ್ಲ, ರಾಣಿಯ ಅಪ್ರಸನ್ನತೆ ತೀವ್ರಗೊಂಡು, ಕಡೆಗೆ ಎಲ್ಲೆ ಮೀರಿಹೋಯಿತು.

ಪೂರ್ವಾಭ್ಯಾಸವೆಲ್ಲ ಮುಗಿಯಿತು. ಈಗ 'ಸುಭದ್ರಾಹರಣ'ದ ಗೀತನಾಟಕ ಸಿದ್ಧವಾಯಿತು. ಅರಮನೆಯ ಆವರಣದಲ್ಲಿಯೇ ರಂಗಮಂಟಪವನ್ನು ನಿರ್ಮಿಸಿ, ಸಜ್ಜುಗೊಳಿಸಲಾಯಿತು. ನಾಟಕದಲ್ಲಿ ರಾಜನದು 'ಕೃಷ್ಣ'ನ ಪಾತ್ರ, ಬಿಪಿನ್‌ನದು 'ಅರ್ಜುನ'ನ ಪಾತ್ರ. ಓ, ಆತ-ಬಿಪಿನ್-ಎಷ್ಟು ಮಧುರವಾಗಿ ಹಾಡಿದ ! ಆತ ಎಂತಹ ಸುಂದರಾಂಗನಾಗಿ ಕಂಡ ! ಪ್ರೇಕ್ಷಕರು ಆನಂದ ಪರವಶರಾಗಿ, ಚಪ್ಪಾಳೆಯ ಸುರಿಮಳೆಗರೆದರು.

ನಾಟಕ ಮುಗಿದನಂತರ, ರಾಜ ರಾಣಿಯ ಬಳಿಗೆ ಬಂದು, ನಾಟಕ ಆಕೆಗೆ ಮೆಚ್ಚಿಕೆಯಾಯಿತೇ ಎಂದು ಕೇಳಿದ. ರಾಣಿಯು "ನಿಜವಾಗಿಯೂ ಬಿಪಿನ್ 'ಅರ್ಜುನ'ನ ಪಾತ್ರವನ್ನು ದಿವ್ಯವಾಗಿ ನಟಿಸಿದ ! ಆತ ಗಣ್ಯ ಮನೆತನವೊಂದರಲ್ಲಿ ಹುಟ್ಟಿದವನಂತೆ ಕಾಣುತ್ತಾನೆ. ಆತನ ಶಾರೀರ ಅಪೂರ್ವವಾದದ್ದು, ಅಪರೂಪವಾದದ್ದು" ಎಂದಳು. ರಾಜ ವಿನೋದಪರನಾಗಿ "ನಾನು ಹೇಗೆ ಕಾಣಿಸುತ್ತೇನೆ ? ನಾನು ಚೆನ್ನಾಗಿಲ್ಲವೇ ? ನನ್ನ ಕಂಠ ಮಧುರವಾಗಿಲ್ಲವೇ ?" ಎಂದು ಕೇಳಿದ. "ಓ, ನಿಮ್ಮದು ಬೇರೆ ವಿಷಯ" ಎಂದು ಹೇಳಿ, ಬಿಪಿನ್‌ಕಿಶೋರ್‌ನ ನಟನಾ ಸಾಮರ್ಥ್ಯವನ್ನೇ ಮತ್ತೆ ಹಿಗ್ಗಿಸಿ, ದೊಡ್ಡದು ಮಾಡಿ ಬಣ್ಣಿಸತೊಡಗಿದಳು.

ಈಗ ಪರಿಸ್ಥಿತಿ ತಿರುಗು-ಮುರುಗಾಯಿತು. ಹೊಗಳುತ್ತಿದ್ದಾತ ಈಗ ತೆಗಳಲು ಪ್ರಾರಂಭಿಸಿದ. ಬಿಪಿನ್‌ನನ್ನು ಶಬ್ದಾಡಂಬರದಿಂದ ಕೊಂಡಾಡಲು ಎಂದೂ ಬೇಸರಪಡದಿದ್ದ ರಾಜ ಈಗ ಥಟ್ಟನೆ ಕುಸಿದ. ಏನೇ ಹೇಳಿದರೂ, ಎಷ್ಟೇ ಹೇಳಿದರೂ, ದೂರಾಲೋಚನೆ ಇಲ್ಲದ ಅವಿಚಾರಿ ಜನರು ಬಿಪಿನ್‌ನ ನಿಜವಾದ ಸಾಮರ್ಥ್ಯವನ್ನು ಉತ್ಪ್ರೇಕ್ಷೆಗೊಳಿಸಿದರು. ಆತನ ರೂಪು ಅಥವಾ ಕಂಠದಲ್ಲಿ ಅಸಾಧಾರಣವಾದದ್ದೇನಿದೆ ? ಸ್ವಲ್ಪ ಕಾಲದ ಹಿಂದೆ ತಾನೂ ಆ ಅವಿಚಾರಿ ಜನರಲ್ಲಿ ಒಬ್ಬನಾಗಿದ್ದೆನಲ್ಲ ಎಂದು ತನ್ನೊಳಗೇ ಆಲೋಚನೆ ಮಾಡಿಕೊಂಡ ರಾಜ ಇದ್ದಕ್ಕಿದ್ದಂತೆ, ನಿಗೂಢವಾದ ರೀತಿಯಲ್ಲಿ ಅವಿಚಾರಪರತೆಯ ಲಕ್ಷಣಗಳನ್ನು ಮೈಗೂಡಿಸಿಕೊಂಡ !

ಮಾರನೆಯ ದಿನದಿಂದಲೇ ಬಿಪಿನ್‌ನ ಊಟಕ್ಕಾಗಿ ಪ್ರತಿಯೊಂದು ಒಳ್ಳೆಯ ವ್ಯವಸ್ಥೆಯನ್ನೂ ಮಾಡಲಾಯಿತು. ರಾಣಿ ರಾಜನಿಗೆ ಹೇಳಿದಳು : "ಬಿಪಿನ್ ಬಾಬುವನ್ನು ರಾಜ್ಯದ ಸಣ್ಣ-ಪುಟ್ಟ ಅಧಿಕಾರಿಗಳೊಂದಿಗೆ ಕಛೇರಿಯಲ್ಲಿ ತಂಗಲು ಬಿಡುವುದು ಸರ್ವಥಾ ತಪ್ಪು. ಆತನ ಈಗಿನ ಸ್ಥಿತಿ ಏನೇ ಇರಲಿ, ಆತ ಒಂದು ಕಾಲದಲ್ಲಿ ಸ್ಥಿತಿವಂತನಾಗಿ ಬಾಳಿದವನು". "ಹಾ" ಎಂದು ರಾಜ ಬಿಗುಮಾನದಿಂದ ಥಕ್ಕನೆ ನುಡಿದು ವಿಷಯವನ್ನು ಬದಲಾಯಿಸಿದ. ರಾಣಿಯು ಹೊಸದಾಗಿ ಸ್ತನ್ಯಪಾನ ಬಿಡಿಸಿರುವ ರಾಜವಂಶದ ಕೂಸಿನ ಮೊದಲ ಅನ್ನಪ್ರಾಶನ ಸಮಾರಂಭದ ಸಂದರ್ಭದಲ್ಲಿ ಮತ್ತೊಂದು ನಾಟಕ ಪ್ರದರ್ಶನವನ್ನು ಏರ್ಪಡಿಸಬಹುದೆಂದು ಸಲಹೆ ಮಾಡಿದಳು. ರಾಜ ಅದನ್ನು ಕೇಳಿಯೂ ಕೇಳದಂತಿದ್ದುಬಿಟ್ಟ.

ತನ್ನ ಬಟ್ಟೆಯನ್ನು ಸರಿಯಾಗಿ ಹಾಸದಿದ್ದುದಕ್ಕಾಗಿ ರಾಜ ಸೇವಕ ಪುತೆಯನ್ನು ದಂಡಿಸಲು ಅವನು "ಸ್ವಾಮಿ, ನಾನೇನು ಮಾಡಲಿ ? ರಾಣಿ ಸಾಹೇಬರ ಅಣತಿಯ ಮೇರೆಗೆ, ನಾನು

ಬಿಪಿನ್ ಬಾಬುವನ್ನು ನೋಡಿಕೊಂಡು, ಇಡೀ ದಿನ ಅವರ ಪರಿಚಾರಿಕೆ ಮಾಡಬೇಕಾಗಿದೆ" ಎಂದು ಉತ್ತರವಿತ್ತ. ರಾಜನಿಗೆ ಸಿಟ್ಟು ಬಂತು. ಆತ ಕೆರಳಿ "ಛೇ ! ಬಿಪಿನ್ ಬಾಬು ನಿಜವಾಗಿಯೂ ಒಬ್ಬ ನವಾಬನೇ ! ಈಗ ನನಗೆ ತಿಳಿಯಿತು. ಅವನು ತನ್ನ ಸ್ವಂತ ತಟ್ಟೆ-ಲೋಟಗಳನ್ನು ತಾನೇ ತೊಳೆದುಕೊಳ್ಳಲಾರನೇ ?" ಎಂದ. ಹಿಂದಿನಂತೆಯೇ, ಸೇವಕ ಬಿಪಿನ್‌ನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಅರ್ಥಮಾಡಿಕೊಂಡ. ಬಿಪಿನ್ ತನ್ನ ಹಿಂದಿನ ಹೀನಾಯ ಸ್ಥಿತಿಗಿಳಿದ.

ರಾಣಿಗೆ ಬಿಪಿನ್‌ನ ಹಾಡುಗಳೆಂದರೆ ಇಷ್ಟ-ಅವು ಮಧುರವಾಗಿದ್ದುವು-ಅದನ್ನೇನೂ ಅಲ್ಲಗಳೆಯುವಂತಿಲ್ಲ. ಒಂದಾನೊಂದು ಸಂಜೆ ತನ್ನ ಪತಿ ಬಿಪಿನ್‌ನೊಡನೆ ಕುಳಿತು ಎಂದಿನಂತೆ ಮಧುರ ಗಾಯನವನ್ನು ಕೇಳುತ್ತಿದ್ದಾಗ, ಆಕೆ ಪಕ್ಕದ ಕೋಣೆಯೊಂದರ ಪರದೆಯ ಹಿಂದಿನಿಂದ ಆಲಿಸುತ್ತಿದ್ದಳು. ಮುಂದೆ, ಸ್ವಲ್ಪ ಸಮಯದ ನಂತರ, ರಾಜ ನಿಯತ ವೇಳೆಯಲ್ಲಿ ಊಟ ಮಾಡುವ ಮತ್ತು ಮಲಗುವ ಅಭ್ಯಾಸವನ್ನು ಮತ್ತೆ ಪ್ರಾರಂಭಿಸಿದ. ಸಂಗೀತ ಮುಕ್ತಾಯಗೊಂಡಿತು. ಬಿಪಿನ್‌ನ ಸಾಯಂಕಾಲದ ಸೇವೆಗಳು ಬೇಡವಾದುವು.

ರಾಜ ಚಿತ್ತರಂಜನ್ ತನ್ನ ಜಮೀನ್ದಾರಿ ವ್ಯವಹಾರಗಳನ್ನು ಮಧ್ಯಾಹ್ನದ ವೇಳೆಯಲ್ಲಿ ನೋಡಿಕೊಳ್ಳುತ್ತಿದ್ದ. ಒಂದು ದಿನ ಆತ ಮುಂಚಿತವಾಗಿಯೇ ಅಂತಃಪುರಕ್ಕೆ ಬಂದಾಗ ರಾಣಿ ಏನನ್ನೋ ಓದುತ್ತ ಕುಳಿತಿದ್ದಳು. ಆಕೆ ಏನನ್ನು ಓದುತ್ತಿದ್ದಳೆಂದು ಆತ ಕೇಳಿದಾಗ, ಆಕೆ ಸ್ವಲ್ಪ ತಬ್ಬಿಬ್ಬಾದರೂ ಒಡನೆಯೇ ಉತ್ತರವಿತ್ತಳು : " ಬಿಪಿನ್ ಬಾಬುವಿನ ಹಾಡಿನ ಪುಸ್ತಕದಿಂದ ಕೆಲವು ಹಾಡುಗಳನ್ನು ಕಂಠಪಾಠ ಮಾಡುತ್ತಿದ್ದೇನೆ. ನಿಮ್ಮ ಸಂಗೀತದ ಅಭ್ಯಾಸ ಇದ್ದಕ್ಕಿದ್ದಂತೆಯೇ ನಿಮಗೆ ಸಾಕೆನಿಸಿದಾಗಿನಿಂದಲೂ ನಾವು ಸಂಗೀತವನ್ನು ಕೇಳಿಯೇ ಇಲ್ಲ." ಬಡಪಾಯಿ ಮಹಿಳೆ ! ತನ್ನ ಗಂಡನ ಮನಸ್ಸಿನಿಂದ ಆ ಹವ್ಯಾಸವನ್ನು ತೊಡೆದುಹಾಕಲು ಕೊನೆಯಿಲ್ಲದ ಪ್ರಯತ್ನಗಳನ್ನು ನಡೆಸಿದವಳು ಆಕೆಯೇ.

ಮಾರನೆಯ ದಿನ ರಾಜ ಬಿಪಿನ್‌ನನ್ನು ಸೇವೆಯಿಂದ ವಜಾ ಮಾಡಿದ, ಆ ಬಡಪಾಯಿಗೆ ಇನ್ನು ಮುಂದೆ ಹೇಗೆ, ಎಲ್ಲಿ ಒಂದು ತುತ್ತು ಅನ್ನ ದೊರೆತೀತು ಎಂದು ಆಲೋಚಿಸದೆ.

ಬಿಪಿನ್‌ಗಾದರೋ ಇದೊಂದೇ ವಿಷಾದದ ಸಂಗತಿಯಾಗಿರಲಿಲ್ಲ. ಅವನು ರಾಜನೊಂದಿಗೆ ಅತ್ಯಂತ ಪ್ರಿಯವಾದ, ಅತ್ಯಂತ ಪ್ರಾಮಾಣಿಕವಾದ ಮಮತೆಯ ಗಾಢ ಸಂಬಂಧವನ್ನಿಟ್ಟುಕೊಂಡಿದ್ದ. ಅವನು ಸಂಬಳಕ್ಕಿಂತಲೂ ಹೆಚ್ಚಾಗಿ ವಾತ್ಸಲ್ಯಕ್ಕಾಗಿ ಆತನ ಸೇವೆ ಮಾಡುತ್ತಿದ್ದ. ಅವನು ತನಗೆ ಬರುತ್ತಿದ್ದ ಕೂಲಿಗಿಂತಲೂ ಹೆಚ್ಚಾಗಿ ತನ್ನ ಸ್ನೇಹಿತನನ್ನು ಪ್ರೀತಿಸುತ್ತಿದ್ದ. ಎಷ್ಟೆಷ್ಟು ಯೋಚನೆ ಮಾಡಿದರೂ, ಬಿಪಿನ್‌ಗೆ ರಾಜನ ಮನಸ್ಸು ಕಡಿದುಹೋದುದಕ್ಕೆ ಕಾರಣವನ್ನು ಕಂಡುಕೊಳ್ಳಲು ಸಾಧ್ಯವೇ ಆಗಲಿಲ್ಲ. "ವಿಧಿ ! ಎಲ್ಲಾ ವಿಧಿ !" ಎಂದು ಬಿಪಿನ್ ತನಗೆ ತಾನು ಹೇಳಿಕೊಂಡ. ನಂತರ, ಆತ ಸದ್ದಿಲ್ಲದೆ, ಎದೆಗುಂದದೆ, ಆಳವಾದ ನಿಟ್ಟುಸಿರೆಳೆದು, ತನ್ನ ಹಳೆಯ ಸಿತಾರನ್ನು ಪೆಟ್ಟಿಗೆಯೊಳಗಿಟ್ಟು, ತನ್ನ ಕಿಸೆಯಲ್ಲಿದ್ದ ಕಡೆಯ ಎರಡು ನಾಣ್ಯಗಳನ್ನು ಪುತೆಗೆ ಕಡೆಯ ಭಕ್ಷೀಸು ಎಂದು ಅವನ ಕೈಯಲ್ಲಿಟ್ಟು ನಡೆದೇಬಿಟ್ಟ-ತನ್ನ ಸೇಹಿತನೆಂದು ಕರೆಯಲು ಯಾವೊಬ್ಬನೂ ಇಲ್ಲದ ವಿಶಾಲ ಪ್ರಪಂಚದೊಳಕ್ಕೆ.

□

ತಿರುಪ್ಪಾವೈ : ಆರು ಗೀತೆಗಳು

ರೂಪಾಂತರ : ಸೌಮ್ಯ

೧.

ಮಾರ್ಗಳಿಯ ಚಂದಿರನು
ಇತ್ತ ಬಾ ಎನ್ನುವನು
ಸನ್ನೆ ಮಾಡಿ ಕರೆಯುವನು
ಸುಮ್ಮನವಸರಿಸುವನು

ಬನ್ನಿ ಬನ್ನಿ ಗೆಳತಿಯರೆ
ಹೋಗದೆಂತು ಬಾಳುವುದೆ

ಹಗಲಲೆದು ಬಳಲಿರುವ
ಕರಿದುಂಬಿ ಮಲಗಿಹುದೆ
ಮಧು ಕುಡಿದು ದಣಿದಿಹುದೆ
ಹೂವಿನೆದೆಯ ತೊರೆದಿಹುದೆ

ಬನ್ನಿರೇ ಗೆಳತಿಯರೆ
ನದಿಯ ಹರಿವು ಸೆಳೆದಿಹುದೆ

ನಿಃಸ್ವನದ ವನರಾಜಿ
ಕಾರ್ಮೆಯ್ಯ ನೆನಪಿಸಿದೆ
ನರಹರಿಯು ಕಾದಿರುವನೆ
ನದಿಯ ತಟದೆ

ಬನ್ನಿರೇ ಗೆಳತಿಯರೆ
ಸರಿವ ಕಾಲ ನೆನಪಿಸಿದೆ

ಮಾರ್ಗಳಿಯ ಚಂದಿರನು
ಸುಮ್ಮನವಸರಿಸುವನು
ಮಾರಮಿತ್ರನಿಂದು ತಾನು
ಹರಿಯ ದೂತನಾಗಿಹನು

ಬನ್ನಿರೇ ಗೆಳತಿಯರೆ
ಅರಳಿ ಮೈ ಹೂವಾಗಿದೆ

೨.
ಕಂಡಿರೇನೇ ನೀವು ಕಂಡಿರೇನೇ ನನ್ನ
ಗೋವಿಂದನು ಬಂದನಿತ್ತ ಕಂಡಿರೇನೆ

ಕರಿ ಮೈ ಮಿಂಚುತಿರುವ ಕೆನೆಕೆನೆದು ಮೆರೆಯುತಿರುವ
ವಯಸಿಳಿಯದ ಗೊಲ್ಲ ನಲ್ಲ ಗೂಳಿಯಂಥ ಚೆಲುವ ತಾನು

ಬಂದನಿತ್ತ ಹಾರಿ ಹಾರಿ ಕಂಡಿರೇನೇ ನನ್ನ
ಗೋವಿಂದನು ಬಂದನಿತ್ತ ಕಂಡಿರೇನೆ

ಎಲ್ಲವನ್ನು ತಾನುಂಡು ಏನೊಂದನು ಕೊಡದಿರುವ
ಕಣ್ಣಿನಲ್ಲಿ ಹಾವ ಹಗ್ಗ ಕಟ್ಟಿ ನನ್ನ ನುಲಿದಿರುವ

ಮಾರಬಿಟ್ಟ ಬಾಣದಂತೆ ಕೊಂಕಿ ಬಂದನೆ ನನ್ನ
ಗೋವಿಂದನು ಬಂದನಿತ್ತ ಕಂಡಿರೇನೆ

೩.
ಓಓ ಪಾಂಚಜನ್ಯ ದೂರ ಸರಿ ಸರಿ
ಎಷ್ಟು ಕಾಲ ಅಧರ ಮೋಹ ಬಳಲಿ ನಿಂತ ಹರಿ

ಓಓ ಪಾಂಚಜನ್ಯ ಮಾಡಿದೆ ನೀನ್ಯಾವ ಮೋಡಿ
ಯಾರ ನೆನಪು ಬೇಕವನಿಗೆ ನಿನಗೆ ತುಟಿಯ ನೀಡಿ

ಓಓ ಪಾಂಚಜನ್ಯ ಹವಳಕು ಕೆಂಪಲ್ಲವೆ ದೇವನವನ ತುಟಿ
ಉಸಿರ ಕಂಪು ಗುಟ್ಟು ಹೇಳು ಯಾವ ಹೂವು ಕಸ್ತೂರಿ

ಓಓ ಕಿವುಡಿಯೇನು ಮೂಕಳೇನು ಬಿಡಲಾಗದ ಸಂಗಕೆ
ಹೆಂಗೆಳೆಯರ ಒಡಲು ಹುಣ್ಣು, ಕಿಚ್ಚಿಕ್ಕಲಿ ಸ್ವಾರ್ಥಕೆ

ಓಓ ಸೋಕಬೇಡ ಸಾಕು ತರವಲ್ಲವು ಬಿಡೆ
ದಾರಿ ಬಿಡು ಮಧುವರಸುವ ರಾಶಿ ಇರುವೆ ಸಾಲಿಗೆ

೪.

ಕಂಡೆ ಬೃಂದ ಕಂಡೆ ಬೃಂದ ಕರಿಯಗೊಲ್ಲ ಬಂದ
ಕೂಗಲಿಲ್ಲ ಕರೆಯಲಿಲ್ಲ ಪರಿವಾರದೊಡನೆ ಬಂದ
ಬಲರಾಮ ಬಂದ ಮಡದಿಯೊಡನೆ ಕುಲದ ಮಂದಿಯೊಡನೆ
ಹಿಂದೆ ಸಾನು ಹೆಜ್ಜೆ ಹಾಕಿ ಕಳ್ಳನಂತೆ ಬಂದ

ಕದ್ದು ತೆರೆಯ ಮರೆಯಲಿದ್ದೆ ಕಾಣದಂತೆ ರಂಗ
ಬರೆದು ಎಣಿಸಿ ನೋಡುತ್ತಿದ್ದೆ 'ಕೂಡಲಿ'ತ್ತು ಚಂದ
ತಂದೆ ನೋಡುತ್ತಿದ್ದ ಗುಣಿಸಿ ಪಂಚಾಂಗದ ಫಲವ
ಯಾವ ಯೋಗ, ಯಾವ ಕರಣ, ಯಾವ ಪಕ್ಷ ದಿನವ

ಬಂದ ಬೃಂದ ಬಂದ ಚೋರ ಹಿಂದೆ ಬಂದು ನಿಂದ
ಕದ್ದು ಕೈನ ಬಿಡದೆ ಹಿಡಿದು ಕಣ್ಣ ಮುಚ್ಚ ಬಂದ
ತಡವಿಲ್ಲದೆ ನಿಶ್ಚಿತಾರ್ಥ ಮರುದಿನವೇ ಮದುವೆ
ಕಂಕಣವನು ಬಿಗಿದ ಕೈ ಸೆರಗು ಗಂಟು ಜೋಡಿ ಸೈ

ಕಂಡೆಯಲ್ಲ ಬೃಂದ ನೀನು ಕರಪಿಡಿದಿಹ ಕೈನ
ಕೈ ಹಿಡಿದು ಸುತ್ತ ನಡೆದು ನೀಡಿದಂಥ ವಚನ
ಅರಳು ಸುರಿದು ಹೋಮ ಕುಂಡ ಕಣ್ಣೀರಿದು ಹೊಗೆಯದೊ
ಬೀದಿಯಲ್ಲಿ ಕೂಡಿನಡೆದು ಆರತಿಯಾಯಾಸವೊ

ನಿನ್ನಾಣೆ ನಂಬು ಬೃಂದ ಕೈಯ ಪಿಡಿದನೆ
ಕನಸುಳಿಯಿತು ಅಂತೆ ಬೃಂದ ನವಿರುಳಿಯಿತೆ

ಕೂಡಲು : ಒಂದು ದೊಡ್ಡ ವೃತ್ತದಲ್ಲಿ ಹಲವು ಸಣ್ಣ ವೃತ್ತಗಳ ಬರೆದು ಹಾಗೆ ಎಣಿಸದೆ ಬರೆದ ವೃತ್ತಗಳು ಸರಿಯೆ, ಬೆಸವೆ ನೋಡಿ ಮನದಿಚ್ಛೆ ಪೂರೈಸುವುದೇನೋ ಎಂದು ತಿಳಿಯುವ ಕ್ರಮ.

೫.

ನನ್ನ ಇರವಿನರ್ಥ ಬೇರೆ ರೂಪ ಬೇರೆ ಬೃಂದೆ
ಬೇರೆ ಮನಸು ಬೇರೆ ಲೋಕ ಅರಿವೆಯೆಂತು ಹೇಳೆ
ಮೂಕನೊಡನೆ ಮಾತಿನಲ್ಲಿ ಕಿವುಡನಿರುವ ಬೃಂದೆ
ನಾನು ನೀನು ಒಂದೆ ಎಂದೆ ಹೇಗೆ ಬಂತೆ ಹೇಳೆ

ಎದೆಯ ಬಿಗುವು ಬಿಸಿಗೆ ಕರಗಿ ಜೋತು ಬಿದ್ದ ಮನಸು
ಪುರುಷೋತ್ತಮನ ಸೊಂಟದಲ್ಲಿ ಪೀತಾಂಬರವುಂಟು
ತಂದು ಬೀಸು ತಣಿಯಲೆಂಬ ಹಂಬಲವನು ತಣಿಸು
ಬೇರೆ ಗಾಳಿ ನಿಂತುಬಿಡಲಿ, ಯಾವುದದರ ಕನಸು

ಉಬ್ಬಿಕೊಬ್ಬಿ ಜೋಡಿ ಮೊಲೆ ಅವನ ಕೈನ ಸೋಕಿಗೆ
ನೇಮಿಸೆನ್ನ ಚಕ್ರ ಹಿಡಿದ ವೆಂಕಟಗಿರಿನಾಥಗೆ
ಕಾದು ಕಾದ ನೂರು ಕಣ್ಣ ನನ್ನ ಮನವು ಗ್ರಹಿಸಿದೆ
ಮನುಷ್ಯ ಮಾತ್ರ ಹಿಡಿಯಲೆಂದೆ, ನನ್ನ ಜೀವ ಬೆಂಕಿಗೆ

೬.
ಏನು ಹೇಳಿದ್ದೆ ನೀನು ಗರುಡಗಮನ
ನಿದ್ರೆ ತಿಳಿದೆದ್ದಾಗ ಕನಸಿನಾಣತಿಯು ಮಾತ್ರ ನೆನಪಿನಲ್ಲಿ
ಹೋಗು ಹೋಗೆಂದೆ, ಕವಿತೆ ನಾನೆಂದೆ, ಮಾಲೆಕಟ್ಟುವ
ಮನಸು ತಿಳಿದಿದ್ದು ಏನು, ಕಟ್ಟುತ್ತ ಮನಸ್ಸು ನೆನೆಸಿದ್ದು ಏನು
ಹೂ ನಾರು ಪತ್ರೆ, ಮಾಲೆ ಹೊತ್ತ ಮೂರುತಿ ಮಾತ್ರ
ನುಡಿದದ್ದು ಸರ್ವದಾ ವಟಪತ್ರಶಾಯಿ, ವಟಪತ್ರಶಾಯಿ, ವಟಪತ್ರಶಾಯಿ
ಶರಣು, ಶರಣು, ಶರಣೆಂದ ಮಂತ್ರ ಮಾತ್ರ

ಏನನ್ನಾದರೂ ಏಕೆ ಕಲಿಯಬೇಕು ಗರುಡಗಮನ
ನನ್ನರಿವಿಗೆ ದಕ್ಕಿದ್ದು ಹೂಪತ್ರೆ ಸ್ಪರ್ಶ
ವಲ್ಲಭದೇವನ ಮುಂದು ಸಾರ ಹೇಳಿದೆನಂತೆ
ಸಾಕಕ್ಷರವೆರಡು ನಿನ್ನಂತೆ, ನೀನೇ
ಕಲಿತವರು ಸೋತರೆಂದರು, ಲಕ್ಷ್ಯ ನಿನ್ನ ಮೇಲಿತ್ತೆ
ಲೋಕ ಬಂದಿತು ಕಣ್ಗೆ, ಗೋದೆಯಿಂದೆ
ತುಳಸಿ ಬೃಂದಾವನದ ಮುಂದು ಹೊಳೆದ ಹೊಳಪಿನ ಹಿಂದೆ
ಎಲೆ ಹೂಗಳಲ್ಲಿ ಸಿಕ್ಕಿದ್ದಕ್ಕು
ಕಂದನ ಕಸ್ತೂರಿ ಉಸಿರಿನ ಕಂಪಿನಲ್ಲಿ ಸಿಕ್ಕಿದ್ದಕ್ಕು
ನಡುವೆಯಿತ್ತು ನೋವಿನ ನಲಿವಿನ ಎದೆ ಛಳುಕು, ದಿಗಿಲು
ಬೃಂದಾವನದಲ್ಲಿ ಉತ್ಥಾನ ದ್ವಾದಶಿಯಂದು ನಲಿದ ತುಳಸಿ
ಯ ಹಾಗೆ ಮಗು ನಕ್ಕ ನಂತರದ ಇಷ್ಟೂ ಕಾಲ
ಜಗದ್ರಕ್ಷಕ ಕಾವನೆಂಬ ವಿಶ್ವಾಸವಿತ್ತು
ಸುಳ್ಳಾದೀತೆ ಎಂಬ ಭಯ ಕಾಡುತ್ತಿದೆ

ಅವನ ನಿಜ ಅವನಲ್ಲೇ ಸುಳ್ಳಾದರೆ
ಅವನಿಗೆ ಶಾಸನ ಮಾಡುವವರ‍್ಯಾರೆ
ಗೋದೆ

□

ಸೌಮ್ಯ, ಡಬ್ಲ್ಯೂ-೧೪, ನಂ. ೫೨೬, ಜಯನಗರ 'ಬಿ' ಬ್ಲಾಕ್, ಕೋಲಾರ-೫೬೩೧೦೧.

ಆಲಂಬಗಿರಿಸ್ವಾಮಿ ಹಿಡಿದವನೆ ಸೆರಗ...

ಮೂಲ : ಜಾನಪದ
ಸಂಗ್ರಹ : ಸ. ರಘುನಾಥ

ಕೋಲಾರು ಸೀಮೇಲಿ ಕೊಮರಿ ಮಾದಿಗರುಡುಗಿ
ಅವಳ ಕೂದಾಲು ಬಾರೇಳು ಉದ್ದ
ಹಿಡಿದಾರೆ ಹಿಡಿಯಾಸು ಅಂದ

ಈರಮ್ಮನಸುತಾಳೆ ಅಮ್ಮಮ್ಮ ವಾಯಮ್ಮ
ಅಲ್ಲಾರು ಒಂಟವರೆ ಆಲಂಬಗಿರಿಕ
ನಾನೂ ಒಂಟೇನೆ ನಂದಿಪರಿಸೇಕ

ಆಲಂಬಗಿರಿಸಾಮಿ ಅಲುಪ ದೇವಾನೆ
ಕಂಡಾರೆ ಬಿಡುವೊಲ್ಲ ಬ್ಯಾಡಮ್ಮ ಬ್ಯಾಡೆ
ಬ್ಯಾಡಮ್ಮ ಈರಮ್ಮ ಮಾಯಕಾರಾನೆ

ಇಬ್ಬಾರು ಇಲ್ಲಮ್ಮ ಮುವ್ವಾರು ಇಲ್ಲಮ್ಮ
ಇರುವೋಳು ಒಬ್ಬಾಳೆ ಕೊಮರಿ ಈರಮ್ಮ

ಅಲ್ಲಾರು ಒಂಟವರೆ ಆಲಂಬಗಿರಿಕ
ಓಗಾದೆ ಇರಲಾರ ವಾಯಮ್ಮ ತಾಯೆ
ಓಗಂದ್ರು ಒಂಟೀನೆ ಇರುವಂದ್ರು ಒಂಟೀನೆ
ಆಲಂಬಗಿರಿಸಾಮಿ ಅಸುವಂತ ದೇವಾನೆ

ಬ್ಯಾಡಂದ್ರು ಒಂಟೀಯ ಇರುವಂದ್ರು ಒಂಟೀಯ
ನನಕೇನು ತಿಳಿಯಾದ ಅಪ್ಪನ್ನ ಕೇಳೋಗು
ವಾಯಪ್ಪ ವಾಯಪ್ಪ ನನ್ನ ಹೆತ್ತಪ್ಪ

ಅಲ್ಲಾರು ಒಂಟವರೆ ಆಲಂಬಗಿರಿಕ
ನಾನೂ ಒಂಟೀನೆ ನಂದಿಪರಿಸೇಕ

ಆಲಂಬಗಿರಿಸಾಮಿ ಅಲುಪ ದೇವಾನೆ
ಕಂಡಾರೆ ಬಿಡುವೊಲ್ಲ ಬ್ಯಾಡಮ್ಮ ಬ್ಯಾಡೆ
ಬ್ಯಾಡಮ್ಮ ಈರಮ್ಮ ಮಾಯಕಾರಾನೆ

ಇಬ್ಬಾರು ಇಲ್ಲಮ್ಮ ಮುವ್ವಾರು ಇಲ್ಲಮ್ಮ
ಇರುವೋಳು ಒಬ್ಬಾಳೆ ಕೊಮರಿ ಈರಮ್ಮ

ಅಲ್ಲಾರು ಒಂಟವರೆ ಆಲಂಬಗಿರಿಕ
ಓಗಾದೆ ಇರಲಾರೆ ವಾಯಪ್ಪ ತಂದೆ
ಓಗಂದ್ರು ಒಂಟೀನೆ ಇರುವಂದ್ರು ಒಂಟೀನೆ
ಆಲಂಬಗಿರಿಸಾಮಿ ಅಸುವಂತ ದೇವಾನೆ

ಬ್ಯಾಡಂದ್ರು ಒಂಟಂತ ಮಗಳೀಗೆ
ಬೆಳ್ಳಿಕೊಪ್ಪರಿನಾಗ ಬಿಸಿನೀರು ಕಾಸಿ
ಹವಳಕೊಪ್ಪರಿನಾಗ ತಣ್ಣೀರು ಅಟ್ಟಿ
ಆ ನೀರು ಈ ನೀರು ಕಲಬೆರಿಕೆ ಮಾಡಿ
ಜಾಜಿಸೀಕಾಯಾಗ ತಾನಾವ ಮಾಡಿಸಿ

ಸಂಪಂಗಿ ಎಣ್ಣೇಯ ತಲೆ ತುಂಬ ಮಡಗಿ
ಬೆಳ್ಳೀಯ ಸೀಪಾಗ ತಲೆಸಿಕ್ಕು ಬಿಡಿಸಿ
ಹವಳಾದ ಸೀಪಾಗ ಪಾಪಡಿಯ ತಗದು
ಪಾಪಡಿಕ ಮಡಗಿದರು ಹತ್ತು ಸಾವಿರ ಮುತ್ತು
ಜಡೆಯಾಗ ಮಡಗಿದರು ಹತ್ತು ಸಾವಿರ ಮುತ್ತು

ಉಲಿರಂಗುಸ್ಯಾಲೆಯ ಕಟ್ಟಿ
ಉಲಿರಂಗು ರವ್ಕೇಯ ತೊಟ್ಟು
ನೋಡಿಕೊಂಡವಳೆ ನೆಳ್ಳು
ನಿಲುಗನ್ನಡಿಯಾಗೆ ನಿಂತು

ನನ್ನಂಗೆ ಎಣ್ಣು ಪರಪಂಚದಾಗಿಲ್ಲ
ನನ್ನಂಗೆ ಎಣ್ಣು ಯಾಲೋಕದಾಗಿಲ್ಲ
ನನ್ನಂಗೆ ಎಣ್ಣು ಎಲ್ಲೂನು ಇಲ್ಲ

ಬೆಳ್ಳಾನ ಕುದುರೆ ಎಕ್ಕೀದ ಈರಮ್ಮ
ಇಲ್ಲಿ ಬುಟ್ಟಂತ ಸವ್ವಾರಿ ಪರಿಸೇಲಿ ನಿಲಿಸವಳೆ

ಬಾಲೆ ಬಂದೂದ ಬಿರುಸೂಕ ಪರಿಸೆಲ್ಲ ಬೆದುರಾದೆ
ತೇರೀನ ಮ್ಯಾಗಲ ಆಲಂಬಗಿರಿಸಾಮಿ
ಮೂರು ಸುತ್ತಾಕಿ ಪರಿಸೇಯ ಓಡಿದವನೆ ಸೆರಗ

ಬುಡುಬುಡು ಓ ಸಾಮಿ ಇವರಾವ ಅರಿಯೆ
ತಡಿತಡಿ ಓ ಸಾಮಿ ತಂಟೆ ನಾನರಿಯೆ
ಇವರಾವ ತಿಳಿಯಾದ ಬಾಲೆಯ ಬುಡು
ಇವರಾವ ತಿಳಿಯಾದ ಸೆರಗನ್ನು ಬುಡು

ಇವರಾವ ತಿಳಿಯಾದ ಸೆರಗ ಬಿಡುವೂದಿಲ್ಲ
ತಂಟೇಯ ತಿಳಿಯಾದ ಸೆರಗ ಬಿಡುವೂದಿಲ್ಲ
ಕುಲವಾವುದೇ ನಿನ್ನ ತಳವಾವುದೇ
ಏಳಾಲೆ ಓ ಬಾಲೆ ಇವರಾವನೇಳು

ತಳವು ತಂಗಡಿ ಕಟ್ಟೆ
ಕುಲವು ಈಡಿಗ ಕುಲವು

ಈಡಿಗ ಕುಲವಾದ್ರೆ ಇದು ಶಾನ ಒಳ್ಳೇದು
ಹಿಡಕೊಂಡ ಸೆರಗನ್ನ ಬಿಡುವೂದು ಇಲ್ಲೆ

ಕೋಲಾರು ಸೀಮೋಳು ಕೊಮರಿ ಮಾದಿಗಳು
ಮಾದಿಗ ಕುಲದೋಳು ಬಿಡು ಸಾಮಿ ಸೆರಗು

ಮಾದಿಗ ಕುಲವಾದ್ರೆ ಇನ್ನಾನು ಮೇಲಾತು
ಹಿಡಕೊಂಡ ಸೆರಗನ್ನ ಬಿಡುವೂದು ಇಲ್ಲೆ

ಸೆರಗ ಬಿಡಿಸಿಕೊಂಡು ಓಡಿ ಬಂದವಳೆ ಈರಮ್ಮ
ಓಡಿ ಬಂದೋಳು ಸಿಸುವಾಗಿ ಮಲಗವಳೆ

ಇಂದಾಲೆ ಬಂದವನೆ ಆಲಂಬಗಿರಿಸಾಮಿ
ಅಸಗಾಳ ಮೇಸೊ ಓ ಬಾಲ ಕೊಮರಾರೆ
ಈ ದಾರಿನಾಗಾಸಿ ಹುಡುಗಿ ಒಂಟಾಳೆ ?

ಅದು ಯಾನೊ ಓ ಸಾಮಿ ತಿಳಿಯಾದು ನಮಕ

ಕುರಿಗಳನ ಕಾಯೋರೆ ಓ ಬಾಲ ಕೊಮರಾರೆ
ಈ ದಾರಿನಾಗಾಸಿ ಹುಡುಗಿ ಒಂಟಾಳೆ ?

ಅದು ಯಾನೊ ಓ ಸಾಮಿ ತಿಳಿಯಾದು ನಮಕ
ಆಡುಗಳ ಮೇಸೋರೆ ಓ ಬಾಲ ಕೊಮರಾರೆ

ಈ ದಾರಿನಾಗಾಸಿ ಹುಡುಗಿ ಒಂಟಾಳೆ ?

ಅದು ಯಾಸೊ ಓ ಸಾಮಿ ತಿಳಿಯಾದು ನಮಕ

ಬೀದ್ಬೀದಿ ತಿರುಗವನೆ ಆಲಂಬಗಿರಿಸಾಮಿ
ಮನೆಮನೆ ತಿರುಗವನೆ ಆಲಂಬಗಿರಿಸಾಮಿ
ಮನೆ ಗುರುತ ಇಡಿದವನೆ ಆಲಂಬಗಿರಿಸಾಮಿ
ಮನೆ ಒಳಿಕೆ ಬಂದವನೆ ಆಲಂಬಗಿರಿಸಾಮಿ
ಅತ್ತತ್ತೆ ವಾಯತ್ತೆ ನಿನ ಮಗಳು ಎಲ್ಲಮ್ಮ ?

ನನ ಮಗಳು ಆಗವಳೆ ಅಸಗೂಸು ಸಾಮಿ
ತೊಟ್ಟಿಲಾಗೆ ಮಲಗವಳೆ ಸಿಸುವಾಗಿ ಸಾಮಿ

ಅಸಗೂಸು ಆದ್ರೇನು ಭೋ ಸಂದವಾಯ್ತು
ನಿನ ಮಗಳ ಮೇಲಾಗಿ ಮದುವ್ಯಾದೇನು ಕೇಳು

ಇದು ಏನು ಓ ಸಾಮಿ ಇದು ಎಂಗೆ ನಡದಾತು
ಮಾದಿಗರ ಮಗಳ ಮದುವ್ಯಾಗುತಾರೇನು ?

ಮಾದಿಗರ ಮಗಳಾದ್ರೆ ಇನ್ನಾನು ಮೇಲಾತು
ಮೇಲಾಗಿ ಮದುವ್ಯಾದೇನು ಕೇಳು

ಆಲಂಬಗಿರಿಸಾಮಿ ಬಿಡುವೊಲ್ಲೆ ಅಂದ
ಮದುವ್ಯಾಗದೆ ತಳ ಬಿಡುವೊಲ್ಲೆ ಅಂದ

ಮದುವೇಯ ಮಾಡಿದರು ಆಲಂಬಗಿರಿಸಾಮ್ಗೆ
ಒಂಟಾನೆ ಕರಕೊಂಡು ಆಲಂಬಗಿರಿಗೆ

ಕೂಡೀದ ಹೆಂಡಿರಿಗೆ ರೇಸೀಮೆ ಸ್ಯಾಲೆ
ಮದುವ್ಯಾದ ಹೆಂಡಿರಿಗೆ ನೂಲೀನ ಸ್ಯಾಲೆ
ಕೂಡೀದ ಹೆಂಡಿರಿಗೆ ಕೈಯ ಕಡಗಗಳು
ಮದುವ್ಯಾದ ಹೆಂಡಿರಿಗೆ ಕರಿಮಣಿ ಸರವು
ಕೂಡೀದ ಹೆಂಡಿರು ಬಲ ತೊಡೆಯ ಮ್ಯಾಲೆ
ಮದುವ್ಯಾದ ಹೆಂಡಿರು ಎಡ ತೊಡೆಯ ಮ್ಯಾಲೆ

□

ಸ. ರಘುನಾಥ, ಶ್ರೀ ಲಕ್ಷ್ಮೀ ಪ್ರಾವಿಷನ್ ಸ್ಟೋರ್ಸ್ ರಸ್ತೆ, ರಾಮಕೃಷ್ಣ ಬಡಾವಣೆ, ಶ್ರೀನಿವಾಸಪುರ, ಕೋಲಾರ ಜಿಲ್ಲೆ.

ಕಾಶ್ಮೀರದ ಋಷಿ ಸೂಫಿಗಳು

ಜೆ. ಬಾಲಕೃಷ್ಣ

ಒಂದೇ ತಂದೆತಾಯಿಯ ಮಕ್ಕಳಲ್ಲವೆ ನಾವು
ನಮ್ಮಲ್ಲೇಕಿರಬೇಕು ಒಡಕು ?
ಹಿಂದೂ ಮುಸಲ್ಮಾನರು ಒಟ್ಟಿಗೇ ಪೂಜಿಸಲಿ
ಇರುವ ಒಬ್ಬನೇ ದೇವನನ್ನು
ಜೊತೆಯಲ್ಲೇ ಭೂಮಿಗೆ ಬಂದವರು ನಾವು
ನಾವಲ್ಲದೆ ಮತ್ತಾರು ಹಂಚಿಕೊಳ್ಳಬೇಕು
ನಮ್ಮ ಸುಖ ದುಃಖಗಳನ್ನು ?
-ಋಷಿ ಶೇಖ್ ನೂರುದ್ದೀನ್

ಹದಿನಾಲ್ಕನೇ ಶತಮಾನದ ಕೊನೆಯ ಅವಧಿ. ಕಾಶ್ಮೀರದ ಅನಂತನಾಗ್ ಜಿಲ್ಲೆಯ ಕೈಮು ಗ್ರಾಮದ ಮನೆಯೊಂದರಲ್ಲಿ ಮಗುವೊಂದು ಹುಟ್ಟಿತ್ತು. ಹುಟ್ಟಿದ ಮಗು ತಾಯಿಯ ಹಾಲೇ ಕುಡಿಯುತ್ತಿರಲಿಲ್ಲ. ತಾಯಿ ಮತ್ತು ನೆರೆಹೊರೆಯವರು ಎಷ್ಟು ಪ್ರಯತ್ನಿಸಿದರೂ ಮಗು ತಾಯಿಯ ಮೊಲೆಗೆ ಬಾಯಿ ಹಾಕಲೇ ಇಲ್ಲ. ಮೂರು ದಿನಗಳಾದುವು. ಮಗು ಹಸಿವೆಯಿಂದ ಬಳಲಿತ್ತು. ಆಗ ಇದ್ದಕ್ಕಿದ್ದಂತೆ ಹೆಣ್ಣೊಬ್ಬಳು ಆ ಮನೆಗೆ ಪ್ರವೇಶಿಸಿ ಆ ಮಗುವನ್ನು ತನ್ನ ಮಡಿಲಲ್ಲಿ ಮಲಗಿಸಿಕೊಂಡು, ಮಗುವನ್ನು ಚುಂಬಿಸಿ ತನ್ನ ಮೊಲೆಯನ್ನು ಮಗುವಿನ ಬಾಯಿಗಿಟ್ಟು ಆ ಮಗುವಿನ ಕಿವಿಯಲ್ಲಿ ಪಿಸುಗುಟ್ಟಿದಳು, 'ಹುಟ್ಟಿದ್ದಕ್ಕೆ ನಾಚಿಕೆ ಪಡದ ನಿನಗೆ ತಾಯಿಯ ಮೊಲೆಗೆ ಬಾಯಿ ಹಾಕಲು ನಾಚಿಕೆಯೆ ? ಮಗು ಆಕೆಯ ಹಾಲು ಕುಡಿಯಿತು, ನಂತರ ಎಲ್ಲ ಸಹಜ ಮಕ್ಕಳಂತೆ ತನ್ನ ತಾಯಿಯ ಹಾಲು ಕುಡಿಯಿತು.

ಆ ಮಗುವಿಗೆ ಹಾಲೂಡಿಸಿದ ಆಕೆ ಲಲ್ಲೇಶ್ವರಿ, ಒಬ್ಬ ಹಿಂದೂ ಮತ್ತು ಆ ಮಗು ಶೇಖ್ ನೂರ್-ಉದ್-ದಿನ್, ಒಬ್ಬ ಮುಸಲ್ಮಾನ. ಅವರನ್ನು ಹಿಂದು ಮತ್ತು ಮುಸಲ್ಮಾನರು ಎಂದು ನಾವು ಪರಿಗಣಿಸುವುದೇ ಅವರಿಗೆ ಮಾಡುವ ಬಹು ದೊಡ್ಡ ಅಪಮಾನವಾಗುತ್ತದೆ. ಏಕೆಂದರೆ

ಅವರು ಧರ್ಮಗಳ ಈ ಹಣೆಪಟ್ಟಿಯನ್ನು ಮೀರಿದವರಾಗಿದ್ದರು. ಆಕೆಯನ್ನು ಹಿಂದೂಗಳು ಲಲ್ಲೇಶ್ವರಿ ಎಂದರೆ, ಮುಸಲ್ಮಾನರು ಲಲ್ಲಾ ಅರೀಫಾ ಎನ್ನುತ್ತಿದ್ದರು. ಎಲ್ಲರಿಗೂ ಆಕೆ ಲಾಲ್ ದೇಡ್ (ಲಾಲ್ ಅಜ್ಜಿ) ಆಗಿದ್ದಳು. ಶೇಖ್ ನೂರ್-ಉದ್-ದಿನ್ ಹಿಂದೂಗಳಿಗೆ ಸಹಜಾನಂದ ಆಗಿದ್ದರು ಹಾಗೂ ಎಲ್ಲರಿಗೂ ಆತ ನಂದಋಷಿ. ಲಲ್ಲೇಶ್ವರಿ ಮಹಾನ್ ಶಿವಭಕ್ತೆಯೂ ಹೌದು, ಋಷಿ ಸೂಫಿಯೂ ಹೌದು. ಆಕೆಯ ಒಂದು 'ವಾಕ್' (ವಚನ) ಹೀಗಿದೆ :

ಶಿವನಿಲ್ಲದ ತಾಣವ್ಯಾವುದು ?
ಹಿಂದು ಮತ್ತು ಮುಸಲ್ಮಾನರ ನಡುವೆ
ಗೆರೆಯೆಳೆಯುವುದು ಸಾಧ್ಯವೆ !
ಹೋ ಮನುಜನೆ !
ವಿವೇಚನೆಯುಳ್ಳವನಾದರೆ ಗುರುತಿಸಿಕೊ
ಮೊದಲು ನಿನ್ನೊಳಗಿನ
ದೇವನನ್ನು ನೀನು ಮೊದಲು.

ಅದೇ ಶೇಖ್ ನೂರ್-ಉದ್-ದಿನ್ ಪ್ರಾರ್ಥಿಸಿದ :

ಪದಮನಪುರದ ಆ ಲಲ್ಲಾ,
ಅಮೃತವನ್ನು ಗುಟುಕು ಗುಟುಕು ಕುಡಿದವಳು,
ಪ್ರತಿಯೊಂದರಲ್ಲೂ ಶಿವನ ಮುಖವನ್ನು ಕಂಡಳು !
ಹೋ ಶಿವನೇ !
ದಯಪಾಲಿಸು ನನಗೂ ಆ ವರವ.

ಈ ಕತೆ ಕಟ್ಟುಕತೆಯಾಗಿರಬಹುದು, ಕಾಲ್ಪನಿಕವಾಗಿರಬಹುದು. ಆದರೆ ಇದು 'ಕಾಶ್ಮೀರಿಯತ್'ನ ಅಂತರಂಗವನ್ನು ಪ್ರತಿನಿಧಿಸುತ್ತದೆ. ಅಲ್ಲಿನ ವಿವಿಧ ಸಮನ್ವಯತೆಯನ್ನು ಸಂಕೇತಿಸುತ್ತದೆ. ಇದೇ ಕಾಶ್ಮೀರದ 'ಋಷಿ ಸೂಫಿ ಧರ್ಮ'ದ ಅಂತರಾಳ. ನಂದ ಋಷಿಗೆ ಹಾಲು ಕುಡಿಸಿದ ಲಲ್ಲೇಶ್ವರಿಯ ಕಾರ್ಯವನ್ನು ಆಕೆ ತನ್ನಲ್ಲಿನ ಅಧ್ಯಾತ್ಮ ಜ್ಞಾನವನ್ನು ಆತನಿಗೆ ಗುರುವಿನಂತೆ ಧಾರೆ ಎರೆದದ್ದನ್ನು ಸಾಂಕೇತಿಕವಾಗಿ ತೋರಿಸುತ್ತದೆ ಎನ್ನುತ್ತಾರೆ.

ಸೂಫಿಸಂ ಬದುಕಿನ ಒಂದು ರೀತಿ ಅಥವಾ ಬದುಕನ್ನು ಸ್ವಾಸ್ಥ್ಯ ದೃಷ್ಟಿಯಿಂದ ನೋಡುವ ಒಂದು ಮಾನಸಿಕ ಅವಸ್ಥೆ. ಸೂಫಿಸಂ ಯಾವುದೇ ಚೌಕಟ್ಟಿನೊಳಗಣ ಧರ್ಮವಲ್ಲ. ಬದಲಿಗೆ ಅದು ಪ್ರೇಮ, ಸತ್ಯಾನ್ವೇಷಣೆಯ ಬದುಕಿನ ಅನುಭಾವದ ಖಾಸಗಿ ಅನುಭವಗಳ ಖಜಾನೆ. ನಿಜವಾದ ಸೂಫಿಯಾದವ ಯಾವ ಧರ್ಮದ ಹಿಂಬಾಲಕನೂ ಅಲ್ಲ. ಯಾವುದೇ ಧರ್ಮದ ಕಟ್ಟುಪಾಡುಗಳಿಗೂ ಒಳಪಟ್ಟಿರುವುದಿಲ್ಲ. ಸೂಫಿಸಂ ಎನ್ನುವುದು ಪ್ರೇಮದ ಅನುಭಾವದ ಹಾದಿ. ಆ ಹಾದಿಯ ಪಯಣ ಬೇರೆ ಎಲ್ಲಿಗೂ ಅಲ್ಲ. ಬದಲಿಗೆ ತನ್ನದೇ ಆತ್ಮದೆಡೆಗೆ. ಆ ಹಾದಿಯಲ್ಲಿ ಹೊರಟವನು ತನ್ನ ಹೃದಯದಲ್ಲೇ ಸತ್ಯ ಅಥವಾ ದೇವರನ್ನು ಕಂಡುಕೊಳ್ಳುತ್ತಾನೆ. ಆ ಸತ್ಯ

ಅಥವಾ ದೇವರು ಬೇರೆ ಯಾರೂ ಅಲ್ಲ, ಅದು 'ನೀನೇ ಎಂಬ ನಾನು'. 'ನಿನ್ನ ಹೊರಗಿನದ್ಯಾವುದನ್ನೂ ನೀನು ಅರಿಯಲಾರೆ. ಏಕೆಂದರೆ ಯಾವುದನ್ನಾದರೂ ಸಂಪೂರ್ಣ ಅರಿಯಬೇಕಾದಲ್ಲಿ ಅರಿಯಬೇಕಾದ ವಸ್ತು ನೀನೇ ಆಗಿರಬೇಕು. ಹಾಗಾಗಿ ನಿನ್ನ ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನು ನಿನ್ನೊಳಗಿನ ಅಸೀಮ ವಾಸ್ತವದಲ್ಲೇ ಅರಸಬೇಕು' ಎಂಬುದು ಸೂಫಿಸಂನ ಮೂಲಭೂತ ತತ್ವ. ಸೂಫಿಗಳ ಪ್ರಕಾರ ಸತ್ಯವನ್ನು ಕಂಡುಕೊಳ್ಳಲು ಎಷ್ಟು ಮನುಷ್ಯರಿದ್ದಾರೋ, ಅಷ್ಟೂ ಹಾದಿಗಳಿವೆ.

ಸೂಫಿಸಂಅನ್ನು ಇಸ್ಲಾಂನೊಂದಿಗೆ ಗುರುತಿಸಲಾಗಿದ್ದರೂ, ಸೂಫಿಸಂ ಇಸ್ಲಾಂ ಹಾಗೂ ಈಗಿನ ಇತರ ಪ್ರಮುಖ ಧರ್ಮಗಳಿಗಿಂತಲೂ ಪ್ರಾಚೀನವಾದುದು. ಅದು ಆತ್ಮಕ್ಕೆ ಸಂಬಂಧಿಸಿದ ಒಂದು ಪ್ರಾಚೀನ ವಿದ್ವತ್ತು. ಪ್ರವಾದಿಯ ಮರಣದ ಒಂದು ಶತಮಾನದ ನಂತರ ಸೂಫಿ ಅನುಭಾವ ಒಂದು ಸ್ಪಷ್ಟ ರೂಪು ಪಡೆಯತೊಡಗಿತು. ಆ ಗುಂಪಿನ ಜನರನ್ನು ಸೂಫಿಗಳೆಂದು ಕರೆಯಲಾಯಿತು. ಬಹುಶಃ ಅವರು ತೊಡುತ್ತಿದ್ದ ಉಣ್ಣೆಯ ಬಿಳಿಯ ಬಟ್ಟೆ (ಸೂಫ್)ಯಿಂದಿರಬಹುದು ಅಥವಾ ಅವರ ಆತ್ಮದ ಪರಿಶುದ್ಧತೆ (ಸಫಾ)ಯಿಂದಿರಬಹುದು. ಇಸ್ಲಾಂನ ಮೊದಲ ಶತಮಾನದ ನಿರಂತರ ಆಂತರಿಕ ದಂಗೆ, ರಕ್ತಪಾತ, ರಾಜಕೀಯ ಗುಂಪುಗಳ ಸ್ವಾರ್ಥ, ಅರಾಜಕತೆ, ನೈತಿಕ ಮೌಲ್ಯಗಳ ಅಧಃಪತನಗಳಿಂದಾಗಿ ವಿರಕ್ತತೆ ಬೆಳೆಯಲು ಹೆಚ್ಚು ಅನುಕೂಲಕರವಾಗಿತ್ತು. ಇಸ್ಲಾಂನಲ್ಲಿನ ಅನುಭಾವ ಪ್ರಾಚೀನ ಈರೋಪ್ ಮತ್ತು ಭಾರತದಲ್ಲಿ ಮೊದಲೇ ಆರಂಭಗೊಂಡು ಆದಿ ಇಸ್ಲಾಂನ ಅವಧಿಯಲ್ಲಿ ವಿರಾಗಿಗಳ ರೂಪದಲ್ಲಿ ನೆಲೆಯೂರತೊಡಗಿ ಕ್ರಮೇಣ ಪ್ರವಾದಿಯ ನಂತರದ ಆದಿ ಉಮಯ್ಯಾದ್ ಅವಧಿಯಲ್ಲಿ (ಕ್ರಿ.ಶ. ೬೬೧-೭೫೦) ಪ್ರವಾದಿಯ ಹಿಂಬಾಲಕರ ಪ್ರಾಪಂಚಿಕ ಆಸ್ಥೆಗಳಿಗೆ ವಿರುದ್ಧವಾಗಿ, ಪ್ರತಿಭಟನೆಯಾಗಿ ಬೆಳೆಯತೊಡಗಿತು. ಪ್ರವಾದಿಯ ನಂತರದ ಅವರ ಉತ್ತರಾಧಿಕಾರಿಗಳ ಸುಖ, ವೈಭೋಗ, ಪ್ರಾಪಂಚಿಕ ಮನೋಭಾವ, ಅವರ ಎಲ್ಲೆ ಮೀರಿದ ಬದುಕಿನ ವಿರುದ್ಧದ ಮೌನ ಪ್ರತಿಭಟನೆ ಸೂಫಿಸಂ ಆಗಿತ್ತು.

ಒಂದು ರೀತಿಯಲ್ಲಿ ಸೂಫಿ ಬದುಕು ಸರ್ಕಾರದ ದಬ್ಬಾಳಿಕೆಯ ವಿರುದ್ಧ, ಸಂಪ್ರದಾಯಬದ್ಧ ಧಾರ್ಮಿಕ ಗುರುಗಳ ವಿರುದ್ಧ ಹಾಗೂ ಪಾರಮಾರ್ಥಿಕತೆಗಿಂತ ಇಹಲೋಕದ ಸುಖ ಸಂಪತ್ತುಗಳ ಬಗೆಗೆ ಹೆಚ್ಚು ಆಸ್ಥೆ ಇರುವ ಮುಸಲ್ಮಾನರ ಯಾಂತ್ರಿಕ ಧಾರ್ಮಿಕ ರೀತಿ ರಿವಾಜುಗಳ ವಿರುದ್ಧದ ಪ್ರತಿಭಟನೆಯಾಗಿತ್ತು. ಯಾವುದೇ ರೀತಿಯ ವಿವೇಚನೆಯಿಂದಾಗಲಿ ಅಥವಾ ಧಾರ್ಮಿಕ ರೀತಿ ರಿವಾಜುಗಳಿಂದಾಗಲೀ ಸಂತೃಪ್ತರಾಗದ ಸೂಫಿಗಳು ತಮ್ಮ ಆಂತರಿಕ ಪಾರಮಾರ್ಥಿಕ ಬದುಕನ್ನು ಉನ್ನತ ಮಟ್ಟಕ್ಕೆ ಒಯ್ಯುವುದರ ಬಗೆಗೆ ಹಾಗೂ ಅದರ ಮೂಲಕ ದೇವರೊಂದಿಗೆ ಸಮ್ಮಿಳಿತಗೊಂಡು, ದೇವರನ್ನು ನೇರವಾಗಿ, ಭಾವುಕವಾಗಿ ಅನುಭವಿಸುವ ಪ್ರಯತ್ನ ನಡೆಸಿದರು. ಯಾವುದು ಸಾಂಪ್ರದಾಯಿಕ ಇಸ್ಲಾಂ ಆಗಿತ್ತೋ ಆ ಪರಿಕಲ್ಪನೆಗೆ ಬದಲಾಗಿ, ಪರ್ಯಾಯವಾಗಿ ಚಿಂತಿಸುತ್ತಾ, ಬದುಕುತ್ತಾ ಸೂಫಿಗಳು ಬಂದಿದ್ದಾರೆ.

ಸೂಫಿಸಂನ ಉಗಮದ ನಂತರ ಅದರಲ್ಲಿ ಸುಹರ್ವಾದಿ, ಕುಬ್ರವಿ, ನಕ್ಷಬಂಧಿ, ಖಾದ್ರಿಗಳಂತಹ ಹಲವಾರು ಪಂಗಡಗಳು ಹುಟ್ಟಿಕೊಂಡವು ಹಾಗೂ ಅವು ಪರ್ಷಿಯ, ಮಧ್ಯ ಏಷಿಯ, ಮಧ್ಯ ಮತ್ತು ಉತ್ತರ ಭಾರತಗಳಿಂದ ಕಾಶ್ಮೀರವನ್ನು ಪ್ರವೇಶಿಸಿದವು. ಕಾಶ್ಮೀರದ

ಮುಸಲ್ಮಾನರ ಮೇಲೆ ಅತ್ಯಂತ ಹೆಚ್ಚು ಪ್ರಭಾವ ಬೀರಿರುವುದು ಋಷಿ ಸೂಫಿ 'ಧರ್ಮ'. ಆದರೆ ಸೂಫಿಸಂಅನ್ನು ಧರ್ಮ ಎನ್ನುವುದೇ ಸರಿಯಲ್ಲ. ಋಷಿ ಸೂಫಿ ಪಂಗಡ ಬೇರೆಡೆಯಿಂದ ಎರವಲು ಪಡೆದದ್ದಲ್ಲ, ಅದು ಕಾಶ್ಮೀರದಲ್ಲೇ ಜನ್ಮ ತಳೆದದ್ದು. ಅದು ಮೇಲ್ನೋಟಕ್ಕೆ ಇಸ್ಲಾಂ ಛಾಪು ಹೊಂದಿದ್ದರೂ ಹಿಂದೂ ಋಷಿಗಳ ವೈರಾಗ್ಯತೆಯ ಹಾಗೂ ಬೌದ್ಧರ ನಿರ್ವಾಣದ ತಳಹದಿಯ ಮೇಲೆ ರೂಪು ತಳೆದಿದೆ. ಋಷಿ ಸೂಫಿ ಪದದಲ್ಲಿನ 'ಋಷಿ' ಪದ ಸಂಸ್ಕೃತದ 'ಋಷಿ'ಯಿಂದ ಪಡೆದಿದ್ದಾದರೂ, ಕೆಲವು ಮಧ್ಯಕಾಲೀನ ಮುಸಲ್ಮಾನ ವಿದ್ವಾಂಸರು ಅದು ಪರ್ಷಿಯನ್‌ನ 'ರೈಷ್' ಅಥವಾ 'ರಿಷ್'ನಿಂದ ವ್ಯುತ್ಪತ್ತಿಯಾದದ್ದು ಎನ್ನುತ್ತಾರೆ. 'ರೈಷ್' ಅಥವಾ 'ರಿಷ್' ಎಂದರೆ ಪಕ್ಷಿಯ ರೆಕ್ಕೆಪುಕ್ಕ ಎಂದರ್ಥ. ಬಾಬಾ ದಾವೂದ್ ಮಿಷ್ಕತಿ ಹೇಳುವಂತೆ ಋಷಿ ಸೂಫಿ ಒಬ್ಬ ರೆಕ್ಕೆಪುಕ್ಕವಿಲ್ಲದ ಪಕ್ಷಿಯ ಹಾಗೆ ಹಾಗೂ ಆತ 'ವಿಧಿ'ಯ ಗಾಳಿ ಬೀಸಿದೆಡೆಗೆ ಹೋಗುವಾತ. ಇನ್ನು ಕೆಲವರು ಋಷಿ ಪದ ಅರಾಬಿಕ್‌ನ 'ರಿಷಾ'ದಿಂದ ಬಂದದ್ದು ಎನ್ನುತ್ತಾರೆ. ರಿಷಾ ಎಂದರೆ 'ಬೇರು' ಎಂದರ್ಥ. ಋಷಿ ಸೂಫಿಗಳು ತಮ್ಮ ವಾಂಛೆಗಳನ್ನು ಬೇರು ಸಹಿತ ಕಿತ್ತೊಗೆದಿರುತ್ತಾರೆ. ಆದುದರಿಂದ ಈ ಹೆಸರು ಎನ್ನುತ್ತಾರೆ ಅವರು. ಫಾರ್ಸಿ ಭಾಷೆಯಲ್ಲಿ 'ರೇಷ್' ಎಂದರೆ 'ಗಾಯ' ಎಂದರ್ಥ. ಸೂಫಿಗಳ ಹೃದಯ ದೇವರ ಮೇಲಿನ ಪ್ರೇಮದಿಂದ ಗಾಯಗೊಂಡಿರುವುದರಿಂದ ಈ ಹೆಸರು ಎನ್ನುತ್ತಾರೆ ಕೆಲವು ವಿದ್ವಾಂಸರು. ಅದೇ ಫಾರ್ಸಿ ಭಾಷೆಯಲ್ಲಿ 'ರಿಷಿ' ಎಂದರೆ 'ರೆಕ್ಕೆ' ಹಾಗೂ ಅನುಭಾವದ ರೆಕ್ಕೆಗಳ ಮೂಲಕ ಸೂಫಿ ದೇವರನ್ನು ತಲುಪಬಲ್ಲ ಸಾಮರ್ಥ್ಯ ಹೊಂದಿರುತ್ತಾನೆ, ಆದುದರಿಂದ ಈ ಹೆಸರು ಎನ್ನುತ್ತಾರೆ ಮತ್ತೂ ಕೆಲವರು. ಆದರೆ ಕಾಶ್ಮೀರದ ಹಿಂದೂ ಮತ್ತು ಮುಸಲ್ಮಾನರು ಈ ವಿಶ್ಲೇಷಣೆಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಋಷಿ ಸೂಫಿಯೆಂದರೆ ಆತ ಒಬ್ಬ ಋಷಿಯೆಂದೇ ಭಾವಿಸಿದ್ದಾರೆ; ಅವರ ದರ್ಗಾಗಳನ್ನು ಇಬ್ಬರೂ ಪೂಜಿಸುತ್ತಾರೆ ಹಾಗೂ ಅವರನ್ನು ಇತರ ಯಾವುದೇ ಸೂಫಿ ಪಂಗಡಗಳವರೆಂದೂ ಪರಿಗಣಿಸುವುದಿಲ್ಲ.

ಈ ದೇಶೀ ಸೂಫಿ ಪಂಗಡ ಸಾಂಪ್ರದಾಯಿಕ ಹಾಗೂ ಮೂಲಭೂತವಾದಿ ಇಸ್ಲಾಂಗಿಂತ ಭಿನ್ನವಾಗಿರುವುದಷ್ಟೇ ಅಲ್ಲ, ಇತರ ಸೂಫಿ ಪಂಗಡಗಳಿಗಿಂತಲೂ ಅದರ ತಾತ್ವಿಕ ತಳಹದಿಯಲ್ಲಿ ಹಾಗೂ ಬದುಕಿನ ಆಚರಣೆಗಳ ರೀತಿಯಲ್ಲಿಯೂ ಭಿನ್ನವಾಗಿದೆ. ಹದಿನಾರನೇ ಶತಮಾನದಲ್ಲಿ ಅಕ್ಬರನ ಚರಿತ್ರಕಾರ ಅಬುಲ್ ಫಜಲ್, 'ಈ ದೇಶದ (ಕಾಶ್ಮೀರ) ಅತ್ಯಂತ ಗೌರವಾನ್ವಿತ ವ್ಯಕ್ತಿಗಳೆಂದರೆ ಇಲ್ಲಿನ ಸೂಫಿಗಳು. ಅವರು ಸಾಂಪ್ರದಾಯಿಕ ಪೂಜೆ ಪ್ರಾರ್ಥನೆಗಳನ್ನು (ತಖ್ಲಿದ್) ತ್ಯಜಿಸಿಲ್ಲವಾದರೂ ಅವರ ಪ್ರಾರ್ಥನೆ ಪ್ರಾಮಾಣಿಕವಾದದ್ದು. ಅವರು ಇತರ ಧರ್ಮಗಳ ಜನರನ್ನು ತಿರಸ್ಕರಿಸುವುದಿಲ್ಲ. ಅವರಿಗೆ ಆಸೆಯೆಂಬುದಿಲ್ಲ ಹಾಗೂ ಅವರು ಯಾವುದೇ ಪ್ರಾಪಂಚಿಕ ವಸ್ತುಗಳನ್ನು ಬಯಸುವುದಿಲ್ಲ. ಎಲ್ಲೆಲ್ಲೂ ಹಣ್ಣುಬಿಡುವ ಮರಗಳನ್ನು ನೆಡುತ್ತಾ ಹೋಗುತ್ತಾರೆ, ಮುಂದೊಂದು ದಿನ ಯಾರಿಗಾದರೂ ಅದರಿಂದ ಲಾಭವಾಗಬಹುದು ಎಂದು. ಅವರು ಮಾಂಸಹಾರಿಗಳಲ್ಲ, ಮದುವೆಯೂ ಆಗುವುದಿಲ್ಲ' ಎಂದು ದಾಖಲಿಸಿದ್ದಾನೆ. ಹದಿನೇಳನೇ ಶತಮಾನದಲ್ಲಿ ಸಾಮ್ರಾಟ ಜಹಾಂಗೀರ್ ಇದೇ ಮಾತನ್ನು ಪುನರುಚ್ಚರಿಸುವಂತೆ, 'ಅವರು ಓದು ಬರಹ ಬಲ್ಲವರು ಹಾಗೂ ಮರೀಫಾ ಹೊಂದಿಲ್ಲದವರಾದರೂ ಸಹ ಅವರದು ಬೂಟಾಟಿಕೆಯ ಬದುಕಲ್ಲ. ಯಾರಲ್ಲೂ ತಪ್ಪು ಕಂಡುಹಿಡಿಯುವುದಿಲ್ಲ ಹಾಗೂ ಯಾರಿಂದಲೂ ಏನನ್ನೂ ಕೇಳುವುದಿಲ್ಲ. ಅವರು ಮಾಂಸ ತಿನ್ನುವುದಿಲ್ಲ ಹಾಗೂ ಮದುವೆಯಾಗುವುದಿಲ್ಲ. ಬೆಟ್ಟಗುಡ್ಡಗಳಲ್ಲಿ

ಹಣ್ಣಿನ ಮರಗಳನ್ನು ನೆಡುತ್ತಾರೆ, ತಮಗಾಗಿ ಅಲ್ಲ, ಇತರರಿಗೆ ಅನುಕೂಲವಾಗಲಿ ಎಂದು' ಎಂದಿದ್ದಾನೆ.

ಋಷಿ ಮತ್ತು ಮುನಿಗಳ ಹಾಗೆ, ಬೌದ್ಧ ಮತ್ತು ಜೈನ ಸಂನ್ಯಾಸಿಗಳ ಹಾಗೆ ಪ್ರಾಪಂಚಿಕವನ್ನು ಪರಿತ್ಯಾಗ ಮಾಡಿ ಋಷಿಸೂಫಿಗಳು ಬದುಕುತ್ತಿದ್ದರು. ಅಧ್ಯಾತ್ಮದ ಉತ್ತುಂಗ ತಲುಪುವ ಹಾದಿ ಆಯ್ದುಕೊಂಡ ಈ ಪ್ರೇಮದ ಹಾದಿಯ ಪಥಿಕರು ಹಿಂದೂ ದಾರ್ಶನಿಕತೆಯ ಅದ್ವೈತವನ್ನು ಮತ್ತು ಇಸ್ಲಾಂನ 'ವಹದತ್-ಉಲ್-ವಾಜುದ್' (ದೇವನೊಬ್ಬನೆ)ನೊಂದಿಗೆ ಸಮೀಕರಿಸಿ ಧರ್ಮಸಮನ್ವಯವನ್ನು ಬೋಧಿಸತೊಡಗಿದರು.

ಕಾಶ್ಮೀರದ 'ರಕ್ಷಕ ಸಂತ'ನೆಂದು ಕರೆಯಲ್ಪಟ್ಟಿರುವ ಶೇಖ್ ನೂರುದ್ದೀನ್ ಬಲವಂತದ ಮತಾಂತರವನ್ನು ವಿರೋಧಿಸುತ್ತಿದ್ದುದರಿಂದ ಸುಹಾ ಭಟ್‌ನಂತಹ ಹಲವಾರು ಮುಸಲ್ಮಾನ ದೊರೆಗಳ ಕೆಂಗಣ್ಣಿಗೆ ಬಲಿಯಾಗಬೇಕಾಯಿತು. ಕಾಶ್ಮೀರದ ಋಷಿ ಸೂಫಿ ಪರಂಪರೆ ಪ್ರಾರಂಭವಾದದ್ದು ಆತನಿಂದಲೇ ಎಂದು ಹೇಳಲಾಗುತ್ತದೆ. ಆತನ ಸಮಾಧಿ ಅಥವಾ ದರ್ಗಾ ಶ್ರೀನಗರದ ಬಳಿಯ ಚರಾರ್-ಎ-ಶರೀಫ್‌ನಲ್ಲಿದೆ. ಹಿಂದೂ, ಮುಸಲ್ಮಾನ ಮತ್ತು ಸಿಖ್ಖರಿಗೆಲ್ಲ ಅದು ಒಂದು ಪವಿತ್ರ ಸ್ಥಳವಾಗಿದೆ. ೧೯೯೫ರಲ್ಲಿ ಭಯೋತ್ಪಾದಕರು ಅದರಲ್ಲಿ ಅಡಗಿದ್ದಾಗ, ಪೋಲೀಸರ ಮತ್ತು ಅವರ ನಡುವೆ ಗುಂಡಿನ ಚಕಮಕಿ ನಡೆದು ಚರಾರ್-ಎ-ಶರೀಫ್ ಬೆಂಕಿಗೆ ಆಹುತಿಯಾಯಿತು. ಆಗ ಇಡೀ ಕಾಶ್ಮೀರದ ಹಿಂದೂ, ಮುಸಲ್ಮಾನರು ಮತ್ತು ಸಿಖ್ಖರು ತಮ್ಮದೇ ಮನೆ ಕಳಕೊಂಡಂತೆ ಗೋಳಾಡಿದರು.

ಹೋ ಸರ್ಫಿ ! ನೀನು ಪಡೆಯುವುದಾದರೂ ಏನು
ತೀರ್ಥಯಾತ್ರೆಯಿಂದ
ಕಾಬಾ, ಮಂದಿರ ಮತ್ತು ಹೆಂಡದಂಗಡಿ
ನಿನಗೆ ಒಂದೇ ಅಲ್ಲದಿದ್ದರೆ.
ಹೋ ಸರ್ಫಿ ! ಆ ದೇವನ ಮುಖದ
ಪ್ರಜ್ವಲತೆಯ ಕಿರಣ
ಕತ್ತಲನ್ನು ಬೆಳಕಾಗಿಸಿರುವಾಗ
ಕಾಬಾದಲ್ಲಿನ ಬೆಳಕು
ಸೋಮನಾಥನಲ್ಲಿಲ್ಲವೆನ್ನುವುದು ಹೇಗೆ ಸಾಧ್ಯ ?
ಎಲ್ಲಿ ನೋಡಿದರೂ ಅದೇ ಮುಖದ ಬೆಳಕು
ಒಂದಲ್ಲ, ಎರಡಲ್ಲ, ನೂರು ಸಾವಿರ ಕನ್ನಡಿ
ನೋಡಿದರೂ ಅದೇ ಮುಖ !

–ಸರ್ಫಿ

ಋಷಿ ಸೂಫಿಗಳ ಮಾತು ಮತ್ತು ಬೋಧನೆ ಸರಳ ಭಾಷೆಯದಾಗಿದ್ದು ದಿನನಿತ್ಯದ ಬದುಕಿನಿಂದ ಆಯ್ದ ಘಟನೆಗಳದಾಗಿತ್ತು ಹಾಗೂ ಅವು ತೀರಾ ಜನಸಾಮಾನ್ಯರಿಗಾಗಿತ್ತು. ಅವರು ಎಂದೂ ಶ್ರೀಮಂತರನ್ನು, ನಗರ, ಪಟ್ಟಣಗಳನ್ನು ಅರಸಿ ಹೊರಟವರಲ್ಲ. ಆದುದರಿಂದಲೇ ಇಂದು

ಕಾಶ್ಮೀರದಲ್ಲಿ ಸೂಫಿಗಳ ಸಮಾಧಿ ಅಥವಾ ದರ್ಗಾಗಳೆಲ್ಲ ಹಳ್ಳಿಗಳಲ್ಲಿವೆಯೇ ಹೊರತು ಪಟ್ಟಣಗಳಲ್ಲಿಲ್ಲ.

ಹಿಂದೂ ಮತ್ತು ಮುಸಲ್ಮಾನರಲ್ಲಿರುವ ಬಹು ದೊಡ್ಡ ವೈರುಧ್ಯ ವಿಗ್ರಹಾರಾಧನೆಯದ್ದು. ವಿಗ್ರಹಾರಾಧನೆ ಮುಸಲ್ಮಾನರಲ್ಲಿ ನಿಷಿದ್ಧವಾಗಿದ್ದು, ವಿಗ್ರಹಾರಾಧಕರನ್ನು ಕಾಫಿರ್‌ಗಳೆನ್ನುತ್ತಿದ್ದರು. ಆದರೆ ಹಲವಾರು ಋಷಿಸೂಫಿಗಳು ತಮ್ಮ ವಿಗ್ರಹ ಪ್ರೇಮವನ್ನು ವ್ಯಕ್ತಗೊಳಿಸಲು ಹಿಂದೇಟು ಹಾಕಲಿಲ್ಲ. ಅನುಭಾವದ ಪ್ರೇಮವನ್ನು ವ್ಯಕ್ತಗೊಳಿಸಲು ವಿಗ್ರಹಗಳು ಬೇಕೆನ್ನುವುದು ಕೆಲವರ ಭಾವನೆಯಾಗಿತ್ತು. ಶೇಖ್ ಯಾಕುಬ್ ಎಂಬ ಸೂಫಿ ತನ್ನನ್ನು 'ಇಷ್ಕ್ ಕಾ ಕಾಫಿರ್' ಎಂದು ಕರೆದುಕೊಳ್ಳಲು ಹೆಮ್ಮೆ ಪಡುತ್ತಿದ್ದ. ತಾನು ಪ್ರೇಮದ ದಳ್ಳುರಿಯಲ್ಲಿ ಸುಟ್ಟು ಕರಕಲಾಗಬೇಕೆಂದು ತಹತಹಿಸುತ್ತಿದ್ದ. ತನ್ನ ವಿಗ್ರಹ ಪ್ರೇಮದಲ್ಲಿ ಏನು ತಪ್ಪಿದೆ ಎಂದು 'ಉಲೇಮಾ'ಗಳಿಗೆ (ಬೋಧಕರು) ಸವಾಲು ಹಾಕುತ್ತಿದ್ದ, ವಿಗ್ರಹ ಪ್ರೇಮದ 'ಅಪರಾಧ'ಕ್ಕಿಂತ ಉನ್ನತಕಾರ್ಯ ಮತ್ತಾವುದಿದೆ ಎಂದು ಅಣಕಿಸುತ್ತಿದ್ದ.

ವಿಶಾಲ ಮನೋಭಾವದ, ಧರ್ಮ ಸಾಮರಸ್ಯ ಬೋಧಿಸುವ ಸೂಫಿ ಅನುಭಾವಿಗಳ ಹಾಗೂ ಸಾಂಪ್ರದಾಯಿಕ ಉಲೇಮಾಗಳ ನಡುವಿನ ಸಂಬಂಧ ಯಾವುದೇ ಮುಸಲ್ಮಾನ ಸಮಾಜದಲ್ಲಿಯೂ ಸುಗಮವಾಗಿರಲಿಲ್ಲ. ಅವರನ್ನು ಹೊರಗಟ್ಟಿ ಸಮಾಜದ ಅಂಚುಗಳಲ್ಲಿಡುತ್ತಿದ್ದರು ಹಾಗೂ ಇಡೀ ಸಮಾಜದ ಮೇಲೆ ಅವರ ಪ್ರಭಾವ ಬೀಳದಂತೆ ನೋಡಿಕೊಳ್ಳುತ್ತಿದ್ದರು. ಆದರೆ ಕಾಶ್ಮೀರದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಇಡೀ ಸಮಾಜದ ಮೇಲೆ ಹೆಚ್ಚಿನ ಪ್ರಭಾವ ಇವರದೇ ಆಗಿತ್ತು. ಆದುದರಿಂದಲೇ ಕಾಶ್ಮೀರದ ಸಮಾಜ ಎಲ್ಲ ಇತರ ಮುಸಲ್ಮಾನ ಸಮಾಜಗಳಿಗಿಂತ ಭಿನ್ನವಾಗಿದೆ. ಇಲ್ಲಿ ಸೂಫಿಗಳೇ ಮುಲ್ಲ ಮತ್ತು ಉಲೇಮಾಗಳನ್ನು ಛೇಡಿಸುವ ಸ್ವಾತಂತ್ರ್ಯ ಪಡೆದಿದ್ದರು. ಧರ್ಮದ ಹೆಸರಿನಲ್ಲಿ ಹಣ ಮಾಡುವ ಮುಲ್ಲಾಗಳನ್ನು ಖಂಡಿಸುತ್ತಿದ್ದರು. ಈಗಲೂ ಸಾಂಪ್ರದಾಯಿಕವಾದಿ ಭಯೋತ್ಪಾದಕರು ಋಷಿ ಸೂಫಿಗಳ ದರ್ಗಾಗಳನ್ನು ಸುಟ್ಟುಹಾಕುವ ಬೆದರಿಕೆಯೊಡ್ಡುತ್ತಿದ್ದಾರೆ.

'ಅಧ್ಯಾತ್ಮದ ಗುರು
ಜೇನು ತುಂಬಿ ಹರಿಯುವ
ಮಡಕೆ ಇದ್ದಂತೆ.
ಪಕ್ಕದಲ್ಲಿ ರಾಶಿ ರಾಶಿ ಪುಸ್ತಕ
ಆದರೆ ಬಾಯಿ ಬಿಟ್ಟರೆ ಬಣ್ಣಗೇಡು,
ತಲೆಯಲ್ಲಿ ಏನೇನೂ ಇಲ್ಲ
ತನಗೆ ತಾನೇ ಗೊಂದಲ
ಇತರರಿಗೆ ಬೋಧಿಸುತ್ತಾನೆ
ಅದೇನೆಂಬುದು ತನಗೇ ತಿಳಿದಿಲ್ಲ.'
'ಓ ಮುಲ್ಲಾ, ನಿನ್ನ ಕೈಯಲ್ಲಿರುವುದು
ಜಪಮಣಿಯಲ್ಲ, ಅದೊಂದು ಹಾವು
ಪಿಟಿಪಿಟಿಗುಟ್ಟುತ್ತ ಅದನ್ನು ಎಣಿಸುತ್ತೀಯ

ನಿನ್ನ ಶಿಷ್ಯರು ಹತ್ತಿರ ಬಂದಾಗ.
ಒಂದರ ಹಿಂದೆ ಮತ್ತೊಂದರಂತೆ
ಆರು ಬಾರಿ ಊಟ ಮಾಡುತ್ತೀಯೆ.
ನೀನೇ ಮುಲ್ಲಾ ಅದಲ್ಲಿ
ಕಳ್ಳ ಮತ್ಯಾರು !'

ಕಾಶ್ಮೀರಕ್ಕೆ ಇಸ್ಲಾಂ ಬರುವ ಮೊದಲು ಅಲ್ಲಿದ್ದ ಶೈವ ಸಂಪ್ರದಾಯದ ಪ್ರಭಾವ ಋಷಿ ಸೂಫಿಸಂನ ಮೇಲೆ ಅಗಾಧವಾಗಿದೆ. ಅದು ಅವರ ದೈವಾರಾಧನೆಯ ಭಕ್ತಿಯಲ್ಲೂ ಕಂಡುಬರುತ್ತದೆ. ಇವರೂ ಕಾಡುಗಳಿಗೆ ಹೋಗಿ ತಪಸ್ಸು ಮಾಡುತ್ತಿದ್ದರು, ಪ್ರಾಣಾಯಾಮದಂತಹ ಕಸರತ್ತು (ಪಾಸ್-ಎ-ಅನ್‌ಫಾಸ್) ಮಾಡುತ್ತಿದ್ದರು. ಶೇಖ್ ನೂರುದ್ದೀನ್ ಸಹ ಕಾಡಿನಲ್ಲಿ ಹನ್ನೆರಡು ವರುಷ ಬರೇ ಹುಲ್ಲು ತಿಂದುಕೊಂಡು 'ತಪಸ್ಸು' ಮಾಡಿಕೊಂಡಿದ್ದನಂತೆ. ಈ ರೀತಿ ಜನರಿಂದ ದೂರ ಇದ್ದುಕೊಂಡು ಮಾಡುವ ದೈವಾರಾಧನೆಯಿಂದ ಪ್ರಯೋಜನವಾದರೂ ಏನೆಂದು ಅರಿತ ಆತ ನಾಡಿಗೆ ಹಿಂದಿರುಗಿ ಜನರಿಗಾಗಿ ದುಡಿಯತೊಡಗಿದ ಹಾಗೂ ಇತರರಿಗೆ ಸಹಾಯ ಮಾಡುವುದೇ ದೈವಭಕ್ತಿಯೆಂದು ಭಾವಿಸಿದ.

ಕಾಶ್ಮೀರದ ಋಷಿ ಸಂಪ್ರದಾಯ ವೇದಗಳ ಕಾಲಕ್ಕಿಂತಲೂ ಪ್ರಾಚೀನವಾದುದು. ತ್ಯಾಗಮಯಿ, ನಿಸ್ವಾರ್ಥ ಹಾಗೂ ಪ್ರಾಮಾಣಿಕ ಬದುಕಿನ ಋಷಿಗಳ ಬಗೆಗೆ ಎಲ್ಲಾ ಕಾಶ್ಮೀರಿಗಳಿಗೆ, ಹಿಂದೂಗಳಿಗೆ, ಸಿಖ್ ಹಾಗೂ ಮುಸಲ್ಮಾನರಿಗೆ ಅತ್ಯಂತ ಪೂಜ್ಯ ಮನೋಭಾವ ಇದ್ದು ಇಂದಿಗೂ ಕಾಶ್ಮೀರವನ್ನು ಋಷಿ ಅಥವಾ ಪೀರ್‌ಗಳ ನಾಡು ಎನ್ನುತ್ತಾರೆ. ಮೋತಿಲಾಲ್ ಸಾಖಿ ಹೇಳುವಂತೆ ಕಾಶ್ಮೀರದ ಋಷಿ ಸಂಪ್ರದಾಯ ಭಾರತಕ್ಕೆ ಆರ್ಯನ್ನರು ಕಾಲಿಡುವ ಮೊದಲಿನಿಂದಲೇ, ಇರಾನ್‌ನ (ಪರ್ಷಿಯನ್) ಜೊರೋಸ್ಟ್ರಿಯನ್ನರು ಹಾಗೂ ಸಿಂಧು ಕಣಿವೆಯ ದ್ರಾವಿಡರು ಇದ್ದಾಗಿನಿಂದಲೇ ಕಂಡುಬಂದಿದೆ. ಪುರಾಣ ಕತೆಗಳು ಹೇಳುವಂತೆ ಕಾಶ್ಮೀರ ಕಶ್ಯಪ ಋಷಿಯ ತಾಣವಾಗಿತ್ತು. ಆತನ ಹೆಸರಿನಿಂದಲೇ 'ಕಾಶ್ಮೀರ' ಎಂಬ ಹೆಸರು ಬಂದಿದೆ ಎನ್ನುತ್ತಾರೆ. ಆತನ ಮಗ ನೀಲನಾಗ 'ನೀಲಮಾತ ಪುರಾಣ'ದ ಕರ್ತೃ.

ಬೌದ್ಧ ಧರ್ಮ ಕಾಶ್ಮೀರದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕೆಲವು ಋಷಿಗಳು ಬ್ರಾಹ್ಮಣ್ಯದ ವರ್ಣಾಶ್ರಮ ಪದ್ಧತಿ, ಅರ್ಥಹೀನ ರೀತಿ ರಿವಾಜುಗಳು ಹಾಗೂ ನರಬಲಿಯಂತಹ ಕ್ರೂರ ಪದ್ಧತಿಗಳ ವಿರುದ್ಧ ತಿರುಗಿಬಿದ್ದರು. ಆದರೆ ಕಾಶ್ಮೀರದ ಬೌದ್ಧ ಧರ್ಮ ಹಾಗೂ ಎಂಟನೆಯ ಶತಮಾನದ ನಂತರ ಉಗಮವಾದ ಶೈವ ತ್ರಿಕಾ ತತ್ವಜ್ಞಾನ ಕ್ರಮೇಣ ಬ್ರಾಹ್ಮಣ್ಯದ ಬಿರುಸಿನ ಹೊಡೆತ ತಡೆಯಲಾರದೆ ತೆಪ್ಪಗಾಗಿದ್ದವು ಎಂದು ರಸೂಲ್ ಪಾಂಪೋರ್ ಬರೆದಿದ್ದಾರೆ. ಇಸ್ಲಾಂ, ಕಣಿವೆಗೆ ಮೊದಲು ಕಾಲಿರಿಸಿದ ಸಮಯದ ಹೊತ್ತಿಗೆ ಬೌದ್ಧ ಧರ್ಮ ಸಂಪೂರ್ಣ ದುರ್ಬಲವಾಗಿತ್ತು ಹಾಗೂ ಕಾಶ್ಮೀರ ಶೈವ ಸಿದ್ಧಾಂತ ಮೂಲೆಗುಂಪಾಗಿತ್ತು. ಈ ಎರಡೂ ಧರ್ಮಗಳು ಮುಸಲ್ಮಾನ ಋಷಿ ಸಿದ್ಧಾಂತದ ವಿಕಾಸಕ್ಕೆ ಹಾದಿಯನ್ನು ಹಸನು ಮಾಡಿಕೊಟ್ಟಿದ್ದವು. ಈ ಮುಸಲ್ಮಾನ ಋಷಿಗಳು ಈ ಎರಡೂ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸಿ ಸಾಮಾಜಿಕ ಸಮಾನತೆಯನ್ನು ಬೋಧಿಸತೊಡಗಿದರು. ಇಸ್ಲಾಂ ಪೂರ್ವ ಅವಧಿಯಲ್ಲಿನ ಬೌದ್ಧ ಧರ್ಮ ಮತ್ತು ಶೈವ ಸಿದ್ಧಾಂತಗಳ ರೀತಿಯಲ್ಲಿಯೇ ಮುಸಲ್ಮಾನ ಋಷಿ ಪಂಥವೂ ಸಹ

ವರ್ಣಾಶ್ರಮ ಹಾಗೂ ಧಾರ್ಮಿಕ ಸಂಪ್ರದಾಯ ವಿರೋಧಿಯಾಗಿತ್ತು. ಅದು ಎಲ್ಲ ಜಾತಿ, ಧರ್ಮ ಮತ್ತು ವರ್ಗಗಳನ್ನು ಮೀರಿದ ವಿಶ್ವ ಭ್ರಾತೃತ್ವವನ್ನು ಬೋಧಿಸುತ್ತಿತ್ತು. ಆದುದರಿಂದಲೇ ಮೊಹಮ್ಮದ್ ಯೂಸುಫ್ ತೇಂಗ್ ಅದನ್ನು 'ಮಾನವೀಯತೆಯ ಧರ್ಮ (ಮಜಬ್-ಎ-ಇನ್‌ಸಾನಿಯತ್) ಎಂದಿದ್ದಾರೆ. ಕಾಶ್ಮೀರದ ಇಸ್ಲಾಂ ಪೂರ್ವ ಋಷಿಗಳ ಹಾಗೆ ಮುಸಲ್ಮಾನ ಋಷಿಗಳೂ ಸಹ ಎಲ್ಲವನ್ನೂ ತ್ಯಜಿಸಿ, ಕಠಿಣ ನೇಮಗಳನ್ನು ಆಚರಿಸುತ್ತಿದ್ದರು, ತಪಸ್ಸು ಮಾಡಲು ಗುಹೆಗಳಿಗೆ, ಪರ್ವತಗಳಿಗೆ ಹೋಗುತ್ತಿದ್ದರು. ಪ್ರವಾದಿ ಮಹಮ್ಮದ್‌ರವರಿಗೇ ಹಲವಾರು ಜನ ಪತ್ನಿಯರಿದ್ದರೂ ಸಹ ಬಹುಪಾಲು ಮುಸಲ್ಮಾನ ಋಷಿಗಳು ಮದುವೆಯಾಗುತ್ತಿರಲಿಲ್ಲ ಹಾಗೂ ಮಾಂಸಾಹಾರ ಸೇವಿಸುತ್ತಿರಲಿಲ್ಲ. ಪ್ರಾಣಿ ಮತ್ತು ಸಸ್ಯಗಳಲ್ಲೆಲ್ಲ ದೇವನೆಂಬ 'ಸತ್ಯ' (ಹಖ್) ಇರುವುದರಿಂದ ಯಾವುದೇ ಜೀವಿಗೂ ನೋವುಂಟುಮಾಡಬಾರದೆಂದು ಅವರು ಒಣಗಿದ ಕಾಡು ಹಣ್ಣು, ತರಕಾರಿ, ಗೆಡ್ಡೆ, ಗೆಣಸು ತಿಂದು ಜೀವಿಸುತ್ತಿದ್ದರು. 'ಅವರು ತಮಗಾಗಿ ಏನನ್ನೂ ಉಳಿಸಿಕೊಳ್ಳುತ್ತಿರಲಿಲ್ಲ. ತಾವೇ ಸ್ವತಃ ಕೈಯಾರೆ ದುಡಿದು ಸಂಪಾದಿಸಿದುದನ್ನು ಬಡವರಿಗೆ ಹಂಚಿಬಿಡುತ್ತಾರೆ. ಪ್ರಯಾಣಿಕರಿಗೆ, ಹಸಿದವರಿಗೆ ಹಾಗೂ ಬಡವರಿಗೆ ಆಹಾರ ನೀಡುತ್ತಾರೆ. ಅವರ ಕೈಯಲ್ಲಿ ಕೀಟಗಳು ಹಾಗೂ ಪಕ್ಷಿಗಳೂ ಸಹ ಸುರಕ್ಷಿತ' ಎಂದು ಬಾಬಾ ದೌದ್ ಮಿಷ್ಕತಿ ತಮ್ಮ 'ಅಸ್ರರ್-ಉಲ್-ಅಬ್ರಾರ್'ನಲ್ಲಿ ದಾಖಲಿಸಿದ್ದಾರೆ.

ಈ ಬದುಕಿನ ರೀತಿಯನ್ನು ಹಲವಾರು ಉಲೇಮಾಗಳು ಟೀಕಿಸಿ ಋಷಿ ಸೂಫಿಗಳ ಬದುಕಿನ ಈ ರೀತಿ ಪ್ರವಾದಿ ತೋರಿಸಿಕೊಟ್ಟ ಹಾದಿಗಿಂತ (ಸುನ್ನತ್) ವಿರುದ್ಧವಾದುದು ಎಂದಾಗ ಅವರು, ಅದು ಸಾಮಾನ್ಯ ಜನರಿಗಾಗಿ (ಅವಾಮ್) ಇರುವಂತಹದು, ಜನಸಾಮಾನ್ಯರು ಒಂದು ಪರಿಮಿತಿಯೊಳಗೆ ಬದುಕಿನಲ್ಲಿನ ಎಲ್ಲವನ್ನೂ ಅನುಭವಿಸಬೇಕೆಂದು ತೋರಿಸಿಕೊಟ್ಟಿದ್ದಾರೆ. ಆದರೆ ಅಧ್ಯಾತ್ಮದ ಹಾದಿ ಅನುಸರಿಸುವ ತಮ್ಮಂತಹವರಿಗೆ ದೇವರನ್ನು ಹಾಗೂ ಆತನ ಪ್ರವಾದಿಯನ್ನು ಅನುಸರಿಸಲು ಇವೆಲ್ಲಾ ತೊಡಕುಂಟುಮಾಡುತ್ತವೆ ಎಂದು ಹೇಳಿ ತಮ್ಮ ಬದುಕಿನ ರೀತಿಯನ್ನು ಸಮರ್ಥಿಸಿಕೊಂಡರು. ಅವರ ಪ್ರಕಾರ ಮದುವೆ ಮತ್ತು ಮಾಂಸಾಹಾರ 'ಅಹಂ' (ನಫ್ಸ್) ಅಥವಾ ಕಾಮನೆಗಳನ್ನು ಕೆರಳಿಸುತ್ತದೆ. 'ಯಾರು ತನ್ನ ನಫ್ಸ್‌ಅನ್ನು ನಿಗ್ರಹಿಸುತ್ತಾನೆಯೋ ಅವನು ಸ್ವರ್ಗಕ್ಕೆ ಹೋಗುತ್ತಾನೆ' ಎಂದು ಬಾಬಾ ದೌದ್ ಖಾಕಿ ಹೇಳಿದ್ದಾರೆ.

ಋಷಿ ಸೂಫಿಗಳು ಹಿಂದೂ, ಬೌದ್ಧ ಮತ್ತು ಶೈವ ಸಿದ್ಧಾಂತಗಳ ತಳಹದಿಯ ಮೇಲೆ ತಮ್ಮ 'ವಿಶ್ವ ಭ್ರಾತೃತ್ವ'ದ ಅನುಭಾವದ 'ಧರ್ಮ'ವನ್ನು ರಚಿಸಿಕೊಂಡಿದ್ದರೂ ಸಹ ಅವರು ತಮ್ಮನ್ನು ಮುಸಲ್ಮಾನರೆಂದೇ ಭಾವಿಸಿಕೊಂಡಿದ್ದರು ಎಂದು ಮೋತಿಲಾಲ್ ಸಾಖಿ ಹೇಳುತ್ತಾರೆ. ಅವರು ಅನುಭಾವ ಕಾವ್ಯದ (ಶ್ರುಕ್) ಮೂಲಕ ಜನಸಾಮಾನ್ಯರ ಭಾಷೆಯೊಂದಿಗೆ ಸಂವಾದಿಸತೊಡಗಿದರು. ಕಾಶ್ಮೀರವು ಮುಸಲ್ಮಾನ ಋಷಿಗಳಿಗೆ ಋಣಿಯಾಗಿರಬೇಕಿರುವುದು ಕಾಶ್ಮೀರಿ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಅವರ ಕೊಡುಗೆಯಿಂದಾಗಿ. ಉಲೇಮಾಗಳು ರಾಜರ ಆಸ್ಥಾನಗಳಲ್ಲಿದ್ದರೆ, ಮಧ್ಯ ಏಷ್ಯಾ ಮತ್ತು ಇರಾನ್‌ನಿಂದ ಬಂದ ಸೂಫಿಗಳು ಜನಸಾಮಾನ್ಯರಿಗೆ ಅರ್ಥವಾಗದ ಫಾರ್ಸಿ ಅಥವಾ ಅರೇಬಿಕ್ ಮಾತನಾಡುತ್ತಿದ್ದರು ಹಾಗೂ ಧಾರ್ಮಿಕವಾಗಿ ಉತ್ತುಂಗ ಸ್ಥಿತಿಯಲ್ಲಿದ್ದ ಕಾಶ್ಮೀರಿ ಪಂಡಿತರು ಸಂಸ್ಕೃತ ಮಾತನಾಡುತ್ತಿದ್ದರು. ಜನಸಾಮಾನ್ಯರೊಂದಿಗೆ ಅವರದೇ ಭಾಷೆಯೊಂದಿಗೆ ಮಾತನಾಡುತ್ತಿದ್ದವರು ಮುಸಲ್ಮಾನ

ಋಷಿಗಳು ಮಾತ್ರ. ಅಲ್ಲಿನ ಪಂಡಿತರು ಸಂಸ್ಕೃತವನ್ನು 'ದೇವವಾಣಿ' ಎಂದು ಕರೆದರೆ ಕಾಶ್ಮೀರಿ ಭಾಷೆಯನ್ನು 'ಪೈಶಾಚ ಭಾಷೆ' ಎಂದು ಕರೆದರು. ಇಸ್ಲಾಂಪೂರ್ವ ಕಾಶ್ಮೀರವನ್ನು ಪರಿಚಯಿಸುವ 'ರಾಜತರಂಗಿಣಿ' ಬರೆದಿರುವ ಪಂಡಿತ ಕಲ್ಹಾನ ಕಾಶ್ಮೀರಿ ಭಾಷೆಯನ್ನು ಕುಡುಕರು ಮಾತ್ರ ಮಾತನಾಡಬಹುದಾದ ಅಸಭ್ಯ ಭಾಷೆ ಎಂದಿದ್ದಾನೆ.

ಕಾಶ್ಮೀರಕ್ಕೇ ವಿಶಿಷ್ಟವಾಗಿರುವ ಜಮಖಾನ ಮತ್ತು ಶಾಲು ನೇಯ್ಗೆಯನ್ನು ಪರಿಚಯಿಸಿದವರು ಮುಸಲ್ಮಾನ ಋಷಿಗಳೆಂದೇ ಹೇಳುತ್ತಾರೆ. ಜನರು ಸ್ವತಃ ದುಡಿದು ಸಂಪಾದಿಸಬೇಕೆಂದು ಅವರ ಅಭಿಪ್ರಾಯವಾಗಿತ್ತು.

ಹಜರತ್ ನೂರುದ್ದಿನ್ ನೂರಾನಿ ಮತ್ತು ಆತನ ಅನುಯಾಯಿಗಳು ಜನರಿಗೆ ಅರ್ಥವಾಗುವ ವ್ಯಾಖ್ಯೆಯ, ದಿನ ನಿತ್ಯದ ಬದುಕಿನ ಇಸ್ಲಾಂಅನ್ನು ಪರಿಚಯಿಸತೊಡಗಿದರು. ಇಸ್ಲಾಂ ಪೂರ್ವ ಅವಧಿಯ ಋಷಿಗಳು ಪ್ರಾಪಂಚಿಕವನ್ನು ತ್ಯಜಿಸಿ ತಮ್ಮ 'ಮೋಕ್ಷ' ಅಥವಾ 'ಮುಕ್ತಿ'ಗಾಗಿ ಮಾತ್ರ ತಪಸ್ಸು ಮತ್ತು ಕಠಿಣ ನೇಮಗಳನ್ನು ಆಚರಿಸುತ್ತಿದ್ದರೆ ಈ ಋಷಿ ಸೂಫಿಗಳು ತಮ್ಮ 'ಧರ್ಮ'ವನ್ನು ವರ್ಣಾಶ್ರಮ ಪದ್ಧತಿ, ಸಾಮಾಜಿಕ ಅಸಮಾನತೆ ಹಾಗೂ ಇತರ ಸಾಮಾಜಿಕ ಅನ್ಯಾಯಗಳನ್ನು ಖಂಡಿಸುವ ಒಂದು ಪ್ರಬಲ ಸಾಮಾಜಿಕ ಸಂಘಟನೆಯನ್ನಾಗಿಸಿದರು. ಇದರಿಂದಾಗಿ ಋಷಿ ಸೂಫಿಗಳು ಜನಸಾಮಾನ್ಯರಿಗೆ ಹೆಚ್ಚು ಆತ್ಮೀಯರಾದರು ಮತ್ತು ಜನಪ್ರಿಯರಾದರು. ಕಾಶ್ಮೀರದ ಜನ ಅವರ ಅನುಯಾಯಿಗಳಾದರು ಹಾಗೂ 'ಋಷಿ ಸೂಫಿಗಳ ಸರ್ವಧರ್ಮ ಸಮನ್ವಯ ಇಸ್ಲಾಂ'ಗೆ ಮತಾಂತರಗೊಳ್ಳತೊಡಗಿದರು. ಇಂತಹ ಮತಾಂತರಗಳಲ್ಲಿ ಇತಿಹಾಸ ತಜ್ಞರು ದಾಖಲಿಸಿರುವ ಹದಿನಾಲ್ಕನೇ ಶತಮಾನದ ಆದಿಭಾಗದ ಒಂದು ಗಮನಾರ್ಹ ಮತಾಂತರವೆಂದರೆ ಕಾಶ್ಮೀರದ ರಾಜ ರಂಚನ್ ಶಾನದು. ರತಾಂಜು, ರತಾಂಚನ್ ಮತ್ತು ರಂಜು ಶಾ ಎಂತಲೂ ಕರೆಯುತ್ತಾರೆ. ಟಿಬೆಟ್ ಮೂಲದವನಾದ ಆತನನ್ನು ಬ್ರಾಹ್ಮಣರು ಆತ ರಾಜನಾಗಿದ್ದರೂ ತಮ್ಮ ಧರ್ಮಕ್ಕೆ ಸೇರಿಸಿಕೊಂಡು ಆತನಿಗೆ ವರ್ಣಾಶ್ರಮದಲ್ಲಿನ ಉನ್ನತ ಸ್ಥಾನವನ್ನು ನೀಡಲು ತಿರಸ್ಕರಿಸಿ ಆತನಿಗೆ ರಾಜ ಮರ್ಯಾದೆ ನೀಡಲು ನಿರಾಕರಿಸಿದ್ದರು. ಅದೇ ಸಮಯಕ್ಕೆ ತುರ್ಕಿಸ್ತಾನದಿಂದ ಕಾಶ್ಮೀರಕ್ಕೆ ಬಂದಿದ್ದ ಸೂಫಿ ಬುಲ್‌ಬುಲ್ ಶಾ ರತಾಂಜುವನ್ನು ಮತಾಂತರಗೊಳಿಸಿದ. ರತಾಂಜು ಸುಲ್ತಾನ್ ಸದರ್-ಉದ್-ದೀನ್ ಆದ ಹಾಗೂ ಆತನೇ ಕಾಶ್ಮೀರದ ಮೊಟ್ಟ ಮೊದಲ ಮುಸಲ್ಮಾನ ದೊರೆಯಾದ. ಬುಲ್‌ಬುಲ್ ಶಾನಿಗೆ ವಿತಸ್ತಾ ನದಿಯ ದಡದ ಮೇಲೆ ವಾಸ್ತವ್ಯ ಏರ್ಪಡಿಸಿಕೊಟ್ಟ. ಅದೇ ಬುಲ್‌ಬುಲ್ ಕಂಕರ್ ಆಯಿತು ಹಾಗೂ ಕಾಶ್ಮೀರದ ಮೊಟ್ಟ ಮೊದಲ ಮಸೀದಿ ಅಲ್ಲಿ ನಿರ್ಮಾಣವಾಯಿತು.

ಕಾಶ್ಮೀರದ ಇಸ್ಲಾಂ ವಿಶ್ವದ ಇತರೆಡೆಯಲ್ಲಿಯ, ಅಷ್ಟೇಕೆ ಭಾರತದಲ್ಲಿನ ಇಸ್ಲಾಂಗಿಂತಲೂ ಭಿನ್ನವಾಗಿದೆ. ಹದಿನಾಲ್ಕನೇ ಶತಮಾನದಲ್ಲಿ ಋಷಿ ಸೂಫಿಸಂ ಸ್ಪಷ್ಟ ರೂಪು ಪಡೆಯುತ್ತಿರುವಂತೆ ಪೂರ್ವ ದೇಶಗಳಿಂದ ಕಾಶ್ಮೀರಕ್ಕೆ ಆಗಮಿಸಿದ ಹಲವಾರು ಸಯ್ಯದ್ ನಿರಾಶ್ರಿತರು ಬಲವಂತದ ಮತಾಂತರಕ್ಕೆ ಹಾಗೂ ಖುರಾನ್ ನಿಯಮಗಳ ಇಸ್ಲಾಂಅನ್ನು ಪ್ರಚುರಪಡಿಸುವ ಕಾರ್ಯದಲ್ಲಿ ನಿರತರಾದರು. ಆದರೆ ಋಷಿ ಸೂಫಿಗಳ ಇಸ್ಲಾಂ ತನ್ನದೇ ತಾತ್ವಿಕ ಸಿದ್ಧಾಂತಗಳಿಂದಾಗಿ, ತನ್ನ ಸಾಮಾಜಿಕ ಕಳಕಳಿಯಿಂದಾಗಿ, ಸರ್ವ ಧರ್ಮ ಸಮನ್ವಯತೆಯಿಂದಾಗಿ ಕಾಶ್ಮೀರದ ಜನರ ಮನಕ್ಕೆ ಲಗ್ಗೆ ಹಾಕತೊಡಗಿತ್ತು. ಋಷಿ ಶೇಖ್ ನೂರುದ್ದೀನ್ ಅಥವಾ ನಂದ ಋಷಿ ಹಾಗೂ ಆತನ

ಅನುಯಾಯಿಗಳು ಋಷಿ ಸೂಫಿಗಳ ಇಸ್ಲಾಮಿಗೆ ವಿಶಿಷ್ಟ ರೂಪು, ಛಾಪು ಕೊಡತೊಡಗಿದರು. ೧೫೪೬ರಲ್ಲಿ ತಾರಿಖ್-ಎ-ರಷೀದಿ ಎಂಬ ಗ್ರಂಥದಲ್ಲಿ ಮಿರ್ಜಾ ಹೈದರ್, 'ಈ ಸೂಫಿಗಳು ತಮ್ಮದೇ ಸಂಪ್ರದಾಯಬಾಹಿರ ಆಚರಣೆಗಳನ್ನು ಜಾರಿಗೆ ತರುತ್ತಿದ್ದಾರೆ...ಅವರಿಗೇ ತಿಳಿದಿಲ್ಲ ಯಾವುದು ನಿಷಿದ್ಧ ಎಂಬುದು...ಅವರು ಕನಸುಗಳನ್ನು ವಿಶ್ಲೇಷಿಸುತ್ತಾರೆ, ಪವಾಡಗಳನ್ನು ತೋರಿಸುತ್ತಾರೆ, ಯಾರಿಗೂ ತಿಳಿಯದ ಭೂತ ಮತ್ತು ಭವಿಷ್ಯದ ವಿಷಯಗಳು ಅವರಿಗೆ ತಿಳಿದಿರುತ್ತದೆ. ಈ ರೀತಿಯ ಸಂಪ್ರದಾಯ ವಿರೋಧಿಗಳು ಎಲ್ಲೂ ಕಂಡುಬರುವುದಿಲ್ಲ...ತಮ್ಮ ಸತ್ಯದ ಹಾದಿಯೇ (ತಾರೀಖತ್) ಮುಖ್ಯ ಎನ್ನುವ ಅವರು ಪವಿತ್ರ ನಿಯಮಕ್ಕೆ (ಶರಿಯತ್) ಎರಡನೇ ಸ್ಥಾನ ನೀಡಿದ್ದಾರೆ ಹಾಗೂ ಅವರು ಅದಕ್ಕೂ ತಮಗೂ ಸಂಬಂಧವೇ ಇಲ್ಲ ಎನ್ನುತ್ತಾರೆ' ಎಂದಿದ್ದಾನೆ. ೧೮೯೫ರಲ್ಲಿ ಡಬ್ಲ್ಯು.ಆರ್. ಲಾರೆನ್ಸ್ ಎಂಬಾತ ಕಾಶ್ಮೀರದ ಹಿಂದೂ-ಮುಸಲ್ಮಾನ ಸಮನ್ವಯತೆಯ ಬಗ್ಗೆ ಹೇಳುತ್ತ, ಕಾಶ್ಮೀರದ ಮುಸಲ್ಮಾನರು ಹಿಂದು ಧರ್ಮವನ್ನು ತ್ಯಜಿಸಿಯೇ ಇರಲಿಲ್ಲ ಎಂದಿದ್ದಾರೆ. 'ಕಾಶ್ಮೀರದ ಮುಸಲ್ಮಾನರ ಆಚರಣೆಗಳು ಬಹುಪಾಲು ಇಸ್ಲಾಮಿಗೆ ವಿರುದ್ಧವಾಗಿವೆ. ಬೌದ್ಧರಲ್ಲಿನ ಅವಶೇಷಗಳ ಪೂಜೆ ಭಾರತದ ಇಸ್ಲಾಮಿನಲ್ಲಿದ್ದರೂ ಸಹ ಕಾಶ್ಮೀರದಲ್ಲಿ ಅದು ಇನ್ನೂ ಹೆಚ್ಚು ಪ್ರಬಲವಾಗಿದೆ. ಹಜರತ್‌ಬಾಲ್‌ನಲ್ಲಿ ಪ್ರವಾದಿಯ ಕೂದಲನ್ನು ಪೂಜಿಸುತ್ತಾರೆ. ಅದನ್ನು ಪ್ರದರ್ಶಿಸುವಾಗ 'ಗೋಳಿನ ಗೋಡೆ'ಯ ಮುಂದೆ ಅಳುವ ಯಹೂದಿಗಳ ಹಾಗೆ ಕಾಶ್ಮೀರಿಗಳು ಅಳುತ್ತಾರೆ, ಗೋಳಿಡುತ್ತಾರೆ... ಶಕುನ ಹಾಗೂ ಮಂತ್ರತಂತ್ರಗಳನ್ನು ಖುರಾನ್ ನಿಷೇಧಿಸಿದ್ದರೂ ಸಹ ಜನ ಅವುಗಳನ್ನು ನಂಬುತ್ತಾರೆ...ಕಾಶ್ಮೀರದ ಹಲವಾರು ಮಸೀದಿಗಳಲ್ಲಿ ಇಂದಿಗೂ ಪ್ರಾರ್ಥನೆಗೆ ಮೊದಲು ಗಂಟೆ ಬಾರಿಸುತ್ತಾರೆ' ಎಂದು ಕಾಶ್ಮೀರದ ಮುಸಲ್ಮಾನ ಚರಿತ್ರಕಾರ ಜಿ.ಎಮ್.ಡಿ. ಸೂಫಿ ತಮ್ಮ 'ಇಸ್ಲಾಮಿಕ್ ಕಲ್ಚರ್ ಇನ್ ಕಾಶ್ಮೀರ್' ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಲಲ್ಲೇಶ್ವರಿ

ಒಂದರೆಕ್ಷಣ ನನ್ನನ್ನು ನಾನೇ ನಂಬಲಿಲ್ಲ
ಆದರೂ ಗಟಗಟನೆ ಕುಡಿದೆ
ನನ್ನ ಕಾವ್ಯದ ಮದಿರೆಯನ್ನು

ಹದಿನಾಲ್ಕನೇ ಶತಮಾನದ ಕಾಶ್ಮೀರದಲ್ಲಿ ತನ್ನ ಅನುಭಾವ ಕಾವ್ಯದಿಂದ (ವಾಕ್ ಅಥವಾ ವಚನಗಳು) ಕಾಶ್ಮೀರಿ ಜನತೆಯ ಮೇಲೆ ಲಲ್ಲೇಶ್ವರಿ ಬೀರಿರುವ ಪ್ರಭಾವ ಅಚ್ಚಳಿಯದಿರುವಂತಹುದು. ಇಂದಿಗೂ ಕಾಶ್ಮೀರಿ ಭಾಷೆಯಲ್ಲಿನ ಶೇಕಡಾ ಮುವ್ವತ್ತರಷ್ಟು ನುಡಿಗಟ್ಟು ಹಾಗೂ ನಾಣ್ನುಡಿಗಳು ಆಕೆಯ ವಚನದ ಮಾತುಗಳಾಗಿವೆ. ಆಕೆಯ ಬದುಕಿನ ಬಗೆಗಿನ ನಿಖರ ದಾಖಲೆಗಳಿಲ್ಲದೆ ಬಹಳಷ್ಟು ಘಟನೆಗಳು ದಂತಕತೆಗಳಾಗಿವೆ. ಲಭ್ಯ ಮಾಹಿತಿಯ ಪ್ರಕಾರ ಆಕೆ ೧೩೩೫ರಲ್ಲಿ (ಕೆಲವು ದಾಖಲೆಗಳಲ್ಲಿ ೧೩೨೦ ಎಂದಿದೆ) ಸಂಪೋರ ಎಂಬ ಗ್ರಾಮದಲ್ಲಿ ಕಾಶ್ಮೀರದ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದಳು. ಆಗಿನ ಸಂಪ್ರದಾಯದಂತೆ ಅತಿ ಸಣ್ಣ ವಯಸ್ಸಿನಲ್ಲಿಯೇ ಪದಮನಪುರದ ಒಬ್ಬ ಬ್ರಾಹ್ಮಣ ಪೂಜಾರಿಯೊಂದಿಗೆ ಆಕೆಯ ವಿವಾಹವಾಯಿತು. ಆಕೆಯ ಅತ್ತೆ ಅತ್ಯಂತ ಕ್ರೂರಿಯಾಗಿದ್ದು ಆಕೆಗೆ ಸರಿಯಾಗಿ ಊಟ ಸಹ ಹಾಕುತ್ತಿರಲಿಲ್ಲ. ಆದರೆ ಹೆಚ್ಚು

ಅನ್ನ ಬಡಿಸಿದ್ದೇನೆಂದು ಎಲ್ಲರಿಗೂ ಅನಿಸಲೆಂದು ಆಕೆಯ ತಟ್ಟೆಯ ತುಂಬ ಕಲ್ಲು ತುಂಬಿ ಅದರ ಮೇಲೆ ಅನ್ನ ಸಿಂಪಡಿಸುತ್ತಿದ್ದಳು. 'ಮನೆಯಲ್ಲಿ ಕುರಿ ದೊಡ್ಡದೇ ಕಡಿಯಲಿ ಚಿಕ್ಕದೇ ಕಡಿಯಲಿ, ಲಲ್ಲಾಳಿಗೆ ಕಲ್ಲು ತಪ್ಪಿದ್ದಲ್ಲ' ಎಂಬ ಗಾದೆ ಇಂದಿಗೂ ಕಾಶ್ಮೀರದಲ್ಲಿ ಬಳಕೆಯಲ್ಲಿದೆ.

ಆಕೆಯ ಅತ್ತೆಯ ಹಾಗೂ ಗಂಡನ ಹಿಂಸೆ ತಡೆಯಲಾರದೆ ಆಕೆ ಮನೆಬಿಟ್ಟು ಸಂಪೂರ್ಣ ನಗ್ನಳಾಗಿ ಕಾಡು ಮೇಡು ಅಲೆದಾಡುತ್ತ, ಕಠಿಣ ನೇಮ, ತಪಸ್ಸುಗಳನ್ನಾಚರಿಸಿದಳು. ಮೊದಲಿನಿಂದಲೂ ಆಕೆಯಲ್ಲಿ ಅಧ್ಯಾತ್ಮದ ಚೇತನ ಜೀವಂತವಾಗಿತ್ತು. ಅದನ್ನು ಪೋಷಿಸಿ ಬೆಳೆಸಿದ ಗುರುವಿನ ಬಗ್ಗೆ ಈಗಲೂ ಏಕಾಭಿಪ್ರಾಯವಿಲ್ಲ. ಕೆಲವು ದಾಖಲೆಗಳ ಪ್ರಕಾರ ಆಕೆ ಆಗಿನ ಪ್ರಖ್ಯಾತ ಸೂಫಿ ಹಜರತ್ ಜಲಾಲುದ್ದೀನ್ ಬುಖಾರಿಯುವರಿಂದ 'ದೀಕ್ಷೆ' ಪಡೆದು ಇಸ್ಲಾಂಗೆ ಮತಾಂತರಗೊಂಡು ಸೂಫಿ ಪಥ (ಸುಲುಕ್)ವನ್ನು ಅನುಸರಿಸಿದಳು; ಆ ನಂತರ ಆಕೆ ಮಹಾನ್ ಸೂಫಿಗಳಾದ ಹಜರತ್ ಮೀರ್ ಸಯ್ಯದ್ ಸಿಮ್ನಾನಿ ಮತ್ತು ಹಜರತ್ ಮೀರ್ ಸಯ್ಯದ್ ಆಲಿ ಹಮ್‌ದಾನಿಯವರ ಪ್ರಭಾವಕ್ಕೂ ಒಳಗಾಗಿದ್ದಳು. ಆದರೆ ಕೆಲವು ಇತ್ತೀಚಿನ ದಾಖಲೆಗಳು ಆಕೆ ಎಂದೂ ಮುಸಲ್ಮಾನರ ಪ್ರಭಾವಕ್ಕೆ ಒಳಗಾಗಿರಲಿಲ್ಲ ಹಾಗೂ ಮತಾಂತರವೂ ಹೊಂದಿರಲಿಲ್ಲ; ಆಕೆ ಮಹಾನ್ ಶಿವಭಕ್ತೆಯಾಗಿದ್ದಳು ಹಾಗೂ ಆಕೆಯ ಗುರು ಸಿದ್ಧ ಶ್ರೀಕಾಂತ ಎಂಬಾತ ಎನ್ನುತ್ತವೆ. ಈ ರೀತಿಯ ಹೇಳಿಕೆಗಳು ಇತ್ತೀಚಿನ ದಿನಗಳವು ಎಂದು ಯೋಗಿಂದರ್ ಸಿಕಂಡ್ ತಮ್ಮ ಪುಸ್ತಕ 'ದ ಮುಸ್ಲಿಂ ರಿಷೀಸ್ ಆಫ್ ಕಾಶ್ಮೀರ್'ನಲ್ಲಿ ಹೇಳಿದ್ದಾರೆ. ಇಲ್ಲಿ ಕುತೂಹಲದ ವಿಷಯವೆಂದರೆ, ಮಧ್ಯಕಾಲೀನ ಕಾಶ್ಮೀರಿ ಬ್ರಾಹ್ಮಣ ಪಂಡಿತರ ದಾಖಲೆಗಳಲ್ಲಿ ಎಲ್ಲಿಯೂ ಲಲ್ಲೇಶ್ವರಿಯ ಉಲ್ಲೇಖಗಳಿಲ್ಲ. ಬಹುಶಃ ಆಕೆಯನ್ನು ಅಬ್ರಾಹ್ಮಣಳೆಂದು ಪರಿಗಣಿಸಿದ್ದುದರಿಂದಲೋ ಅಥವಾ ಬ್ರಾಹ್ಮಣರ ಆಚರಣೆಗಳನ್ನು ವಿರೋಧಿಸುತ್ತಿದ್ದುದರಿಂದಲೋ ಇರಬಹುದು. ಹಿಂದೂ ಲೇಖಕರು ಆಕೆಯನ್ನು ಮೊಟ್ಟಮೊದಲಿಗೆ ಉಲ್ಲೇಖಿಸಿರುವುದು ಹತ್ತೊಂಬತ್ತನೇ ಶತಮಾನದಲ್ಲಿ, ಬೀರಬಲ್ ಕಚ್ರು(೧೮೮೯-೪೬) ಎಂಬುವವ. ಆದರೆ ಮಧ್ಯಕಾಲೀನ ಕಾಶ್ಮೀರಿ ಮುಸಲ್ಮಾನ ಲೇಖಕರು ಲಲ್ಲಾಳನ್ನು ಲಲ್ಲಾ ಅರೀಫಾ (ಅಧ್ಯಾತ್ಮ ರಹಸ್ಯ ಜ್ಞಾನವುಳ್ಳ ಲಲ್ಲಾ), ಲಲ್ಲಾ ಮಜೂಜಾ (ಭಾವೋನ್ಮಾದದ ಲಲ್ಲಾ) ಮತ್ತು ರಾಬಿಯಾ-ಎ-ಸಾನಿ (ಎರಡನೇ ರಾಬಿಯ) ಎಂದೆಲ್ಲ ಕರೆದು ಆಕೆ ಸೂಫಿಗಳಾದ ಹಜರತ್ ಸಯ್ಯದ್ ಹುಸೇನ್ ಸಿಮ್ನಾನಿ ಮತ್ತು ಹಜರತ್ ಮೀರ್ ಸಯ್ಯದ್ ಆಲಿ ಹಮ್‌ದಾನಿಯವರನ್ನು ಅಧ್ಯಾತ್ಮದ ಗುರುಗಳನ್ನಾಗಿ ಸ್ವೀಕರಿಸಿರುವುದಾಗಿ ಹಲವಾರು ದಾಖಲೆಗಳಲ್ಲಿ ಉಲ್ಲೇಖಿಸಿದ್ದಾರೆ. ಬಹುಪಾಲು ಎಲ್ಲಾ ಕಾಶ್ಮೀರಿ ಮುಸಲ್ಮಾನರು ಆಕೆಯನ್ನು ಒಬ್ಬ ಸೂಫಿ ಸಂತಳೆಂದೇ ಪರಿಗಣಿಸಿದ್ದಾರೆ. ಲಲ್ಲೇಶ್ವರಿಯನ್ನು ಕಾಶ್ಮೀರದ ಹಿಂದೂ ಮತ್ತು ಮುಸಲ್ಮಾನರಿಬ್ಬರೂ ಗೌರವದಿಂದ ಲಾಲ್ ದೇಡ್ (ಲಾಲ್ ಅಜ್ಜಿ) ಎಂದು ಕರೆದು ಪೂಜಿಸುತ್ತಾರೆ.

ಕೆಲವು ತಜ್ಞರ ಪ್ರಕಾರ ಮಧ್ಯಕಾಲೀನ ಅನುಭಾವಿ ಕಾವ್ಯ ಅಥವಾ ವಚನಗಳನ್ನು ಉತ್ತರ ಭಾರತದಲ್ಲಿ ಮೊಟ್ಟಮೊದಲಿಗೆ ಪ್ರಾರಂಭಿಸಿದ ಕೀರ್ತಿ ಲಲ್ಲೇಶ್ವರಿಗೆ ಸಲ್ಲುತ್ತದೆ. ಆ ಅನುಭಾವೀ ವಚನ ಜ್ವಾಲೆ ನಂತರ ಇಡೀ ಭಾರತಕ್ಕೆ ಹರಡಿಕೊಂಡಿತು. ಇತರ ಅನುಭಾವಿ ಸಂತರ ಪ್ರಭಾವ ಲಲ್ಲೇಶ್ವರಿಯ ಮೇಲಾಗಿರುವ ಸಾಧ್ಯತೆಗಳು ಕಡಿಮೆ. ಏಕೆಂದರೆ, ಸಂತ ರಮಾನಂದ (೧೪೦೦-೧೪೭೦), ಸಂತ ಕಬೀರ (೧೪೪೦-೧೫೧೮), ಗುರು ನಾನಕ್

(೧೪೬೯-೧೫೩೮), ಸಂತ ತುಳಸೀದಾಸ (೧೫೩೨-), ಮೀರಾಬಾಯಿ ಇವರೆಲ್ಲ ನಂತರ ಬಂದವರು. ಕನ್ನಡದ ವಚನ ಚಳುವಳಿ ಹನ್ನೆರಡನೇ ಶತಮಾನದಲ್ಲಿ ಪ್ರಾರಂಭವಾಗಿದ್ದರೂ ಅದು ಕಾಶ್ಮೀರ ತಲುಪಿರುವ ಸಾಧ್ಯತೆಗಳು ತೀರಾ ಕಡಿಮೆ.

ತನ್ನ ವಾಕ್‌ಗಳು ಜನಸಾಮಾನ್ಯರಿಗೆ ತಲುಪಲೆಂದು ಅನಕ್ಷರಸ್ತಳಾದ ಆಕೆ ಜನರ ಭಾಷೆಯಲ್ಲಿಯೇ ಅವುಗಳನ್ನು ಹೇಳತೊಡಗಿದಳು. ಒಮ್ಮೆ ಆಕೆ ನಗ್ನಳಾಗಿ ಅಲೆದಾಡುತ್ತಿದ್ದಾಗ ಕೆಲ ಯುವಕರು ಆಕೆಯನ್ನು ಲೇವಡಿ ಮಾಡತೊಡಗಿದರು. ಆಗ ಹತ್ತಿರದ ಬಟ್ಟೆ ವ್ಯಾಪಾರಿಯೊಬ್ಬ ಆ ಯುವಕರನ್ನು ಬೈದು ಆಕೆಯನ್ನು ಲೇವಡಿ ಮಾಡಬೇಡಿರೆಂದು ತಿಳಿಸಿದ. ಆಗ ಆಕೆ ಆ ವ್ಯಾಪಾರಿಯಿಂದ ಒಂದೇ ತರಹದ, ಒಂದೇ ಅಳತೆಯ ಎರಡು ಬಟ್ಟೆ ಪಡೆದು ತನ್ನ ಎರಡೂ ಭುಜದ ಮೇಲೆ ಹಾಕಿ ಹೊರಟಳು. ಯಾರಾದರೂ ಲೇವಡಿ ಮಾಡಿದರೆ ಒಂದು ಬಟ್ಟೆಗೆ ಒಂದು ಗಂಟು ಹಾಕುತ್ತಿದ್ದಳು. ಯಾರಾದರೂ ಆಕೆಯನ್ನು ಕಂಡು ಗೌರವಿಸಿದರೆ ಮತ್ತೊಂದು ಬಟ್ಟೆಗೆ ಒಂದು ಗಂಟು ಹಾಕುತ್ತಿದ್ದಳು. ಸಂಜೆಯ ಹೊತ್ತಿಗೆ ಎರಡೂ ಬಟ್ಟೆಯಲ್ಲಿ ಸಾಕಷ್ಟು ಗಂಟುಗಳಾಗಿದ್ದವು. ಆಕೆ ಆ ಬಟ್ಟೆ ವ್ಯಾಪಾರಿಯ ಬಳಿ ಹೋಗಿ ಆ ಎರಡೂ ಬಟ್ಟೆಗಳನ್ನು ತೂಕ ಹಾಕಿಸಿದಳು. ಹೊಗಳಿಕೆಯ ಬಟ್ಟೆಗೂ, ತೆಗಳಿಕೆಯ ಬಟ್ಟೆಗೂ ತೂಕದಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ಅದೇ ರೀತಿ ತನ್ನ ಮನಸ್ಸೂ ಸಹ ಹೊಗಳಿಕೆಗೆ ತೆಗಳಿಕೆಗೆ ಹಿಗ್ಗುವುದಾಗಲಿ ಕುಗ್ಗುವುದಾಗಲಿ ಇಲ್ಲ ಎಂದು ಆಕೆ ಲೇವಡಿ ಮಾಡಿದ ಯುವಕರಿಗೆ ಹಾಗೂ ಅಂಗಡಿಯಾತನಿಗೆ ತೋರಿಸಿಕೊಟ್ಟಳು.

ಮಧ್ಯಕಾಲೀನ ಪರ್ಷಿಯನ್ ಸೂಫಿ ದಾಖಲೆಗಳಲ್ಲಿ ತಾನೇ 'ಹಾಲುಣಿಸಿ'ದ ಹಜರತ್ ನೂರುದ್ದೀನ್ ನೂರಾನಿಗೆ ಆಕೆಯೇ ಅಧ್ಯಾತ್ಮಿಕ ಗುರು ಎಂಬ ಉಲ್ಲೇಖಗಳಿವೆ. ಒಂದು ರೀತಿಯಲ್ಲಿ ಆಕೆಯೇ ಆತನ ಮೊದಲ ಗುರು. ಗೌಹರ್ ಹೇಳುವಂತೆ ಆಕೆ ಆತನನ್ನು ತನ್ನ ಅಧ್ಯಾತ್ಮ ಪಥದ ವಾರಸುದಾರನೆಂದು ಘೋಷಿಸಿದಳು. ಹಜರತ್ ನೂರುದ್ದೀನ್ ನೂರಾನಿ ತನ್ನ ತಾಯಿಯಾದ ಸದ್ರಾ ಮೌಜ್‌ಳ ಗರ್ಭದಲ್ಲಿದ್ದಾಗಲೇ ಲಲ್ಲೇಶ್ವರಿ ಆ ಮಗುವಿನೊಂದಿಗೆ ಮಾತನಾಡುತ್ತಿದ್ದಳಂತೆ. ಹುಟ್ಟಿದ ಮಗು ತನ್ನ ತಾಯಿಯ ಹಾಲು ಕುಡಿಯಲು ನಿರಾಕರಿಸಿದಾಗ ಲಲ್ಲೇಶ್ವರಿ ತನ್ನ ಮೊಲೆಯೂಡಿಸಿ, 'ಹೋ ನೂರುದ್ದೀನ್ ! ಹಾಲು ಕುಡಿ, ಅಧ್ಯಾತ್ಮಜ್ಞಾನ ವಿವೇಕದ ಹಾಲು ಕುಡಿಯದೆ ಆನಂದವೆಲ್ಲಿಯದು !' ಎಂದಳಂತೆ. ನಾಜ್ಕಿ ಹೇಳುವಂತೆ ಆ ನಂತರ ಆತ ತನ್ನ ಕಣ್ಣು (ಅಧ್ಯಾತ್ಮದ) ತೆರೆದ.

೧೪೦೦ನೇ ಇಸವಿಯಲ್ಲಿ ಬಿಜ್‌ಬೆಹಾರದ ಜಾಮಿಯ ಮಸೀದಿಯ ಮುಂದೆ ಲಲ್ಲೇಶ್ವರಿಯ ದೇಹಾಂತವಾಯಿತು. ಆಗ ನೂರುದ್ದೀನ್ ನೂರಾನಿಗೆ ಇಪ್ಪತ್ತೆರಡು ವರ್ಷವಾಗಿತ್ತೆಂದು ಕೆಲವು ದಾಖಲೆಗಳು ಹೇಳುತ್ತವೆ. ಸ್ಥಳೀಯ ದಂತಕತೆಯಂತೆ ಆಕೆಯ ಅಂತ್ಯಕ್ರಿಯೆಗೆ ಹಿಂದೂ ಮತ್ತು ಮುಸಲ್ಮಾನರಿಬ್ಬರೂ ಮುಂದಾಗಿ ತಮ್ಮ ತಮ್ಮ ಧರ್ಮಾನುಸಾರ ನಡೆಸಬೇಕೆಂದರು. ಆಕೆಯ ಮೃತ ದೇಹದ ಹೊದಿಕೆ ತೆರೆದಾಗ ಅಲ್ಲಿ ಆಕೆಯ ದೇಹವೇ ಇರಲಿಲ್ಲ, ಬದಲಿಗೆ ಹೂವಿನ ರಾಶಿಯಿತ್ತಂತೆ. ಅದನ್ನೇ ಇಬ್ಬರೂ ಹಂಚಿಕೊಂಡು ತಮ್ಮ ತಮ್ಮ ಧರ್ಮಾನುಸಾರ ಅಂತ್ಯ ಕ್ರಿಯೆ ನಡೆಸಿದರಂತೆ.

ಆಕೆಯ ಕೆಲವು ವಾಕ್‌ಗಳು ಹೀಗಿವೆ :

೧. ಹೇಳಲಿ ಇಡೀ ವಿಶ್ವವೇ ನನ್ನ ಬಗ್ಗೆ ಕೆಟ್ಟದ್ದು
ಸ್ಥಳವಿಲ್ಲ ನನ್ನ ಹೃದಯದಲ್ಲಿ ಕೋಪ ದ್ವೇಷಕ್ಕೆ
ದೇವರ ನಿಜವಾದ ಭಕ್ತೆಯಾದರೆ ನಾನು
ಕನ್ನಡಿಯ ಮೇಲೆ ಬೂದಿ ಉಳಿಸಬಲ್ಲುದೆ ಕಲೆಯ ?

೨. ಮಂದಿರದೊಳಗಿನ ಕಲ್ಲಿನ ವಿಗ್ರಹ ಕಲ್ಲೇ ಅಲ್ಲವೆ
ಮೇಲಿನದು (ಮಂದಿರ) ಮತ್ತು ಕೆಳಗಿನದು (ವಿಗ್ರಹ) ಒಂದೇ
ಆಗಿರುವಾಗ, ಯಾವುದನ್ನು ಪೂಜಿಸುವೆ
ಹೋ ಮೂರ್ಖ ಪಂಡಿತನೆ
ಆತ್ಮದೊಂದಿಗೆ ಮನಸ್ಸು ಏಕಾಗ್ರಗೊಳಿಸದೆ ?

೩. ನಿರ್ಜೀವ ವಿಗ್ರಹಕ್ಕೆ ಜೀವಂತ
ಟಗರು ಬಲಿ ಕೊಡುವಿಯಲ್ಲಾ
ಮೂರ್ಖ ಪಂಡಿತನೆ !
ನಿನಗದು ಉಣ್ಣೆ ಕೊಡುವುದಿಲ್ಲವೆ
ಚಳಿಯಿಂದ ತಪ್ಪಿಸಿಕೊಳ್ಳಲು ?
ಅದು ತಿನ್ನುವುದು ಹುಲ್ಲು,
ನೀನೆಸದ ಚೂರು ಮತ್ತು ನೀರು.
ನಿರ್ಜೀವ ಕಲ್ಲಿಗೆ ಜೀವಂತ ಟಗರನ್ನು
ಬಲಿ ಕೊಡು ಎಂದವರ್‍ಯಾರು ?

೪. ಮಂದಿರದ ಗೋಡೆಯಲ್ಲಿರುವುದು ಕಲ್ಲು
ಪ್ರಾರ್ಥನಾ ಮಂದಿರದಲ್ಲೂ ಅಷ್ಟೆ.
ಅದೇ ಕಲ್ಲೇ ಗರ್ಭಗುಡಿಯಲ್ಲೂ ಇರುತ್ತದೆ
ಕಾಳು ಬೀಸುವ ಕಲ್ಲಿನಲ್ಲೂ ಸಹ
ಶಿವನನ್ನು ಕಾಣುವುದು ಸುಲಭವಲ್ಲ
ಸಿಕ್ಕಿತೆ ಸುಳಿವು ನಿನಗೆ ?

೫. ಒಳ್ಳೆಯದೋ ಕೆಟ್ಟದ್ದೋ,
ಹೊಗಳಿಕೆಯೋ ತೆಗಳಿಕೆಯೋ
ನಾನ್ಯಾವುದಕ್ಕೆ ಅರ್ಹಳು
ಕಿವಿ ಕಿವುಡಾಗಲಿ, ಕಣ್ಣು ಮಂಜಾಗಲಿ
ಪರಮಾತ್ಮನ ಧ್ವನಿ ಮಾತ್ರ
ನನ್ನ ಆತ್ಮವನ್ನು ಎಚ್ಚರಿಸಲಿ

ಉರಿಯುತಿದೆ ನನ್ನ ರತ್ನದೀಪ
ಬೀಸುವ ಬಿರುಗಾಳಿಯಲ್ಲಿ.

೬. ಪುಣ್ಯಕ್ಷೇತ್ರಗಳ ತೀರ್ಥಸ್ನಾನ ಏಕೆ ಬೇಕು ?
ನಿನ್ನೊಂದಿಗಿರುವ ನಗು, ಸೀನು, ಕೆಮ್ಮು, ಆಕಳಿಕೆಯ ಹಾಗೆ
ಇರುವನಲ್ಲ ಆತ ಸದಾ ನಿನ್ನ ಬಳಿ, ನಿನ್ನೊಂದಿಗೆ
ಮೊದಲು ಗುರುತಿಸಿಕೊ ಆತನನ್ನು.

ಜೆ. ಬಾಲಕೃಷ್ಣ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು-೫೬೦ ೦೨೪.

ಹುಲಿಸೀರೆ–ಕಥನ ಕವನ

ಡಾ. ಕೆ.ವೈ. ನಾರಾಯಣಸ್ವಾಮಿ

೧.

ನೋಡಾಲು ಕಣ್ಣೆರಡು ಸಾಲಾವು ಎಂಬಂತೆ
ಚೆಲುವಿ ಇದ್ದಳು ಊರ ಗೌಡನ ಮಗಳು
ತೂಗಿದರೆ ತೆನೆಯವಳು ತಾಗಿದರೆ ಮೊನೆಯವಳು
ಕೆನೆಗಟ್ಟಿದುಣ್ಣೀಮೆ ಸಕ್ಕಾರೆ ಗೊಂಬೆ
ನಿಂತರೆ ಅವಳು ನಿಲುವುಗನ್ನಡಿ ಮುಂದೆ
ಅದ್ದಾವೆ ನಾಚುವುದು ಅವಳ ಅಂದವ ಕಂಡು
ತಾಯಿ ಇಲ್ಲದ ಮಗುವ ತಬ್ಬಾಲಿ ಮಾಡದೆ
ತೋಳ ತೊಟ್ಟಿಲಲಿಟ್ಟು ತೂಗವನೆ ಗೌಡ
ಹೆಡೆ ಮಣಿಯನೊತ್ತೂ ಕಾಯ್ವಂಗೆ ನಾಗರ
ಕಾಪಾಡುತಾನೆ ಕಣ್ಣು ರೆಪ್ಪೆಯ ಕೆಳಗೆ
ಎಲ್ಲ ಇದ್ದೂ ಕೂಡ ಏನೂ ಇಲ್ಲದ ಬಡವಿ
ಹೂಮರದಲಿ ಬಿರಿದ ಒಂಟಿ ಹೂವು !
ದುಃಖಾವು ಸುಡುತೈತೊ ದಿನವೂ ಬಾದಿಸಿ ಒಳಗೆ
ಪಾಪೆಯೊಳಗಿನ ದೀಪ ಅಲುಗೈತೆ ಉಸಿರಿಗೆ !
ಮಲ್ಲೀಗೆ ಮೈಯವಳ ಬಿಸಿಲು ಸುಡುವುದೆಂದು
ಹಗಲಿಗೆ ಬಿಡನು ಮಗಳನ್ನ ಮನೆ ಹೊರಗೆ
ಹುಣ್ಣಿಮೆ ಇರುಳಲ್ಲಿ ಹಾಲೀನ ಬೆಳಕಲ್ಲಿ
ಆಡಾಲು ಬಿಡುತ್ತಾನೆ ಉಪ್ಪರಿಗೆ ಮೇಲೆ
ಹಾರು ನೋಡುತ್ತಾಳೊ ಮಾಳಿಗೆ ಮೇಲಿಂದ
ಆಸೆ ತುಂಬಿದ ಕಣ್ಣಲಿ ದೀಪ ಹಚ್ಚಿ

ಜೋಡಿ ಆಡೂವ ಮಕ್ಕಳು ಚಂದ ಚಂದ
ಬೀದಿಯೊಳಗಿನ ಮಣ್ಣು ಎಂಥ ಗಂಧ !
ಹಾರುವಾಸೆಯ ಕೊಂದ ಪಂಜರದ ಪಕ್ಷಿ
ಸೆರೆಯೊಳಗೆ ಸಿರಿ ಕೊಟ್ಟ ದೈವವೇ ವೈರಿ
ಬಿಡುಗಡೆಯು ಎಂದಿಗೊ ಸಾವಾದರು ಚಂದ !
ಮುಸುಗಿ ದುಃಖದ ಮೋಡ ಮನದ ಆಗಸದಲ್ಲಿ
ಕಣ್ಣೀರು ಸುರಿದಾವು ಮುಂಗಾರ ಮಳೆಯಂಗೆ
ಮನೆಯ ಗೋಡೆಯಲ್ಲಿ ತೂಗೊ ರಸ ಪಟದಲ್ಲಿ
ಆಡೂವ ಗಿಣಿಯೆರಡು ಪ್ರಾಣ ಪಡಕೊಂಡಾವು
ಬಾಲೆ ದುಃಖ ಕಂಡು ಮರುಗಿ ಹೊರ ಬಂದಾವು
ಮುಂಗೈಯ ಮೇಲೆರಗಿ ಆಟ ಆಡಿದವು
ಪಾಪೇಲಿ ಮಿಗಿಲಿದ್ದ ಕಣ್ಣೀರ ಕುಡಿದಾವು
ಹುಡುಗಿಯ ಸಂತೈಸಿ ಗಲ್ಲವ ಮುದ್ದೀಸಿ
ನಗೆಯ ತಂದವೋ ಗಿಣಿ ಮಾತನಾಡಿ
ನಾಳೆಯ ಇರುಳಲ್ಲಿ ನಾದಗುದುರೆಯನೇರಿ
ಎದೆ ಭಾರ ಇಳಿಸುವ ಗೆಣೆಕಾರ ಬರುತ್ತಾನೆ
ದುಃಖಾವ ಬಿಡು ಬಾಲೆ ದುಮ್ಮಾನ ಬಿಡು ಬಾಲೆ
ಕಣಿ ಹೇಳಿ ಗಿಣಿಯೆರಡು ಕಣ್ಣು ಮಿಟಕಿಸುತಾ
ತೆರೆ ದಾಟಿ ಮರೆಯಾದವೊ
ಪಟದೊಳಗೆ ಸೆರೆಯಾದವೊ

ಹೂಮಂಚದಲ್ಲಿ ಪುಲಕಗೊಂಡಳು ಹುಡುಗಿ
ಗಿಣಿ ಮಾತು ನಿಜವೇನೆ ? ಗೆಣೆಯ ಬಂದಾನೇನೆ ?
ಬಂದಾನೊ ಬಾರನೊ ಹೆದರಿ ಅರೆ ಗಳಿಗೆ
ತಲ್ಲಣದ ಮಗ್ಗದಲಿ ಆಸೆ-ನಿರಾಸೆ
ಲಾಳಿ ಆಡುತ್ತಾಲಿತ್ತು ಇರುಳು ಪೂರ.

ನೆತ್ತಿಯ ಮೇಲೆ ಚಂದ್ರ ವಾಲಿದನು
ನಿದ್ರಾದೇವಿಗೆ ನಿದ್ದೆ ತಡೆಯಾದೆ ಬಂದಿರಲು
ಬಿಟ್ಟ ದಿಟ್ಟಿಯ ಮೇಲೆ ಮಂಪರ ಸೆರಗೆಳೆದು
ತೂಗಿದಳು ಬಾಲೆಯನು ಕನಸ ತೊಟ್ಟಿಲಲಿಟ್ಟು
ಹೀಗೆ ಸರಿದಿತ್ತು ಇರುಳು
ಒಲವೆಂಬ ಹಾಲಿಗೆ ಹೆಪ್ಪನಿಟ್ಟು.

೨.

ಹರೆಯದ ಹುಡುಗೇರ ಕಣ್ಣ ಕಿಚ್ಚವನು
ಅಡವಿಯ ಬೆಡಗವನು
ಹುಲಿ ಬೇಟೆ ಆಡುವನು
ಗೊಲ್ಲರ ಹುಡುಗನು ದನ ಕುರಿ ಕಾಯುವನು

ಕಬ್ಬಿನ ಮೈಯವನು
ಹರೆಯ ಹುರಿಗೊಂಡವನು
ಕಬ್ಬಿಗರಾ ಕಿವಿಗಳು
ಪುಲಕಗೊಳ್ಳುವಂಗೆ 'ಗಣೆ'ಯ ನುಡಿಸುವನು
ಮೈಯ ಮರೆಸುವನು
ಕೊಳಲ ಮೇಲಾಡೊ ಬೆರುಳ ಬೆಡುಗಲ್ಲಿ
ನಾದ ನವಿಲುಗಳೆಲ್ಲಾ ನಾಂಟ್ಯ ಮಾಡುತ್ತಾವೊ
ಸೊಲ್ಲೀನ ಸ್ವರ ಮೀಟಿ
ಸುಪ್ತಾದ ಗೆರೆ ದಾಟಿ
ಮೈ ಮರವಿನೊಳಗೆ
ಗುಪ್ತ ಗೂಢಗಳಾ
ಭಂಡಾರ ಬಾಗಿಲನು ತಟ್ಟನೆ
ತೆರೆಸುವನು.
ನಾದ ಪಾದವು ಸೋಂಕಿ
ಜೀವ ಜೀವಗಳೆಲ್ಲಾ
ಮಕರಂದ ಮಡುವಲ್ಲಿ
ಮೀಯುವಾ ಮೀನಾಗಿ
ಕಣ್ಣ ದಿಟ್ಟಿಗಳೆಲ್ಲಾ ಬಣ್ಣ ಚಿಟ್ಟೆಗಳಾಗಿ
ಸಪ್ತ ಸ್ವರಗಳಲ್ಲಿ ಸೆರೆಬಿದ್ದವೊ
ಗಿಡಮರ ಗುಟ್ಟೆಗಳು
ಪಶು ಪಕ್ಷಿ ಪ್ರಾಣಗಳು
ಮರೆತವೊ ಇಹ-ಪರದ ಗುರುತೂಗಳ !
ಕೊಳಲನೂದಲು ಗೊಲ್ಲ ಹೊತ್ತು ಹುಟ್ಟುತ್ತಾನೆ.
ನಾದದಂಬರಿದು ಕಾಡು ಪ್ರಾಣಗಳೆಲ್ಲಾ
ಕಲ್ಲಾದೊ ಶಿಲೆಯಾದೊ
ಮೋಡಿಗೊಂಡವರಂಗೆ
ಹೊತ್ತು ನೆತ್ತಿಗೆ ಬರಲು
ಜೀವ ದೊಡ್ಡಿಗೆ ಬರಲು

ಶಬ್ದ ಪಂಜರ ತೆರೆದು
ಸೆರೆಯ ಬಿಡಿಸುವನು
ಕ್ರೂರ ಜಂತುಗಳ ಕಾಡಿಗಟ್ಟುವನು
ಕಳಲೆಯ ಮೋಸಾಗಿ ಮಸ್ತಾಗಿ ಬೆಳೆದವನೆ
ಹಲಸ ತಿನ್ನುತ್ತಾನೆ
ಜೇನ ಕುಡಿಯುತ್ತಾನೆ
ಕಾಡದೇವರ ಸಿಸು ಮಗನೆ ತಾನಾಗಿ
ಕಾಡಿನರಸನಂತೆ ಮೆರೆದವನೆ ಗೊಲ್ಲ
ಕಾಲ ರೆಕ್ಕೆಯ ಹುಳುವು
ಕತ್ತಲ ರಸಹೀರಿ
ಬೆಳಕನ್ನು ಕ್ಷಣ ತೂರಿ
ಟೆಂಕಿ ನಿಲ್ಲುತ್ತಿತ್ತು ಎದೆಯ ಮರೆಯಲ್ಲಿ.
ಒಂದಿರುಳು ಹುಣ್ಣಿಮೆ
ಹಾಲು ಚೆಲ್ಲುತಲಿರಲು
ಜೀವ ಜೀವಗಳೆಲ್ಲಾ
ಕಣ್ಣು ಜೋಲುತಲಿರಲು
ಎಂದಿಲ್ಲದಿಂದ್ಯಾಕೋ
ಚಂದ್ರ ಕಿರಣಗಳಿರಿದು
ಎದೆಯ ಗಾಯ ಮಾಡಿ
ಗಾಸಿಗೊಳಿಸಿದವಲ್ಲೋ
ಬೀಸು ಗಾಳಿಯಲಿದ್ದ
ಗಂಧಾವು ಮರೆಯಾಗಿ
ಖತಿಗೊಂಡ ಗಾಯಕ್ಕೆ
ಉಪ್ಪು ಸವರುವುದಲ್ಲೊ
ಎಂದಿಲ್ಲದ ಮನವು
ಇಂದೇನೋ ನೆನೆವುದು !
ಮನಸಲ್ಲಿ ಮನಸಿಲ್ಲ
ಏನೋ ಮೈ ಹೊಕ್ಕಂಗೆ
ಚಕ್ಕಲಿಗಿಲಿ ಇಟ್ಟಂಗೆ
ಮೈ ನರಗಳನೆಲ್ಲಾ ಹಗ್ಗ ಹೊಸೆದಂಗೆ
ಮೊತ್ತ ಮೊದಲಿಗೆ ತಾನು
ಒಬ್ಬಂಟಿ ಎಂಬಂಗೆ
ದಿಗುಲೆಂದರೇನೆಂದು ಅರಿಯದವನಲ್ಲಿ
ಭಯವಾಗಿ ಹುಟ್ಟೀತು ಹರೆಯಾದ ಕೋರಿಕೆ

ಬೆಂಬೂದಿಯೊಳಗೆ ಕೆಂಡ ಬೆವರುವಂಗೆ
ಚಡಪಡಿಸುತಾನೋ ಕ್ಷಣಕ್ಷಣವು ಗೊಲ್ಲ
ಕಣ್ಣ ಗೂಡೊಳಗೆ ರತ್ನ ಪಕ್ಷಿಗಳು
ಕನಸ ನೆತ್ತಿಯ ಮೇಲೆ ಕಾವು ಕೊಡುತಾವೆ
ಕಣ್ಣ ಕೆಡವಿದರೂ
ನಿದ್ದೆ ಸುಳಿಯದಿರಲು
ಮುಂದುಗಾಣದೆ ಗೊಲ್ಲ
ಕೊಳಲನ್ನು ತುಟಿಗಿಟ್ಟು
ಎದೆಯ ನಿಸ್ಸೂರನು
ಉಸಿರೊಳಗೆ ಬಿಟ್ಟ
ಹಾಲ್ಗಡಲ ಮೌನಾದ ಅಲೆ ಅಲೆಯ ಮೇಲೆ
ನಾದ ನಾವೆಯನು
ಹರಿಯಬಿಟ್ಟನು ಗೊಲ್ಲ
ಗಾಳಿ ಹುಟ್ಟಿನ ಮೇಲೆ
ತೇಲು ತೇಲುತಾ ನಾವೆ
ತೀರವನ್ನರಸುತ್ತಾ ಹಾದು ಹೋಗುತಲಿತ್ತು
ಉಪ್ಪರಿಗೆ ಮೇಲೆ

೩.
ಗಿಣಿ ಮಾತ ನಂಬಿ
ಪ್ರಾಣವನೆ ದುಂಬಿ
ಕಾಯುತ್ತಿದ್ದಳೊ ಹುಡುಗಿ ಕನವರಿಸಿ
ಎದೆಯ ತೀರವನು ತಾಕಿತ್ತು ನಾವೆ
ಪ್ರಾಣ ಲಂಗರು ಊರಿ.
ಕತ್ತಾಲ ಗೂಡಲ್ಲಿ ದೀಪ ಹೊತ್ತಿಸಿದಂತೆ
ಒಲೆಯ ಕೆಂಡದ ಮೇಲೆ ಕೈ ನೀರು ಸಿಡಿದಂತೆ
ಜೋಲಿ ಹೊಡೆಯುತ್ತಿದ್ದ ಗಾಳಿ ಪಟದಂತಿದ್ದವಳ
ಹೊಸದೇನೊ ಮೈಹೊಕ್ಕು ಕಚಗುಳಿ ಇಟ್ಟಂತೆ
ನಾದವೇ ನೂರಾರು ಭರವಸೆಯ ಕೊಟ್ಟಂತೆ
ಕಟ್ಟಿದಳೊಡನೆ ಪ್ರಾಣ ಮುಡಿಪವನಿಗೆ
ಯಕ್ಷ ಗಂಧರ್ವನೋ
ನರನಾರಾಯಣನೋ
ಕೊಳಲಲ್ಲೇ ನನ್ನ ಕೊಲ್ಲ ಬೇಡೊ
ಅಂಬು ನಾಟುವ ಮುನ್ನ

ಬಲಿ ಬಿದ್ದ ಮಿಕ ನಾನು
ಪ್ರಾಣ ನಿನ ಪಾಲೋ ನನ್ನಪ್ಪನಾಣೆ
ಮೈಯ ಮೀಸಲು ಮುರಿದು
ಮೀಟು ಬಾರಯ್ಯ ಮಾಯಕಾರನೆ ಗೆಳೆಯ
ಮೈದುಂಬಿ ಬಾರೋ
ಮನದುಂಬಿ ಬಾರೋ
ಹರೆಯದಗ್ನಿ ಕುಂಡದ ವಿರಹದುರಿಯಲ್ಲಿ
ಒಂಟಿ ಬೇಯಲಾರೆ
ಸಂಟಿ ತಾಳಲಾರೆ
ಬಂದು ಸೇರೋ ನನ್ನ ಪ್ರಾಣದೊಡೆಯ
ಹೆಪ್ಪುಗಟ್ಟಿದ ಹಾಲ ಬಾನೆಯನಿಂತು
ಒಲವೆಂಬ ಮಂತು ಕಡೆಯುತ್ತಲಿತ್ತು
ಚಿತ್ತದಲೆಗಳ ಮೇಲೆ ತೂಗುತಲಿತ್ತೋ
ನಾದ ನವಿಲು !
ಎದೆಯ ಹಚ್ಚೆಯಲ್ಲಿ ಮೂಡಿತ್ತು ಚಿತ್ತಾರ
ನವಿಲ ಕಣ್ಣು

೪.

ಇರುಳ ಮಂಪರ ಕೊಂದು
ಬೆಳಗಿನ ಕಿರಣ
ಬಂದಿತು ಹುಡುಗಿಯ ಎದೆಯ ಬಾಗಿಲಿಗೆ
ಎಚ್ಚರಗೊಂಡಳೊ ಎದೆ ಮ್ಯಾಲೆ ಕಂಡಾಳೋ
ಇನ್ನೂ ನವಿರಿತ್ತು ನವಿಲಗಣ್ಣಿನ ಚಿತ್ರ
ನಿಧಿಯ ಬಚ್ಚಿಡುವಂತೆ ನೆಲದೊಳಗೆ ಹುಗಿದು
ಕಣ್ಣ ಕಣಜಾದಲ್ಲಿ ಕಾಪಿಟ್ಟು ಪ್ರೇಮವನು
ಎಂದಿನಂತಿರದಾದಳೋ ಬಾಲೆ
ಹಿಂದಿನಂತಿರದಾದಳೋ
ತಂದೆ ಹೊಲಕೋದ
ಆಳುಕಾಳನು ಕೂಡಿ
ಬಳ್ಳಿಯ ನಡುವೇನು
ಬಂಗಾರ ಕೊಡವೇನು
ನೀರ ತರುವಂಗೆ ನೆಪ ಮಾಡಿಕೊಂಡು
ದಾಲಬಂದ್ರಾವ ದಾಟಿ ಬಂದಾಳೋ ಬೀದಿಗೆ
ಆಳು ಮಕ್ಕಳಂಜಿ ಅಡ್ಡ ಬಂದರು

ಬೇಡ ಅಮ್ಮಯ್ಯ ನಿನ್ನ ದಮ್ಮಯ್ಯ
ನಿನ್ನಪ್ಪ ಕಂಡರೆ ನಮ್ಮ ಕೊಲ್ಲವನು,
ನೂರು ಕೊಡವಾದರು ನಾವೇ ತರತೀವಿ
ಅಣತಿ ಮಾಡವರನ್ನ ಅಡ್ಡಗಟ್ಟಿದಳು
ಪಡ್ಡೆಗರುವಿನಂಗೆ ಪಲಪಲನೆ ನಡೆದಾಳು
ನೀರ ಬಾವಿಯ ದಾರಿ ನಾರಿ ಸವಾರಿ !
ಹುಡುಗನಾಗುರುತಾ ಯಾರಕೇಳುವುದೆಂದು
ಗಲಿಬಿಲಿಗೊಂಡಾಳೋ ಎದುರಿಗೆ ಕಂಡಾಳೊ
ನೀರೊತ್ತು ಬರುತ್ತಾರೆ ಹರೆಯದುಡುಗಿಯರು
ಯಾರವನು ? ಯಾರವನು ?
ಇರುಳ ಜಾವದಲ್ಲಿ ಕೊಳಲೂದೂವ ಜಾಣ
ಹೆಸರೇನು ? ಗುರುತೇನು ?
ಯಾವ ಕೇರಿಯವನು ?
"ಈ ಊರ ಫಲದೊಳಗೆ
ಸಕಲೆಂಟು ಜನದೊಳಗೆ
ಇರುಳೇನು ಹಗಲಲ್ಲೇ
'ಗಣೆ' ನುಡಿಸೊ ಗಂಡಿಲ್ಲ
ಕನಸ ಕಂಡೇನೇ ?
ಭ್ರಾಂತೆಲ್ಲೋ ನಿನ ಮನಕೆ !"
ನಗುವಿನೊಂದಿಗೆ ಹರವಿ
ನೀರ ತುಳುಕಿಸಿ ನಕ್ಕು
ನಡೆದಾರು ನೀರೆಯರು
ಚಿಂತೆಗೊಬ್ಬಳನೆ ಒಂಟಿ ಬಿಟ್ಟು !
ನೀರ ಬಾವಿಗೆ ಬಂದು
ನೋಯುತ್ತಾಲಿ ನಿಂದು
ಬಾಲೆ ಬೇಡುತ್ತಾಳೆ ಗಂಗೆಯನು
ಶಿವನ ನೆತ್ತಿಯನೇರಿ
ಶಕುನ ನುಡಿಯಮ್ಮ
ಹಾಡಿನಲ್ಲೇ ನನ್ನ ಕೂಡಿಕೊಂಡವನ
ಆರೆಂದು ತೋರಮ್ಮ
ಕರುಣೆ ಗಂಗಮ್ಮ
ನೀರು ಅಂಜನವಾಗೆ
ತೇಲಿಬಂದನು ಗೊಲ್ಲ

ದನ ಮಂದೆಯ ಮಧ್ಯ ಗೋಪಾಲನು
ನಗುತಾನೆ ಕಣ್ಣಲೇ ಕೊಳಲನುಡಿಸುತ್ತಾ
ಪಾತಾಳದಿಂದ ತೇಲಿಬಂದಿತು ನಾವೆ
ನೀರಿನಲೆಗಳಲಿ ಅಡಗಿದ್ದವೋ ನವಿಲು
ಗುಪ್ಪನೆದ್ದವೋ ನೀಲ ಗಗನಕ್ಕೆ !
ಸುಣ್ಣಕಲ್ಲಿನ ಮೇಲೆ ಬಿದ್ದ ಹನಿ ನೀರಂತೆ
ಇಡುಗಿತು ಮಿಂಚು ಹುಡುಗಿಯ ಕಣ್ಣೊಳಗೆ
ಮೂರ್ಛೆಗೊಂಡಳು ಬಾಲೆ
ನೀರ ಮೆಟ್ಟಿಲ ಮೇಲೆ
ಗಂಗೆ ಮಾಯಿಯ ಕೈ ಹೂವಿನಂತಿಡಿದವಳ
ಹರಸಿದವು ತಾಯಂತೆ ತಲೆಯ ಸವರಿ

[illegible]

ಕಣ್ಣೆನಂಬಲವೊ ಮನದ ಬೆಂಬಲವೊ
ಗೊಲ್ಲನ ನೆನೆ ನೆನೆದು ಗಾಸಿಗೊಳ್ಳುವಳೊ
ಇರುಳ ಬಯಸುವಳು ಹಗಲ ಶಪಿಸುವಳು
ಅನ್ನ ನೀರಿನ ಮೇಲೆ ಆಸೆ ತೋರಾಳು
ಮಾತಿಲ್ಲ, ನಿಗವಿಲ್ಲ, ಮೈಯಲ್ಲಿ ಅರಿವಿಲ್ಲ
ಗಿಡುಗಾನ ನೆರಳಲ್ಲಿ ಸೆರೆಬಿದ್ದ ಹಾವಂಗೆ
ಗಿರುಗಿಂಟಲಾಡುತ್ತಾಳೆ ಕಳವು ಸೊಕ್ಕುತ್ತಾಳೆ
ಗಾವೇನೊ ಮೈ ಹೊಕ್ಕು ಮಗಳನ್ನ ಕಾಡುತ್ತಾದೆ
ದಿಗುಲುಗೊಳ್ಳುತ್ತಾನೆ ದುಗುಡಗೊಳುತ್ತಾನೆ
ದೇಶ ದೇಶಗಳಿಗೆ ಆಳು ಮಕ್ಕಳ ಕಳಿಸಿ
ಮಾಯಗಾರನ ಕರೆಸಿ ಮಂತ್ರ ಮಾಡಿಸಿದ
ತಂತ್ರಗಾರನ ಕರೆಸಿ ಅಂತ್ರ ಕಟ್ಟಿಸಿದ
ಹುಳುವಾಡಿದಾ ಗಿಡದ ಎಲೆ ಬಾಡುವಂತೆ
ಗೊಲ್ಲ ಹುಡುಗನ ನೆನಪು ಮನದ ಗೆದ್ದಲಿನಂತೆ
ಕೊಲ್ಲುತ್ತಿತ್ತು ಹುಡುಗಿಯನು ಒಳಗೆ, ಗಳಿಗೆ ಗಳಿಗೆ !
ಹಣೆಬರವಿದ್ದಂಗೆ ಆಗಿದ್ದು ಆಗಲೆಂದು
ಹಾರೈಕೆ ಮಾಡುತ್ತಿದ್ದ ಆಳು ಮಕ್ಕಳ ಕರೆದು
ಗುಟ್ಟು ಒಡೆಯುವ ಮುನ್ನ
ಆಣೆ ಮಾಡಿಸಿಕೊಂಡು
ಬಲಗೈ ಮೇಲೆ ಭಾಷೆ ಮಾಡಿಸಿಕೊಂಡು
ಕಿತ್ತುಬಿಟ್ಟಳು ಬಾಲೆ ನಾಲಿಗೇಲಿ ನಾಟಿದ್ದ

ನಾಗದಾಳಿ ಮುಳ್ಳನ್ನ !
ನಾದ ನವಿಲನಿಂದಾಡಿ ನನ್ನ ತ್ರಾಣ ಹೋಗೈತೊ
ಹುಡುಕಿ ತರಬೇಕೊ ಜೋಪಾನ ನನ ಮಾನ
ಸಿಕ್ಕಾರೆ ಅವನಿಗೆ ಕೊಡಿರೋ ಜಡೆಬಿಲ್ಲೇನ
ಜಡೆಬಿಲ್ಲೆ ಅಲ್ಲವಿದು ತಿಳಿಹೇಳಿ ಅವನಿಗೆ
ನನ್ನ ಪ್ರಾಣ ಪದಕ.
ಬುತ್ತಿಯ ಕೊಟ್ಟವಳು ಅಡವಿಗಟ್ಟಿದಳು
ಗೌಡನ ಕಣ್ಣಿಗೆ ಬಿದ್ದರೆ ಗತಿಯೇನು ?
ಗೌಡನ ಕಿವಿಗೆ ಬಿದ್ದರೆ ಗತಿಯೇನು ?
ಕಿಚ್ಚು ಸುಡದೇನು ಕಾಡು ಉಳಿಯುವುದೇನು ?
ಧೈರ್ಯವು ಉಡುಗಿ ಬೆದರುತ್ತಾಳುಡುಗಿ
ಹರಕೆಯ ಹೊರುತ್ತಾಳೆ ಮೀಸಲು ಕಟ್ಟುತ್ತಾಳೆ
ಅಂತರಿಕ್ಷದಲ್ಲಿರುವ ಕಾಯುವ ದೈವಗಳೆ
ಪಾತಾಳದಲ್ಲಿರುವ ಮನೆತನದ ಹಿರಿಯರೆ
ಕಾಯಿರೋ ಗುಟ್ಟನ್ನು ರಟ್ಟಾಗದಂತೆ
ಹುಡುಕಿ ತೋರಿರೋ ನನ್ನ ಎದೆಯ ರಮಣನನ್ನ
ದಿನವೊಂದು ದಿನವೆರಡು ಕಳೆದವನ್ನೆರಡು
ಬಂದಾರು ಪಡುಮೂಡ ಬಡಗಣದಿಂದ
ಬತ್ತಾಲೆ ಮುಖವೊತ್ತು ಬರಿಗೈಲಿ ನಿಂದಾರು
ಗೊಲ್ಲನ ಸುಳಿವಿಲ್ಲ ದುಃಖ ಮುಪ್ಪುರಿಗೊಂಡು
ಮಲ್ಲಿಗೆ ಮಂಚದಲಿ ಮರುಗಿದಳು ಕಾಂತೆ
ಹಗಲಿರುಳ ಭೇದವನ್ನರಿಯದಂತೆ !
ಮತ್ತೆಂದಿಗೊ ಆ ಹುಣ್ಣಿಮೆ ರಾತ್ರಿ
ಕಾರಿರುಳ ಕತ್ತಲಲ್ಲಿ ಕೂತು ಉಪ್ಪರಿಗೇಲಿ
ಹಾರೋ ಗಿಣಿಯಾದ್ರೂ ಯಾಕಾಗಲಿಲ್ಲವೆಂದು
ಚುಕ್ಕೆ ಬೆಳಕಲ್ಲೇ ಹಾರು ನೋಡುತ್ತಾಳೆ
ನೊಂದ ನಿಟ್ಟುಸಿರಿಗೆ ತಂಗಾಳಿ ಅಂಜಿತು
ಕೌರು ಕತ್ತಲಿನಲ್ಲಿ ತೆಂಕಣ ದಿಕ್ಕಲ್ಲಿ
ಮೂಡುವನು ಆರೋ ಮುಳುಗುವನಾರೋ
ನೋಡು ನೋಡುತಲೆ ಹಂಬಲವೇ ಅವತರಿಸಿ
ಆಳು ಮಗ ಬಂದಾನೆ ಗುರುತೇನೋ ತಂದಾನೆ
ಲಜ್ಜೆ ಮೀರಿದಳು ಮನಸ್ಸು ತಡೆಯಾದಿನ್ನು
ಪ್ರಶ್ನೆ ಕೇಳಿದಳು !
ಹಣ್ಣಾಯ್ತೊ ಕಾಯಾಯ್ತೊ ಆಳು ಮಗನೆ ಹೇಳು

ಗೊಲ್ಲನೆಂತಹ ಚೆಲುವ !
ಒಪ್ಪಿದನೆ ಒಲವ !
ಪ್ರಶ್ನೆ ನೂರಿದ್ದರು ಒಂದೇ ಉತ್ತರದಂತೆ
ಗಂಟಿತ್ತು ಆಳು ಮಗನ ಕಂಕುಳಿನಲ್ಲಿ !
ಜೋಮಾಲೆಯ ಕೊಟ್ಟಳು ಉಡುಗೊರೆ ಅವನಿಗೆ
ವಿಧಿಯ ಗಂಟನ್ನ ಬಿಚ್ಚಿದಳೋ ತವಕಿಸಿ
ಹಲಸಿತ್ತೋ ಜೇನಿತ್ತೋ ಕಾಡುಮಲ್ಲಿಗೆಯಿತ್ತೊ
ಹುಲಿಚರ್ಮದ ಸೀರೆ ಬಳುವಳಿ ಇತ್ತೊ
ಎಂಥ ಚಂದ ಬೆರಗು ! ಎಂಥ ಬಣ್ಣದ ಬೆಡುಗು
ಪ್ರಾಣ ಪಣವಾಗಿ ಕಳುಹಿದ್ದ 'ಗಣೆ'ಯನ್ನು
ಅತಿ ಪ್ರೇಮದಲಿ ಕೊಳಲ ನುಡಿಸಲೋಗಿ
ಹುಲ್ಲೆಯಾದಳು ಹುಡುಗಿ ನಾಚಿ ನೀರಾದಳು
ಕೊಳಲೀನ ಒಳಗಿತ್ತು ಗೊಲ್ಲನ ಬಿಸಿಯುಸಿರು
ಗಂಧ ಪರಿಮಳವಿತ್ತು ಗಾಳಿಯೊಳು !
ಹಲ್ಲಿ ಲೊಚಗುಟ್ಟಿತ್ತು ಮನೆಯ ಮೂಲೆಯೊಳು
ಮುಂದಾರು ತಿಂಗಳು ಕಾಡು ನಾಡಿನ ನಡುವೆ
ಕನಸ ಪಕ್ಷಿಗಳಾರಿ ಕಣ್ಣ ಗೂಡುಗಳಲ್ಲಿ
ಬಣ್ಣ ಬಣ್ಣದ ತತ್ತಿ ಇಟ್ಟವಲ್ಲೋ
ಕೃಷ್ಣನೇ ನುಡಿಸಾದ ಕೊಳಲ ದನಿ ಇಂಪಿಗೆ
ಗಾಳಿಯೇ ಮೈಮರೆತು ಸೊಕ್ಕಿತಲ್ಲ !
ಉಪ್ಪರಿಗೆ ಮೇಲವಳು ಅಟ್ಟಣೆಗೆ ಮೇಲವನು
ಕೂಡಾಲು ಕಾಯದ ಹಂಗಿಲ್ಲ

೬.
ಮುಂಜಾನೆ ಸವಾರಿ ಹೊರಡುವ ಮುನ್ನ
ಮಗಳ ಮುಖ ನೋಡುವುದು ಗೌಡನ ರೂಢಿ
ನೋಡು ನೋಡುತಲೆ ಹೂವು ಕಾಯಾದಂಗೆ
ಕಾಯಿ ಹಣ್ಣಾದಂಗೆ ಮಗಳು ಹೆಣ್ಣಾದಳೋ
ಬೆಂಕಿಯ ಕುಡಿಯಂಗೆ ನಡೆದಾರೆ ಕಿಡಿಯಂಗೆ
ಯಾಮಾರಿ ಕುಂತರೆ ಮನೆ ಕಿಚ್ಚಿನ ಪಾಲೆಂದು
ಕುಲದ ಹಿರಿಯರನ್ನ ಕರೆ ಬಿಟ್ಟನೋ ಗೌಡ
ಸರಿ ಜೋಡಿ ನವಿಲನ್ನ ಹುಡುಕಿ ತರಬೇಕೆಂದು
ದಿಕ್ಕು ದಿಕ್ಕಿಗೂ ಆಳನಟ್ಟಿದನು ಗೌಡ
ಕುಲದ ಗೌಡನ ಮಗನೆ, ಕಟ್ಟು ಗೌಡನ ಮಗನ

ನಾಡಗೌಡನ ಮಗನ ದೇಸಾಯಿಗೌಡನ ರಸಪಟದ ಚಿತ್ರಗಳ
ತರಿಸಿಕೊಂಡಾನೊ
ಮಗಳನ್ನ ಕರೆದವನೆ, ಆರಿಸಿಕೊಳ್ಳಮ್ಮ
ಮನಕೊಪ್ಪುವವನ ! ಮನೆತನ ಹೋಗಲಿ
ಲೆಕ್ಕ ಮಾಡೆನು ಮಗಳೆ ಕಕ್ಕುಲಾತಿಯಿಂದ
ನುಡಿದಾನು ತಲೆ ಸವರಿ !
ಮದುವೆಯ ಮಾತಾಗೆ
ಮನದಲ್ಲಿ ಭಯವಾಗೆ
ಮುಂದೇನು ಎಂದು ಬಾಲೆ ಅಂಜಿದಳು
ಚಿಂತೆಯ ಹುಳು ಬಿದ್ದವೋ
ಮನದಾ ಜಂತಿಗೆ !
ತಂಗಿಲ್ಲ ಅಕ್ಕಿಲ್ಲ ತಮ್ಮಿಲ್ಲ ಅಣ್ಣಿಲ್ಲ
ತಾಯಿ ಇಲ್ಲದ ತಬ್ಬಲಿ ಕೂಸು ನಾನು
ಯಾರಿಗೇಳಲಿ ನನ್ನ ಎದೆಯ ದುಗುಡವನ್ನ !
ಅಪ್ಪನಿಗೇಳಲೆಂಗೆ ಗೊಲ್ಲ ಹುಡುಗನ ಹೆಸರ !
ಕೊಂದಾರೆ ಕೊಲ್ಲಲಿ ನನ್ನನ್ನು, ಕೇಡಿಲ್ಲ
ಬೇಟೆಯಾಡಿಸುವನು ಗೊಲ್ಲರ ಹುಡುಗನನ್ನ !
ಬೆಂಕಿ ಹಾಕಿಸಿ ಸುಡುವನು ಕಾಡು ಮೇಡನ್ನ !
ಮುಂದೇನು ಗತಿಯೆಂದು ದೆಸೆಗಾಣದೆ ನಿಂದು
ಕಣ್ಣೀರ ಹರಿಸವಳೆ ಇರುಳ ಕಾಲುವೆಯಲ್ಲಿ
ಮದುವೆಗೆ ನಾಚಿ ಮೌನಿಯಾದಳೆಂದು
ಗೌಡ ನಗುತಾನೆ ಮೀಸೆ ಮರೆಯಲ್ಲಿ
ತಂಬಿಟ್ಟು ಸಿಂಬಲಿ ತಿಂಗಳ ಮೊದಲೆ
ಮಾಡಿ ತುಂಬಿದರು ಗುಡಾಣಗಳಿಗೆ
ಊರ ತುಂಬೆಲ್ಲಾ ಸಾಲು ಚಪ್ಪರವಾಕಿ
ಪತ್ತೂರ ಬಾಗಿಲಿಗೂ ಹಸಿರು ತೋರಣ ಕಟ್ಟಿ
ಹಾಲುಗಂಬ ನೆಟ್ಯಾರು ಮನೆಯಟ್ಟಿಯಲ್ಲಿ
ದಿಗುಲಲ್ಲೆ ದಿನ ಕಳೆದು ದಿಬ್ಬಣದ ದಿನ ಬಂತು
ಉಪ್ಪರಿಗೆ ಮೇಲೆ ನಿತ್ಯವೂ ಕಣ್ಣೀರೆ
ಮುತ್ತೈದೆಯರು ಬಂದು ಮೈಯ ತೊಳೆದಾರು
ಹರಿಶಿಣವನ್ನ ಮೈತುಂಬ ಬಳಿದಾರು
ಒತ್ತರಿಸೊ ದುಃಖವನ್ನು ಒರೆಸಿದರು
ಕಿಸರು ನೀರನು ಮಾಡಿ ಕಣ್‌ದೃಷ್ಟಿ ತೆಗೆದು
ನೋವಿಗೆ ಕಟ್ಟೆಯ ಕಟ್ಟಿದರು

ದಿಬ್ಬಣ ಬಂತೆಂದು ಒಬ್ಬಳನೆ ಬಿಟ್ಟು
ಊರ ಬಾಗಿಲ ಕಡೆಗೆ ಓಡಿದರು
ಉಪ್ಪರಿಗೆ ಮೇಲೇರಿ ಹಾರು ನೋಡುತ್ತಾಳೆ
ಕೊಳ್ಳಯ್ಯ ಯಮರಾಯ ಕನಿಕರವಿಲ್ಲ
ನಗುತಾನೆ ನೋಡಲ್ಲಿ ಚಂದಿರನು.
ಸುತ್ತ ಕೋಟೆಯ ಮೇಲೆ ಹೊತ್ತಿವೆ ಪಂಜು
ಬೀಗರ ಕರಿತಾವೆ ಚಿಟ್ಟಿಮೇಳದ ಕೊಲುವು
ಕಣ್ಣಲ್ಲಿ ಕಣ್ಣಿಟ್ಟು ಕಾಡ ನೋಡುತಲಿ
ಮೈಮರೆತು ನಿಂತಳು ಚಿಂತೇಲಿ ಬಾಲೆ
ಎಂದಿನಂತೆಯೇ ಇಂದು ನಾದ ನಾವೆಯು ಬಂತು
ತಂಗಾಳಿ ಕನಿಕರಿಸಿ ತನುವ ಸಂತೈಸಿತ್ತು
ಕಾಣುವಾತುರವು ಕೂಡುವ ಹಂಬಲವು ಬಲವಾಗೊ ಗಳಿಗೆ
ಕೊಳಲನೂದುತ ಗೊಲ್ಲ ಕರೆದಾನು ಬಳಿಗೆ
ಅಲ್ಲೋಲ ಕಲ್ಲೋಲ ಬಾಲೆಯ ಮನವು
ನಲ್ಲನೆ ನಿನ್ನ ನೋಡಲಾರದೆ ಇನ್ನು ತಾಳಲಾರೆನೊ
ನಲ್ಲನೆ ನಿನ್ನ ಕೂಡಲಾರದೆ ಇನ್ನು ಬಾಳಲಾರೆನೊ
ನಲ್ಲನೆ ನೀನೇ ನನಗೆಲ್ಲಾವು ನೀನೆ
ಸಾವಾದರು ಚೆನ್ನ ನಿನ್ನ ಜೊತೆಗೇನೆ.
ನೀರಲ್ಲಿ ಕಂಡವನ ನೆರಳನ್ನೆ ನಂಬಿ
ಮದುವಣಗಿತ್ತಿಯ ರೂಪ ಕಳಚಿದಳು
ಸಿಂಗಾರದ ಸಿರಿಯ ಹೊರೆಯನಿಳಿಸಿದಳು
ಗೊಲ್ಲನ ಬಳುವಳಿಯ ಹುಲಿಸೀರೆಯುಟ್ಟು
ಚಿರತೆ ಕಣ್ಣಿದ್ದ ರವಿಕೆಯ ತೊಟ್ಟು
ಕೊಳಲನ್ನು ಕೈಯಲ್ಲಿ ಕತ್ತಿಯಂತೆ ಹಿಡಿದು
ನೆಪ್ಪಿರದ ತಾಯನ್ನು ಮನದಲ್ಲಿ ನೆನೆಸಿ
ಸಲುಹಿದ ತಂದೆಗೆ ತಲೆ ಬಾಗಿ ನಮಿಸಿ
ದಾಲಬಂದ್ರವ ದಾಟಿದಳೊ ಬಾಲೆ
ಕಲ್ಲು ಕರಗುವ ಹೊತ್ತು ಹಿತ್ತಾಲ ಕತ್ತಲಲಿ ಕರಗಿದಳು

೨.
ಧೈರ್ಯ ದೇವತೆಯು ಮೈಹೊಕ್ಕ ತೆರದಿ
ಮನದಲ್ಲಿ ಅಡಗಿದ್ದ ಭೀತಿ ಬಾವಲಿಗಳು
ಹಾರಿಹೋದವೋ ಹಾದಿ ತೋರುವ ಹಾಗೆ
ಸಾಲು ದೀಪಗಳಾಗಿ ಮಿಂಚುಹುಳುಗಳು ಮಿನುಗಿ

ಪಾಡಿನಾದಿಯಲ್ಲಿ ಸಾಗಿ ಬಂದಳು ಚೆಲುವೆ
ದಟ್ಟ ಕಾಡಿನಲ್ಲಿ ನೆಲದ ಹುಣ್ಣಿಮೆಯಾಗಿ
ಕಾಡಿನ ನಡು ಮಧ್ಯ ದನದ ದೊಡ್ಡಿಯು ಇತ್ತು
ಕುರಿಗಳು ಮರಿಗಳು ದನಗಳು ಕರುಗಳು
ನೂರಾರು ಇದ್ದವು ಸಂಖ್ಯೆಯಲಿ
ಮುಳುಗಿದ್ದವೊ ಗಾಢ ನಿದ್ದೆಯಲಿ
ನಟ್ಟ ನಡುವಲ್ಲಿ ಎತ್ತರದ ಅಟ್ಟಣಿಗೆ
ಆದಿಶೇಷನ ಮೇಲೆ ಮಲಗಿರುವ ಹರಿಯಂತೆ
ಹಾಲ್ಗಡಲಿನಂತೆ ಸೊಬಗ ಸುರಿದಿತ್ತು ಹುಣ್ಣಿಮೆ
ಮಾರನ ರೂಪಕ್ಕೆ ಮರುಳುಗೊಂಡಂತಿರುಳು
ಎದೆಯ ಬೆಳಗುವ ಹಾಗೆ ಬಾಲೆಯ ಜಡೆಬಿಲ್ಲೆ
ಹುಡುಗನ ಎದೆ ಮೇಲೆ ಪದಕವಾಗಿತ್ತು.
ಗಾಳದುಳುವಿನ ಬೆನ್ನ ಹತ್ತಿದ ಮೀನಂತೆ
ಅಂಗಾತ ಮಲಗಿದವನ ಅಂಗಾಂಗವೆಲ್ಲ
ತಂಬೂರಿಯಾದಂತೆ ತಂಗಾಳಿ ಸೋಂಕಿಗೆ
ತಟ್ಟನೆ ಬೆರಳೊಂದು ತಂತಿಯ ಮಿಡಿದಂತೆ
ಝಲ್ಲನೆ ಮೈತುಂಬ ತನತಾನ ತುಂಬಿದಂತೆ
ಮೈಯ ನರ ನರವೆಲ್ಲ ಝೇಂಕಾರಗೊಂಡಿತಲ್ಲ
ಜಡೆ ಬಿಲ್ಲೆಯನೆತ್ತಿಕೊಂಡು ಕಣ್ಣಿಗೊತ್ತಲು ಗೊಲ್ಲ
ಕರಿನಾಗರಾವೊಂದು ಹೆಡೆಯೆತ್ತಿ ಆಡಿದಂತೆ
ಗಾಳಿಯ ಅಲೆಯಲ್ಲಿ ಲೀಲೆಗೊಳ್ಳುವುದೇನು ?
ನೀಳ ಕೂದಲೊಂದು ಹಾಲಬೆಳಕಿನಲ್ಲಿ ಈಜುತ್ತಿತ್ತೊ
ಕೊಳಲ ನುಡಿಸಲಾರ, ಮನವ ತಣಿಸಲಾರ
ನಿಬಿಡ ಶೂನ್ಯದಲ್ಲಿ ನಿರ್ಲಿಪ್ತ ಚಂದಿರ
ಕಣ್ಣು ಮುಚ್ಚಿದರೆ ಕಂಡ ಹೆಣ್ಣುಗಳೆಲ್ಲಾ
ಸರತಿ ನಿಲ್ಲುತ್ತಾರೆ ! ಯಾರವಳು ನನ್ನ ಜೀವ
ಬೇಟೆಯಾಡಿದವಳು ಒಮ್ಮೆಯಾದರು ತೋರೊ ಅವಳ ಮುಖವನ್ನ
ಬಲಿಗೊಳ್ಳೊ ನನ್ನನ್ನೇ ಬೇಸರವಿಲ್ಲೆನಗೆ
ನಿಡುಸುಯ್ದು ಹುಡುಗ ನಿಟ್ಟುಸಿರು ಬಿಡುತ್ತಾನೆ
ನೋಡು ನೋಡುತಲೆ ಚಂದ್ರ ಕನ್ನಡಿಯಾದ
ತೇಲಿ ಬಂದಳು ಚೆಲುವೆ ನೀಲಿ ಜಲಧಿಯಲ್ಲಿ
ತೋರಿದನು ಮುಖವನ್ನ ಪ್ರಾಣದ ಸಖಿಯನ್ನ
ಕಣ್ಣು ಸೊಕ್ಕಿದವೊ ದೇವರ ಕಂಡಂಗೆ
ಕೊಳಲ ರಂಧ್ರಗಳಲ್ಲಿ ಸೆರೆ ಇದ್ದ ನವಿಲುಗಳು

ಗರಿ ಚಿಗುರಿ ಹಾರಿದವೊ ಹಾಲಗಗನಕ್ಕೆ
ಮೈಲು ಪಕ್ಷಿಯು ಹಾರಿ ಬಣ್ಣಗೆಡಿಸುವ ಮುನ್ನ
ದೃಷ್ಟಿ ತಾಗೆಲ್ಲಿ ಅಂದಗೆಡುವುದೆಂದು
ಕಣ್ಣ ಮುಚ್ಚಿದನು ಗೊಲ್ಲರುಡುಗ !
ರೆಪ್ಪೆ ಮುಚ್ಚಿದರು ಕಣ್ಣ ಕೊಳದೊಳಗೆ
ತೇಲು ತೇಲುತಲಿದೆ ಚಂದ್ರನಾವೆ
ಹುಟ್ಟಾಕೋ ಹುಡುಗಿಯ ಕವೆಗೋಲು
ಮೆರುಮುತ್ತಲಿರುವುದು ಮನದೊಳಗೆ
ಹುಡುಗನಿತ್ತ, ಹೀಗೆ ವಿರಹ ಬಾಧೆಯಲಿ
ಬಸವಳಿದು ಬೆಂಡಾಗಿ ಕನಲಿದನೊ
ಹೋಗಯ್ಯ ಹೋಗು ಚಂದಿರನೆ ಹೋಗು
ನಲ್ಲೆ ಉಪ್ಪರಿಗೇಲಿ ಬೆಳಕು ಸುರಿ ಹೋಗು
ಹೋಗಯ್ಯ ಹೋಗು ಗಾಳಿದೇವನೆ ಹೋಗು
ಕಾಡಹೂಗಳ ಗಮಲು ಪಸರಿಸು ಹೋಗು
ಹೋಗಮ್ಮ ಹೋಗು ಮಳೆಯ ದೇವಿಯೇ ಹೋಗು
ಪನ್ನೀರ ತುಂತುರು ಚಿಮುಕಿಸು ಹೋಗು
ಹೋಗಮ್ಮ ಹೋಗು ನಿದಿರಾದೇವಿಯೇ ಹೋಗು
ನನ್ನಂತೆ ಅಲ್ಲವಳು ವಿರಹದುರಿಯಲ್ಲಿ
ದಣಿದಾಳು ಬಾಲೆ
ಕಣ್ಣೆಗಿತ್ತು ಕನಸು ಲಾಲಿ ಹಾಡುತ ತೂಗು ತೂಗು
ಮಾಯ ಮಂಪರು ಬಂದು ಒರಗಿತ್ತು
ಹುಡುಗನಾ ದಣಿದ ರೆಪ್ಪೆಯ ಮೇಲೆ !
ಹೊತ್ತಿನ ಜೊತೆಗೇನೆ ಪಯಣವ ಬೆಳೆಸಿ
ಬಂದಾಳು ಹುಡುಗಿ ದನಮಂದೆ ಬಾಗಿಲಿಗೆ
ಹೊತ್ತಲ್ಲದೊತ್ತಲ್ಲಿ ಹುಲಿಸೀರೆಯುಟ್ಟು
ಬಂದ ಬಾಲೆಯ ಕಂಡು ಬೆದರಿದವು ದನಕರ
ಭೋ ಎಂದು ಬೊಗಳಿದವು ಬೇಟೆ ನಾಯಿಗಳು
ದಿಗ್ಗನೆದ್ದನು ಗೊಲ್ಲ ನಿದ್ದೆಯನೊದ್ದು
ತಡಕಿನ ಮರೆಯಾಚೆ ನಿಂತ ಹುಡುಗಿಯ ಭಂಗಿ
ಹೊಂಚುವ ಹುಲಿಯಂತೆ ಭ್ರಾಂತು ಬಂತು ಮನಕೆ
ಅಟ್ಟಣಿಗೆ ಮೇಲೆ ನಿಂತ ಹುಡುಗನ ನಿಲುವು
ಧನ್ಯ ಎಂದವು ಕಣ್ಣು
ಮೂಕವಾಯಿತು ಮನವು
ಬಾರೊ ನನ್ನೊಡೆಯ ಜೀವದ ಗೆಳೆಯ

ಬಾ ಬಾರೋ ಮಾರ ಪ್ರಾಣ ಮೀಸಲು ನಿನಗೆ
'ಗಣೆ'ಯ ನುಡಿಸುವಂಗೆ ನುಡಿಸು ಬಾರೋ ನನ್ನ
ಕೊಳಲ ಕೈಲಿಡಿದು ಮುಂದೆ ಸರಿದಳು ಬಾಲೆ
ದನಕರುಗಳೆಲ್ಲಾ ಬೆದರಿದವು ಮತ್ತೊಮ್ಮೆ
ನೆರಳಲ್ಲಿ ಸರಿಯುವುದು ಜಾಣ ಹುಲಿಯೆಂದು
ಹೂಡಿದನು ಬಿಲ್ಲನ್ನು ಗುರಿಯಾಗಿ ಹಿಡಿದು
ತಡದಾರೆ ಕ್ಷಣವೊಂದು ಜೀವಕ್ಕೆ ಕುತ್ತೆಂದು
ಬಿಟ್ಟಾನಯ್ಯೋ ಬಾಣ ಗೊಲ್ಲರ ಹುಡುಗಾನು
ಕಾಡು ದೈವಗಳು ತಾಳು ಅನ್ನುವ ಮೊದಲು
ವೃಕ್ಷ ದೈವಗಳು ನಿಲ್ಲು ಅನ್ನುವ ಮೊದಲು
ಎಂದೂ ತಪ್ಪದ ಬೇಟೆ ಇಂದು ತಪ್ಪುವುದೇನು ?
ಎದೆಯ ಹಚ್ಚೆಯಲ್ಲಿ ಆಡೂತ್ತಿದ್ದ ನವಿಲು
ಕತ್ತರಿಸಿ ಬಿತ್ತೊ !
ನಾಟಿಕೊಂಡಿತು ಬಾಣ ಹುಡುಗಿ ಹೂ ಎದೆಗೆ
ಅಯ್ಯೋ ನನ್ನನೇಕೆ ಕೊಂದೆ ಎಂದೆನುತಾ
ಆರ್ತನಾದವಗೈದು ನೆಲಕ್ಕೆ ಒರಗಿದಳು
ಬಾಲೆ ಅಕಟಕಟಾ
ಮಂಪರ ತೆರೆ ಸೀಳಿ ಆರ್ತನಾದವು ಕೇಳೆ
ಘಾತವಾಯಿತಯ್ಯೋ ಮೋಸಗೊಂಡೆನಲ್ಲ
ಅಯ್ಯೋ ! ಎನುತಲಿ
ಒಂದೇ ಜಂಗಿನಲಿ
ಹಾರಿ ಬಂದನುಡುಗ
ನಲ್ಲನೆ ಬಾರೋ ಮೊಗವನ್ನು ತೋರೋ
ಪ್ರಾಣಪಕ್ಷಿಯ ರೆಕ್ಕೆ ಪಟಪಟ ಎನುತಿರಲು
ಹುಡುಗಿಯನ್ನೆತ್ತಿಕೊಂಡು ಎದೆ ಮೇಲೆ ಇಟ್ಟುಕೊಂಡು
ಶಿವನ ಶೋಕವಾ ಮಾಡುತಾನುಡುಗ
ಆಕಾಶ ಭೂಮೀ ಒಂದಾಗುವಂತೆ !
ಯಾವ ಜನ್ಮದ ಪಾಪ
ಇಂತು ಮೋಸವು ಹರನೆ
ಅಂದು ಕೊಂದಾ ಹುಲಿ
ಇಂದು ಕೊಂದಿತೆ ನನ್ನ
ಒಲಿದು ಬಂದವಳ ಒಲವನ್ನ ಕೊಂದೆನು
ಮರುಗಿತ್ತು ಕಾಡು ಕೊರಗಿತ್ತು
ನೆಲ ತಾಯಿ ನೊಂದಾಳು

ಬಾನ ಚಂದಿರನ ಬಣ್ಣ ಕೆಟ್ಟಿತ್ತು
ಋಣವು ತೀರಿ ಪ್ರಾಣ ತುಟಿ ಜಾರೋ ಮುನ್ನ
ಹುಡುಗನಾ ಕೇಳುತಾಳೆ ಕೊಳಲ ನುಡಿಸಯ್ಯ
ನಾದ ನಾವೆಯ ತರಿಸಯ್ಯ ಗೆಣೆಕಾರ
ನಿನ್ನೆದೆಯ ಉಸಿರಾಗಿ ನಿಲ್ಲುವೆ ನಾನು
ಕೊಳಲೀನ ಸೊಲ್ಲಾಗಿ ಹೋಗುವೆ ನಾನು
ನಾದದ ನವಿಲೆ ನಾನು !
ಅತ್ತಣದ ತೀರವು ಇಷ್ಟೊಂದು ಹತ್ತಿರವೆ
ಸಪ್ತ ಸಾಗರದಾಚೆ ಅಂತಿದ್ದೆನಲ್ಲೊ
ಕಳುವು ಸೊಕ್ಕೀತು ಮಾತು ಮುರಿದೋಯ್ತು !
ಅಟ್ಟಣಿಗೆ ಮೇಲೆ ಇಟ್ಟು ಹುಡುಗಿಯ ದಟ್ಟ
ಪ್ರಾಣದುಂಬುವಂತೆ ಕೊಳಲು ನುಡಿಸುತ್ತಾನೆ
ದುಃಖ ಒತ್ತರಿಸಿತೊ ಕೊಳಲ ಸೆರೆ ಕಟ್ಟಿತೊ
ನಾದ ನವಿಲಿನ ರೆಕ್ಕೆ ಒದ್ದೆಗೊಂಡಿತೊ
ಹಾರಲಾರದ ಹಕ್ಕಿ ಕಣ್ಣೀರ ಪಾಲಾಯ್ತೋ !

೮.

ಕೈಯಾರೆ ಕೊಂದೆನು ಕುಸುಮ ಬಾಲೆಯನು
ಕ್ಷಮಿಸಲಾರದು ಪ್ರೇಮ ನನ್ನಂಥವನನ್ನು
ಕೊಲ್ಲುವ ಕಾಳನಿಗೆ ಬಾಳುವ ಹಕ್ಕುಂಟೆ
ತಾಳಲಾರೆನೆ ನಾನಿನ್ನು ಅರೆಗಳಿಗೆ
ಬರುವೆನು ಹಿಂದಾಡಿ ನಿನ್ನ ಬಳಿಗೆ
ಮನವು ದುಡುವಾಗಿ
ಬಲುಮಿ ಬಂದಿತು ಮೈಗೆ
ಮರಮರದ ಬಳಿಗೋಗಿ
ಕಟ್ಟಿಗೆಯ ಬೇಡಿದನು
ಜಾತಿಗೊಂದೊಂದು ಚಕ್ಕೆಯ ತಂದನು
ಚಿತೆಯ ಸಿಂಗರಿಸಿ ಬಾಲೆ ದಟ್ಟವನಿಟ್ಟು
ಅಗ್ನಿದೇವನೆ ಕಿಚ್ಚು ಹೆಚ್ಚಿಸು ಎಂದಾನು
ಗೊಲ್ಲ ಹುಡುಗನು ಕಡು ದುಃಖಗೊಂಡಿರಲು
ತಲ್ಲಣಗೊಂಡವು ಮಂದೆಯ ಜೀವಗಳು
ತಬ್ಬಲಿ ಮಾಡಬ್ಯಾಡೋ ಒಡೆಯ ಎನುತಲಿ
ಕುರಿ ಮೇಕೆ ಬಂದು ಕಾಲು ನೆಕ್ಕಿದವು
ದನಕರ ಬಂದು ಮೈಯ ನೆಕ್ಕಿದವು

ನಾಯಿಗಳು ಊಳಿಡುತಾ ಪಾದವಲಿ ಒರಲಿದವು
ಮಂದೆ ಮಂದೆಯೆಲ್ಲ ಅಂಬಾ ಎಂದತ್ತವು
ಮೂಕ ಜೀವಗಳ ಜೀವವಾಗಿದ್ದವನು
ಕೊರಳೆ ತಬ್ಬಿಕೊಂಡು ಬುದ್ಧಿ ಹೇಳುತ್ತಾನೆ
ಕೊಂಬು ಸವರುತ್ತಾನೆ ಮೈಯ ತಡವುತ್ತಾನೆ
ಮಾತು ದಕ್ಕದೆ ಹೋಗಿ ತಡಬಡಿಸುತ್ತಾನೆ
ಋಣ ತೀರಿತಿಷ್ಟೇ ಹೋಗಿ ಬರುವೆನೆಂದ
ಅಂಬಾ ಎಂದರಚುತಾ ಅಡ್ಡಗಟ್ಟಿದವೊ
ಕಾಲೂರಿ ಸುತ್ತಾ ಕೋಟೆ ಕಟ್ಟಿದವೊ
ಕೊನೆ ಬಾರಿ ಕೊಳಲೂದಿ ಸಂತೈಸಲನುವಾದ
ಮರೆತು ಹೋಗಿತ್ತು ಮಟ್ಟು ಪಲುಕುಗಳೆಲ್ಲಾ
ಮಾಯೆ ಮುರುಕೊಂಡಿತ್ತು
ಕೊಳಲು ಬರಿ ಬಿದಿರಾಗಿತ್ತು
ನವಿಲುಗಳ ಹೆಣವಿತ್ತೊ, ನಾದವು ಸತ್ತಿತೊ
ಒಡಹುಟ್ಟಿದವನೆ ಬಿಟ್ಟು ಹೋದೆಯೇ ನೀನು
ಕೊಳಲಿಗೆ ನಮಿಸುತಾ ಗಂಗೆಗೆ ನಮಿಸುತಾ
ಹೊಳೆ ಪಾಲು ಮಾಡಿದನೊ ಗೆಣೆಯನ್ನ ಗೊಲ್ಲರುಡುಗ
ಕಾಡಿನ ದುಃಖಾವೆ ಕೋಡಿ ಬಿದ್ದಂತೆ
ತಣ್ಣಾನೆ ನದಿಯಲ್ಲಿ ಕಣ್ಣೀರ ಬಿಸಿಯಿತ್ತು
ಶೋಕದಕ್ಕಿಗಳು ಹಾಡುತಲಿದ್ದವು
ಚುಕ್ಕಿ ಕಣ್ಣಲ್ಲೂ ಕಣ್ಣೀರ ಹನಿಯಿತ್ತು
ಕಾಡು ಮೇಡಿನ ದೊರೆಯೆ ಕಾಟಪರಾಯನೆ
ಕಣ್ಣಿಟ್ಟು ಕಾಯಪ್ಪ ಮೂಕ ಜೀವಗಳನ್ನ
ಪಂಚಭೂತಗಳೆಂದೂ ವಂಚನೆ ಮಾಡಾವು
ಹೋಗಿ ಬರುವೆನು ನಾನು ಸಾಗುಗೊಳಿಸಿರೊ ನನ್ನ
ಕಾಯುತಲಿರುವಳು ಹುಡುಗಿ ಒಬ್ಬಳೆ ಅಲ್ಲಿ
ಮಿಂಚಿ ಹೋದವು ಮಾತು
ಮೂಕವಾದವೋ ಲೋಕ
ಓಡೋಡಿ ಬಂದವನೆ ಹುಡುಗಿಯನೆತ್ತಿಕೊಂಡು
ಚಿತೆಯೇರಿ ಕುಳಿತಾನು ಕೊಳ್ಳಿಯನಿಟ್ಟು
ಧಗಧಗನೆ ಉರಿಯುವ ಬೆಂಕಿಯ ಉರಿಯಲ್ಲಿ
ಬಂಗಾರ ಗಟ್ಟಿಗಳು ನೀರಾಗಿ ಕರಗುವಂಗೆ
ಪಳಗುಟ್ಟಿ ಹೊಳೆದಾರೊ ಶಿವಗೌರೀರಂಗೆ
ಪ್ರಾಣಕ್ಕೆ ಪ್ರಾಣವೆ ಮುಡಿಪು ಎಂದೆನುತಾ

ಮಲ್ಲೀಗೆ ಮೈಯವಳ ಮೆಲ್ಲಾಗೆ ಸುಡುತಂದೆ
ಅರಿಕೆ ಮಾಡತ್ತಾನೆ ಅಗ್ನಿದೇವನಿಗೆ
ಒಲಿದವರು ಒಲೆಯಲ್ಲಿ ಉರಿದು ಹೋದಾರೋ
ಕರ್ಪೂರ ಗೊಂಬೆಗಳು ಕರಗಿಹೋದಾರೊ
ಕಾಡಿನ ಕನಸುಗಳು ಕರುಕಾಗಿ ಹೋದಾವೊ
ಕಿಚ್ಚಿನ್ನು ಆರಿಲ್ಲ ದುಃಖಾವು ತೀರಿಲ್ಲ
ಬೆಂಬೂದಿಯೊಳಗಿಂದ ಮೂಡಿದ ರವಿಯು
ಕಾಡು-ಕಣಿವೆಯೆಲ್ಲ ಬೈಗಿನ ಎವೆಯು

ಇಲ್ಲಿಗೆ ಮುಗಿಯಿತೆ ಗೊಲ್ಲ-ಗೌಡತಿ ಕತೆಯು
ಮತ್ಯಾವ ಕಾಡಲ್ಲಿ ಇನ್ಯಾವ ಗೊಲ್ಲನು
ಹುಲಿಬೇಟೆಗೆಂದು ಆಟ ಕಟ್ಟಿರುವನೊ
ಮಾತ್ಯಾವ ದೇಶದ ಉಪ್ಪರಿಗೆ ಮ್ಯಾಲೆ
ಒಲವ ಬೇಟಕ್ಕೆ ಹುಡುಗಿ ಕಾದಿರುವಳೊ

□

ಡಾ. ಕೆ. ವೈ. ನಾರಾಯಣಸ್ವಾಮಿ, ಕನ್ನಡ ಅಧ್ಯಾಪಕ, ಸರ್ಕಾರಿ ವಿಜ್ಞಾನ ಕಾಲೇಜು,
ನೃಪತುಂಗ ರಸ್ತೆ, ಬೆಂಗಳೂರು-೧.

ಜಲದೇವಿಯರು ನಮಗಾಗಿ ದುಃಖಿಸುತ್ತಿಲ್ಲ !

ಟಿ.ಎಸ್. ವಿವೇಕಾನಂದ

ಸಚರಾಚರಗಳ ಸಾಕಿ ಸಲಹುವನೆ*
ನೀರು ಕೊಡು ತಂದೆ ಮೋಡದ
ಎದೆಯುಣಿಸು...,
...ದಾಹದಿಂದ ನಲುಗಿದ ಪಶು
ಪಕ್ಷಿಗಳಿಗೆ ಮೊಲೆ ಹಾಲು ಸುರಿಸು
ಜನ ಕುಡಿವ ಜೀವದ ಮಳೆ ತರಿಸು
ನೆನೆದೇವು ನಿನ್ನ ಅನುಗಾಲ...,

-ಸೊಮಾಲಿ ಪ್ರಾರ್ಥನೆ

ಈ ಜಗತ್ತಿನಲ್ಲಿ ಮೂರನೆಯ ವಿಶ್ವ ಯುದ್ಧ ಸಂಭವಿಸಬಹುದು. ಹೀಗೆ ಯುದ್ಧ ಸಂಭವಿಸುವುದೇ ಆದರೆ ಅದು ಈವರೆಗೂ ನಡೆದಿರುವಂತೆ ಹೆಣ್ಣು, ಹೊನ್ನು, ಮಣ್ಣಿಗಾಗಿ ಸಂಭವಿಸುವುದಿಲ್ಲ, ಬದಲಿಗೆ ನೀರಿಗಾಗಿ ನಡೆಯುತ್ತದೆ ಎಂದು ನಂಬಲಾಗಿದೆ. ಇದ್ದಕ್ಕಿದ್ದಂತೆ ಜಗತ್ತು ಇಂಥಾ ಹೊಸ ಸಮಸ್ಯೆಯೊಂದಕ್ಕೆ ಮುಖಾಮುಖಿಯಾಗಿದೆ. ಇದು ಹೆಣ್ಣು, ಹೊನ್ನು, ಮಣ್ಣಿನ ಮಾತಲ್ಲ, ನೀರಿನ ಮಾತು. ದಿನದಿಂದ ದಿನಕ್ಕೆ ಜಗತ್ತು ಸಿಹಿನೀರಿನ ಲಭ್ಯತೆಯಿಂದ ದೂರ ಸರಿಯುತ್ತಿದೆ. ಮಾನವೀಯತೆಯ ಮಾಲಿನ್ಯ ಜಗತ್ತಿನ ಜೀವ ಸಂಕುಲವನ್ನು ಎತ್ತೆತ್ತಲೋ ತುಯ್ದಾಡಿಸುತ್ತಿದೆ. ಸಿಹಿನೀರಿನ ಕೊರತೆ ಈ ಜಗತ್ತಿನ ಮೂರನೇ ಎರಡು ಭಾಗದ ಜನರನ್ನು ಜೀವಾಪಾಯದಲ್ಲಿ ಸಿಕ್ಕಿಸಿದೆ. ಈಗಾಲೇ ಈ ಸಿಹಿ ನೀರಿನ ಕೊರತೆ ಮನುಕುಲವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಅಸ್ಥಿರರನ್ನಾಗಿ ಮಾಡುತ್ತಿದೆ. ಈಗಿಂದೀಗಲೇ, ನಾಟಕೀಯವಾಗಿ ನಮ್ಮ ಬದುಕು ಬದಲಾಗದಿದ್ದರೆ ಮುಂದಿನ ೨೦ ವರ್ಷಗಳಲ್ಲಿ ಈ ಜಗತ್ತಿನ ಮೂರನೇ ಎರಡು ಭಾಗ ಜನಸಂಖ್ಯೆ

* (ಅನು) ಗಾಳಿಯ ದೈವಿಕ ಹಾದಿಗಳು. ೧೯೯೫. ನಾಗರಾಜ ಎಲ್ಸಿ.

ನೀರಿನ ಕೊರತೆಯಿಂದ ನಾಶವಾಗುತ್ತದೆ. ಇದಕ್ಕೆ ನೀರಿಗಾಗಿ ನಡೆಯುವ ಹೋರಾಟಗಳೂ ನೆಪಗಳಾಗಬಹುದು.

ಅದು ಹೇಗೋ ಗೊತ್ತಿಲ್ಲ, ಈವರೆಗೂ ಈ ಸಮಸ್ಯೆ ಜನಸಾಮಾನ್ಯರಿಂದ ಕಣ್ಣುತಪ್ಪಿಸಿ, ಜಲ ತಜ್ಞರು, ಇಂಜನಿಯರ್‌ಗಳು, ವಿಜ್ಞಾನಿಗಳು, ನಗರ ವಿನ್ಯಾಸಕಾರರು, ಹವಾಗುಣ ಮುನ್ಸೂಚಕರ ಹಿಡಿತದಲ್ಲಿ ಸೇರಿಕೊಂಡಿತ್ತು. ಈ ಮಹಾತ್ಮರೇ ಅದರ ಬಗ್ಗೆ ಯೋಚಿಸಿ ಮನುಕುಲಕ್ಕೆ ಕೇಡಾಗದಂತೆ ನೋಡಿಕೊಳ್ಳುತ್ತಾರೆಂದು ಜನಸಾಮಾನ್ಯರು ಭಾವಿಸಿದ್ದರು. ಆದರೆ ಈ ನಡುವೆಯೇ ವಿಶ್ವಾಸ ದ್ರೋಹ ನಡೆದಿದೆ. ಇಂದು ಜಗತ್ತು 'ನೀರೆಂಬ ಬೆಂಕಿಯ ಮೇಲೆ' ನಿಂತಿದೆ.

ಇದಕ್ಕಾಗಿ ವಿಶ್ವದ ಅನೇಕ ಮಾನವಂತ ಸಂಘ ಸಂಸ್ಥೆಗಳು ತಲೆಕೆಡಿಸಿಕೊಂಡು ಕಾರ್ಯಪ್ರವೃತ್ತವಾಗಿವೆ. ಇವುಗಳಲ್ಲಿ ವರ್ಲ್ಡ್‌ವಾಚ್ ಇನ್‌ಸ್ಟಿಟ್ಯೂಟ್, ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್, ಇಂಟರ್‌ನ್ಯಾಶನಲ್ ರಿವರ್ ನೆಟ್‌ವರ್ಕ್, ಗ್ರೀನ್‌ಪೀಸ್, ಕ್ಲೀನ್ ವಾಟರ್ ನೆಟ್ ವರ್ಕ್, ಸಿಯೈರಾ ಕ್ಲಬ್, ಫ್ರೆಂಡ್ಸ್ ಆಫ್ ಅರ್ಥ್, ಇಂಟರ್‌ನ್ಯಾಶನಲ್ ಹಾಗೂ ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮಗಳು ಮುಖ್ಯವಾದವು.

ಮಾರ್ಚ್ ೨೨ನೇ ತಾರೀಖು 'ವಿಶ್ವ ಜಲ ದಿನ.' ಹೀಗೆ ಪ್ರತಿ ವರ್ಷದ ಮಾರ್ಚಿ ತಿಂಗಳ ೨೨ನೇ ತಾರೀಖಿನಂದು ವಿಶ್ವ ಜಲದಿನವನ್ನು ಆಚರಿಸಬೇಕೆಂದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ೧೯೯೨ರಲ್ಲಿ ತೀರ್ಮಾನ ತೆಗೆದುಕೊಂಡಿತ್ತು. ಇದು ವಿಶ್ವಸಂಸ್ಥೆಯು ನಡೆಸಿದ 'ರಾಷ್ಟ್ರೀಯ ಪರಿಸರ ಸಮಾವೇಶದಲ್ಲಿ' ನಿರ್ಧಾರವಾದ ವಿಷಯ. ಇದನ್ನು 'ರಿಯೋ ಶೃಂಗ' ಎಂತಲೂ ಕರೆಯುತ್ತಾರೆ.

ಈ ತೀರ್ಮಾನವಾದ ಮೇಲೆ ಇಲ್ಲಿನವರೆಗೆ ಹನ್ನೆರಡು ಯುಗಾದಿಗಳು ಕಳೆದುಹೋಗಿವೆ. ಆ ವರ್ಷದ ಯುಗಾದಿ ಹಬ್ಬದಂದು ಈ ದೇಶದಲ್ಲಿ ನೀರಿನ ಸಮಸ್ಯೆ ಹೇಗಿತ್ತೋ ಈ ಯುಗಾದಿಯಲ್ಲೂ ಹಾಗೇ ಇದೆ. ನಿಜ ಹೇಳುವುದಾದರೆ ಮತ್ತಷ್ಟು ಜಟಿಲವಾಗಿದೆ. ಈ ವಿಶ್ವ ಸಂಸ್ಥೆ ಯಾವ 'ವಿಷಯದ' ಮುಂದೆ 'ದಿನ' ವನ್ನೂ ಹಿಂದೆ 'ವಿಶ್ವ'ವನ್ನೂ ಸೇರಿಸುತ್ತದೋ ಆ 'ವಿಷಯ' ಕ್ಯಾನ್ಸರಿನ ಕೊನೆಯ ಹಂತದಲ್ಲಿದೆ ಎಂದೇ ಅರ್ಥ. ಅಲ್ಲಿಂದ ಮುಂದಕ್ಕೆ ಆ ಸಮಸ್ಯೆ ಕ್ಯಾನ್ಸರ್ ಕೋಶಗಳಂತೆ ಸಾವಿರದ ಗುಣಕದಲ್ಲಿ ಉಲ್ಬಣಿಸುತ್ತಾ ಹೋಗುತ್ತದೆ. ಇದನ್ನು ನಿಯಂತ್ರಿಸಲು ವಿಶ್ವಸಂಸ್ಥೆ ಅಸಂಖ್ಯಾತ ಆಕ್ಷನ್ ಪ್ಲಾನ್‌ಗಳನ್ನು ಈ ಜಗತ್ತಿನ ಮುಂದೆ ಒಡ್ಡುತ್ತದೆ. ಇದರಲ್ಲಿ ತಾತ್ಕಾಲಿಕ ಪರಿಹಾರಗಳೊಂದಿಗೆ ಶಾಶ್ವತ ಪರಿಹಾರಗಳೂ ಸೇರಿರುತ್ತವೆ. ತಾತ್ಕಾಲಿಕ ಪರಿಹಾರಗಳಲ್ಲಿ ಜನ ಸಹಭಾಗಿತ್ವದ ಮೂಲಕ ಸಮಸ್ಯೆಯನ್ನು ಪರಿಹರಿಸುವಂಥ ಉಪಾಯಗಳು ಸೇರಿದ್ದರೆ, ಶಾಶ್ವತ ಪರಿಹಾರಗಳಲ್ಲಿ ವಿಶ್ವದ ಕ್ರೂರ 'ಆರ್ಥಿಕ ಆಯಸ್ಕಾಂತಗಳ' ಮೂಲಕ ಚಿಕಿತ್ಸೆ ಮಾಡಿಸುವ ದೂರೋದ್ದೇಶವನ್ನು ಹೊಂದಿರುತ್ತದೆ. (ಇದನ್ನು ನೀವು ಹೇಗೆ ಬೇಕಾದರೂ ಓದಿಕೊಳ್ಳಬಹುದು; 'ದೂರದ ಉದ್ದೇಶ' ಅಥವಾ 'ದುರುದ್ದೇಶ.') ಹೀಗೆ ವಿಶ್ವಸಂಸ್ಥೆ ಮಂಡಿಸುವ ಪರಿಹಾರೋಪಾಯಗಳನ್ನು ರೂಪಿಸುವ, ಸೂಚಿಸುವ ಮಂದಿ ಯಾರೆಂದು ನಮಗೆ ಗೊತ್ತಿದ್ದರೆ ಅಲ್ಲಿಂದ ಬರುವ ಉಪಾಯಗಳು ಎಷ್ಟು ಅಪಾಯಕಾರಿ ಎಂಬುದು ನಮ್ಮ ಅರಿವಿಗೆ ಬರುತ್ತದೆ.

ಈ ಪರಿಹಾರೋಪಾಯಗಳು ನಿಜಾರ್ಥದಲ್ಲಿ ಹುಟ್ಟಿಕೊಂಡಿದ್ದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಲ್ಲ. ಬದಲಾಗಿ ವಾಷಿಂಗ್‌ಟನ್ನಿನ 'ವ್ಯಾಪಾರಿಗಳ' ಸಭೆಯ ಮೇಜಿನ ಮೇಲೆ. ಇದನ್ನು

ಅವರು 'ವಾಷಿಂಗ್‌ಟನ್ ಒಡಂಬಡಿಕೆ' ಎಂದು ಕರೆಯುತ್ತಾರೆ. ಈ ಜಗತ್ತಿಗೆ ನೀರಿನ ಅಗತ್ಯವಿದೆ. ಅದೇ ಹೊತ್ತಿನಲ್ಲಿ ನೀರಿನ ಕೊರತೆಯೂ ಇದೆ. ಹಾಗಾದರೆ ಏನು ಮಾಡುವುದು ? ಸರ್ಕಾರಗಳು ಇದನ್ನು ಸವಾಲಾಗಿ ಸ್ವೀಕರಿಸಿ, ತನ್ನ ದೇಶದ ಜನಕ್ಕೆ (ಹೆಚ್ಚೆಂದರೆ ಸರಬರಾಜಿನ ಖರ್ಚನ್ನು ತೆಗೆದುಕೊಂಡು) ನೀರು ಒದಗಿಸುವುದು ನ್ಯಾಯ ಮತ್ತು ಕರ್ತವ್ಯ. ಈ ಮೂಲಕ ಸರ್ಕಾರಗಳು ತಮ್ಮ ಪ್ರಜೆಗಳ ಜನ್ಮಸಿದ್ಧ ನಾಗರಿಕ ಹಕ್ಕುಗಳನ್ನು ಸಂರಕ್ಷಿಸಿದಂತಾಗುತ್ತದೆ..., ನಾವು ಹೀಗೆಂದು ಭಾವಿಸುತ್ತೇವೆ. ಆದರೆ ಆ ವ್ಯಾಪಾರಿಗಳ ಕುತಂತ್ರವೇ ಬೇರೆ ಇದೆ. ಒಮ್ಮೆ ಇದನ್ನು 'ಹಕ್ಕುಗಳ' ಪಟ್ಟಿಯಿಂದ ಕಿತ್ತು 'ಅಗತ್ಯಗಳ' ಪಟ್ಟಿಗೆ ಸೇರಿಸಿಬಿಟ್ಟರೆ ಸಾಕು, ಅಲ್ಲಿಂದ ನೀರನ್ನು ಸರಬರಾಜು ಮಾಡುವುದು ಬಹಳ ಸುಲಭ ಎಂಬುದು ಅವರ ಅಭಿಪ್ರಾಯ. ಅಲ್ಲಿ ಸೇರಿದ್ದ ಎಲ್ಲಾ ಶ್ರೀಮಂತ ರಾಷ್ಟ್ರಗಳ ಪ್ರತಿನಿಧಿಗಳೂ ಇದನ್ನು ಅನುಮೋದಿಸಿದರು. ಅಂದಿನಿಂದ ನೀರು 'ಅಗತ್ಯಗಳ ಪಟ್ಟಿಗೆ' ಸೇರಿಹೋಗಿದೆ.

ಇವರ ಪರಮ ಉದ್ದೇಶವೆಂದರೆ ಈ ಜಗತ್ತಿನ ಮುಂದೆ ಒಂದೇ ಒಂದು ಆಯ್ಕೆಯನ್ನು ಬಿಡುವುದು : ಅದು 'ಆರ್ಥಿಕ ಆಯ್ಕೆ.' ಈ ಒಡಂಬಡಿಕೆಯಲ್ಲಿ ತೀರ್ಮಾನವಾಗಿರುವುದು ಇದೇ...!? ನೀರು ಜನರಿಗೆ 'ಅಗತ್ಯ'ವಾದ ವಸ್ತು. ಒಂದು ವಸ್ತು ಅಗತ್ಯ ಎಂದಾದ ಕೂಡಲೇ ಅದು 'ಸರಕು' ಆಗಿಬಿಡುತ್ತದೆ. ಶಾಂಪೂ, ಕಂಪ್ಯೂಟರ್, ಟೀವಿ, ಕಾಂಡೂಮ್‌ಗಳಂತೆ ಮಾರಾಟದ ಸರಕಾಗಿ ಬಿಡುತ್ತದೆ. ಇವರ ಪ್ರಕಾರ ಎಲ್ಲವೂ ಕೇವಲ ಮಾರಾಟದ ವಸ್ತುಗಳು ಮಾತ್ರ ! ಹೆಣ್ಣು, ಹೆಂಡ, ಚಿನ್ನ, ಮಣ್ಣು, ಆತ್ಮಗೌರವ, ಮಾನವೀಯತೆ, ಈಗ ಅಂತಿಮವಾಗಿ ನೀರು !

ಇದಕ್ಕೆ ಮುಂಚೆ ಒಂದಿಷ್ಟು ಈ ಜಗತ್ತಿನ ಜಲ ಸಮಸ್ಯೆಯ ವಿಸ್ತಾರವನ್ನು ಗಮನಿಸಬೇಕು. ಸಮಸ್ಯೆಯ ಬೇರುಗಳ ಅರಿವಿಲ್ಲದಿದ್ದರೆ, ಇವರ ಚಿಕಿತ್ಸೆಯ ಚೋದ್ಯ-ತಮಾಷೆಗಳಾಗಲೀ, ದುರಂತಗಳಾಗಲೀ ಅರ್ಥವಾಗುವುದು ಕಷ್ಟ.

ವಿಶ್ವಸಂಸ್ಥೆ ೨೦೦೩ನೇ ಇಸವಿಯನ್ನು ಅಂತಾರಾಷ್ಟ್ರೀಯ ಜಲ ವರ್ಷವಾಗಿ ಘೋಷಿಸಿದ ಹಿನ್ನೆಲೆಯಲ್ಲಿ ಅನೇಕ ದುರಂತ ಸತ್ಯಗಳ ಸರಮಾಲೆಯೇ ಇದೆ. ಮುಖ್ಯವಾಗಿ, ಈ ಜಗತ್ತಿನಲ್ಲಿ ಒಟ್ಟು ೨೦೦ ಕೋಟಿ ಜನ ಸಿಹಿನೀರಿನ ಗಂಭೀರ ಕೊರತೆಯನ್ನು ಎದುರಿಸುತ್ತಿದ್ದಾರೆ; ಜಲ ಸಂಬಂಧಿ ಅಂದರೆ ಶುದ್ಧ ನೀರಿನ ಕೊರತೆಯಿಂದಾಗಿ ವಾರ್ಷಿಕ ೬೦೦೦ ದಿಂದ ೮೦೦೦ ಸಾವಿರ ಮಕ್ಕಳು ರೋಗಗ್ರಸ್ಥರಾಗುತ್ತಿದ್ದಾರೆ ಇಲ್ಲವೇ ಸಾಯುತ್ತಿದ್ದಾರೆ; ಅಗತ್ಯ ನೀರಿನ ಕೊರತೆಯಿಂದಾಗಿ ೨೫೦ ರಿಂದ ೩೦೦ ಕೋಟಿ ಜನ ಸ್ಯಾನಿಟರಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ವಾರ್ಷಿಕ ಸಂಭವಿಸುವ ನೈಸರ್ಗಿಕ ದುರಂತಗಳಾದ ಭೂಕಂಪ, ಜ್ವಾಲಾಮುಖಿಗಳಿಂದ ಆಗುವ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ನಷ್ಟಕ್ಕಿಂತ ಪ್ರತಿವರ್ಷ ಸಂಭವಿಸುವ ಅತಿವೃಷ್ಟಿ-ಅನಾವೃಷ್ಟಿಗಳಿಂದ ಸಂಭವಿಸುತ್ತಿರುವ ನಷ್ಟಗಳು ಹತ್ತು ಪಟ್ಟು ಹೆಚ್ಚಾಗಿವೆ. ಕಳೆದ ದಶಕದಿಂದೀಚೆಗೆ ಇದರ ಪ್ರಮಾಣ ೨೦೦ ರಿಂದ ೪೦೦ಕ್ಕೇರಿದೆ. ಇಷ್ಟೇ ಅಲ್ಲದೆ ೨೦೨೫ರ ಹೊತ್ತಿಗೆ ಜನಸಂಖ್ಯಾ ಹೆಚ್ಚಳ, ಮಾಲಿನ್ಯದ ಕಾರಣದಿಂದ ಕ್ಷೀಣಗೊಳ್ಳುತ್ತಿರುವ ಸಿಹಿನೀರಿನ ಲಭ್ಯತೆ ಮತ್ತು ಗುಣಮಟ್ಟ ಹಾಗೂ ಕೈಗಾರಿಕೆ ಮತ್ತು ಕೃಷಿಯ ಅನೂಹ್ಯ ಪ್ರಮಾಣದ ಬೇಡಿಕೆಗಳಿಂದಾಗಿ ಜನಸಾಮಾನ್ಯರಿಗೆ ಕುಡಿಯುವ ನೀರು ಅಲಭ್ಯವಾಗುತ್ತದೆ. ಈ ಕೊರತೆ ಮುಖ್ಯವಾಗಿ ಒಣ ಪ್ರದೇಶಗಳಲ್ಲಿ ವಾಸಿಸುವ ಜನ, ಕರಾವಳಿ ಪ್ರದೇಶದ ಜನ ಹಾಗೂ ಮಹಾನಗರಗಳ ಜನರನ್ನು ಕಾಡಲಿದೆ. ಇದರಿಂದಾಗಿ ಅನೇಕ ರಾಷ್ಟ್ರಗಳು

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಬಹಳ ಮುಖ್ಯವಾಗಿ ಆರ್ಥಿಕವಾಗಿ ತುಂಬಾ ಸಂಕಷ್ಟದ ದಿನಗಳನ್ನು ಕಾಣಲಿವೆ. ಇದರೊಂದಿಗೆ ಆಯಾ ದೇಶಗಳ ಜೀವಜಾಲ, ಜೀವವೈವಿಧ್ಯ ಗಂಭೀರ ಅಪಾಯಗಳನ್ನು ಎದುರಿಸಬೇಕಾಗುತ್ತದೆ.

ಇವು ಹೊರ ನೋಟದ ಸಮಸ್ಯೆಗಳಾದರೆ ಇದರ ಹಿಂದಿರುವ ಹಲವು ಸತ್ಯಗಳು ಹೀಗಿವೆ. ಈ ಜಗತ್ತಿನ ಸಿಹಿನೀರಿನ ಮೂಲವಾಗಿರುವ ಜಲಾನಯನ ಪ್ರದೇಶಗಳಲ್ಲಿ ಅರ್ಧಭಾಗ ಕೇವಲ ೨-೩ ರಾಷ್ಟ್ರಗಳ ಹಿಡಿತದಲ್ಲಿವೆ. ಸಧ್ಯಕ್ಕೆ ಈ ಜಗತ್ತಿನ ಒಟ್ಟು ಸಿಹಿನೀರನ್ನು ಮಾರುವ ವ್ಯವಹಾರವನ್ನು ಕೇವಲ ಎರಡು ಕಂಪನಿಗಳು ನಿಯಂತ್ರಿಸುತ್ತಿವೆ. ಹಾಗೆಯೇ ಒಂದು ಟನ್ ಆಹಾರ ಧಾನ್ಯ ಬೆಳೆಯಲು ೧೦೦೦ ಟನ್ ನೀರು ಬೇಕು. ಆದರೆ ಒಂದು ಟನ್ ದನದ ಮಾಂಸವನ್ನು ಉತ್ಪಾದಿಸಲು ೧೬,೦೦೦ ಟನ್ ನೀರು ಬೇಕು. ಅಮೆರಿಕಾ ದೇಶವೊಂದರಲ್ಲೇ ಇಂಥಾ ಲಕ್ಷಾಂತರ ಟನ್ ಹೈಜೆನಿಕ್ ದನದ ಮಾಂಸವನ್ನು ದಿನನಿತ್ಯ ಉತ್ಪಾದಿಸಿ, ಮಾರಾಟ ಮಾಡಲಾಗುತ್ತದೆ.

ಈ ಅಂಕಿಅಂಶವನ್ನು ಭಾರತದ ಕೆಲವು ಅವಿವೇಕಿಗಳು ದುರುಪಯೋಗಪಡಿಸುವ ಸಾಧ್ಯತೆಗಳಿವೆ. ಭಾರತದಲ್ಲಿ ಕತ್ತರಿಸುವ ಉದ್ದೇಶದಿಂದಲೇ ಯಾರೂ ದನಗಳನ್ನು ಸಾಕುವುದಿಲ್ಲ ಎಂಬುದನ್ನು ಗಮನಿಸಬೇಕು. ಅಲ್ಲದೆ ಅಮೆರಿಕಾ ಹಾಗೂ ಯೂರೋಪಿಯನ್ ರಾಷ್ಟ್ರಗಳ ದನದ ಮಾಂಸದ ಉತ್ಪಾದನೆಗೂ, ಭಾರತೀಯ ಪದ್ಧತಿಗೂ...ಎತ್ತಿಗೂ-ಇಲಿಗೂ ಇರುವಷ್ಟೇ ವ್ಯತ್ಯಾಸವಿದೆ. ಆದ್ದರಿಂದ ಈ ದೇಶದ ಮೂಲಭೂತವಾದಿಗಳ ವಿತಂಡವಾದಕ್ಕೆ ಇದು ನೆರವಾಗಬಾರದು.

ಅದಿರಲಿ, ಈಗ ಮುಖ್ಯ ವಿಷಯಕ್ಕೆ ಬರೋಣ. ಈ ಹಿಂದೆ ಹೇಳಿದ ಎಲ್ಲಾ ಸಂಘ-ಸಂಸ್ಥೆಗಳೂ ಹಾಗೂ ಈ ಬಗ್ಗೆ ಕಾಳಜಿಯುಳ್ಳ ಎಲ್ಲಾ ವ್ಯಕ್ತಿಗಳು ಈಗ ಹೋರಾಡುತ್ತಿರುವುದು ನೀರಿನ ಲಭ್ಯತೆಯನ್ನು ಹೆಚ್ಚಿಸುವ ದಿಕ್ಕಿನಲ್ಲಲ್ಲ. ಬದಲಾಗಿ ಈ ಅಗತ್ಯವನ್ನು ಮತ್ತೆ ಹಕ್ಕಾಗಿ ಪರಿವರ್ತಿಸುವ ದಿಕ್ಕಿನಲ್ಲಿ. ನೀರು ಈ ಜಗತ್ತಿನ ಪ್ರತಿಯೊಂದು ಜೀವಿಯ 'ಆಜನ್ಮ ಸಿದ್ದ ಹಕ್ಕು.' ಇದು 'ಅಗತ್ಯವಲ್ಲ' ಎಂದರೆ, ಎರಡರ ನಡುವೆ ಇರುವ ವ್ಯತ್ಯಾಸವೇನು ? ಎನ್ನುತ್ತಾರೆ ವ್ಯಾಪಾರಿಗಳು. ಇವರ ಪ್ರಕಾರ, ನಿಮಗೆ ನೀರಿನ ಅಗತ್ಯವಿದೆ. ನಾವು ನಿಮಗೆ ನೀರನ್ನು ಕೊಡುತ್ತೇವೆ, ನೀವು ಅದಕ್ಕೆ ಪ್ರತಿಯಾಗಿ ನಾವು ವಿಧಿಸಿದಷ್ಟು ಶುಲ್ಕ ಕೊಡಿ. ಈ ಮಾತನ್ನು ಯಾರಾದರೂ ಒಪ್ಪಲೇಬೇಕು ! ಯಾಕೆಂದರೆ ಅವರು ನೀರು ಕೊಡುತ್ತಾರಲ್ಲ ? ಅದಕ್ಕೆ ಪ್ರತಿಯಾಗಿ ಹಣ ಕೊಡಬೇಕುತಾನೆ ? ಈ ಮಾತುಗಳು ಸಾಮಾನ್ಯವಾಗಿ ನಮ್ಮ ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗದವರ ಬಾಯಿಂದ ಪಟಪಟನೆ ಉದುರುತ್ತವೆ. ಶ್ರೀಮಂತ ವರ್ಗಗಳಂತೂ ಈ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ. ಕಳ್ಳರನ್ನು ಕಳ್ಳರು ವಿರೋಧಿಸುವುದುಂಟೇ ?

ಆದರೆ ಇಲ್ಲಿರುವ ಪ್ರಶ್ನೆ ಎಂದರೆ, ವ್ಯಾಪಾರದ ಮೂಲ ತತ್ವವೇನು ? ಒಂದು ವಸ್ತುವನ್ನು ಹತ್ತು ರೂಪಾಯಿಗೆ ಕೊಂಡುತಂದು ಅಥವಾ ಉತ್ಪಾದನೆ ಮಾಡಿ ಅದನ್ನು ಲಾಭಕ್ಕೆ ಮಾರಾಟ ಮಾಡುವುದು. ಇಲ್ಲಿ ನೀವು ನೀರನ್ನು ಮಾರಾಟ ಮಾಡುವುದೇನೋ ಸರಿ ?! ಆದರೆ ಅದನ್ನು ನೀವು ಕೊಂಡು ತಂದುದು ಎಲ್ಲಿಂದ ? ನಿಸರ್ಗಕ್ಕೆ ನೀವು ದುಡ್ಡು ಕೊಟ್ಟಿದ್ದೀರೋ ? ಇಲ್ಲ ಅದಕ್ಕೆ ನೀವು ಬಂಡವಾಳ ಹಾಕಿದ್ದೀರೋ ? ಎರಡನ್ನೂ ನೀವು ಮಾಡಿಲ್ಲ. ಅದು ಹಾಳಾಗಿ ಹೋಗಲಿ, ನೀವು ಆ ನೈಸರ್ಗಿಕ ನೀರನ್ನು ಪಡೆಯುತ್ತಿರುವ ಭೂ ಪ್ರದೇಶವನ್ನು ನಿಮ್ಮದೇ ಕಂಪನಿಗಳ ರಾಸಾಯನಿಕ, ಕೀಟನಾಶಕಗಳನ್ನು ಹಾಕಿ ಸರ್ವನಾಶದ ಅಂಚಿಗೆ ತಂದಿದ್ದೀರಿ ! ಅಲ್ಲದೆ ಆ ನೀರನ್ನು ಕೊಡುವ

ಜಲಾನಯನ ಪ್ರದೇಶವನ್ನು ಕಾಪಾಡುವ ಹೊಣೆಯೊಂದಿಗೆ ನಿಮಗೆ ಯಾವ ಸಂಬಂಧವೂ ಇಲ್ಲ. ಹೀಗಿದ್ದಾಗ ನೀವು ಯಾವ ತತ್ವದ ಆಧಾರದ ಮೇಲೆ ನಮಗೆ ನೀರನ್ನು ಮಾರುತ್ತೀರಿ ? ನಿಮಗೆ ಅದಕ್ಕಿರುವ ಅಧಿಕಾರವೇನು ?

ಈ ಪ್ರಶ್ನೆಗಳಿಗೆ ಆ ವ್ಯಾಪಾರಿಗಳು ಹೇಳುತ್ತಾರೆ: ನಮಗೆ ಅದೆಲ್ಲಾ ಗೊತ್ತಿಲ್ಲಾ, ನಮಗೆ ನಿಮ್ಮ ಸರ್ಕಾರ ಅನುಮತಿ ಕೊಟ್ಟಿದೆ, ನಾವು ಹೀಗೆಂದು ನಿಮ್ಮ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಅದರ ಪ್ರಕಾರ ಮಾಡುತ್ತಿದ್ದೇವೆ ! ವ್ಯಾಪಾರಿಗಳ ಜಾಣತನಕ್ಕೆ ಯಾರಾದರೂ ಸರಿ ಸಲಾಂ ಮಾಡಬೇಕು, ವಿಶ್ವದ ಉಳಿದೆಲ್ಲಾ ಮುತ್ಸದ್ದಿಗಳೂ ಸಹ ! ಇವರ ಶಬ್ದ ನಿರ್ವಚನ ಶಾಸ್ತ್ರದ ಪ್ರಕಾರ ಈ ವ್ಯತ್ಯಾಸಕ್ಕೆ ಇರುವ ವ್ಯತ್ಯಾಸ ಕೇವಲ ಆರ್ಥಿಕವಾದದ್ದಷ್ಟೇ ?! ಆದರೆ ಉಳಿದ ಬಹುಕೋಟಿ ಜನರ ವ್ಯಾಖ್ಯಾನ, ಸಾವು-ಬದುಕಿನ ವ್ಯತ್ಯಾಸವುಳ್ಳದ್ದು.

ಈ ಸಂದಿಗ್ಧವನ್ನು ಇನ್ನೊಂದಿಷ್ಟು ಹತ್ತಿರದಿಂದ ಪರಿಶೀಲಿಸೋಣ. ನಿಮ್ಮ ಮನೆಗೆ ಈಗ ವಿದ್ಯುತ್ ಸಂಪರ್ಕವಿದೆ ಎಂದಿಟ್ಟುಕೊಳ್ಳೋಣ. ನಿಮಗೆ ಕರೆಂಟಿನ ಅಗತ್ಯವಿದೆ ಅಥವಾ ಕತ್ತಲಿನಲ್ಲಿ ಬೆಳಕಿನ ಅಗತ್ಯವಿದೆ. ಅದು ಅವರ ಪ್ರಕಾರ 'ನೀಡ್' ಅಥವಾ 'ಅಗತ್ಯ'. ಆದರೆ ನಮ್ಮ ಪ್ರಕಾರ ಕತ್ತಲಿನಲ್ಲಿ ಬೆಳಕು ಪಡೆಯುವುದು ನಮ್ಮ ಹಕ್ಕು. ಆದರೆ ಅನೇಕಾನೇಕ ಕಾರಣಗಳಿಂದ ನೀವು ಕರೆಂಟ್ ಚಾರ್ಜನ್ನು ಕಟ್ಟಲಾಗುವುದಿಲ್ಲ. ನಿಮಗೆ ಅಂಥಾ ಯಾವ ಆದಾಯದ ಮೂಲವೂ ಇಲ್ಲ. ಇರುವ ಆದಾಯ ಹೊಟ್ಟೆಗೇ ಸಾಲದು, ಬಟ್ಟೆಗೆ ಬ್ರಹ್ಮನೇ ಗತಿ. ಹೀಗಿದ್ದಾಗ ನಿಮ್ಮ ಮನೆಯ ಕರೆಂಟಿನ ಸಂಪರ್ಕವನ್ನು ತಪ್ಪಿಸಲಾಗುತ್ತದೆ. ಅಂದರೆ ಅಂದಿನಿಂದ ನಿಮಗೆ ಕತ್ತಲು. ನೀವು ಬೇರೊಂದು ಮೂಲದಿಂದ ಮತ್ತೆ ಕರೆಂಟನ್ನು ಪಡೆಯಲೂ ಸಾಧ್ಯವಿಲ್ಲ. ಅದು ಒಂದೇ ಕಂಪನಿಯ ಮನಾಪಲಿ.

ಈಗ ನಿಮ್ಮ ಮುಂದಿರುವ ಆಯ್ಕೆಗಳೇನು ?

ಒಂದೋ, ನೀವು ವಿದ್ಯುತ್ತನ್ನು ನಿರಾಕರಿಸಿ, ಸೀಮೆಎಣ್ಣೆ ದೀಪದ ಮೊರೆ ಹೋಗಬೇಕು. ಆದರೆ ಅದೂ ಹೆಚ್ಚು ದಿನ ಸಾಗುವಂಥದ್ದಲ್ಲ. ಮುಖ್ಯವಾಗಿ ನಿಮಗೆ ಅಗತ್ಯವಾದಷ್ಟು ಸೀಮೆಎಣ್ಣೆಯನ್ನು ನಿಮ್ಮ ಗಳಿಕೆಯ ಅನುಪಾತದ ದರದಲ್ಲಿ ಪಡೆಯುವುದು ಸಾಧ್ಯವಿಲ್ಲ. ಹಾಗೊಂದು ಪಕ್ಷ ಪಡೆದರೂ ಅದು ನಿಮ್ಮೆಲ್ಲಾ ಅಗತ್ಯಗಳನ್ನೂ ಪೂರೈಸುವುದಿಲ್ಲ. ಉಳಿದ ಅಗತ್ಯಗಳ ಪೂರೈಕೆಗಾಗಿ ನೀವು ಮತ್ತಷ್ಟು ಹೆಚ್ಚು ಹಣವನ್ನು ತೆರಬೇಕಾಗುತ್ತದೆ. ಇಲ್ಲವಾದರೆ, ಮಿಣುಕು ದೀಪದ ಬೆಳಕಿನಲ್ಲಿ ಮಕ್ಕಳ ಓದಾಟ, ಇಸ್ತ್ರಿ ಇಲ್ಲದ ಬಟ್ಟೆ, ರೇಡಿಯೋ, ಟೀವಿ ಇಲ್ಲದ ನಿಮ್ಮದೇ ಆದ ಪ್ರತ್ಯೇಕ ಜಗತ್ತಿನಲ್ಲಿ ಬದುಕಬೇಕಾಗುತ್ತದೆ. ಇದರೊಂದಿಗೆ 'ಫ್ಯೂಸ್ ಕಿತ್ತುಕೊಂಡುಹೋದ ಮನೆಯವರಾಗಿ' ಸಾಮಾಜಿಕವಾಗಿ, ಆರ್ಥಿಕವಾಗಿ ದಿಕ್ಕಾಪಾಲಾಗುತ್ತೀರಿ, ಅಥವಾ ಉಳಿದ ಜನ ಹಾಗಾಗುವಂತೆ ಮಾಡುತ್ತಾರೆ. ಇವೆಲ್ಲಾ ಬೇಡವೆಂದರೆ ನೀವು ಕರೆಂಟ್ ಚಾರ್ಜನ್ನು ಕಟ್ಟಬೇಕಾಗುತ್ತದೆ, ಆದರೆ ನಿಮ್ಮಲ್ಲಿ ಹಣವಿಲ್ಲ.

ಇದು ಒಬ್ಬಿಬ್ಬರ ಪ್ರಶ್ನೆಯಲ್ಲ, ಈ ದೇಶದ ಶೇಕಡಾ ೬೦ ಭಾಗದ ಜನರ ಪ್ರಶ್ನೆ. ಇದು ಕರೆಂಟಿನ ಮಾತಾಯಿತು, ಈಗ ಕರೆಂಟಿನ ಜಾಗದಲ್ಲಿ ನೀರು ನಿಲ್ಲಿಸಿ ನೋಡಿ. ಕೆಲವು ಹೊಟ್ಟೆ ತುಂಬಿದ ಜನ 'ಸಾರ್ವಜನಿಕ ನಲ್ಲಿಯ' ಮಾತನಾಡಬಹುದು. ಎಲ್ಲಿ ಖಾಸಗಿ ಟೆಲಿಫೋನ್ ಬೂತಿರುತ್ತದೋ ಅದರ ಹತ್ತಿರದಲ್ಲಿರುವ ಎಲ್ಲ ಸಾರ್ವಜನಿಕ ಬೂತುಗಳನ್ನೂ Out of order

ಮಾಡಲಾಗಿರುತ್ತದೆ, ಇದು ವಾಸ್ತವ. ಇಂಥಲ್ಲಿ ಹಣವಿಲ್ಲದ ಮನುಷ್ಯ ಹೇಗೆ ಬದುಕಬಲ್ಲ ? ಇದೇ ಈ ಶತಮಾನದ ಅತ್ಯಂತ ಪ್ರಮುಖ ಪ್ರಶ್ನೆ. ಈ ದೇಶದ ಭವಿಷ್ಯದ ಬಗ್ಗೆ ಚರ್ಚೆಗಳು ಹುಟ್ಟುವುದಾದರೆ ಇಲ್ಲಿಂದಲೇ ಹುಟ್ಟಬೇಕು.

ಆದರೆ ಅವರು ಹೇಳುತ್ತಾರೆ ಕರೆಂಟ್ ಚಾರ್ಜು ಕಟ್ಟಲಾಗದ, ನೀರಿನ ಬಿಲ್ಲು ಕೊಡಲಾಗದ ನೀನು ಯಾವ ಪುರುಷಾರ್ಥಕ್ಕೆ ಬದುಕಿರಬೇಕು ಮಾರಾಯ ?

ಈ ಶ್ರೀಮಂತ, ಪುರೋಹಿತಶಾಹಿ, ವ್ಯಾಪಾರಿ ಜಗತ್ತಿನ ಕ್ರೌರ್ಯ ಇಲ್ಲಿಂದ ಆರಂಭವಾಗುತ್ತದೆ.

ನೈಜೀರಿಯಾದ ಹ್ಯಾರಿ ಗರೂಬಾ ಹೇಳುತ್ತಾನೆ : 'ಇರುಳು ಕವಿದಿದೆ, ಆಳವಾಗಿದೆ ನೀರು, ಕಳೆದು ಹೋದ ಮಗು ಆಡುತ್ತಿದೆ ಕತ್ತಲು ಮತ್ತು ಆಳದ ನಡುವೆ.'

ಈ ಬಗ್ಗೆ ನೀವೂ ಯೋಚಿಸಿ.

□

ಟಿ.ಎಸ್. ವಿವೇಕಾನಂದ, ನಂ. ೨೮೧, ಎರಡನೇ 'ಎ' ಮುಖ್ಯರಸ್ತೆ,
೧ನೇ ಹಂತ, ವಿಬಿಹೆಚ್‌ಸಿ, ಗಿರಿನಗರ, ಬೆಂಗಳೂರು-೮೫.

ನೀರೆಂಬ ಬೆಂಕಿಯ ಮೇಲೆ...

ಟಿ.ಎಸ್. ವಿವೇಕಾನಂದ

ಈ ನೀರಿನ ಕಥೆ ಸುಲಭಕ್ಕೆ ಮುಗಿಯುವಂಥದ್ದಲ್ಲ. ಜೀವ ವಿಕಾಸ ಚರಿತ್ರೆಯಲ್ಲಿ ಅದರ ಸ್ಥಾನ, ತಾಯಿಯದು, ತೊಟ್ಟಿಲಿನದು, ಅನ್ನದ ಬಟ್ಟಲಿನದು, ಬಿಕ್ಕಳಿಸಿದಾಗ ಜೀವಜಲದ್ದು..., ಹೀಗೇ, ಈ ನೀರನ್ನು ನಮ್ಮ ಪುರಾತನರು ನೆನೆದಷ್ಟು, ಹಂಬಲಿಸಿದಷ್ಟು, ಪ್ರಾರ್ಥಿಸಿದಷ್ಟು ಬೇರಾವುದಕ್ಕೂ ಮಾಡಿದಂತಿಲ್ಲ.

'ಪೋಬ್ಲೊ' ಸಂಸ್ಕೃತಿಯ ನೆನಪುಗಳು ಹೇಳುತ್ತವೆ :

"ನಾವೀಗ ತರುವೆವು*
ಹಿಮದ ನೀರು,
ಚೆಲ್ಲಿಬಿಡಿ ಅದನು
ಬಗೆ ಬಗೆಯಾಗಿ
ಬಡಗಣ ತೆಂಕಣಕೆ
ಮೂಡಣ ಪಡುವಣಕೆ
ಮೇಲೆ ಸ್ವರ್ಗಕ್ಕೆ
ಕೆಳಗೆ
ಕುಡಿಯುವ ಭೂಮಿಗೆ"

ಆದರೆ ಫಾರ್ಚೂನ್ ಪತ್ರಿಕೆಯ ೨೦೦೦ದ ಮೇ ತಿಂಗಳ ಸಂಚಿಕೆಯ ಒಂದು ವರದಿ ಹೇಳುತ್ತದೆ. "೨೦ನೇ ಶತಮಾನದಲ್ಲಿ ತೈಲದ ಮಹತ್ವ ಏನಿತ್ತೋ ಅದರ ಸ್ಥಾನವನ್ನು ೨೧ನೆಯ ಶತಮಾನದಲ್ಲಿ ನೀರು ಆಕ್ರಮಿಸಿಕೊಂಡಿದೆ. ಇದು ಶ್ರೀಮಂತ ರಾಷ್ಟ್ರಗಳ ಮಾರಾಟದ ತಾಜಾ ಸರಕಾಗಿದೆ. ಇಂದಿಗಾಗಲೇ ಇದು ನಲವತ್ತು ಸಾವಿರ ಕೋಟಿ ರೂಪಾಯಿಗಳ ವ್ಯಾಪಾರವಾಗಿದೆ. ಈ ನೀರಿನ ಮಾರಾಟದ ದಂಧೆಯ ನಿವ್ವಳ ಲಾಭ ಈಗಾಗಲೇ ತೈಲಕ್ಷೇತ್ರದ ೪೦ರಷ್ಟಿದೆ ಹಾಗೂ

---

* ಲೇಖನದ ಎಲ್ಲ ಪದ್ಯಗಳು-ನಾಗರಾಜ ಎಲ್ಸಿ. (ಅನು) ಗಾಳಿಯ ದೈವಿಕ ಹಾದಿಗಳು-೧೯೯೫.

ಔಷಧ ವ್ಯಾಪಾರದ ಮೂರನೇ ಒಂದು ಭಾಗವನ್ನು ಮೀರಿ ನಿಂತಿದೆ. ಬೇರೆ ವ್ಯಾಪಾರಗಳಿಗೆ ಹೋಲಿಸಿದರೆ ವಿಶ್ವ ಆರ್ಥಿಕತೆಯಲ್ಲಿ ಇದಕ್ಕೆ ಪ್ರಖರ ಭವಿಷ್ಯವಿದೆ.

ಬಹಳ ಪೂರ್ವದಲ್ಲಿ 'ಸಿಯಾ ಇಂಡಿಯನ್ನರು' ಪ್ರಾರ್ಥಿಸಿದ್ದರು :

"ತಿಂಗಳೇ, ಬಡಗಣದ ಸಿಂಹಗಳೆ
ಪಡುವಣದ ಕರಡಿ, ತೆಂಕಣದ
ಹಿಮಗರಡಿ, ಮೂಡಣದ ತೋಳಗಳೇ
ಸ್ವರ್ಗದ ಗರುಡ ಭೂಮಿಯ ಪಕ್ಷಿಗಳೆ
ಭೂಮಿಯ ತೋಯಿಸುವಂತೆ
ಮುಗಿಲುಗಳ ಮನ ಒಲಿಸಿ" ಎಂದು. ಇವರ ಮಾತು ಇನ್ನೊಂದರ್ಥದಲ್ಲಿ ನಿಜವಾಗುತ್ತಿದೆ. ನಾಲ್ಕು ದಿಕ್ಕುಗಳ ಆ ಅಮರ ವೀರರ ಬದಲು ಪಶ್ಚಿಮದ, ಉತ್ತರದ, ಹಣಕ್ಕೆ ಹಸಿದ ಸೀಳು ನಾಯಿಗಳ ದಂಡು ಮನೆಮನೆಗಳ ಚೊಂಬು, ಬಿಂದಿಗೆಗಳ ತೋಯಿಸಲು ಸಜ್ಜಾಗಿ ನಿಂತಿವೆ.

ವಿಶ್ವಬ್ಯಾಂಕ್ ೧೯೯೮ರಲ್ಲಿ, 'ಈ ಜಲ ವ್ಯಾಪಾರ ಶೀಘ್ರದಲ್ಲಿಯೇ ೮೦೦ ಬಿಲಿಯನ್ ಅಮೆರಿಕನ್ ಡಾಲರ್‌ಗಳ ಮೊತ್ತವನ್ನು ತಲುಪುವುದಾಗಿಯೂ, ೨೦೦೧ರ ಹೊತ್ತಿಗೆ ಒಂದು ಟ್ರಿಲಿಯನ್ ಮೊತ್ತದ ವ್ಯವಹಾರವಾಗುವುದಾಗಿಯೂ ಅಂದಾಜು ಮಾಡಿತ್ತು." ಇದರ ಈ ಊಹೆ ವಾಸ್ತವವಾಗೇ ಇತ್ತು. ಅಂದು ಅದರಿಂದ ಸಾಲ ಪಡೆದ ಕಂಪನಿಗಳು ಸರಬರಾಜು ಮಾಡುತ್ತಿದ್ದ ನೀರನ್ನು ಪಡೆಯುತ್ತಿದ್ದ ಜನಸಂಖ್ಯೆ ಕೇವಲ ಶೇಕಡಾ ೫ ಮಾತ್ರ. ಇನ್ನೂ ೯೫ ಭಾಗ ಉಳಿದಿದೆಯಲ್ಲಾ?! ಈ ಅನುಪಾತದಲ್ಲಿ ಮುಂದೆ ಇದು ಅಸಂಖ್ಯ ಟ್ರಿಲಿಯನ್ ಡಾಲರ್‌ಗಳ ವ್ಯಾಪಾರವಾಗುವ, ಹಾಗೂ ಇದೊಂದೇ ೨೧ನೇ ಶತಮಾನದ ಲಾಭದಾಯಕ ಉದ್ದಿಮೆಯಾಗಿ ಬೆಳೆಯುವ ಸಾಧ್ಯತೆಯಾಗಿದೆ ಎಂದು ಖಡಾಖಂಡಿತವಾಗಿ ಹೇಳಬಹುದಲ್ಲ ?

ಇದರ ಅಂದಾಜಿನ ಪ್ರಕಾರ ವಾರ್ಷಿಕ ಶೇಕಡಾ ೧೦ ವ್ಯಾಪಾರ ಹೆಚ್ಚುತ್ತಾ ಹೋಗುತ್ತದೆ, ಅರ್ಥಶಾಸ್ತ್ರದ ಸೂತ್ರಗಳ ಪ್ರಕಾರ ಇದೇ ಹೊತ್ತಿನಲ್ಲಿ ನೀರಿನ ಬೆಲೆಯೂ ಹೆಚ್ಚುತ್ತಾ ಹೋಗುತ್ತದೆ. 'ವಿಶ್ವ ಜಲ ಗುಪ್ತಾಚಾರ ಸಂಸ್ಥೆಯ' ವರದಿಯೊಂದು 'ಒಂದು ಬ್ಯಾರಲ್ ನೀರಿಗೆ, ಒಂದು ಬ್ಯಾರಲ್ ತೈಲದಷ್ಟೇ ಬೆಲೆಯನ್ನು' ನೀರಿನ ಕಂಪನಿಗಳು ಡಿಮ್ಯಾಂಡ್ ಮಾಡಿರುವುದನ್ನು ದಾಖಲಿಸಿದೆ. ಇನ್ನೂ ಕೆಲವು ಕಡೆ ನೀರಿನ ಬೆಲೆ ಒಂದೇ ವರ್ಷದಲ್ಲಿ ಮೂರು ಪಟ್ಟು ಹೆಚ್ಚಾಗಿದ್ದನ್ನು ಇದು ದಾಖಲಿಸಿದೆ. ಉದಾ: ಕೊಲರಾಡೋದ ಶಿಲಾವೃತ ಪರ್ವತ ಪ್ರದೇಶಗಳಲ್ಲಿ ಜೂನ್, ೧೯೯೯ ಹಾಗೂ ಜೂನ್, ೨೦೦೦ದ ನಡುವೆ ೧೦೦೦ ಕ್ಯೂ.ಮೀ. ನೀರಿನ ಬೆಲೆ ೪೦೦೦ ಡಾಲರ್‌ಗಳಿಂದ ೧೪೦೦೦ ಡಾಲರ್‌ಗಳಿಗೆ ಹೆಚ್ಚಾಗಿದ್ದನ್ನು ನೋಡಬಹುದು.

ಆದರೆ ಒಂದು ಹವಾಯಿಯನ್ ಪ್ರಾರ್ಥನೆ ಹೇಳುತ್ತದೆ :

"ತೋಯುತಿರಲಿ ಇಳೆ ಮಳೆಯಿಂದ
ಜಿನುಗುತಿರಲಿ ಕಾಡುಗಳು ನೀರಿನಿಂದ
ಬೆಳೆದು ದಣಿಯುತಿರಲಿ
ಹೂವುಗಳರಳುತಿರಲಿ
ಬದುಕುವೆವು ಮತ್ತೆ ಮತ್ತೆ"

ಇವರ ಪ್ರಾರ್ಥನೆಗೆ ಧನ್ಯವಾದ ಹೇಳಿ, ನಮ್ಮ ನೆಲದತ್ತ ಒಮ್ಮೆ ನೋಡೋಣ. ಈಗಾಗಲೇ

ಕಾಡುಗಳು ಜನರ ಕೈತಪ್ಪಿವೆ. ಇಲ್ಲಿ ಜಿನುಗುವ ನೀರನ್ನು ನೋಡಲು ಅರಣ್ಯದ ದೊಣ್ಣೆನಾಯಕರ ಅನುಮತಿ ಕೇಳುವ ಸ್ಥಿತಿಗೆ ತಲುಪಿದ್ದೇವೆ. ರಾಜ್ಯ ಕಳೆದ ಮೂರು ವರ್ಷಗಳಿಂದ ಸತತವಾಗಿ ಬರಗಾಲ ಪೀಡಿತವಾಗಿತ್ತು. ಇಡೀ ದೇಶದಲ್ಲಿ ರಾಜಸ್ಥಾನವನ್ನು ಬಿಟ್ಟರೆ ಅತಿ ಹೆಚ್ಚು ಬರಗಾಲ ಪೀಡಿತ ಭೂ ಪ್ರದೇಶವನ್ನುಳ್ಳ ರಾಜ್ಯವೆಂದರೆ ಕರ್ನಾಟಕ. ಆದರೂ ಇಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೭೦ ಭಾಗ ಕೃಷಿಯನ್ನೇ ಅವಲಂಬಿಸಿದೆ. ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕುಸಿಯುತ್ತಿದೆ. ಕಳೆದ ವರ್ಷ ರಾಜ್ಯದ ಮೂರನೇ ಎರಡು ಭಾಗ ಭೂ ಪ್ರದೇಶದಲ್ಲಿ ೭೦೦ ಮೀ.ಮೀ. ಗಿಂತ ಕಡಿಮೆ ಮಳೆಯಾಗಿದೆ ಹಾಗೂ ವಾರ್ಷಿಕ ಸರಾಸರಿ ೧೧.೦೩೯ ಮೀ.ಮೀ.ಗಳು ಮಾತ್ರ. ರಾಜ್ಯದ ಶೇಕಡಾ ೪೦ ಭಾಗ ಜನ ವರ್ಷೊಂಭತ್ತು ಕಾಲವೂ ಕುಡಿಯುವ ನೀರಿನ ಕೊರತೆಯಿಂದ ಬಳಲುತ್ತಿದ್ದಾರೆ. ಬೇಸಿಗೆಯಲ್ಲಿ ಕನಿಷ್ಠ ಶೇಕಡಾ ೬೦ ಭಾಗ ಜನಸಂಖ್ಯೆ ಕುಡಿಯುವ ನೀರಿನ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿದೆ. ನಗರ ಪ್ರದೇಶಗಳ ಬಡವರಿಗೂ ಗ್ರಾಮೀಣ ಕರ್ನಾಟಕದ ಜನಕ್ಕೂ ಈ ಸಮಸ್ಯೆ ಸಮಾನ ಆತಂಕಕಾರಿಯಾಗಿದೆ.

ಇಲ್ಲಿನ ಕೆರೆಗಳು ಜನರ ಕೈತಪ್ಪಿ, ಅಧಿಕಾರಿಗಳ ಕೈ ಸೇರಿವೆ. ಕೊಳವೆಬಾವಿಗಳನ್ನು ತೋಡಲು ಯಾವ ಅಡೆತಡೆಗಳೂ ಇಲ್ಲ. ದುಡ್ಡಿರುವ ಯಾರು, ಎಲ್ಲಿ ಬೇಕಾದರೂ ಕೊಳವೆಬಾವಿ ತೋಡಬಹುದು. ರಾಜ್ಯದ ಎಲ್ಲಾ ತೆರೆದ ಬಾವಿಗಳೂ ಬತ್ತಿಹೋಗಿವೆ. ೧೯೮೦ರ ದಶಕದಲ್ಲಿ ೧೦೦ ಅಡಿಗಳ ಒಳಗೆ ಸಿಗುತ್ತಿದ್ದ ನೀರು ಈಗ ೬೫೦-೮೦೦ ಅಡಿ ಕೊರೆದರೂ ಕಾಣೆಯಾಗಿದೆ. ನೀರು ಸಿಕ್ಕಲ್ಲಿ ಅದರ ದುರುಪಯೋಗವನ್ನು ತಡೆಯುವ ಮಂದಿ ಈ ರಾಜ್ಯದಲ್ಲಿ ಯಾರೂ ಇಲ್ಲ. ಕೆಲವೇ ವರ್ಷಗಳಲ್ಲಿ ಬತ್ತಿಹೋಗುವ ಒಂದು ಸಮೃದ್ಧ ನೀರಿನ ಕೊಳವೆ ಬಾವಿ, ನಾವು ನೀರಿನ ಮರುಪೂರಣದ (Re-charging) ಬಗ್ಗೆ ತಳೆದಿರುವ ಅಸಡ್ಡೆಗೆ ಸಾಕ್ಷಿಯಾಗಿರುತ್ತದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಏನಾಗಬಹುದು? ಹಾಸ್ಯಕ್ಕೆ ಹೇಳಬಹುದು, ಹವಾಯಿಯನ್ ಜನರ ಪ್ರಾರ್ಥನೆಯ ಕೊನೆಯ ಸಾಲನ್ನು ತಿದ್ದಿ 'ಸಾಯುವೆವು ನಾವು ಮತ್ತೆಮತ್ತೆ' ಎಂದು ಬದಲಿಸಬೇಕಾಗುತ್ತದೆ ಎಂದು. ಆದರೆ ಅದು ಪರಿಹಾರವಲ್ಲ. ಹಾಗಾದರೆ ಪರಿಹಾರವೇನು ?

"ಒಮ್ಮೆ ಗಾಂಧಿ ಅಲಹಾಬಾದಿನ ನೆಹರೂ ಮನೆಯಲ್ಲಿ ಅವರೊಂದಿಗೆ ಉಳಿದು ಕೊಂಡಿರುತ್ತಾರೆ. ಇಬ್ಬರೂ ರಾಷ್ಟ್ರದ ಇಕ್ಕಟ್ಟು-ಬಿಕ್ಕಟ್ಟುಗಳ ಚರ್ಚೆಯಲ್ಲಿ ತೊಡಗಿರುತ್ತಾರೆ. ಈ ನಡುವೆ ಗಾಂಧಿ ಬೆಳಗಿನ ಕೈಕಾಲು ಮುಖ ತೊಳೆಯಲು ಮುಂದಾಗುತ್ತಾರೆ, ನೆಹರು ಅವರಿಗೆ ನೀರು ಹಾಕತೊಡಗುತ್ತಾರೆ. ಮಾತಿನ ನಡುವೆ ನೆಹರೂ ಕೈಯಲ್ಲಿದ್ದ ತಂಬಿಗೆ ಖಾಲಿಯಾಗಿಬಿಡುತ್ತದೆ. ಗಾಂಧಿ ಕೈಗಳನ್ನು ಮಾತ್ರ ತೊಳೆದುಕೊಂಡಿರುತ್ತಾರೆ. ಇನ್ನೂ ಮುಖ ಬಾಕಿ ಇರುತ್ತದೆ. ನೆಹರೂ ಇನ್ನೊಂದು ತಂಬಿಗೆ ನೀರು ಮೊಗೆಯಲು ಹೋಗುತ್ತಾರೆ. ಗಾಂಧಿ ಅವರನ್ನು ತಡೆದು, ಇಂದಿಗೆ ಇಷ್ಟೇ ಸಾಕು ಎನ್ನುತ್ತಾರೆ. ನೆಹರೂ ಚಕಿತರಾಗಿ, ಏಕೆಂದು ಪ್ರಶ್ನಿಸುತ್ತಾರೆ. ಅದಕ್ಕೆ ಗಾಂಧಿ, ಇಂದು ಎಷ್ಟೊಂದು ನೀರನ್ನು ಪೋಲು ಮಾಡಿಬಿಟ್ಟೆ. ಮುಖ ತೊಳೆಯುವ ಮುಂಚೆಯೇ ಒಂದು ತಂಬಿಗೆ ನೀರನ್ನೂ ವ್ಯರ್ಥಗೊಳಿಸಿಬಿಟ್ಟೆ. ಇಂದಿನ ನನ್ನ ನೀರಿನ ಕೋಟಾ ಮುಗಿಯಿತು ಎನ್ನುತ್ತಾರೆ. ಗಾಂಧಿಯ ಕಣ್ಣುಗಳು ತೇವಗೊಂಡಿರುತ್ತವೆ. ಇದರಿಂದ ವಿಚಲಿತರಾದ ನೆಹರೂ ಒಂದು ತಂಬಿಗೆ ನೀರಿಗೆ ಅದೇಕೆ ಅಷ್ಟೊಂದು ದುಃಖಿಸುತ್ತೀರಿ? ನನ್ನ ನಗರದಲ್ಲಿ ಮೂರು ನದಿಗಳು ಹರಿಯುತ್ತವೆ, ಇಲ್ಲಿ ನೀರಿಗೆ ಬರವೇ ಎನ್ನುತ್ತಾರೆ. ಅದಕ್ಕೆ ಗಾಂಧಿ, ನಿಮ್ಮ ಊರಿನಲ್ಲಿ ಮೂರು ನದಿಗಳಿವೆ ನಿಜ, ಆದರೆ 'ಆ ಮೂರೂ ನದಿಗಳ ನೀರಿನಲ್ಲಿ ನನ್ನ ಪಾಲು ಒಂದು ದಿನಕ್ಕೆ ಒಂದು ತಂಬಿಗೆ ಮಾತ್ರ' ಎನ್ನುತ್ತಾರೆ."

ಈ ಘಟನೆ ಸಂಭವಿಸಿದ್ದಕ್ಕೆ ನಮಗೆ ಎಲ್ಲೂ ಚಾರಿತ್ರಿಕ ದಾಖಲೆಗಳು ಸಿಕ್ಕುವುದಿಲ್ಲ. ಇದು ಯಾರೋ ಅತ್ಯುಕ್ತಿಯ ಪರಿಸರವಾದಿಗಳು ಹುಟ್ಟು ಹಾಕಿದ ಪ್ರತಿಮಾತ್ಮಕ ಉದಾಹರಣೆ ಇರಬೇಕು ಎನ್ನುವ ಗುಮಾನಿಯೂ ಇದೆ. ಆದರೆ ಇದು ಸತ್ಯವಾದದ್ದಾಗಿರಲಿ ಅಥವಾ ಸೃಷ್ಟಿಸಿದ್ದಾಗಿರಲೀ ಅದು ಹೇಳುವ ತತ್ವ ಮತ್ತು ಸತ್ಯಕ್ಕೆ ಎಲ್ಲೂ ಚ್ಯುತಿ ಬಂದಿಲ್ಲ. ಇಲ್ಲಿ ಗಾಂಧಿಯ ಮೂಲಕ ಬಹುಜನರ ಆಸ್ತಿಯ ಬಗ್ಗೆ ಒಬ್ಬ ವ್ಯಕ್ತಿಗೆ ತನ್ನ ಖಾಸಗಿ ಬದುಕಿನಲ್ಲಿ ಇರಬೇಕಾದ ಜವಾಬ್ದಾರಿಯೇನು? ಎಷ್ಟು? ಎಂಬುದನ್ನು ಸೂಚಿಸಲಾಗಿದೆ. ಹಾಗೆಯೇ ಗಾಂಧಿಯ ವ್ಯಕ್ತಿತ್ವವನ್ನೂ ಸಹ. ಇತ್ತ ನೆಹರೂ ಮೂಲಕ ಒಂದು ಶ್ರೀಮಂತ, ಆಡಳಿತಶಾಹಿ ಮನಸ್ಸೊಂದು ಸಾರ್ವಜನಿಕ ಆಸ್ತಿಯ ಬಗ್ಗೆ ಹೇಗೆ ಯೋಚಿಸುತ್ತದೆ ಎಂಬುದನ್ನು ಸೂಚಿಸಲಾಗಿದೆ.

ಇಲ್ಲೊಂದು ಮುಖ್ಯವಾದ ಸಂಗತಿಯನ್ನು ಗಮನಿಸಬೇಕು. ಗಾಂಧಿ ಎಂದೂ ರಾಷ್ಟ್ರಾಡಳಿತ ಗದ್ದುಗೆಗಳನ್ನು ಏರಲಿಲ್ಲ. ಆದರೆ ನೆಹರೂ ಈ ಸ್ವತಂತ್ರ ದೇಶವನ್ನಾಳಿದ ಮೊದಲ ಪ್ರಧಾನಿ. ಬ್ರಿಟಿಷರ ಅಥವಾ ವಿಶಾಲಾರ್ಥದಲ್ಲಿ ಯುರೋಪಿಯನ್ ಸಂಸ್ಕೃತಿಯ ಮುಂದುವರಿದ ಭಾಗ. ಸತತವಾಗಿ ಎರಡು ದಶಕಗಳ ಕಾಲ ಈ ದೇಶವನ್ನಾಳಿದ ಈ ಮನುಷ್ಯ ಈ ನಾಡಿನ ಆಡಳಿತಶಾಹಿಗಳಿಗೆ ಕಲಿಸಿ ಹೋಗಿದ್ದು ಬ್ರಿಟಿಷ್ ಆಡಳಿತ ಶೈಲಿಯನ್ನು ಮಾತ್ರ. ಸ್ವತಃ ಈತನೇ ಒಬ್ಬ ಬಿಲಿಯನರ್ ಆಗಿದ್ದರಿಂದ ಈ ದೇಶದ ಶ್ರೀಮಂತರಿಗೆ ಈತ ಜೀವಂತ ಮಾದರಿಯಾಗಿದ್ದರು. ಹಾಗಾಗಿಯೇ ಇಂದು ಯಾರ ಸೂಚನೆ, ಆದೇಶ, ಕೋರಿಕೆಯ ಮೇರೆಗೆ ಈ ದೇಶದಲ್ಲಿ ಯಾವುದೇ ವಿಶ್ವದಿನವನ್ನು ಆಚರಿಸಿದರೂ ನಾವು ಅದನ್ನು 'ಎಚ್ಚರಿಕೆ' ಯಿಂದ ಗಮನಿಸಬೇಕಾಗುತ್ತದೆ. ಈ ಎಚ್ಚರ, ಕನಸು ಮತ್ತು ಪ್ರಾಮಾಣಿಕ ಕ್ರಿಯಾಶೀಲತೆಯ ಹೊರತು ನಮ್ಮ ಮುಂದಿನ ಎಲ್ಲಾ ಹಾದಿಗಳನ್ನೂ ನಮ್ಮ ಪ್ರಭುತ್ವ ಈಗಾಗಲೇ ಮುಚ್ಚಿಹಾಕಿದೆ. ಜನರ ಪಾರಂಪರಿಕ ಆಯ್ಕೆಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದೇ ಯಾವುದೇ ಸಾಮ್ರಾಜ್ಯಶಾಹಿ ಚಿಂತನೆಯ ಅಂತಿಮ ಗುರಿಯಾಗಿರುತ್ತದೆ. 'ಕಾಮನ್ಸ್' ಬದುಕನ್ನು, 'ಕಾಮನ್ಸ್'ಗಳ ಪಾಲಿನ ದೇಶವನ್ನು ನಾಶಮಾಡಲು ಹಿಟ್ಲರ್, ಖೊಮೇನಿ, ಬುಷ್, ಬ್ಲೇರ್‌ಗಳೇ ಆಗಬೇಕಿಲ್ಲ. ದೇಶದೊಳಗಿನ ವಸಾಹತುಶಾಹಿ ಮನಸ್ಸುಗಳೇ ಸಾಕು. ವಿದೇಶಿ ವಸಾಹತುಶಾಹಿಗಿಂತ ಸ್ವದೇಶಿ ವಸಾಹತುಶಾಹಿಯೇ ಹೆಚ್ಚು ಅಪಾಯಕಾರಿ ಎಂಬುದನ್ನು ಇತಿಹಾಸ ಸ್ಪಷ್ಟಗೊಳಿಸಿದೆ.

ಇಂಥಾ ಸಾಮ್ರಾಜ್ಯಶಾಹಿ, ನವ ವಸಾಹತುಶಾಹಿ ಕುತಂತ್ರಗಳಲ್ಲಿ ಈಗಾಗಲೇ ಪಳಗಿರುವ ನಮ್ಮ ಸ್ವಂತ ಪ್ರಭುತ್ವ ಈಗಾಗಲೇ GATT, IMF, World Bank ಗಳೊಂದಿಗಿನ ಅಸಂಖ್ಯಾತ ಒಪ್ಪಂದಗಳಿಗೆ ಸಹಿ ಮಾಡಿದೆ. ಕೆಲವೇ ವರ್ಷಗಳ ಹಿಂದೆ ನೀರು, ಗಾಳಿಯಂಥಾ ಕೆಲವಾದರೂ ನೈಸರ್ಗಿಕ ಸಂಪನ್ಮೂಲಗಳನ್ನು ಮಾರುಕಟ್ಟೆಯಿಂದ ಹೊರಗಿಡುವಂಥ ಮಾನವೀಯ ನಿಲುವೊಂದಿತ್ತು. ಈ ಪಟ್ಟಿಯಲ್ಲಿ ಜಿನೆಟಿಕ್ ಕೋಡ್‌ಗಳು, ಬೀಜ, ಆರೋಗ್ಯ, ಶಿಕ್ಷಣ, ಸಂಸ್ಕೃತಿ ಮತ್ತು ಪರಂಪರೆಗಳೂ ಸೇರಿದ್ದವು. ಆದರೆ ಮೇಲಿನ ಸಂಸ್ಥೆಗಳು ಇಂದು ಇಂಥಾ ವಿಷಯಗಳನ್ನೇ ವ್ಯಾಪಾರದ ಮೂಲ ಸರಕನ್ನಾಗಿ ಮಾಡಿಕೊಂಡಿವೆ. ಒಪ್ಪಂದಗಳ ನಿಯಮದ ಪ್ರಕಾರ ನಮ್ಮ ಪ್ರಭುತ್ವಗಳು ಅವಕ್ಕೆ ದಾರಿ ಮಾಡಿಕೊಡಬೇಕು. ಇಲ್ಲವಾದರೆ ಅಂತಾರಾಷ್ಟ್ರೀಯವಾಗಿ ಅಸಂಖ್ಯಾತ ದಿಗ್ಬಂಧನಗಳನ್ನು ಎದುರಿಸಬೇಕಾಗುತ್ತದೆ. ಇವರ ಒಪ್ಪಂದಗಳನ್ನು, ಷರತ್ತುಗಳನ್ನು ಜಾರಿಮಾಡುವಂತೆ ಮೇಲೆ ಹೇಳಿದ ಸಂಸ್ಥೆಗಳು ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಮಾಡಿದ ದಾದಾಗಿರಿಯನ್ನು ನೋಡಿದರೆ ನಾವು ಅಷ್ಟು ಸುಲಭವಾಗಿ ಇವರಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ನಮ್ಮ ಪ್ರಭುತ್ವಗಳ ನಾಯಕರೂ ಸಹ ಅದೇ ನಮೂನೆಯ ಜನರಾದ್ದರಿಂದ ಅವರು ಯಾವ

ತೊಡಕುಗಳೂ ಇಲ್ಲದೆ ತಮ್ಮ ಅವಧಿಯನ್ನು ಪೂರೈಸುವ ಬಗ್ಗೆ ಮಾತ್ರ ಆಸಕ್ತರಾಗಿರುತ್ತಾರೆ. ಇಲ್ಲದಿದ್ದರೆ ಪಿ.ವಿ. ನರಸಿಂಹರಾವ್ GATT ಒಪ್ಪಂದಕ್ಕೆ ಏಕೆ ಸಹಿ ಮಾಡುತ್ತಿದ್ದರು? ಆನಂತರ ಬಂದ ಸ್ವದೇಶಿ ಮಂತ್ರದ ಸರ್ಕಾರ ಏಕೆ ಈ ದೇಶವನ್ನು ಅಮೆರಿಕಾ ಮಾರುಕಟ್ಟೆಯಾಗಿ, ಕಸದ ತೊಟ್ಟಿಯಾಗಿ ಬಳಸಿಕೊಳ್ಳುವುದನ್ನು ಉತ್ತೇಜಿಸುತ್ತಿತ್ತು ?

ಈ ನಡುವೆಯೇ ಅವರು 'ಜನತಾಂತ್ರಿಕ'ವಾಗಿ ನಮ್ಮದೇ ನಗರಗಳ ಜಲಮಂಡಲಿಗಳ ಜೊತೆ ಸೇರಿಕೊಂಡು, ರಾಜ್ಯದ ಕುಡಿಯುವ ನೀರಿನ ನಿರ್ಮಲೀಕರಣದಂಥ ಯೋಜನೆಗೆ ಸಾಲ ಯಾ ಸಹಾಯಧನ ಕೊಡುತ್ತಾರೆ. ಜೊತೆಗೆ ಅವರದೇ ಹಣ ಹೂಡಿ ವಿಶ್ವ ಜಲದಿನವನ್ನು ನಮ್ಮದೇ ನಗರದಲ್ಲಿ ಆಚರಿಸುತ್ತಾರೆ. ಮೊದಲು ನೀರಿನ ಮಹತ್ವ ಹಾಗೂ ಕೊರತೆಯ ಬಗ್ಗೆ ಅಂಕಿಅಂಶಗಳ ಸಹಿತ ಮಾತಾಡಿ, ಗಾಬರಿ ಹುಟ್ಟಿಸುತ್ತಾರೆ. ನಾವು ಗಾಬರಿಯಲ್ಲಿದ್ದಾಗ ಅದಕ್ಕೆ ಅವರದೇ ಆದ 'ಪರಿಹಾರ'ಗಳನ್ನು ಮಂಡಿಸುತ್ತಾರೆ. ಇಂಥಾ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ನಿಮಗೆ ಸುಗಮವಾಗಿ ನೀರು ಕೊಡುವ ಕನಸು ಬಿತ್ತುತ್ತಾರೆ. ಇದು ಎಷ್ಟು ಕಷ್ಟದ ಕೆಲಸವೆಂದು ಒತ್ತೊತ್ತಿ ಹೇಳುತ್ತಾರೆ. ಮೇಲಿನಿಂದ ಒತ್ತಡ ತಂದು ಜಲಮಂಡಲಿಯ ಅಧಿಕಾರಿಗಳೂ ಇವರ ರಾಗಕ್ಕೆ ತಾಳಕಟ್ಟುವಂತೆ ಮಾಡುತ್ತಾರೆ. ಮೇಲಿನವರು ರಾಗ ತೆಗೆದರೆ ಅಂತಾರಾಷ್ಟ್ರೀಯ ಧಣಿಗಳಿಂದ ಉಪದೇಶ, ಬೆದರಿಕೆಗಳ ಮೂಲಕ ಅವರನ್ನು ದಾರಿಗೆ ತರುತ್ತಾರೆ. ಇತ್ತ, ನೀರಿಲ್ಲದೆ ಸಾಯುವ ಬದಲು ನಿಮ್ಮ ಗಳಿಕೆಯ ಕಾಲಂಶವನ್ನು ನಿಮ್ಮ 'ಜೀವಜಲಕ್ಕಾಗಿ' ಕೊಟ್ಟು ನೀವೇಕೆ ಸುಖಿವಾಗಿರಬಾರದು ಎಂದು ಸುಖ/ ಸೌಲಭ್ಯದ ಕಲ್ಪನೆಯನ್ನು ಹಿಗ್ಗಲಿಸುತ್ತಾರೆ. ಹೀಗಾಗುವವರು ಮಾತ್ರ ನಾಗರಿಕರು ಎಂಬಂಥ ಭ್ರಮೆ ಹುಟ್ಟಿಸುತ್ತಾರೆ; ಹೀಗೆಂದು ಅಭಿಪ್ರಾಯ ಸೃಷ್ಟಿಸುತ್ತಾರೆ.

ಇಲ್ಲಿಂದಾಚೆಗೆ ಮೊಳಕೆಯನ್ನು ನಿರೀಕ್ಷಿಸುತ್ತಾ, ಅದಕ್ಕೆ ಬೇಕಾದ ಪೋಷಕಾಂಶಗಳನ್ನು ಒದಗಿಸುತ್ತಾ ಹೋಗುತ್ತಾರೆ. ಇಂಥಾ ಭ್ರಮೆಗಳಲ್ಲಿಯೇ ಜೀವಿಸುತ್ತಿರುವ ಒಬ್ಬ ಸಂಬಳದಾರ, ಒಬ್ಬ ವ್ಯಾಪಾರಿ, ಒಬ್ಬ ರಾಜಕಾರಣಿ ಅಥವಾ ಒಬ್ಬ ತಲೆಹಿಡುಕನಿಗೆ ಇದು ಅಪ್ಯಾಯಮಾನವಾಗಿ ಕಾಣತೊಡಗುತ್ತದೆ. ಇಂಥವರು ಸದಾ ಇಂಥಾ ಸುಖ/ಸೌಲಭ್ಯಗಳ ಮೂಲಕವೇ ತಮ್ಮನ್ನು ನಾಗರಿಕರಂತೆ ತೋರಿಸಿ ಕೊಳ್ಳಲು ಬಯಸುತ್ತಿರುತ್ತಾರೆ. ಅಲ್ಲಿಗೆ ಮುಗಿಯಿತು. ಅಂತೂಇಂತೂ ನಗರಕ್ಕೊಂದು ವಿದೇಶಿ ನೀರು ಸರಬರಾಜು ಕಂಪನಿ ಬರುತ್ತದೆ. ಹಾಲು ಮತ್ತು ಹೆಂಡಕ್ಕಿಂತ ನೀರಿನ ಬೆಲೆ ದುಬಾರಿಯಾಗುತ್ತದೆ.

ಈ ನಾಗರಿಕತೆ, ಸುಖ, ಸೌಲಭ್ಯದ ಭ್ರಮೆ ಹತ್ತಿದ ಒಬ್ಬ ರಾಜಕಾರಣಿ, ಸಂಬಳದಾರ, ಒಬ್ಬ ವ್ಯಾಪಾರಿ ಅಥವಾ ಒಬ್ಬ ತಲೆಹಿಡುಕನಿಗೆ ಇದು ಅಂಥಾ ಮುಖ್ಯ ಬದಲಾವಣೆ ಎನಿಸುವುದಿಲ್ಲ. ಏಕೆಂದರೆ ಅವರ ಬಳಿ Unearned Money ಯ ದೊಡ್ಡ ಹೊಂಡವೇ ಇರುತ್ತದೆ. ಅದರಲ್ಲೊಂದು ಬೊಗಸೆಯನ್ನು ನೀರಿಗಾಗಿ ಕೊಟ್ಟರೆ ಅವರಪ್ಪನ ಗಂಟೇನೂ ಹೋಗುವುದಿಲ್ಲ. ಅದನ್ನು ತುಂಬಿಸಿಕೊಳ್ಳಲು ಅವರ ಮುಂದೆ ಸಾವಿರ ದಾರಿಗಳಿರುತ್ತವೆ. ಇಂಥವರ ಸಂಖ್ಯೆ ಎಷ್ಟು ? ಆದರೆ ಮಾಸಿಕ ೧೦೦೦-೧೫೦೦ ರೂಪಾಯಿಗಳನ್ನಷ್ಟೇ ಗಳಿಸಬಲ್ಲ, ೨೦-೩೦ ರೂಪಾಯಿಗೆ ದಿನವೆಲ್ಲಾ ದುಡಿಯುವ ಬಹುಸಂಖ್ಯಾತರು ಅದೇ ನಗರದಲ್ಲಿರುತ್ತಾರೆ, ಇವರ ಪಾಡೇನು ?

ಈ ದುರಂತಕ್ಕೆ ಬೊಲಿವಿಯಾ ದೇಶದ ಕೋಚಬಾಂಬಾ ನಗರದ ಉದಾಹರಣೆಯನ್ನು ಯಾರು ಬೇಕಾದರೂ ಗಮನಿಸಬಹುದು; ಅಭ್ಯಸಿಸಬಹುದಾಗಿದೆ.

□

ಜಲಬ್ರಹ್ಮರು ಮತ್ತು ನೀರುಗಂಟಿಗಳು

ಟಿ.ಎಸ್. ವಿವೇಕಾನಂದ

'ಉದಕದ ಕೈ ಕಾಲ ಮುರಿದು
ಅಗ್ನಿಯ ಕಿವಿ ಮೂಗನರಿದು
ವಾಯುವ ತಲೆಯ ಹೊಯ್ದು
ಆಕಾಶವ ಶೂಲದಲಿಕ್ಕಿದ ಬಲ್ಲಿದ ತಳವಾರನೀತನು !
ಅರಸು-ಪ್ರಧಾನ-ಮಂತ್ರಿ ಮೂವರ
ಮುಂದುಗೆಡಿಸಿದ ಬಲ್ಲಿದ ತಳವಾರನೀತನು !
ಒಂಭತ್ತು ಬಾಗಿಲ ಕದವನಿಕ್ಕಿ ಬಲಿದು
ಬೀಗವ ಹೂಡಿ
ನವಸಾಸಿರ ಮಂದಿಯ ಕೊಂದುಳಿದನು ! ಗುಹೇಶ್ವರ.'

-ಅಲ್ಲಮ ಪ್ರಭು

ಬೊಲಿವಿಯಾ, ದಕ್ಷಿಣ ಅಮೆರಿಕಾದಲ್ಲಿ ಬ್ರಿಝಿಲ್ಲಿನ ನೈರುತ್ಯಕ್ಕಿರುವ ಒಂದು ಪುಟ್ಟ ರಾಷ್ಟ್ರ. ೪೨೪ ಸಾವಿರ ಚ. ಮೈಲಿಗಳ ವಿಸ್ತೀರ್ಣವಿರುವ ಇದರ ಹೊಟ್ಟೆಯಲ್ಲಿ ೯೮ ಲಕ್ಷ ಜನ ಆಶ್ರಯ ಪಡೆದಿದ್ದಾರೆ. ವಿಸ್ತಾರವಾದ ಭೂಪ್ರದೇಶ, ಕಡಿಮೆ ಜನಸಂಖ್ಯೆ ಹಾಗೂ ಸಮೃದ್ಧ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದ್ದರೂ ಇದರ ವಾರ್ಷಿಕ ತಲಾದಾಯ ಕೇವಲ ೧೦೦೦ ಡಾಲರ್‌ಗಳು. ಇದರ ರಾಜಧಾನಿ ಲಾ ಪಾಝ್‌ನಿಂದ ಇನ್ನೊಂದು ಮುಖ್ಯ ನಗರ ಸಾಂತಾಕ್ರೂಸಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಕೋಚಬಾಂಬಾ ಎನ್ನುವ ನಗರ ಸಿಗುತ್ತದೆ. ಇದು ವಿಶ್ವದ ೫ ಲಕ್ಷಕ್ಕಿಂತ ಹೆಚ್ಚು ಜನ ಸಂಖ್ಯೆ ಇರುವ ನಗರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ. ಹೀಗಾಗಿ ಇಲ್ಲಿಗೆ ನಾಲ್ಕು ವರ್ಷಗಳ ಹಿಂದೆ ಭಾರತದಲ್ಲಿ ಕುಳಿತು ಅದರ ಬಗ್ಗೆ ಯೋಚಿಸುವ ಯಾರಿಗೂ ಅದರ ನಿಖರ ಜನಸಂಖ್ಯೆ, ಜನಜೀವನ, ಉದ್ದಿಮೆಗಳು, ಸಾಂಸ್ಕೃತಿಕ ವೈವಿಷ್ಟ್ಯ/ವೈವಿಧ್ಯಗಳ ಮಾಹಿತಿ ಸಿಗುವುದು ಕಷ್ಟವಾಗಿತ್ತು. ಆದರೆ ಇಂದು ಅದು ವಿಶ್ವದ ಜಲ ತಜ್ಞರು, ಮಾನವ ಹಕ್ಕುಗಳ ಹೋರಾಟಗಾರರು, ಪರಿಸರಾಕ್ತರೇ

ಮೊದಲಾದ ಮಾನವೀಯ ಕಾಳಜಿಗಳುಳ್ಳ ಜನರಿಗೆ ಪರಿಚಿತ ನಗರ. ಮುಖ್ಯವಾಗಿ ಅಮೆರಿಕಾ ಹಾಗೂ ವಿಶ್ವಬ್ಯಾಂಕಿಗೆ ದುಃಸ್ವಪ್ನವಾದ ನಗರ.

೨೦೦೦ದ ಇಸವಿಯ ಏಪ್ರಿಲ್ ತಿಂಗಳ ಒಂದು ಮುಂಜಾವು. ಸಾಧಾರಣ ಮೈಕಟ್ಟಿನ, ತೆಳು ಕಪ್ಪು ಬಣ್ಣದ, ಸುಮಾರು ಐದಡಿ ಎತ್ತರದ, ಅಂದಾಜು ೪೫ ವರ್ಷ ಪ್ರಾಯದ ವ್ಯಕ್ತಿಯೊಬ್ಬ ಈ ಕೋಚಬಾಂಬಾದಿಂದ ವಾಷಿಂಗ್‌ಟನ್ ಡಿ.ಸಿ.ಗೆ ಹೋಗುವ ವಿಮಾನ ಹತ್ತಲು ತಯಾರಾಗಿ ನಿಂತಿದ್ದ. ಇವನ ಹೆಸರು ಆಸ್ಕರ್ ಒಲಿವೆರಾ ಎಂದು. ಈತ ವೃತ್ತಿಯಿಂದ ಒಬ್ಬ ಯಂತ್ರಶಿಲ್ಪಿ. ಇವನ ಉದ್ದೇಶ ವಿಶ್ವಬ್ಯಾಂಕಿನ ಅಧ್ಯಕ್ಷ ಜೇಮ್ಸ್ ಉಲ್ಫೆನ್‌ಸನ್‌ರನ್ನು ಮುಖಾಮುಖಿ ಭೇಟಿ ಮಾಡಿ, ತನ್ನ ನಾಡಿನ ಜನರ ಸಂದೇಶವನ್ನು ಅವರಿಗೆ ತಲುಪಿಸುವುದಾಗಿತ್ತು.

ಈ ಸಂದೇಶದ ಹಿನ್ನೆಲೆಯಲ್ಲಿ ಕೋಚಬಾಂಬಾದ ಕ್ರೂರ ಚರಿತ್ರೆಯೇ ಇತ್ತು. ೧೯೯೮ರಲ್ಲಿ ವಿಶ್ವಬ್ಯಾಂಕ್ ಬೊಲಿವಿಯಾ ಕೇಳಿದ್ದ, ೨೫ ಮಿಲಿಯನ್ ಡಾಲರ್‌ಗಳ ಸಾಲವನ್ನು ನವೀಕರಣಗೊಳಿಸಲು ನಿರಾಕರಿಸಿತ್ತು. ಆದರೆ, ನಿಮ್ಮ ಸರ್ಕಾರ ಕೋಚಬಾಂಬಾ ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿ, "ಪೂರ್ಣ ದರ"ದಲ್ಲಿ ನೀರು ಸರಬರಾಜು ಮಾಡಲು ನಾವು ಸೂಚಿಸುವ ಕಂಪನಿಗೆ ಅನುಮತಿ ಕೊಡುವುದಾದರೆ ಸಾಲವನ್ನು ನವೀಕರಿಸುವುದಾಗಿಯೂ, ಹಾಗೂ ಈ ಸಾಲದ ಹಣವನ್ನು ಯಾವುದೇ ಕಾರಣದಿಂದ ನೀರಿನ ಸಬ್ಸಿಡಿಗಾಗಿ ವಿನಿಯೋಗಿಸಕೂಡದೆಂದೂ, ಈ ಷರತ್ತುಗಳಿಗೆ ಒಪ್ಪುವುದಾದರೆ ಸಾಲ ನವೀಕರಣ ಸಾಧ್ಯವೆಂದೂ ಹೇಳಿತ್ತು. ಆರ್ಥಿಕ ಬಿಕ್ಕಟ್ಟಿನಲ್ಲಿದ್ದ ಬೊಲಿವಿಯಾ ಸರ್ಕಾರ ಅನಿವಾರ್ಯವಾಗಿ ಅವರ ಷರತ್ತುಗಳಿಗೆ ಒಪ್ಪಿಕೊಂಡಿತು. ಇದರ ಪರಿಣಾಮವಾಗಿ ಅಮೆರಿಕಾದ ಬೃಹತ್ ಕಟ್ಟಡ ನಿರ್ಮಾಣ ಹಾಗೂ ನೀರು ಸರಬರಾಜು ಸಂಸ್ಥೆಯಾದ 'ಬೀಚ್ ಟೆಲ್' ಕಂಪನಿಗೆ ಕೋಚಬಾಂಬಾಕ್ಕೆ ನೀರು ಸರಬರಾಜು ಮಾಡುವ ಗುತ್ತಿಗೆ ದೊರೆಯಿತು.

ಈ ಕಂಪನಿ ಸರಬರಾಜು ಆರಂಭಿಸಿದ್ದೇ ತಡ ನೀರಿನ ದರವನ್ನು ದುಪ್ಪಟ್ಟುಗೊಳಿಸಿತು. ನೇರವಾಗಿ ಶೇಕಡಾ ೩೫ ಹೆಚ್ಚಾದರೆ, ಪರೋಕ್ಷವಾಗಿ ಆಡಳಿತ ವೆಚ್ಚ, ಸೇವಾವೆಚ್ಚ, ತೆರಿಗೆ, ಅದೂ...ಇದೂ...ಎಂದು ಇನ್ನಷ್ಟು ಸೇರಿಸಿತು. ಈ ದುಬಾರಿ ನೀರಿನ ಶುಲ್ಕ ಕೊಡಲಾಗದಂಥ ೪೦೦ ಸಣ್ಣ ಸಣ್ಣ ಸಮುದಾಯಗಳ ವಸತಿ ಪ್ರದೇಶಗಳಿಗೆ ನೀರಿನ ಸಂಪರ್ಕವನ್ನು ನಿರ್ದಯವಾಗಿ ಕಡಿದು ಹಾಕಲಾಯಿತು. ಕೋಚಬಾಂಬಾದ ಜನರ ಎಲ್ಲಾ ಮನವಿಗಳನ್ನೂ ನೋಡುವ ಮೊದಲೇ ನಿರಾಕರಿಸಿತು. ಒಪ್ಪಂದದ ಪ್ರಕಾರ ಸರ್ಕಾರ ಈ ವಿಷಯದಲ್ಲಿ ತಲೆಹಾಕಲಾಗದೆ ಹಿಂದೆ ಉಳಿಯಿತು.

ಈ ಹಿನ್ನೆಲೆಯಲ್ಲಿಯೇ ಆಸ್ಕರ್ ಒಲಿವೆರಾ ವಾಷಿಂಗ್‌ಟನ್ನಿಗೆ ಹೊರಟಿದ್ದು. ಇವನು ಅಲ್ಲಿಗೆ ತಲುಪಿದಾಗ ಏಕಾಂಗಿಯಾಗಿರಲಿಲ್ಲ. ಇವನೊಂದಿಗೆ ವಿಶ್ವಬ್ಯಾಂಕ್ ಹಾಗೂ ಐಎಂಎಫ್‌ಗಳ ಈ ನೀರಿನ ದರೋಡೆಯ ವಿರುದ್ಧ ಪ್ರತಿಭಟಿಸಲು ವಿಶ್ವದ ನಾನಾ ದೇಶಗಳಿಂದ ಬಂದಿದ್ದ ಸಾವಿರಾರು ಜನ ಪರಿಸರ, ಸಾಮಾಜಿಕ, ಜಲ, ಮಾನವ ಹಕ್ಕುಗಳ ಕಾರ್ಯಕರ್ತರಿದ್ದರು. ಈ ವಿಶ್ವಸಂಸ್ಥೆ ಮತ್ತು ಐಎಂಎಫ್‌ಗಳು ಬೊಲಿವಿಯಾದಲ್ಲಿ ಮಾಡಿದಂತೆ "ವಿನ್ಯಾಸ ಹೊಂದಾಣಿಕೆ ಕಾರ್ಯಕ್ರಮ" ಎಂಬ ನವ ವಸಾಹತುಶಾಹಿ ನೀತಿಯ ಮೂಲಕ ವಿಶ್ವದ ನೂರಾರು ರಾಷ್ಟ್ರಗಳಲ್ಲಿ ಇಂಥದೇ ಜನವಿರೋಧಿ ಕಿತಾಪತಿಗಳನ್ನು ಹುಟ್ಟುಹಾಕಿದ್ದರು. ವಿಶ್ವದ ಬಹುದೊಡ್ಡ ನೀರು ಸರಬರಾಜು ಕಂಪನಿಗಳಾದ 'ಸೂಜ್' ಮತ್ತು 'ವಿವೆಂಡಿ' ಎಂಬ 'ಜಲಬ್ರಹ್ಮ'ರುಗಳಿಗೆ ಟ್ರಿಲಿಯಾಂತರ ಡಾಲರುಗಳ ಸಾಲ ನೀಡಿ, ಇವುಗಳ ಮೂಲಕ ತೃತೀಯ ಜಗತ್ತಿನ ಎಲ್ಲಾ ಬಡದೇಶಗಳನ್ನು 'ಜಲ ನಿಯಂತ್ರಣಕ್ಕೆ'

ಒಳಪಡಿಸಿ ಈ ಮೂಲಕ ಅಪಾರ ಲಾಭ ಹಾಗೂ ಪ್ರಭುತ್ವಗಳನ್ನು ನಿಯಂತ್ರಿಸಬಯಸಿದ್ದರು. ಇದಕ್ಕೆ ಸಾಲ, ಆರ್ಥಿಕ ಸಹಾಯ, ಬೆದರಿಕೆ, ಬ್ಲಾಕ್‌ಮೇಲ್‌ಗಳ ತಂತ್ರಗಳನ್ನು ಬಳಸುತ್ತಿದ್ದರು.

ಈ ಹುನ್ನಾರದ ಅಂಗವಾಗಿ ಮೊಸಾಂಬಿಕ್ ದೇಶದಲ್ಲಿ ನೀರು ಸರಬರಾಜು ಗುತ್ತಿಗೆಯ ಮೇಲೆ ಸೂಜ್ ಕಂಪನಿ ೧೧೭ ಮಿಲಿಯನ್ ಡಾಲರ್, ಬ್ಯೂನಾಸ್ ಐರೀಸ್ ನಗರದ ಮೇಲೆ ಒಟ್ಟು ೪೧೫ ಮಿಲಿಯನ್ ಡಾಲರ್, ನೈಜೀರಿಯಾದ ಲಾ ಗೊಸ್ ನಗರದ ಮೇಲೆ ೧.೨ ಬಿಲಿಯನ್ ಡಾಲರ್, ಘಾನಾದ ಮೇಲೆ ೮೦೦ ಮಿಲಿಯನ್ ಡಾಲರ್ ಬಂಡವಾಳ ಹೂಡಿತ್ತು. ಅದೇ ಹೊತ್ತಿನಲ್ಲಿ ಇದಕ್ಕಿಂತ ಬೃಹತ್ತಾದ ವಿವೆಂಡಿ ಕಂಪನಿ ಜೆಕ್ ಗಣರಾಜ್ಯ, ಚೀನಾದ ಕೆಲವು ನಗರಗಳು, ಬುಡಾಪೆಸ್ಟ್, ವಿಯೆಟ್ನಾಮಿನ ಹೋ ಚಿ ಮಿನ್ ನಗರ ಹಾಗೂ ಕೆಲವು ಯೂರೋಪಿನ ದೇಶಗಳ ಮೇಲೆ ಲಕ್ಷಾಂತರ ಬಿಲಿಯನ್ ಡಾಲರ್ ಬಂಡವಾಳ ಹೂಡಿತ್ತು. ಈ ಎಲ್ಲಾ ಹಣದ ಬಹುಭಾಗವನ್ನು ವರ್ಲ್ಡ್‌ಬ್ಯಾಂಕ್ ಹಾಗೂ ಐಎಂಎಫ್‌ಗಳೇ ವಿವಿಧ ಹೆಸರಿನಲ್ಲಿ ನೀಡಿದ್ದವು. ಉದಾಹರಣೆಗೆ : ಇಂಟರ್‌ನ್ಯಾಷನಲ್ ಬ್ಯಾಂಕ್ ಫಾರ್ ರೀ ಕನ್‌ಸ್ಟ್ರಕ್ಷನ್ ಅಂಡ್ ಡೆವಲಪ್‌ಮೆಂಟ್ ಹಾಗೂ ಇಂಟರ್‌ನ್ಯಾಷನಲ್ ಫೈನಾನ್ಸ್ ಕಾರ್ಪೊರೇಷನ್ ಡೆವಲಪ್‌ಮೆಂಟ್ ಹಾಗೂ ಇಂಟರ್ ನ್ಯಾಷನಲ್ ಫೈನಾನ್ಸ್ ಕಾರ್ಪೊರೇಷನ್ ಇತ್ಯಾದಿ. ಹಾಗೇ ಅಗತ್ಯಬಿದ್ದ ಕಡೆಯಲ್ಲಿ ಸ್ಥಳೀಯ ಬ್ಯಾಂಕುಗಳನ್ನೂ ಬಳಸಿಕೊಳ್ಳಲಾಗಿತ್ತು. ಉದಾಹರಣೆಗೆ ಆಫ್ರಿಕನ್ ನ್ಯಾಷನಲ್ ಬ್ಯಾಂಕ್, ಏಷಿಯಾ ಡೆವಲಪ್‌ಮೆಂಟ್ ಬ್ಯಾಂಕ್, ಇಸ್ಲಾಮಿಕ್ ಡೆವಲಪ್‌ಮೆಂಟ್ ಬ್ಯಾಂಕ್ ಇತ್ಯಾದಿ.

ಆ ಹೊತ್ತಿನ ಆಸ್ಕರ್ ಓಲಿವೆರಾ ಹೇಳಿದ: ನಾನು ಈ ವಿಶ್ವಬ್ಯಾಂಕಿನ ಅಧ್ಯಕ್ಷನಿಗೆ ತಿಳುವಳಿಕೆ ಕೊಡಬಯಸುತ್ತೇನೆ..., "ಹೇಗೆ, ನಿಮ್ಮ ಈ ನೀರಿನ ಖಾಸಗೀಕರಣ ನೇರವಾಗಿ ಬೊಲಿವಿಯಾದ ಬಡಜನರ ಮೇಲೆ ನಡೆದಿರುವ ಆಕ್ರಮಣವಾಗುತ್ತದೆ ಎಂದು. ಏಕೆಂದರೆ ನನ್ನ ದೇಶದ ಬಹುಪಾಲು ಜನರ ಮಾಸಿಕ ಆದಾಯ ನೂರು ಡಾಲರ್‌ಗಳು, ಇದರಲ್ಲಿ ೨೦ ಡಾಲರ್‌ಗಳನ್ನು ನಮ್ಮ ಜನ ನೀರಿಗಾಗಿ ಕೊಡುತ್ತಿದ್ದಾರೆ. ಇಷ್ಟು ಹಣವನ್ನು ಅವನ ಕುಟುಂಬದ ಆಹಾರಕ್ಕೂ ಬಳಸಲಾರ. ನಿಜವನ್ನು ನೋಡಲು ನಮ್ಮ ಊರಿಗೆ ಬನ್ನಿ, ನಿಮ್ಮ ಹವಾನಿಯಂತ್ರಿತ ಕೊಠಡಿಯಿಂದ ಅದು ಕಾಣುವುದಿಲ್ಲ."

ಈ ಪ್ರಯತ್ನದಿಂದ ಸ್ವತಃ ಆಸ್ಕರ್ ಓಲಿವೆರಾಗೆ ತಿಳುವಳಿಕೆ, ಆತ್ಮವಿಶ್ವಾಸ ಸಿಕ್ಕಿತೇ ವಿನಃ, ವಿಶ್ವಬ್ಯಾಂಕಿನ ಮಂದಿಯ ನಡವಳಿಕೆಯಲ್ಲಿ ಕಿಂಚಿತ್ತೂ ಬದಲಾಗಲಿಲ್ಲ. ಓಲಿವೆರಾ ಊರಿಗೆ ಹಿಂತಿರುಗಿದ. ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತ್ತು. ಜನರ ನೇರ ಹೋರಾಟದ ಹೊರತು ಬೇರೆ ಮಾರ್ಗ ಕಾಣಲಿಲ್ಲ. ಜನ ಸಂಘಟನೆಗೆ ಮುಂದಾದ, ರೋಸಿಹೋಗಿದ್ದ ಕೋಚಬಾಂಬಿಗಳು ನೇರವಾಗಿ ಬೀದಿಗಿಳಿದರು. ಸತತವಾಗಿ ನಾಲ್ಕು ದಿನಗಳ ಕಾಲ ಸಂಪು, ಹರತಾಳಗಳು ನಡೆದವು. ಇಡೀ ನಗರ ಅಸ್ತವ್ಯಸ್ತವಾಯಿತು. ಈ ಚಳವಳಿ ಉಳಿದ ನಗರಗಳಿಗೂ ಹಬ್ಬಲಾರಂಭಿಸಿತು. ಚಳವಳಿಕಾರರು ಕೇವಲ ಒಂದೇ ಒಂದು ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದರು, "ಜನರ ನೀರಿನ ಹಕ್ಕನ್ನು ಜನಕ್ಕೆ ಹಿಂತಿರುಗಿಸಿ." ಸರ್ಕಾರ ಇಕ್ಕಟ್ಟಿನಲ್ಲಿ ಸಿಕ್ಕಿಬಿತ್ತು.

ಆದರೆ ಇಷ್ಟು ಹೊತ್ತಿಗಾಗಲೇ ಪರಿಸ್ಥಿತಿ ಕೈ ಮೀರಿ ಹೋಗಿತ್ತು. ನಗರವೂ ಸೇರಿದಂತೆ ಸುತ್ತಮುತ್ತಲ ಪ್ರಾಂತ್ಯಗಳಲ್ಲಿ ಸಾರಿಗೆ ವ್ಯವಸ್ಥೆ ಸಂಪೂರ್ಣ ಬಂದಾಗಿತ್ತು. ನೀರು ಸರಬರಾಜನ್ನು ನಿಲ್ಲಿಸಲಾಗಿತ್ತು. ಪೋಲಿಸರು ಕಂಡಕಂಡವರನ್ನೆಲ್ಲಾ ಬಂಧಿಸಿ ಹಾಕಿದ್ದರು. ಈ ನಡುವೆ ಒಬ್ಬ ೧೭ ವರ್ಷದ ಯುವಕ ಪೋಲೀಸರ ಗುಂಡಿಗೆ ಬಲಿಯಾಗಿ ಹೋಗಿದ್ದ. ಕೊನೆಗೆ ರಾಷ್ಟ್ರದ ಅಧ್ಯಕ್ಷ

ಹ್ಯೂಗೊ ಬೆಂಝೀರ್ ರಾಷ್ಟ್ರದಲ್ಲಿ ಮಾರ್ಷಲ್ ಆಡಳಿತ ಹೇರಿ, ಕಂಪೆನಿಯೊಂದಿಗಿನ ಒಪ್ಪಂದವನ್ನು ರದ್ದುಪಡಿಸಿದರು. ಊರಿನ ನೀರಿನ ಹಂಚಿಕೆ "ಜಲಬ್ರಹ್ಮರಿಂದ ನೀರುಗಂಟಿಗಳ ಕೈಗೆ ಬಂದಿತ್ತು."

ಸಧ್ಯಕ್ಕೆ ಈ ಜಗತ್ತಿನ ೪೦ ರಾಷ್ಟ್ರಗಳಲ್ಲಿ ಇಂಥಾ ಜಲಬ್ರಹ್ಮ ಮತ್ತು ನೀರುಗಂಟಿಗಳ ನಡುವಿನ ಯುದ್ಧ ಜಾರಿಯಲ್ಲಿದೆ. ಇದರಲ್ಲಿ ದಕ್ಷಿಣಾರ್ಧ ಗೋಲದ ರಾಷ್ಟ್ರಗಳ ನಿಯಂತ್ರಣದ ಉಸ್ತುವಾರಿಯನ್ನು ಈಗ ಐಎಂಎಫ್ ವಹಿಸಿಕೊಂಡಿದೆ. ಇತ್ತೀಚೆಗೆ ಇದರ ಮುಂದೆ ಬಂದ ಸಾಲದ ಅರ್ಜಿಗಳನ್ನು ಸಾರಾಸಗಟಾಗಿ ಪರಿಶೀಲಿಸಿದಾಗ..., ಅದರಲ್ಲಿ ಅಲ್ಲಲ್ಲಿ ಸಿಕ್ಕ ೪೦ ಅರ್ಜಿಗಳಲ್ಲಿ "ನೀರಿನ ಖಾಸಗೀಕರಣ ಮತ್ತು ಸಂಪೂರ್ಣ ದರ ವಸೂಲಿಯನ್ನು" ಪ್ರಮುಖ ಷರತ್ತಾಗಿ ವಿಧಿಸಲಾಗಿತ್ತು. ಇಲ್ಲಿನ "ಸಂಪೂರ್ಣ ದರ ವಸೂಲಿ" ಎಂದರೆ ನೀರಿನ ದರ, ಸರಬರಾಜು/ಸೇವಾವೆಚ್ಚ ಹಾಗೂ ತೆರಿಗೆಯೊಂದಿಗೆ ಅವರು ಹೂಡಿರುವ ಬಂಡವಾಳದ ಮೇಲಿನ ಬಡ್ಡಿಯನ್ನು ಸಹ ಬಳಕೆದಾರನಿಂದ ವಸೂಲಿ ಮಾಡುವುದು.

ಸಾಲ ಕೇಳುವ ರಾಷ್ಟ್ರಗಳಿಂದ ಕೇವಲ ಖಾಸಗೀಕರಣದ ಗ್ಯಾರಂಟಿಯಲ್ಲದೆ, ನೀರು ಸರಬರಾಜಿನ ಯೋಜನಾವರದಿ, ಅನ್ವಯಿಕ ತಾಂತ್ರಿಕ, ಆರ್ಥಿಕ, ನಿರ್ವಹಣಾ ವರದಿಗಳ ಸಂಪೂರ್ಣ ನೀಲನಕ್ಷೆಯನ್ನು ಐಎಂಎಫ್‌ಗೆ ಸಲ್ಲಿಸಬೇಕೆಂಬ ಷರತ್ತನ್ನು ವಿಧಿಸುತ್ತಿವೆ. ಇಂಥಾ ಷರತ್ತುಗಳನ್ನು ಈಗಾಗಲೇ ೧೨ ರಾಷ್ಟ್ರಗಳು ಒಪ್ಪಿಕೊಂಡಿವೆ. ಇವುಗಳಲ್ಲಿ ೮ ರಾಷ್ಟ್ರಗಳು ಸಹರಾ ಪ್ರಾಂತ್ಯದ ಆಫ್ರಿಕಾ ಭಾಗದ ಕಡು ಬಡದೇಶಗಳಾಗಿವೆ. ಜೊತೆಗೆ ತೀರಾ ಸಣ್ಣವು, ವಿಪರೀತ ಋಣಭಾರದಲ್ಲಿರುವಂಥವು. ಐಎಂಎಫ್ ಹಾಗೂ ವಿಶ್ವಬ್ಯಾಂಕಿನ ಇಂತಹ ಬ್ಲಾಕ್‌ಮೇಲ್‌ನ ಕಾರಣದಿಂದಾಗಿ ನೈಜರ್ ಎಂಬ ಪುಟ್ಟ ರಾಜ್ಯ ಈಗಾಗಲೇ ತನ್ನ ದೇಶದ ನೀರು, ಸಾರ್ವಜನಿಕ ಸಂಪರ್ಕ, ವಿದ್ಯುತ್ ಹಾಗೂ ಪೆಟ್ರೋಲಿಯಂ ಸರಬರಾಜು/ಸೇವೆಯನ್ನು ಬ್ಯಾಂಕಿನ ದಲ್ಲಾಳಿಗಳಿಗೆ ಒಪ್ಪಿಸಿದೆ. ರುವಾಂಡಾ ದೇಶದ ನೀರು ಮತ್ತು ವಿದ್ಯುತ್ ಸರಬರಾಜಿನ ಖಾಸಗೀಕರಣಕ್ಕೆ ಈ ಹಣಕಾಸು ಸಂಸ್ಥೆಗಳು ಪಟ್ಟು ಹಿಡಿದು ೨೦೦೧ರಲ್ಲಿ ತಮ್ಮ ಕೈವಶ ಮಾಡಿಕೊಂಡಿವೆ.

ಇದೇ ಹೊತ್ತಿನಲ್ಲಿ ಬೊಲಿವಿಯಾದ ಕಿಚ್ಚು ನಿಧಾನವಾಗಿ ವಿಶ್ವಕ್ಕೆಲ್ಲಾ ವ್ಯಾಪಿಸುತ್ತಿದೆ. ಜಗತ್ತಿನಲ್ಲಿಯೇ ನೀರನ್ನು ಪ್ರಜೆಗಳ ಮೂಲಭೂತ ಹಕ್ಕಾಗಿ ಸಂವಿಧಾನದಲ್ಲಿ ನಮೂದಿಸಿರುವ ಏಕೈಕ ರಾಷ್ಟ್ರವೆಂದರೆ ದಕ್ಷಿಣ ಆಫ್ರಿಕಾ. ಆದರೆ ಇಲ್ಲಿಯೂ ಈ ಜಲಬ್ರಹ್ಮರು ಸುಮ್ಮನಿರಲಿಲ್ಲ. ಅವರ ಸಂವಿಧಾನದ ತಿರುಳನ್ನೇ ಬಂಡವಾಳ ಮಾಡಿಕೊಂಡು, "ಸಾರ್ವಜನಿಕ-ಸಾರ್ವಜನಿಕ" ಮಿಶ್ರಣದ ವ್ಯವಸ್ಥೆಯೊಂದನ್ನು ಹುಟ್ಟು ಹಾಕಿದರು. ಇವರವೇ ಬೇರೆಬೇರೆ ಹೆಸರಿನ ನಾಲ್ಕು ಕಂಪನಿಗಳನ್ನು ಪ್ರತ್ಯೇಕ 'ಸಾರ್ವಜನಿಕ' ಮಾಡಿದವು. ಈ ಸಾರ್ವಜನಿಕ ಕಂಪನಿಗಳ ಪಾಲುದಾರಿಕೆಯನ್ನು 'ಸಾರ್ವಜನಿಕ-ಸಾರ್ವಜನಿಕ' ಎಂದು ಕರೆದವು. ಇದರ ಮೂಲಕ ಜೋಹಾನ್ಸ್ ಬರ್ಗ್ ಹಾಗೂ ಡರ್ಬಾನ್ ನಗರಗಳ ನೀರು ಸರಬರಾಜನ್ನು ಗುತ್ತಿಗೆ ಪಡೆದವು. ನಿರೀಕ್ಷೆಯಂತೆ ಅವುಗಳ ದರ ಜನರ ಮಾಸಿಕ ಆದಾಯದ ಮೂರನೇ ಒಂದು ಭಾಗಕ್ಕೇರಿತು. ಈ ಶುಲ್ಕ ಕಟ್ಟಲಾಗದ ಲಕ್ಷಾಂತರ ಬಡವರ ಮನೆಗಳಿಗೆ ನೀರಿನ ಸಂಪರ್ಕ ಕಡಿದು ಹಾಕಿದರು. ಆ ಕಂಪನಿಗಳ 'ಸಾರ್ವಜನಿಕ- ಸಾರ್ವಜನಿಕದ' ಹುನ್ನಾರ ತಿಳಿದಿದ್ದ ಜನ, 'ನೆರೆಹೊರೆಗಾಗಿ ನೆರೆಹೊರೆ' ಎಂಬ ಚಳವಳಿಯನ್ನು ಹುಟ್ಟುಹಾಕಿದರು. ಇಡೀ ನಗರ ಈ ಘೋಷಣೆಯಡಿ ಬೀದಿಗಿಳಿಯಿತು.

ನೆರೆಹೊರೆಯ ಯಾರ ಮನೆಗಾದರೂ ಈ ಕಂಪನಿ ನೀರಿನ ಸಂಪರ್ಕ ತಪ್ಪಿಸಿದರೆ ಕೂಡಲೇ ಇಡಿಯ ಓಣಿ, ಕೇರಿ, ಬಡಾವಣೆಯ ಜನ ಸೇರಿ ಆ ಮನೆಗೆ ಮರು ಸಂಪರ್ಕವನ್ನು ಕೊಡಹತ್ತಿದರು.

ಇದಕ್ಕೆ ಕಂಪೆನಿ ತಕರಾರು ತೆಗೆದರೆ ಇಡೀ ಪ್ರದೇಶದ ಮನೆಗಳ ನೀರಿನ ಮೀಟರ್‌ಗಳನ್ನು ಕಿತ್ತು ಹಾಕಿದರು. ಅದೇ ಹೊತ್ತಿನಲ್ಲಿ ನೀರಿನ ಕರ ನಿರಾಕರಣೆಯನ್ನು ಚಾಲ್ತಿಯಲ್ಲಿಟ್ಟರು. ಈ ಕ್ರಿಯೆ ನೆರೆಹೊರೆಯಿಂದ ನೆರೆಹೊರೆಗೆ ಹಬ್ಬುತ್ತಾ ಇಡೀ ನಗರವನ್ನೇ ಆವರಿಸಿಕೊಂಡಿತ್ತು. ಕ್ರಮೇಣ ಸುತ್ತಮುತ್ತಲ ಹೊಸ ಬಡಾವಣೆಗಳಿಗೂ ಹಬ್ಬಿ, ಅಲ್ಲಿಂದ ವಿವಿಧ ನಗರಗಳಿಗೂ ಹರಡಿತು. ನಗರಾಡಳಿತ ನಿಸ್ಸಹಾಯಕವಾಯಿತು. ಅದರ ಸಂಕೇತವಾಗಿ ಈ ಚಳವಳಿಗಾರರು ಸಭೆ ಸೇರುತ್ತಿದ್ದ ಪಾಲಿಕೆ ವ್ಯಾಪ್ತಿಯ ಮೈದಾನದಲ್ಲಿ ಸಭೆ ಸೇರದಂತೆ ಅಡ್ಡಿಪಡಿಸಿತು. ಇದರಿಂದ ರೊಚ್ಚಿಗೆದ್ದ ಜನಸಮೂಹ ತಮ್ಮ ಚಳವಳಿಯನ್ನು ಇನ್ನಷ್ಟು ತೀವ್ರಗೊಳಿಸಿತು. ಹೋರಾಟ ತೀಕ್ಷ್ಣವಾಗಿ ಮುಂದುವರೆಯಿತು.

...ಹೀಗೆ ಅವರು ಅತ್ತಲಿಂದ ನವಸಾಸಿರ ಮಂದಿಯ ಕೊಂದುಳಿಯ ಹೊರಟರೆ, ಇವರು ಇತ್ತಲಿಂದ...ಉದಕದ ಕೈಕಾಲು ಮುರಿದು, ಅಗ್ನಿಯ ಕಿವಿಮೂಗನರಿದು, ವಾಯುವ ತಲೆಯ ಹೊಯ್ದು, ಆಕಾಶವ ಶೂಲದಲಿಕ್ಕಿದ ಬಲ್ಲಿದ ತಳವಾರರಾಗುತ್ತಿದ್ದಾರೆ ! ಈ ಹಕ್ಕಿನ ಹೋರಾಟದಲ್ಲಿ ಯಾರು ನವಸಾಸಿರ ಮಂದಿಯ ಕೊಂದುಳಿಯುತ್ತಾರೆ ನೋಡಬೇಕು ? ಇಲ್ಲಿ ಸಮಸ್ಯೆ ಇರುವುದು ತಳವಾರರದ್ದಾಗಲೀ, ನೀರುಗಂಟಿಗಳದಾಗಲೀ ಅಲ್ಲ. ರಾಜರದ್ದು..., ಅಂಪೈರುಗಳದ್ದು. ಹೇಗೆಂದು ಅಲ್ಲದಿದ್ದರೂ ನೀರನ್ನು ಕುರಿತ ಚಂದ್ರಶೇಖರ ಕಂಬಾರರ ಒಂದು ಪದ್ಯ ಹೀಗೆ ಹೇಳುತ್ತದೆ :

“ಗೆರೆಯಿಂದ ಕೊರೆದಿಡಲಾದೀತೆ ನೀರನ್ನ ?
ಗೆರೆಯ ಬರೆಯುವುದರೊಳಗೆ, ನೀರು ಕರಗಿ
ಸ್ಟೇಸಾಗಿ ತೇಲಿ, ಮಳೆಯಾಗಿ ಸುರಿದು,
ಕಾಲನ ಇರಿದು ಅಲೆ ಅಲೆ ರಿಪೀಟಾಗಿ...”
“...ಗೆರೆ ನಂಬಿ ಜಗಳವಾಡಿದ್ದಿದೆ, ಕೊಲೆಗಳಾಗಿದ್ದಾವೆ
ಇಷ್ಟಾಗಿ ನೀವು ಬೆರಳೂರಿದ್ದೆ ಕೇಂದ್ರ
ಸುತ್ತಿದ್ದೆ ಪರಿಘ.
ಪರಿಘದ ಹಾಗೆ ಕೇಂದ್ರಗಳೂ ಅಪರಂಪಾರ
ಯಾಕೆಂದರೆ ನೋಡಿ ಇದು ನೀರಿನ ವ್ಯವಹಾರ”

‘ರತ್ನ ಪಕ್ಷಿ’ ಎಂಬ ಪುಸ್ತಕವೊಂದಿದೆ. ಇದನ್ನು ಗೆಳೆಯ ಕೋಟಿಗಾನಹಳ್ಳಿ ರಾಮಯ್ಯ ಡಿ.ಪಿ.ಇ.ಪಿ. ಕಾರ್ಯಕ್ರಮಕ್ಕಾಗಿ ಸಂಪಾದಿಸಿ ಕೊಟ್ಟಿದ್ದರು. ಇದಕ್ಕೆ ಗೆಳೆಯ ಇಕ್ಬಾಲ್ ತನ್ನ ವಿಶಿಷ್ಟ ಚಿತ್ರಗಳ ಮೂಲಕ ಭವ್ಯತೆಯನ್ನು ತಂದುಕೊಟ್ಟಿದ್ದಾರೆ. ಇದರಲ್ಲಿ ಒಂದು ಕತೆ ಇದೆ. ಅದರ ಹೆಸರು ‘ಹಾಲು-ನೀರು’ ಎಂದು.

ಇದರ ಪ್ರಕಾರ..., ಒಂದೂರಿನಲ್ಲಿ ಇಬ್ಬರು ಹೆಂಗಸರಿರುತ್ತಾರೆ. ಒಬ್ಬಳ ಬಳಿ ಹತ್ತು ಎಮ್ಮೆಗಳಿರುತ್ತವೆ. ಇನ್ನೊಬ್ಬಳ ಬಳಿ ಒಂದೇ ಒಂದು ಎಮ್ಮೆ. ಒಮ್ಮೆ ಹತ್ತೆಮ್ಮೆಯವಳು ಒಂದೆಮ್ಮೆಯವಳ ಬಳಿ “ವರ್ತನೆಯವರಿಗೆ ಕೊಡಲು ಹಾಲು ಸಾಲದೆ ಬಂದಿದೆ” ಎಂದು ಹೇಳಿ ಒಂದು ಸೇರು ಹಾಲನ್ನು ಸಾಲ ಪಡೆದುಕೊಂಡು ಹೋಗುತ್ತಾಳೆ. ವರ್ಷಗಳು ಕಳೆಯುತ್ತವೆ. ಅವಳು ಹಾಲನ್ನು ವಾಪಸ್ಸು ಕೊಡುವುದಿಲ್ಲ. ಒಂದೆಮ್ಮೆಯವಳಿಗೆ ಸೇರು ಹಾಲು ದೊಡ್ಡದಾಗಿರುತ್ತದೆ. ಅವಳು ಹೋಗಿ ಕೇಳುತ್ತಾಳೆ. ಅದಕ್ಕೆ ಹತ್ತೆಮ್ಮೆಯವಳು, “ಹೋಗೇ..., ನನ್ನವು ಐದೆಮ್ಮೆ ಒದ್ದುಕೊಂಡ್ರೂ ಐದೆಮ್ಮೆ ಕರೀತಿರ್ತಾವೆ, ನಿನ್ನತ್ರ ನಾನ್ಯಾಕ್ ಸಾಲ ಮಾಡ್ಲಿ” ಅಂತಾಳೆ. ಒಂದೆಮ್ಮೆಯವಳು ದೊರೆಯ ಬಳಿಗೆ ದೂರೊಯ್ಯುತ್ತಾಳೆ.

ದೊರೆಯ ಮುಂದೆ ಪತ್ತೆಮ್ಮೆಯವಳು 'ಅವಳು ಸಾಪ್ರ ಹೇಳ್ತಾಳೆ, ನಿಮಗಾದ್ರೂ ಗೊತ್ತಾಗೋದು ಬ್ಯಾಡ್ವಾ, ಪತ್ತೆಮ್ಮೆಯೋಳು ಒಂದೆಮ್ಮೆಯೋಳತ್ರ ಸಾಲ ಯಾಕೆ ಕೇಳ್ತಾಳಂತಾ ?!' ಎಂದು ದಬಾಯಿಸುತ್ತಾಳೆ. ದೊರೆ ಅವರಿಬ್ಬರಿಗೂ ಮೂರು ದಿನ ಬಿಟ್ಟು ಬರುವಂತೆಯೂ ಅಂದು ತೀರ್ಪು ನೀಡುವುದಾಗಿಯೂ ತಿಳಿಸುತ್ತಾನೆ. ಅವರು ಬರುವ ದಿನ ಬಾಗಿಲಲ್ಲಿ ಎರಡು ಹಂಡೆಗಳ ತುಂಬಾ ನೀರು ತುಂಬಿಸಿ, ತಂಬಿಗೆಯೊಂದಿಗಿಡಬೇಕೆಂದು ಸೇವಕರಿಗೆ ಹೇಳಿ, ಅವರು ಬಂದಾಗ ಇಬ್ಬರೂ ಒಂದೊಂದು ಹಂಡೆಯಲ್ಲಿ ಕೈ ಕಾಲು ಮುಖ ತೊಳೆದುಕೊಂಡು ಬರುವಂತೆ ಸೂಚಿಸಬೇಕೆಂದೂ ಆದೇಶಿಸುತ್ತಾನೆ.

ಮೂರನೆಯ ದಿನ ಇಬ್ಬರೂ ಬರುತ್ತಾರೆ. ಇಬ್ಬರಿಗೂ ರಾಜಾಜ್ಞೆಯನ್ನು ಹೇಳಲಾಗುತ್ತದೆ. ಅದಕ್ಕೆ ಮೊದಲು ಬಂದ ಪತ್ತೆಮ್ಮೆಯವಳು "ಇಷ್ಟೊತ್ತಾದ್ರೂ ಮಕತಿಕ ತೊಳದಂಗಿರ್ತೀವಾ ?" ಎನ್ನುತ್ತಾ ದಬದಬನೆ ನೀರನ್ನು ಹೊಯ್ದುಕೊಂಡು ಹಂಡೆಯನ್ನೆಲ್ಲಾ ಖಾಲಿ ಮಾಡಿ ಒಳ ಹೋಗುತ್ತಾಳೆ. ಹಾಗೇ ಒಂದೆಮ್ಮೆಯವಳು 'ಕೈ ಕಾಲು ತೊಳೆಯಲು ಇಷ್ಟು ನೀರೇಕೆ' ಎಂದು ಒಂದೇ ಒಂದು ಚೊಂಬು ನೀರಿನಲ್ಲಿ ಎಲ್ಲಾ ತೊಳೆದುಕೊಂಡು ಒಳ ಹೋಗುತ್ತಾಳೆ.

ಇತ್ತ ದೊರೆ ಬಂದು ಎರಡೂ ಹಂಡೆಗಳನ್ನು ನೋಡುತ್ತಾನೆ. ಖಾಲಿಯಾಗಿರುವ ಹಂಡೆಯನ್ನು ತೋರಿಸಿ ಇದರಲ್ಲಿ ತೊಳೆದುಕೊಂಡಿದ್ದು ಯಾರು ? ಎನ್ನುತ್ತಾನೆ. ಅದಕ್ಕೆ ಪತ್ತೆಮ್ಮೆಯವಳು ಗತ್ತಿನಿಂದ, ನಾನು ಎನ್ನುತ್ತಾಳೆ. ತುಂಬಿದ್ದ ಹಂಡೆಯನ್ನು ತೋರಿಸಿ ಇದರಲ್ಲಿ ತೊಳೆದಿದ್ದು ಯಾರು ಎನ್ನುತ್ತಾನೆ? ಅದಕ್ಕೆ ಒಂದೆಮ್ಮೆಯವಳು ನಾನು ಎನ್ನುತ್ತಾಳೆ, ಆತಂಕದಿಂದ.

ಆಗ ದೊರೆ ಅಲ್ಲಿಟ್ಟಿದ್ದ ಹಂಡೆಗಳ 'ನೀರಿನ ಬಳಕೆಯನ್ನು' ಆಧಾರವಾಗಿಟ್ಟುಕೊಂಡು, ಪತ್ತೆಮ್ಮೆಯವಳು ಹಾಲನ್ನು ಪಡೆದುಕೊಂಡಿರುವುದು ನಿಜವಾದ್ದರಿಂದ, ತೆಗೆದುಕೊಂಡಿರುವ ಹಾಲನ್ನು ಒಂದೆಮ್ಮೆಯವಳಿಗೆ ಹಿಂತಿರುಗಿಸಲು ಆಜ್ಞಾಪಿಸುತ್ತಾನೆ.

ಇದಕ್ಕೆ ಪೂರಕವಾಗಿ ಮಾಧವ ಗಾಡ್ಗಿಲ್ ಹಾಗೂ ರಾಮಚಂದ್ರ ಗುಹಾ ನೀಡುವ ಉದಾಹರಣೆಯೊಂದನ್ನು ಕುಮಟಾ ತಾಲ್ಲೂಕಿನ ಹಳ್ಳಿಗಳಲ್ಲಿ ನೋಡಬಹುದು.

'ಇಲ್ಲಿ ಅಡಿಕೆ ಬೆಳೆಯುವ ಉಚ್ಚವರ್ಗದ ಹವ್ಯಕರಿದ್ದಾರೆ ಮತ್ತು ಭತ್ತ ಬೆಳೆಯುವ ಹಾಲಕ್ಕಿ ಒಕ್ಕಲಿಗರಿದ್ದಾರೆ. ೧೯೬೦ಕ್ಕೆ ಮೊದಲು ನೀರು ಅವರಿಗೂ ಇವರಿಗೂ ಸಾಕಾಗುವಷ್ಟು ಇತ್ತು. ಅಡಿಕೆ ಬೆಳೆಗಾರರು ನೈಸರ್ಗಿಕವಾಗಿ ಸಿಗುತ್ತಿದ್ದ ಝರಿ ನೀರಿನಿಂದಲೇ ತೃಪ್ತರಾಗಿದ್ದರು. ಹಾಲಕ್ಕಿ ಜನರು ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಿದ್ದರು. ವಿಜ್ಞಾನ ಬೆಳೆದಂತೆ, ಹವ್ಯಕರು ಹೆಚ್ಚು ಹೆಚ್ಚು ಸುಶಿಕ್ಷಿತರಾದಂತೆ ಬಾವಿ ತೆಗೆದು ವಿದ್ಯುತ್ ಪಂಪುಗಳನ್ನು ಹಾಕಲು ಸರ್ಕಾರ ಕೊಟ್ಟ ಸಬ್ಸಿಡಿಗಳನ್ನು ಬಳಸಿಕೊಂಡರು. ಇವರು ಹೆಚ್ಚು ನೀರನ್ನು ಹೊರತೆಗೆಯುತ್ತಿದ್ದಂತೆ, ಹಾಲಕ್ಕಿ ಜನರಿಗೆ ಬೆಳೆ ತೆಗೆಯಲು ನೀರು ಕಡಿಮೆಯಾಗಿ ವರ್ಷಕ್ಕೆ ಎರಡು ಬೆಳೆಯಿಂದ ಒಂದು ಬೆಳೆಗೆ ಇಳಿದರು. ಹವ್ಯಕರ ತೋಟಗಳಲ್ಲಿ ನೀರು ಹರಿಯತೊಡಗಿ ಅವರ ಬೆಳೆಯ ಪ್ರಮಾಣ ಹೆಚ್ಚಿತು. ಹವ್ಯಕರ ಶ್ರೀಮಂತಿಕೆ, ಆಧುನಿಕತೆ ಹೆಚ್ಚಿದಂತೆ ಹಾಲಕ್ಕಿಗಳ ಜೀವನಮಟ್ಟ ಕುಸಿಯಿತು. ಅನೇಕ ಕಾಲದಿಂದ ಪರಸ್ಪರ ಸಹಬಾಳ್ವೆಯಿಂದ ಜೀವಿಸುತ್ತಿದ್ದ ಎರಡೂ ಜನಾಂಗಗಳು ದೂರವಾಗತೊಡಗಿದವು. ಅಡಿಕೆಯ ರೇಟು ಏರುತ್ತಾ ಹೋದ ರೀತಿಯಲ್ಲಿ ಅಕ್ಕಿಯ ಬೆಲೆ ಹೆಚ್ಚದಿದ್ದುದು ಇದಕ್ಕೆ ಇನ್ನಷ್ಟು ಪುಷ್ಟಿ ಕೊಟ್ಟಿತು. ಹೀಗಾಗಿ ಇಂದು ಇಲ್ಲಿ ಎರಡು ಜನಾಂಗಗಳ ಮಧ್ಯೆ ಅಸಹನೆ ದ್ವೇಷಗಳು ಒಳಗೊಳಗೇ ಕುದಿಯುತ್ತಿವೆ.'

ಇದೇ ಹೊತ್ತಿನಲ್ಲಿ ನಮ್ಮ ಪರಿಸರವಾದಿ ನಾಗೇಶ ಹೆಗಡೆ ಅಮೆರಿಕಾ ಜನರ ನೀರಿನ ದುಂದನ್ನು ಕುರಿತು ಹೀಗೆ ಬರೆಯುತ್ತಾರೆ :

"...ಒಂದು ಕಿಲೋ ದನದ ಮಾಂಸದ ಉತ್ಪಾದನೆಗೆ ಏಳು ಕಿಲೋ ಧಾನ್ಯ ಬೇಕಾಗುತ್ತದೆ. ಅಷ್ಟು ಧಾನ್ಯ ಬೆಳೆಯಲೆಂದು ೭೦೦೦ ಲೀಟರ್ ನೀರು ಬೇಕಾಗುತ್ತದೆ. ಬಾಳೇಕಾಯಿಯ ಆಕಾರದ ಬ್ರೆಡ್ಡಿನಲ್ಲಿ ಮಾಂಸದ ತುಣುಕು ಸೇರಿಸಿ ತಯಾರಿಸಲಾದ 'ಹ್ಯಾಂಬರ್ಗರ್' ಎಂಬ ತಿಂಡಿಯ ಒಂದು ಪ್ಲೇಟನ್ನು ನೀವು ತಿಂದು ಮುಗಿಸಿದರೆ ೪೦ ಬಾರಿ ಸ್ನಾನ ಮಾಡಿದಷ್ಟು ನೀರು ಬಳಕೆಯಾಗಿರುತ್ತದೆ. ೪೦ ಬಾರಿ ಸ್ನಾನ ಮಾಡುವಷ್ಟು ಅವಧಿಯಲ್ಲಿ ಅಮೆರಿಕಾದ ಕೆಲವರು ೮೦ ಹ್ಯಾಂಬರ್ಗರ್ ತಿನ್ನುತ್ತಾರೆ"

ಇಲ್ಲಿ ಅಮೆರಿಕಾ ಮತ್ತು ತೃತೀಯ ಜಗತ್ತಿನ ನಡುವಿನ ಹೋಲಿಕೆಯಲ್ಲಿ ಅವರಿಗಿರುವ ನೀರಿನ ಲಭ್ಯತೆ, ಅದನ್ನು ಪಡೆಯಲು ಅಥವಾ ಕೊಳ್ಳಲು ನೆಪವಾಗುವ ಆರ್ಥಿಕ, ಸಾಮಾಜಿಕ ಹಾಗೂ ವೈಜ್ಞಾನಿಕ ಮನಾಪಲಿಯನ್ನು ಪರಿಗಣಿಸುವುದಾದರೆ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳ ಹವ್ಯಕರು ಮತ್ತು ಹಾಲಕ್ಕಿ ಒಕ್ಕಲಿಗರ ನಡುವಿನ ವ್ಯತ್ಯಾಸ ನಮಗೆ ಹೇಗೆ ಕಾಣುತ್ತದೆ ? ಇಂಥಾ ಪ್ರಶ್ನೆಗಳೇ ಇಂದು ಭಾರತದ ಪರಿಸರವಾದದ ಮೂಲಮಾತೃಕೆಗಳಾಗಿವೆ. ಆದರೆ ನಿರಂತರವಾಗಿ ಅಮೆರಿಕಾ ಯಾ ಅಂಥ ದೇಶಗಳ ಮನಾಪಲಿ ಯಾ ಕ್ರೌರ್ಯದ ಬಗ್ಗೆ ಹೇಳುತ್ತಲೇ ನಮ್ಮಲ್ಲೇ ಇರುವ ಈ ವೈರುಧ್ಯಗಳನ್ನು ಏಕೊ ಎಲ್ಲರೂ ನಿರ್ಲಕ್ಷಿಸುತ್ತಿದ್ದಾರೆ ?!

ನಕ್ಷತ್ರಗಳ ಯಾನಕ್ಕೆ
ಹುಲ್ಲಿನದೊಂದು ದಳ
ಯಾವ ಬಗೆಯಲ್ಲಿ ಕಡಿಮೆ ? (-ವಾಲ್ಟ್ ವ್ಹಿಟ್‌ಮನ್) ಎಂದು ಯಾರೂ ಪ್ರಶ್ನಿಸುತ್ತಿಲ್ಲ.

ಇವು ಹೊರ ನೋಟಕ್ಕೆ ಸರಳವಾಗಿ ಕಾಣುವುದಾದರೂ ಜೀವನ ಕ್ರಮ, ಬಳಕೆ, ವರ್ಗ ವ್ಯತ್ಯಾಸ, ಮನಸ್ಥಿತಿ, ನೈತಿಕತೆ ಹಾಗೂ ಸಾಮಾಜಿಕ ಹೊಣೆಗಾರಿಕೆ ಕುರಿತಂತೆ ಈ ಮೇಲಿನ ಉದಾಹರಣೆಗಳು ಎತ್ತುವ ಪ್ರಶ್ನೆಗಳ ಕಾರಣದಿಂದಾಗಿ ನೀರುಗಂಟೆ; ಜಲಬ್ರಹ್ಮ ಹಾಗೂ ದೊರೆಯ ಸಂಬಂಧದೊಂದಿಗಿನ ತಾತ್ವಿಕತೆ ಹಾಗೂ ಮೌಲ್ಯಗಳಿಗೆ ಸಂಬಂಧಿಸಿದಂತೆ ವಿಲಕ್ಷಣ ನೋಟವನ್ನು ಕೊಡುತ್ತದೆ.

ಇದರ ವಿಸ್ತರಣೆಯನ್ನು ನೋಡಿ : ಜಾಗತಿಕ ಜಲಚಕ್ರ ಪ್ರಕಾರ ಮಳೆಯ ಮೂಲಕ ಭೂಮಿಗೆ ಸಿಹಿನೀರು ಬರುತ್ತದೆ. ಈ ಮುಗಿಲಿನಿಂದ ಬಿದ್ದ ನೀರು ಝರಿ, ಹೊಳೆ, ನದಿಗಳ ಮೂಲಕ ಹರಿದು ಸಾಗುತ್ತದೆ. ಈ ನೀರನ್ನು ತಾಕತ್ತಿದ್ದವರು, ಸಾಧ್ಯವಿದ್ದಷ್ಟು ತಡೆದು ಬಳಸಬಹುದು. ಇದಕ್ಕೆ ನೈಸರ್ಗಿಕವಾಗಿಯೇ ಮಿತಿಗಳಿವೆ. ಆದರೆ ಅಂತರ್ಜಲ ಹಾಗಲ್ಲ. ಇದು ಶಕ್ತಿವಂತರಿಗೆ ಮಾತ್ರ ಲಭ್ಯವಿರುವ ಸಂಪನ್ಮೂಲ. ಅದು ದೈಹಿಕ ಹಾಗೂ ಆರ್ಥಿಕ ಬಲವನ್ನು ಒಳಗೊಂಡಿದೆ. ಹರಪ್ಪ ಮೊಹೆಂಜೋದಾರೋ ನಾಗರಿಕತೆಯ ಕಾಲದಿಂದಲೂ ಜಾರಿಯಲ್ಲಿದೆ. ಅಂದು ನೀರಿಗಾಗಿ ಬಾವಿಗಳನ್ನು ತೊಡಲಾಗುತ್ತಿತ್ತು. ಈ ಬಾವಿ ತೋಡುವ ಕ್ರಿಯೆ ಅಪಾರ ದೈಹಿಕ ಸಾಮರ್ಥ್ಯವನ್ನು ಬೇಡುವ ಕೆಲಸವಾಗಿತ್ತು. ಈ ದೈಹಿಕ ಸಾಮರ್ಥ್ಯವನ್ನು ಸಂಘಟಿಸಬಲ್ಲವನಿಗೆ ಅಥವಾ ಖರೀದಿಸಬಲ್ಲವನಿಗೆ ಈ ನೀರಿನ ಮೇಲೆ ನಿಯಂತ್ರಣ ಬರುತ್ತಿತ್ತು. ಇಂದು ಪರಿಸ್ಥಿತಿ ಮತ್ತೂ ಸಂಕೀರ್ಣಗೊಂಡಿದೆ. ಇಂದು ಜನಬಲ ಯಾ ದೈಹಿಕ ಬಲದ ಅಗತ್ಯವಿಲ್ಲ. ಬೇಕಿರುವುದು ಧನಬಲ ಮಾತ್ರ. ಯಾವನ ಬಳಿ ಹಣವಿರುತ್ತದೋ ಅವನು ಕೊಳವೆಬಾವಿ ಕೊರೆಸಬಲ್ಲ. ಕೃಷಿಗಾಗಿ

ಕೊಳವೆಬಾವಿ ತೋಡಲು, ಆ ನೀರನ್ನು ಮೇಲೆತ್ತಲು ಬೇಕಾದ ಮೋಟಾರ್/ಪಂಪುಗಳಿಗೆ ಹಾಗೂ ಇದನ್ನು ಚಲಾಯಿಲು ಬೇಕಾದ ವಿದ್ಯುಚ್ಛಕ್ತಿಗೆ ಸರ್ಕಾರ ಸಬ್ಸಿಡಿ ಕೊಟ್ಟು ಪ್ರೋತ್ಸಾಹಿಸುತ್ತದೆ.

ಹೀಗಾಗಿ ಶ್ರೀಮಂತ ರೈತರು, ದೊಡ್ಡ ದೊಡ್ಡ ರೈತರು ಹೆಚ್ಚು ಹೆಚ್ಚು ಬೆಳೆಯಲು ಭೂಮಿಗೆ ಹೆಚ್ಚು ಹೆಚ್ಚಾಗಿ ತೂತುಗಳನ್ನು ಕೊರೆಯುತ್ತಿದ್ದಾರೆ. ಹೆಚ್ಚೆಚ್ಚು ನೀರನ್ನು ಹೊರತೆಗೆಯುತ್ತಿದ್ದಾರೆ. ಅವರ ಶ್ರೀಮಂತಿಕೆಯನ್ನು ಆಧರಿಸಿ ಕೊಳವೆಬಾವಿಗಳು ಆಳಗೊಳ್ಳುತ್ತಿವೆ. ಪರಿಣಾಮವಾಗಿ ಊರೊಳಗಿನ ಸಾರ್ವಜನಿಕ ಬಾವಿಗಳು ಬತ್ತಿ ಹೋಗುತ್ತಿವೆ. ಸಾರ್ವಜನಿಕರು ನೀರಿಗಾಗಿ ಪರದಾಡುವಂತಾಗಿದೆ. ಊರಿನ ಹತ್ತೂ ಸಮಸ್ತರಿಗೆ ಸೇರಿದ ನೀರು, ಸರ್ಕಾರದ ನಿರ್ಲಕ್ಷ ಹಾಗೂ ತಪ್ಪುನೀತಿಯಿಂದಾಗಿ ಅಸಮಾನ ಹಂಚಿಕೆಯಾಗಿ ಕೆಲವೇ ಪ್ರಬಲರ ಹಿಡಿತದೊಳಗೆ ಬಂದಿರುವುದನ್ನು ಗಾಡ್ಗಿಲ್ ಮತ್ತು ಗುಹಾ ದಾಖಲಿಸಿದ್ದಾರೆ.

ಹಾಗೇ, ಪ್ರತಿವರ್ಷ ಮಳೆಯಾದಾಗಲೇ ಅಂತರ್ಜಲ ತುಂಬಿಕೊಳ್ಳಬೇಕು. ಮಳೆಯಿಂದ ಎಷ್ಟು ನೀರು ತುಂಬುವುದೋ ಅದಕ್ಕಿಂತ ಹೆಚ್ಚು ನೀರನ್ನು ವರ್ಷ ವರ್ಷವೂ ಹೊರತೆಗೆಯುತ್ತಾ ಹೋದರೆ ಅಂತರ್ಜಲದ ಮಟ್ಟವೇನಾದೀತು ? ಅಂತರ್ಜಲವೇ ಇಲ್ಲದಾದಾಗ ಬಾವಿ, ಕೆರೆಗಳ ಗತಿ ಏನು ? ಅದನ್ನೇ ನಂಬಿದವರ ಪಾಡೇನಾಗಬೇಕು ?

ಈ ಕತೆಯ ದುರಂತ, ದೋಷ ಯಾವುದೆಂದರೆ :

ನಿಜವಾದ ಮರ ಮತ್ತು
ನೀರಿನ ಮರ
ಇವೆರಡೂ ಒಂದಾದ ಸ್ಥಳ
ಮಾಯವಾಗಿರೋದು.

(-ಕಂಬಾರ)

ಇದರದ್ದೊಂದು ಮಾದರಿ ಹೀಗಿದೆ : ಗುಜರಾತಿನ ಹಳ್ಳಿಗಳಲ್ಲಿ ನೀರಿನ ಬಳಕೆ ಮತ್ತು ಅಂತರ್ಜಲದ ಪರಿಸ್ಥಿತಿಯನ್ನು ವಿಷದವಾಗಿ ವಿವರಿಸುವ ಒಂದು ಅಧ್ಯಯನವನ್ನು ಮಾಡಲಾಗಿದೆ. ೨೫ ವರ್ಷಗಳಲ್ಲಿ ಅಲ್ಲಿ ವಿದ್ಯುತ್ ಪಂಪುಗಳು, ಕೊಳವೆ ಬಾವಿಗಳ ಸಂಖ್ಯೆ ೬೦ ಪಟ್ಟು ಜಾಸ್ತಿಯಾಗಿದೆ. ಹಳ್ಳಿಯಲ್ಲಿರುವ ಶ್ರೀಮಂತ ರೈತರು-ಸರ್ವಭಕ್ಷಕರು-ಕೊಳವೆ ಬಾವಿಗಳನ್ನು ಹಾಕಿ ಹೆಚ್ಚು ಹೆಚ್ಚು ನೀರು ತೆಗೆದು, ಹೆಚ್ಚು ನೀರು ಬೇಡುವಂಥ ವಾಣಿಜ್ಯ ಬೆಳೆಗಳನ್ನು ಬೆಳೆದು ಅವರು ಇನ್ನೂ ಶ್ರೀಮಂತರಾಗುತ್ತಿದ್ದಾರೆ. ಅವರಿಗೆ ಸರ್ಕಾರದ ಮತ್ತು ವಿದ್ಯುತ್ ಇಲಾಖೆಯ ಪ್ರೋತ್ಸಾಹ ಬೇರೆ. ಆದರೆ ಈಗ ರಾಜ್ಯದಲ್ಲಿ ಅಂತರ್ಜಲ ಮಟ್ಟ ಅಪಾರವಾಗಿ ಕುಸಿದಿದ್ದು ಸಾಮಾನ್ಯ ರೈತನಿಗೆ ಕೈಗೆಟಕುತ್ತಿದ್ದ ಬಾವಿ ನೀರು ಎಂದೋ ಬತ್ತಿ ಹೋಗಿದೆ. ಇನ್ನೂ ಕೆಳಗೆ ಹೋಗುವ ತಾಕತ್ತು ಅವನಿಗಿಲ್ಲ. ರಾಜ್ಯದ ತುಂಬೆಲ್ಲಾ ಈಗ ಬರಗಾಲ. ಬರಗಾಲದ ಪರಿಹಾರದಲ್ಲೂ ಶ್ರೀಮಂತರ ಪಾಲೇ ದೊಡ್ಡದು. ಹೀಗೆ ಗುಜರಾತಿನ ನೀರಿನ ಪರಿಸ್ಥಿತಿಯನ್ನು "ಅತಿಯಾದ ಶೋಷಣೆ ಮತ್ತು ಅಸಮಾನ ಹಂಚಿಕೆ" ಈ ಎರಡೇ ಪದಪುಂಜಗಳಿಂದ ವರ್ಣಿಸಬಹುದು.

ಹಾಗೇ ನೀರು ಪುಕ್ಕಟೆಯಾಗಿ ಸಿಗುವ ವಸ್ತುವಾದ್ದರಿಂದ ಕೈಗಾರಿಕೋದ್ಯಮಿಗಳಿಗೂ ಇದರ ಬಗ್ಗೆ ಕಾಳಜಿ ಇಲ್ಲ. ಅದೇ ಹೊತ್ತಿನಲ್ಲಿ ಕಾರ್ಖಾನೆಗಳ ಕೊಳಚೆ ನೀರನ್ನು ಶುದ್ಧೀಕರಿಸಿ ನದಿಗೆ ಬಿಡುವ ತಂತ್ರಜ್ಞಾನ ಇವರಿಗೆ ದುಬಾರಿಯಾಗಿ ಕಾಣುತ್ತದೆ. ಸರ್ಕಾರ ಇವರ ಬಗ್ಗೆ ನಿಷ್ಠುರ ಧೋರಣೆ ತಾಳಬೇಕು.

ಆದರೆ ಭಾರತದಲ್ಲಿ ಹಾಗಾಗುವುದಿಲ್ಲ. ಇಲ್ಲಿ ಪರಿಸರ ಯಾ ಜಲಮಾಲಿನ್ಯ ಮಾಡುವ ಮಂದಿ ಸಮಾಜದ ಶ್ರೀಮಂತ ವರ್ಗದವರು, ಎಲ್ಲರ ಮೇಲೂ ನಿಯಂತ್ರಣ ಇರುವವರು. ಆದರೆ ಇವರ ಲಫಂಗತನದ ಫಲ ಉಣ್ಣುವವನು ಮಾತ್ರ ಪರಿಸರ ಸ್ನೇಹಿಯಾದ ಯಾ ಪರಿಸರ ನಿರಾಶ್ರಿತನಾದ ಬಡವ. ಈ ಇಬ್ಬರ ನಡುವಿನ ಕಂದರ ಎಷ್ಟೆಂದರೆ ಆ ಲಫಂಗರನ್ನು ಶಿಕ್ಷಿಸುವುದು, ಅವರಿಗೆ ದಂಡ ಹಾಕುವುದು, ಪ್ರಶ್ನಿಸುವುದು ಈ ಶೋಷಿತ ವರ್ಗದಿಂದ ಸಾಧ್ಯವೇ ಇಲ್ಲ. ಏಕೆಂದರೆ ಈ ಕಾನೂನು ನಿರ್ಮಿಸುವ, ಪಾಲಿಸುವ ವರ್ಗವೇ ಈ ಪಟ್ಟಿಯಲ್ಲಿರುತ್ತದೆ. ಜೊತೆಗೆ ಇವರನ್ನು ನಿಯಂತ್ರಿಸುವ ವರ್ಗವಾದ ಸಿರಿವಂತರೂ ಇದರ ಮುಂಚೂಣಿಯಲ್ಲಿರುತ್ತಾರೆ. ಹಾಗಾಗಿ ಸರ್ಕಾರದ ಅಧಿಕಾರಿಗಳಾಗಲೀ, ರಾಜಕಾರಣಿಗಳಾಗಲೀ ಕಾನೂನನ್ನು ಅವರಿಗೆ ಅನ್ವಯಿಸಲು ಹೋಗುವುದಿಲ್ಲ. ಅನ್ವಯಿಸಲು ಹೋದರೂ ಅವರನ್ನು ಖರೀದಿಸಿಟ್ಟುಕೊಳ್ಳುವಷ್ಟು ತಾಕತ್ತು, ಅವಕಾಶ ಎರಡೂ ಇವರಿಗಿವೆ. ಈ ಅರ್ಥ ಬರುವಂತಹ ಮಾತುಗಳನ್ನು ಗಾಡ್ಗಿಳ್ ಮತ್ತು ಗುಹಾ ಒಂದೆಡೆ ಹೇಳಿದ್ದಾರೆ.

ಕಂಬಾರರು ಇನ್ನೊಂದೆಡೆ ಹೇಳಿದ್ದಾರೆ :

ಸೂರ್ಯ ತಿಳಿದಿರಬೇಕು ಬೆಳಗೊ ಕರ್ತವ್ಯವನು
ತಿಳಿಯದಿದ್ದರೆ ಅವನ ಗೊಡವೆ ಬೇಡ.
ಸೂರ್ಯ ಇರದಿದ್ದರೂ ಹಸಿರು ತಿಳಿದಿರಬೇಕು
ಬಿರಿದು ಹಣ್ಣಾಗುವ ಪವಾಡವನ್ನ.

ಇವನ್ನೆಲ್ಲಾ ಗ್ರಹಿಸುವ ಮನಃಸ್ಥಿತಿ ನಮ್ಮದಾಗಲಿ. ದೊರೆಯ ದೃಷ್ಟಿಕೋನ ರೂಪಿಸಲು ಇದು ನೆರವಾಗುತ್ತದೆ. ದೊರೆಗೆ ದೃಷ್ಟಿಮಾಂದ್ಯವಿದ್ದರೆ ಪೊರೆ ತೆಗೆಯಲು ಕೋಚಬಾಂಬಾದ ಜನ ನಮಗೆ ಮಾದರಿಯಾಗಿದ್ದಾರೆ.

ಆದರೆ ಆ ಎಚ್ಚರ, ಕನಸು ಮತ್ತು ಪ್ರಾಮಾಣಿಕ ಕ್ರಿಯಾಶೀಲತೆಯ ಬಗ್ಗೆ ನಮಗೆ ನಾವೇ ಖಚಿತಪಡಿಸಿಕೊಳ್ಳುವುದು ಒಳ್ಳೆಯದು. ಅಲ್ಲಮನ ಪಾರಮಾರ್ಥಿಕ ಅರ್ಥ ಏನಾದರಾಗಿರಲಿ, ನಮ್ಮ ಪಾಲಿಗೆ 'ಅರಸು-ಪ್ರಧಾನ-ಮಂತ್ರಿ ಮೂವರ ಮುಂದುಗೆಡಿಸಿದ ಬಲ್ಲಿದ ತಳವಾರನಾಗಲು' ಇವು ಮಾತ್ರ ನಮಗೆ ನೆರವಾಗಬಲ್ಲವು, ಆ 'ನವಸಾಸಿರ ಮಂದಿಯ ಕೊಂದುಳಿದು ಗುಹೇಶ್ವರನ ಮೆಚ್ಚಿಸಬಲ್ಲವು !'

□

ನದೀಮುಖ

ಡಾ. ಎಚ್. ಎಲ್. ಪುಷ್ಪ

೧

ಹಿಮಾಚ್ಛಾದಿತ ಸುತ್ತು ಸುತ್ತು
ಬಳಸಿನ ಹಾದಿ
ಕೊಂಡೊಯ್ಯುತಿದೆ ಬೆಟ್ಟದ ತುದಿಯೆಡೆಗೆ
ಅಗೋ ಆ ಮೇಲಿನ ನಗರ ಗ್ಯಾಂಗ್‌ಟಾಕ್ ಕಡೆಗೆ
ಆ ಸ್ವರ್ಗ ಸೀಮೆಯೆಡೆಗೆ

ಸ್ವರ್ಗವೆಂದರೆ ಸೋಮರಸ
ಅಗಣಿತ ಅಪ್ಸರೆಯರು, ಇಳಿಬಿದ್ದ
ಸೆರಗು, ಹೊರಸೂಸುವ ಯೌವನ
ಪಳ್ಳಕೊಳ್ಳಗಳಲ್ಲಿ ತೇಲುವ ಆಭರಣ
ಮಾನಸ ಸರೋವರದಲ್ಲಿ ನಿತ್ಯ
ಮುಳುಗಿ ಏಳುವ ದೇವತೆಗಳಿಗೆ
ಹಸಿವಿಲ್ಲ, ಅನ್ನ ಆಹಾರಗಳಿಲ್ಲ
ಬರಿಯ ಮೈಥುನ, ಅನಂಗ ಲೀಲೆ.

ಹಿಮವೆಂದರೆ, ಯಾರಿಗೆ ಇಷ್ಟವಿಲ್ಲ
ಹಿಮಗಟ್ಟುವ ಪ್ರಕೃತಿ, ಹಿಮಗಟ್ಟುವ ಮೈ
ಆದರೇಕೆ ಈ ಮನಸ್ಸು ಜಡವಾಗದೆ ಹಾರಾಡುತ್ತಿದೆ.
ಶರೀರದೊಳಗೆ ಮೂಡಿದ ಗುರುತಿಲ್ಲದ

ಆ ಹೆಜ್ಜೆಗಳ ನಯ ಹೇಳಲು ಬಾರದ್ದು.
ಮುಟ್ಟಿದರೆ ಮುನಿವ ಗಿಡಗಳೇ ದಾರಿಯುದ್ದಕ್ಕೂ
ಹರಡಿ, ಈ ಹಸಿರ ಹಾದಿಯಲಿ
ಎಲ್ಲೆಲ್ಲೂ ಬಚ್ಚಿಟ್ಟ ಕ್ಯಾಮರಾಗಳು
ಇದ್ದಕ್ಕಿದ್ದಂತೆ ಕಣ್ಣು ಮಿಟುಕಿಸಿ
ಬಚ್ಚಿಡಲು ಬಾರದ ಎಲ್ಲಾ ಸತ್ಯಗಳು
ಬಟಾ ಬಯಲಲಿ ಬೆಳಕ ಎದುರಿಸಲಾರದೆ
ಮೈ ತೆರೆದುಕೊಂಡಿವೆ ಏನನ್ನೂ ಹೊದ್ದುಕೊಳ್ಳಲಾರದೆ
೨
ಸೂತ್ರಕಿತ್ತು ಪಟಪಟನೆ ಆಕಾಶದೆಡೆಗೆ
ಹಾರುವ ಗಾಳಿಪಟಗಳಿಗೆ ಕೇಂದ್ರವಿಲ್ಲ
ನಾದಬಿಂದುವಿಲ್ಲ, ಬರಿದೆ ಸಡಗರ
ಈ ನದಿ, ಮದಮತ್ತಗಜಗಾಮಿನಿ
ಒಂದೇ ಸಮನೆ ಹರಿಯುತ್ತಿದ್ದಾಳೆ ಸಳ, ಸಳ
ಆವರಿಸಿ ಎಲ್ಲದರ ಮೈಯಮೇಲೆ.
ಅಹಂಕಾರವಿದೆ, ಆ ನಡಿಗೆಯಲ್ಲಿ
ಅಪ್ಪಳಿಸುವ ಎಲ್ಲ ಮಾತು ಚೂರಾಗಿದೆ
ಒಡೆದು ಹೋದ ಗಾಜಿನಂತೆ.
ಎಳೆದೊಯ್ಯುತ್ತಾಳೆ ಆಳಕ್ಕೆ, ಇನ್ನೂ ಆಳಕ್ಕೆ
ಗಿರಗಿರನೆ ತಿರುಗಿಸಿ ತನ್ನ ಹೊಕ್ಕಳಿನಾಳಕ್ಕೆ
ಮತ್ತೆ ತನ್ನ ಗರ್ಭದೊಳಕ್ಕೆ ಸದ್ದಿಲ್ಲದೆ
ಅಂಟಿಸುತ್ತಿದ್ದಾಳೆ ಅದೇ ಬೇರಿಗೆ,
ರೆಕ್ಕೆ ಪುಕ್ಕ ಕಿತ್ತ ಹದನಾದ ಹೆಣ್ಣು ಕೋಳಿಯಲ್ಲ
ಇವಳು, ಹರಿದೆಡೆಯೆಲ್ಲ ಇವಳ ಹಾದಿ
ಇವಳದೇ ನಡೆ, ಇವಳೆದುರು ನಿಲ್ಲುವ ಕಗ್ಗಲ್ಲು ಯಾವುದು ?

ಕುಸಿವ ಹಾದಿಯಲ್ಲಿ, ಜಾರುಬಂಡೆಯಂತಹ ಮಣ್ಣು,
ಉಸಿರು ಕಳಕೊಂಡ ಬೆಟ್ಟಗಳು
ಜೀಪು ದೇಕುತ್ತ ನಿಟ್ಟುಸಿರುಗೆರೆಯುತ್ತಿದೆ
ಮುಂದೆ ಸಾಗಲಾರದೆ.

ನೊರೆ ನೊರೆ ಚಿಮ್ಮಿಸುತ್ತಾ ಈ ಮದಿರೆ
ತೆರೆದ ಬಾಹುಗಳ ಕೈಗೆ ಸಿಗದೆ
ಪಟಪಟ ಬಡಿಯುತ್ತಾ ಸೆರಗು
ಹರಿಯುತ್ತಿದ್ದಾಳೆ ತನ್ನದೇ ಅದೇ, ಅದೇ ಗತಿಯಲ್ಲಿ
ನಿರ್ಲಿಪ್ತ ನಿರ್ಲಕ್ಷದಲ್ಲಿ.

೩

ಪುರಾತನ ಗ್ಯಾಂಗ್‌ಟಾಕ್‌ನ ನಗರದ ಎಲ್ಲ ದೇಗುಲಗಳ
ಹಣತೆ ಉರಿಯುತಿದೆ ಕಮಟು ವಾಸನೆಯಲ್ಲಿ
ತರತರಹದ ಧೂಪ, ಅಗರುಬತ್ತಿಗಳ ನಡುವೆ
ಉಸಿರುಕಟ್ಟಿದ ಬುದ್ಧ ದಂಗು ಬಡೆದು
ನೋಡುತ್ತಿದ್ದಾನೆ ಈ ಇವಳ ನಿಶ್ಚಿಂತ ಹರಿದಾಟದ ಓಟ

ಹಳ್ಳಕೊಳ್ಳಗಳಲ್ಲಿ, ಕಾಡು ಬೆಟ್ಟಗಳಲ್ಲಿ
ಚಿಮ್ಮಿ, ಭೋರ್ಗರೆವ ಬಿಡುಬೀಸಿನ
ಈ ಹಳ್ಳಿಯ ಹೆಣ್ಣು ತಂಬಾಕು ಜಗಿಯುತ್ತಾ,
ತನ್ನ ಮೂಗುತಿಯ ನತ್ತನ್ನು ತಿರುವುತ್ತಾ
ಎಲೆ ಸಂಚಿಯಲ್ಲಿ ಗೋಟಡಿಕೆ ಹುಡುಕುತ್ತಾ
ಕಾಲಂದಿಗೆ ಬಿಗುವಿನ ಹೆಜ್ಜೆಯೂರುತ್ತಾ
ಅರ್ಧಮುಳುಗಿ ಅರ್ಧ ಹರಿವ ಮೀನುಗಳ ಅಣಕಿಸುತ್ತಾ
ಮೊಸಳೆ ಹಾವುಗಳಿಗೆ ಆಹ್ವಾನ ಕೊಡುತ್ತ
ಹರಿಯುತ್ತಿದ್ದಾಳೆ, ಎಲ್ಲ ತೇಲಿಸುತ್ತಾ, ಮುಳುಗಿಸುತ್ತಾ.

ಕಣ್ಣೀರ ಒಕುಳಿಯಲ್ಲಿ ಗಲ ಗಲ ಸಾಗುತ್ತಾ
ಸತ್ತ ದನಕರುಗಳ, ಮರದಿಮ್ಮಿಗಳ, ಹೆಮ್ಮರಗಳ ತಾನೇ ತಳ್ಳುತ್ತಾ
ಹೆಣ್ಣೆಂಬುದು ಬರೀ ಸುಳ್ಳಿದು, ಹೆಣ್ಣಲ್ಲ
ಎಲ್ಲ ಪ್ರಕೃತಿ ಸತ್ಯಗಳ ಕೆದಕಿ ನೋಡುತ್ತಾ
ಸಾವು ನೋವುಗಳಲ್ಲಿ ಸಕಲ ಜೀವವ ತೇಯುತ್ತಾ
ತಾಯ್ತನ, ಒಡಲು, ಗರ್ಭ
ಎಲ್ಲವನ್ನು ಒಪ್ಪುತ್ತಾ, ಎಲ್ಲವನ್ನು ಧಿಕ್ಕರಿಸುತ್ತಾ
ತಾಯಿ, ಮಹಾಮಾಯಿ
ದಹಿಸುತ್ತಾ ಒಳಗೊಳಗೆ ಓರೆ ಹಚ್ಚಿ ನೋಡುತ್ತಿದ್ದಾಳೆ.

ಹೆಣ್ಣೆಂಬ ಶಬುದಕ್ಕೆ ಹೊಸ ಅರ್ಥ ಹುಡುಕುತ್ತಿದ್ದಾಳೆ.
ಹೆಣ್ಣೆಂಬುವ ಮಾತು ಸತ್ಯವಾಗಿದ್ದರೆ ಇವಳು ಪ್ರಶಾಂತೆ.
ಸಿಟ್ಟಿಗೆದ್ದರೆ ಗುಡಿ ಗುಡಾರಗಳ ಲಯಗೊಳಿಸಿ
ಸಿಕ್ಕ ಸಿಕ್ಕಿದ್ದನ್ನು ನುಂಗಿ, ತೇಗಿ
ಸಾಗುವ ಮಹಾಮಾರಿ
ಎಲ್ಲ ಸೆಳೆವ ಮೋಹಗಳ ಕಿತ್ತು, ಮಾಂಸದಿಂದ ಬೇರ್ಪಡಿಸಿ
ಮಂತ್ರವಾದಿಯಂತೆ ಸೆಳೆದೊಯ್ಯುತ್ತಾಳೆ
ತನ್ನ ಅನೂಹ್ಯ ದಾರಿಯೊಂದಿಗೆ.
ಕಿಂದರ ಜೋಗಿಯಂತೆ ಬಚ್ಚಿಡುತ್ತಾಳೆ
ಎಲ್ಲೋ ಇರುವ ಗುಹೆಗಳಲ್ಲಿ, ತವರುಮನೆಯಲ್ಲಿ
ತವನಿಧಿಯ ಹುಡುಕುವ ತಾಯ ಕರುಳಿನಂತೆ.

೪

ಸ್ವಚ್ಛ, ಅಚ್ಚ ಬಿಳುಪಿನ ಮರಳ ರಾಶಿಯ ಮೇಲೆ
ಗಾಜಿನ ತೆರೆಯಂತೆ ಸರಿಯುತ್ತಾಳೆ
ಸ್ತಬ್ಧಳಾಗುತ್ತಾಳೆ ಇದ್ದಕ್ಕಿದ್ದಂತೆ
ಪ್ರಿಯನ ತೋಳ್ತೆಕ್ಕೆಯ ನೆನೆದು
ಚಿರವಿರಹಿಣಿಯಂತೆ ನಿಟ್ಟುಸಿರು ಬಿಡುತ್ತಾ
ಸುಂದರ ನೆರಿಗೆಯ ಚಿಮ್ಮುತ್ತಾ ಮತ್ತೆ ಸಾಗುತ್ತಾಳೆ
ಹಾರುವ ಬಿಳಿಮೋಡಗಳ ಸೆಳೆದು ತನ್ನ ಸೆರಗಾಗಿಸಿಕೊಂಡು
ಎಲ್ಲ ಬೇಲಿಯ ಹೂವ ಬಾಚಿ
ಮುಡಿಗೇರಿಸಿಕೊಳ್ಳುತ್ತಾಳೆ
ತನ್ನದೇ ಮಡಿಲಿಗೆ ಉಡಿ ತುಂಬಿಸಿಕೊಳ್ಳುತ್ತಾ,
ಬರುವ ಪ್ರಿಯನ ದಿಬ್ಬಣಕ್ಕೆ ಕಾಯುತ್ತಿದ್ದಾಳೆ

೫

ಕಾರುತ್ತಿದ್ದಾಳೆ ಬಸುರಿ, ಚೊಚ್ಚಲಿನ ಪಿತ್ತ ಕೆರಳಿ
ಕಾರುತ್ತಿದ್ದಾಳೆ ಎಲ್ಲೆಂದರಲ್ಲಿ ಬಕ ಬಕನೆ
ಹೊಟ್ಟೆಯೊಳಗಿನ ಎಲ್ಲ ಜೀವಿಗಳ ಹೊರಕ್ಕೆ ಮತ್ತು ಒಳಕ್ಕೆ
ಕೈಕಾಲು ಆಡಿಸುವ ಅಸಂಖ್ಯಾತ ಪಿಂಡಗಳು
ದಿನ ದಿನವೂ ಬೆಳೆಯುತ್ತಿವೆ

ಗರ್ಭಪಾತದ ಭಯವೇ ಇಲ್ಲ ಅವಳಿಗೆ
ಮುಟ್ಟಿದ್ದೆಲ್ಲಾ ಚಿನ್ನ, ಬರಿಯ ಜೀವಂತ ಸಂತಾನ
ಯಾವ ಕಳಂಕ, ಬೈಗುಳ
ಗಂಡಂದಿರ ಕಳಕೊಂಡ ಹೆಂಸಗರ ಶಾಪ
ತಟ್ಟಲಾರದು ಅವಳನ್ನು
ನಿರಂತರ ಸೃಷ್ಟಿಕ್ರಿಯೆ, ಜೀವಪೋಷಣೆ
ಭಯವಿಲ್ಲ ಬೈಗುಳಗಳಿಗೆ, ನೋವಿಲ್ಲ ಸಿಗದ ನಲಿವುಗಳಿಗೆ
ತಿಮಿಂಗಲ ಗರ್ಭದಲ್ಲಿ ಎಲ್ಲವೂ ಮಟಾಮಾಯ.

ಅಲ್ಲಲ್ಲಿ ಮರಗಳ ನಡುವೆ ಇಣುಕುವ
ಸೂರ್ಯನಿಗೆ ಹೊರಬರಲು ಭಯ
ದೂರ ದೂರವೇ ನಿಂತು ಕದ್ದು ನೋಡುತ್ತಾನೆ
ತನ್ನಿನಿಯಳ ಗರ್ಭ ಸಂಭ್ರಮ, ಮಾರಣ ಹೋಮ
ನಡು ಮುರಿದ ಅವನನ್ನು
ದರ ದರನೆ ಎಳೆದು ನಿರಿಗೆಯೊಳಗೆ ಬಚ್ಚಿಟ್ಟುಕೊಳ್ಳುತ್ತಾಳೆ
ಮುಳ್ಳು ಕಂಟಿಗಳ ಹೆಣಿಗೆಯಾಗಿಸಿ ಮುಡಿ ಕಟ್ಟಿಕೊಳ್ಳುತ್ತಾಳೆ
ಮಂದ ಬೆಳಕಿನಲ್ಲಿ ಕಣ್ಣು ಬಿಡುತ್ತಿದ್ದಾನೆ ಚಂದ್ರ
ಸೂರ್ಯನನ್ನೇ ಅರೆದು ಕುಡಿದವಳಿಗೆ ಶೀತಲ ಕಿರಣಗಳದೇನು ಲೆಕ್ಕ
ಎಳೆದು ಬೊಗಳಲಾರದ ಕುನ್ನಿಯ ಮಾಡಿ
ಸೆರಗಿನ ಮತ್ತೊಂದು ಕಡೆ ಕಟ್ಟಿಕೊಂಡಿದ್ದಾಳೆ.
ಆಹಾ ಸೂರ್ಯ, ಏನಾದವಯ್ಯ
ನಿನ್ನ ಉರಿವ ಕಿರಣ, ಉರಿವ ಮುಖ.
ಓಹೋ ಚಂದ್ರ, ಚಂದಮಾಮ
ವಿರಹಿಣಿಯ ಸುಡುವ ನಿನ್ನ ತಣ್ಣನೆಯ
ಕಿರಣಗಳಿಗೆ ಯಾವ ಮಂಕು ಬಡಿಯಿತಯ್ಯ.

ಸೊಂಟದ ಎಲೆಸಂಚಿಯ ಸುಣ್ಣಗಾಯಿಂದ
ಸುಣ್ಣಸವರುತ್ತಾ, ಎಲೆ ಅಗಿಯುತ್ತಾ
ಘಾಟುವಾಸನೆಯ ಗಮಲಲ್ಲಿ
ಆಕಳಿಸುತ್ತಾ ಮೈಮರೆಯುತ್ತಾಳೆ.
ಸೂರ್ಯ, ಚಂದ್ರರೆಂಬ ಪುಂಡರು

ಎಲ್ಲಿ ಮುದುಡಿದರಯ್ಯ ಈ ಚಿರಯೌವ್ವನೆಯ ಮುಂದೆ
ಗಲಗಲನೆ ಸಾಗುತ್ತಿದ್ದಾಳೆ ಎಂದಿನಂತೆ
ಅದೇ ಮದಮತ್ತ ಗತಿಯಲ್ಲಿ.

೬

ಬುದ್ಧ ನಗುತ್ತಾನೆ ಗ್ಯಾಂಗ್‌ಟೆಕ್‌ನ
ನೆತ್ತಿಯ ಮೇಲೆ ತಾನೊಲ್ಲದ ದೇಗುಲಗಳಿಂದ
ಬೆಳಕಿಲ್ಲದ ಕೊಠಡಿಯಲ್ಲಿ
ಹೊಗೆ ಬತ್ತಿಯ ಹೊಗೆಯಲ್ಲಿ ನರಳಿ

ಹೆಣ್ಣು ಮಾಯೆಯಲ್ಲ, ಮಿಥ್ಯೆಯಲ್ಲ
ಮೈಲೆ, ಮುಡಿ ಸೂತಕಗಳ ನಡುವೆ
ಎಲ್ಲರನೂ ತೂಗಿ ಅಂಗೈಯ
ಬೆರಳ ಸಂದಿಯಲಿ ಹರಿಯಬಿಟ್ಟರೂ
ನದಿಯಾಗೇ ಉಳಿದು
ಎಲ್ಲ ಜೀವಕೂ ಉಸಿರಾದವಳು.

ಎಲ್ಲ ಹಿಮಪರ್ವತಗಳು ಆಗಾಗ ಮೈತೋರಿ
ಕರಗಿದರೂ, ಮತ್ತೆ ಕಲ್ಲಾಗುತ್ತಾರೆ
ಕರಗುವ ಮೈಯೊಂದಿಗೇ ಹರಿವ ನದಿಯ ಕಂಡು
ನಿಟ್ಟುಸಿರುಬಿಡುತ್ತಾರೆ
ಎಷ್ಟೋ ವರ್ಷಗಳಿಂದ ಹರಿವ ಈ ಸುಂದರಿ
ಆಕಾಶದ ನಕ್ಷತ್ರಗಳ ಹಿಡಿದು
ಚಿಗುರು ಬೆರಳಲ್ಲಿ ಕಸೂತಿ ಮಾಡಿದ
ಸೆರಗ ಹೊದ್ದುಕೊಳ್ಳುತ್ತಾಳೆ ಮೋಹದಿಂದ
ಸೂರ್ಯನೊಡನೆ ಉರಿಯುತ್ತಾ
ಚಂದ್ರನೊಂದಿಗೆ ಉಕ್ಕೇರುತ್ತಾ
ಪಾದರಸದ ಓಟದಲಿ ಮೈಮರೆತಿದ್ದಾಳೆ.
ಎಷ್ಟೋ ವರ್ಷಗಳ ಈ ತುಂಬು ಯೌವ್ವನ
ಹರಿಯುತ್ತಿದೆ ಆಕಾರ ಕೆಡದಂತೆ
ಮೈ ಬಿಸುಪು ಆರದಂತೆ
ಮೀನಖಂಡಗಳ ಹೊಳಪು ಮಾಸದಂತೆ

ಲಜ್ಜೆಯೆಂಬುದು ಬರಿ ಶಬ್ದದ ಸಂಭ್ರಮ
ನಿರ್ವಾಣವೆಂಬುದು ಕಲ್ಪನೆಯ ಸೋಗು
ಅದೇ ಜಲ, ಅದೇ ಸರಿವ ಪಥ
ಎಲ್ಲೋ ಹುಟ್ಟಿ, ಎಲ್ಲೋ ಮೈತುಂಬಿ
ಮತ್ತೆಲ್ಲೋ ಗರ್ಭಧರಿಸಿ
ಹೊಟ್ಟೆಯಲ್ಲಿನ ಕೂಸು ಮಿಡುಕಿದರೂ
ಮಿದು ಪಾದದ ಒದೆತದಿಂದ
ಗರ್ಭ ಅಂಕುಡೊಂಕಾದರೂ ಈ ಬಸುರಿಗೆಷ್ಟು
ವೇಗದ ಓಟ, ಸರ ಸರ ಹಾವ ನಡಿಗೆ

೭

ಮಳೆ ಹನಿಯ ಭಾರಕ್ಕೆ ಬಾಗಿದರೂ
ನೆಲವ ಚುಂಬಿಸಿ ತಟ್ಟನೆ ನಿಲ್ಲುತ್ತವೆ ಗಿಡಗಳು
ಗಂಡನಿದ್ದೂ ನಲ್ಲನ ನಲಿವಿಲ್ಲದ ಹೆಣ್ಣು
ಗೂಡಿದ್ದರೂ, ಬೆಚ್ಚನೆ ಕಾವಿದ್ದರೂ
ಚಿರವಿರಹಿಣಿಯಾಗಿ ಉರಿಯುತ್ತಾಳೆ
ತನ್ನೊಳಗೆ ದಹಿಸಿ ಬೂದಿಯಾಗುತ್ತಾಳೆ
ತಾನೇ ಹಾಕಿಕೊಂಡ ಲಕ್ಷ್ಮಣರೇಖೆಯ
ದಾಟಿ ಬಯಲ ಹಾಡಾಗುತ್ತಾಳೆ.

ಎಲ್ಲ ಸಾಮ್ರಾಜ್ಯಗಳು ತಲೆಯೆತ್ತಿದ್ದು ನದಿಯ ನಾಡಿನಲ್ಲೇ
ಉರುಳಿ ಬಿದ್ದದ್ದು ಇದೇ ನದಿಯ ನಾಡಿನಲ್ಲೇ
ಶೀಲಕ್ಕೊಂದು ದಾಂಪತ್ಯಕ್ಕೊಂದು
ಗರ್ಭಕ್ಕೊಂದು, ಗೋರಿಗೊಂದು
ಮಾದರಿಗಳುಟ್ಟಿದ್ದು ಇಲ್ಲೇ ಈ ನದಿಯ ಓಟವಲ್ಲೆ
ಋಷಿಮೂಲ, ಹೆಣ್ಣಿನ ಮೂಲ, ನದೀ ಮೂಲದ
ವ್ಯಾಖ್ಯಾನಗಳು ಬರೆಯಲ್ಪಟ್ಟಿದ್ದು ಇಲ್ಲೇ
ಈ ನದಿಯ ನಾಡಿನಲ್ಲೇ.

ದುಮ್ಮಿಕ್ಕುವ ಜಲದಾಟದಲ್ಲಿ
ಯಾವ ಮಾತೂ ಉಳಿಯುವುದಿಲ್ಲ
ಮಲಿನತೆಗೆ ಹೊಸ ವ್ಯಾಖ್ಯಾನ ಹುಟ್ಟಿ

ಹೆಣ್ಣೆಂದರೆ ನದಿ, ನದಿಯೆಂದರೆ ಹೆಣ್ಣು
ಎಲ್ಲಾ ಗಡಿರೇಖೆಗಳು ಬರಿ ಮಿಥ್ಯೆ
ಗುಪ್ತ ಗಾಮಿನಿಯೊಳಗೆ ಬಚ್ಚಿಟ್ಟ
ರಾಶಿ ರಾಶಿ ಕಾಮನಬಿಲ್ಲುಗಳು
ಆಕಾರವಿಲ್ಲದ ಮುತ್ತು, ಹವಳಗಳು.

□

ಎಚ್. ಎಲ್. ಪುಷ್ಪ, ೩೭/೨ಎ, 'ನಿಸರ್ಗ' ನಾಗರಬಾವಿ ರಸ್ತೆ, ವಿಜಯನಗರ,
ಬೆಂಗಳೂರು - ೫೬೦ ೦೪೦. ದೂರವಾಣಿ : ೫೭೬೦೬೪೮೮

ತಾಜುಮಾರ ನಾಲ್ಕು ಕವಿತೆಗಳು

೧

ಹೆಣೆದಿದೆ

ಜಗ-ಜಗ್ಗಿಸುವ ಬೆಳಕಿನಲ್ಲಿ
ಆದರೆ ಹಿತ್ತಲಲ್ಲಿ
ಬೆಣ್ಣೆ ರಪ್ತು ಆಗಲಿ
ಕಾನೂನು ಲೆಕ್ಕದಲಿ
ಬೆಣ್ಣೆಯ ಹಿಂದೆ
ಬೆವರು ಸುರಿದಿದೆ
ಉಪ್ಪು ನೀರದು
ಗಟ್ಟಿ ಮಾಡಬಹುದು
ಕಾನೂನು ಲೆಕ್ಕದಲ್ಲಿ
ಹಿತ್ತಲಿಗೂ ಬೆಳಕು
ಕೊಡಬಹುದು ನೀರಿನ
ಮೇಲೆ ಗುಳ್ಳೆ ರಫ್ತಿನಲ್ಲಿ
ಹೋದವು ಆಮದಾಗಿ
ಬಂದವು ಗಿಡುಗನ
ಹೆಜ್ಜೆ ಗುರುತು ಹಳೆಯ
ದಿನಗಳು ಮರುಳಬಹುದು
ಸುತ್ತ ಬಲೆಯ ಹೆಣೆದಿದೆ
ಕತ್ತಲೆ-ಬೆಳಕು ಜಾಸ್ತಿ ಇಲ್ಲಿ

ಸೂರ್ಯ-ಚಂದ್ರರು ಏಕೆ ?
ಭೂಮಿ ಮೇಲೆ ಹಳೆಯ
ಬಾವುಟ ಏರಬಹುದು
ಕಳೆದ ದಿನದ ನೆನಪಿನಲ್ಲಿ
ಪಾರಿವಾಳದ ಜಾಗದಲ್ಲಿ ಎಲ್ಲಾವು ಆಮದು-ರಫ್ತಿಗಿದೆ
ಗಿಡುಗನ ನೆರಳಿನಲ್ಲಿ

೨
ಕೆಂಪು
ಇತ್ತೀಚೆಗೆ ಮೇಲ್ಮನೆಯ ಗದ್ದುಗೆ
ಯವರಿಗೆ ಬಹಳ ಬೇಸರವಂತೆ
ಆಕಳಿಕೆ ಬಂದು ಮೈಮುರಿದು
ಆಕಾಶ ನೋಡಿದರಂತೆ
ತಿಳಿನೀಲಿ ಆಕಾಶ ನೋಡಿ
ಉತ್ಸಾಹದ ಬುಗ್ಗೆ ಒಡೆದು
ಮತ್ತೆ ಬಿಸಿ ರಕ್ತದ ಯುವಕರನ್ನು
ಕೂಗಿ ಕರೆದರಂತೆ
ಹೊಸದನ್ನು ಕಟ್ಟಬೇಕು
ಗುದ್ದಲಿ-ಇಟ್ಟಿಗೆಯ
ತನ್ನಿ ಎಂದು
ಗುದ್ದಲಿ ಬಣ್ಣ ಅದೇ ಸಾಕು
ಇಟ್ಟಿಗೆಯನ್ನು ಗುಜರಾತಿಗೆ
ಅದ್ದಿ ತನ್ನಿ ಅಲ್ಲಿ ಕೆಂಪು ಬಣ್ಣ ಬಹಳ
ಹರಿಯುತ್ತಿದೆ ಆದ್ದರಿಂದ
ತಾಜ್ ಮಹಲ್‌ಗೂ ಬಣ್ಣ ಕೊಡಬಹುದೆಂದು.

೩
ಗೋ ಮಾತೆ
ಮೇಲ್‌ಮನೆಯ ಗದ್ದುಗೆಯವರಿಗೆ
ಗೋವುಗಳ ಮೇಲೆ ಬಹಳ

ಪ್ರೀತಿಯಂತೆ, ಗೋವುಗಳ
ಹತ್ಯೆಯ ಬಗ್ಗೆ ಕೇಳಿ
ಎಂಟ್ಟತ್ತು ಸಾರಿ ಹೃದಯಾಘಾತವಂತೆ
ಮೊನ್ನೆ ಹೃದಯ ಮತ್ತೆ ಮರಳಿ
ಬಂತಂತೆ

ಮೇಲ್ಮನೆಯಲ್ಲೇನೋ ಮೊನ್ನೆ
ಮೀಟಿಂಗಂತೆ. ಬೆಳಗೆದ್ದು ನೀವು
ಗೋಹತ್ಯೆ ನಿಷೇಧಿಸುವ
ಭಿತ್ತಿ ಪತ್ರ ಅಂಟಿಸಬೇಕು.
ಉತ್ಸಾಹದ ಬಿಸಿ ರಕ್ತ
ಬೀದಿ-ಬೀದಿಯಲ್ಲಿ ಹರಿದಾಡಿ
ರಾತ್ರಿ ಮೇಲ್ಮನೆಗೆ ಸೇರಿತ್ತು
ದಣಿವಾರಿಸಿಕೊಳ್ಳಲು
ಒಂದಿಷ್ಟು ಮಧುಪಾನ-ಕೋಳಿ ಬಿರಿಯಾನಿ
ದನದ ಕಬಾಬು ರೆಡಿಯಾಗಿತ್ತು
ಉತ್ಸಾಹದ ಬಿಸಿರಕ್ತ ಪುಟಿದೆದ್ದು
ಕೇಳಿತು 'ಇದೇನು ದನದ ಕಬಾಬು ?'
ಮೇಲ್ಮನೆಯ ಗದ್ದುಗೆಯವರು
ಆಕಾಶವಾಣಿಯಂತೆ ಹೇಳಿದರು
ಮೂರ್ಖ, ಇದು ದನದ ಹತ್ಯೆ
ಗೋಹತ್ಯೆಯಲ್ಲ.

೪
ತರುಣ

ದೂರ ತೀರದಲ್ಲಿ ನವಿಲ
ಬಾನಿನಲ್ಲಿ ಕೆಂಡಸಂಪಿಗೆ
ಎಳೆಯಿತು ತರುಣನ
ಮುಳ್ಳ ಬೇಲಿಯಲ್ಲಿ

ಅಲ್ಲಿ ಬದುಕು ಸವೆಯುವುದು
ಹೊಸಲೇಪಗೊಳ್ಳುವುದು
ಹೊಚ್ಚ ಹೊಸ ಬ್ರಾಂಡಿನಲ್ಲಿ
ಗಡಿಯಾರದ ಕದ ತಟ್ಟಿರುವ
ಜೀವಕ್ಕೆ ಗೊತ್ತಾಗುವುದಿಲ್ಲ
ಸೊರಗಿದ ನಗರದ ಮೈಯಬಣ್ಣ
ಬೆಳಗಿಲ್ಲ ಸಂಜೆಯಿಲ್ಲ
ತೂಕಡಿಕೆಯ ಮಾತಿಲ್ಲ ಆಕಳಿಕೆಗೂ
ಜಾಗವಿಲ್ಲ ಈ ನೀಲ ಬಾನಿನಲ್ಲಿ
ನೂರಾರು ಕವಲೊಡೆದ ದಾರಿಗಳು
ಜಾರಿದರೆ ಬೀಳುವರು ಬೆಣ್ಣೆ ಮಾರುವ
ಪೇಟೆಯಲ್ಲಿ ಸುಣ್ಣದ ಪಾಲು
ತೆಗೆದು ಕಾನೂನು ಎದೆಯಲ್ಲಿ
ಉಕ್ಕಿ ಬರುವ ಸೈನ್ಯದಲ್ಲಿ
ಕನಸುಗಳೆಲ್ಲ ನೀರಪಾಲು
ಒಡಲ ಬಾಯಿಗಳು ಚೀರಿ
ಹೇಳುವುದು ನೀಲಿ ಬಾನಿನಲ್ಲಿ
ಚುಕ್ಕಿ ಹಿಡಿಯುವ ಅಂಚಿನಲ್ಲಿತ್ತು
ನನ್ನ ಒಡಲ ಬಳ್ಳಿ
ತಕ್ಕಡಿ ಹಿಡಿದು ಕಣ್ಣು ಮುಚ್ಚಿರುವ
ತಾಯಿಗೆ ತರುಣನ ತಾರುಣ್ಯ ಭಾರ
ಕೈ ಸೋತು ಬಿಟ್ಟಳು
ಕಾನೂನು ತುಂಬಿರುವ ತಟ್ಟೆಯಲ್ಲಿ
ಕೊನೆಯಲ್ಲಿ ತೆವಳುವುದು
ಬರಿ ಜೀವ ಬಿಳಿ ಬಟ್ಟೆ ಕ್ಯಾನ್ವಸ್‌ನಲ್ಲಿ
ಬಣ್ಣಗಳಿಲ್ಲದ ಲೋಕದಲ್ಲಿ

□

ಶ್ರೀಮತಿ ತಾಜುಮಾ, W/o ಇಕ್ಬಾಲ್ ಅಹಮದ್, ೬೪, ರಾಜಣ್ಣ ಗಾರ್ಡನ್, ರಾಜೀವ್ ಗಾಂಧಿ ರಸ್ತೆ,
ಜರಗನಹಳ್ಳಿ, ಬೆಂಗಳೂರು-೭೮.

ಸ್ಥಳೀಯ ಸಂಸ್ಕೃತಿ ಹಾಗೂ ವಿಶ್ವಾತ್ಮಕ ಚೌಕಟ್ಟುಗಳು : ಕುವೆಂಪು ಯುಗದ ಬಿಕ್ಕಟ್ಟುಗಳು

ಪ್ರೊ. ವಿ. ಚಂದ್ರಶೇಖರ ನಂಗಲಿ

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಜುಗಾರಿ ಕ್ರಾಸ್' ಬಿಡುಗಡೆಯಾಗಿ ಒಂದೆರಡು ತಿಂಗಳುಗಳೇ ಕಳೆದಿದ್ದವು. ನನ್ನ ಗೆಳೆಯರಾದ ಪ್ರೊಫೆಸರ್ ಒಬ್ಬರು ಇದನ್ನು ಓದಿದ್ದು, ನನ್ನೊಂದಿಗೆ ಪ್ರತಿಕ್ರಿಯಿಸುತ್ತಾ "ಇದೇನ್ರಿ ? ಇಷ್ಟು ಕೆಟ್ಟದಾಗಿದೆ; ಪತ್ತೇದಾರಿ ಕಾದಂಬರಿ ಬರೆದುಬಿಟ್ಟಿದ್ದಾರೆ"-ಎಂದು ಸಿಗರೇಟಿನ ಹೊಗೆಯುಗುಳಿದರು. ಇದೊಂದು ಪ್ರಸಂಗವಾದರೆ ಇನ್ನೊಂದು ಪ್ರಸಂಗ ಹೀಗಿದೆ : ಕೋಲಾರದ ಅಂತರಗಂಗೆ ಬೆಟ್ಟವನ್ನು ನನ್ನ ಗೆಳೆಯರೊಂದಿಗೆ ಏರುತ್ತಾ ಅಲೆದಾಡಿದ ನಂತರ ಹಿಂದಿರುಗುವುದಕ್ಕೆ ಮುಂಚೆ, ಮುಸ್ಸಂಜೆಯ ಹೊತ್ತಿನಲ್ಲಿ ಅಂತರಗಂಗೆಯ ದೇವಸ್ಥಾನದ ಮುಂದೆ, ಲೈಟುಕಂಬದ ಕೆಳಗೆ ಕುಳಿತುಕೊಂಡು 'ಜುಗಾರಿಕ್ರಾಸ್' ಕಾದಂಬರಿಯ ಒಂದು ಅಧ್ಯಾಯವಾದ ಮೇದರ ಬದುಕಿಗೆ ಸಂಬಂಧಪಟ್ಟ ಚಿತ್ರಣವನ್ನು ಗೆಳೆಯರಿಗಾಗಿ ಗಟ್ಟಿದನಿಯಲ್ಲಿ ಓದುತ್ತಿದ್ದೆ. ಆ ಮೆಟ್ಟಿಲು ಮಾರ್ಗದಲ್ಲಿ, ಬೆಟ್ಟದ ಮೇಲಿದ್ದ ಜನರು ತಲೆ ಮೇಲೆ ಭಾರ ಹೊತ್ತಿದ್ದು, ದೇವಸ್ಥಾನದ ಮುಂದೆ ಕೊಂಚಹೊತ್ತು ಕುಳಿತು ವಿಶ್ರಮಿಸಿಕೊಂಡು ಮತ್ತೆ ಭಾರ ಹೊತ್ತುಕೊಂಡು ಬೆಟ್ಟ ಏರುವುದೊಂದು ವಾಡಿಕೆ. ಈ ಪ್ರಕಾರ ಎದುರಿಗೆ ಕುಳಿತಿದ್ದ ಗಿರಿಜನರು ನನ್ನ ಓದನ್ನು ಕೇಳಿಸಿಕೊಳ್ಳುತ್ತಾ ಮೌನವಾಗಿದ್ದರು. ಆ ಚಿಕ್ಕ ಅಧ್ಯಾಯವನ್ನು ಓದಿ ಮುಗಿಸಿದ ಮೇಲೆ ಕೋಲಾರಕ್ಕೆ ಹಿಂದಿರುಗಲು ನಾವೆಲ್ಲ ಎದ್ದುನಿಂತೆವು. ಇದುವರೆಗೆ ಮೌನವಾಗಿ ಆಲಿಸುತ್ತಿದ್ದ ಆ ಗಿರಿಜನರು ನಮ್ಮನ್ನು ಕುರಿತು "ಸ್ವಾಮಿ ! ಅವನ್ಯಾರೋ ಕರೆಕ್ಟಾಗಿ ಬರೆದವ್ನೆ ! ಇದೆಲ್ಲ ಸರ್ಕಾರ ನಡೆಸೋವ್ರಿಗೆ ಗೊತ್ತಾಗಬೇಕು! ನಮ್ಮ ಕಷ್ಟ-ಸುಖ ಯಾರು ಕೇಳ್ತಾರೆ?" ಎಂದು ಉದ್ಗರಿಸಿದರು. ಈ ಇಬ್ಬಗೆಯ ಪ್ರತಿಕ್ರಿಯೆಗಳನ್ನು ನಾನಿಲ್ಲಿ ಉದ್ದೇಶಪೂರ್ವಕವಾಗಿ ಉದಾಹರಿಸಿದ್ದೇನೆ. ಬುದ್ಧಿಜೀವಿಗಳು ಮತ್ತು ಶ್ರಮಜೀವಿಗಳ ನಡುವಣ ಆಲೋಚನೆಗಳ ವ್ಯತ್ಯಾಸಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ. ತೇಜಸ್ವಿ ಕೃತಿಗೆ ಸಂಬಂಧಪಟ್ಟ ಈ ನಿದರ್ಶನ ಕುವೆಂಪು ಸಾಹಿತ್ಯಕ್ಕೂ ಬಹು ಚೆನ್ನಾಗಿ ಅನ್ವಯಿಸುತ್ತದೆ. ಕುವೆಂಪು ಅವರ 'ಮಲೆನಾಡಿನ ಚಿತ್ರಗಳು', ಎರಡು ಕಥಾಸಂಕಲನಗಳು, ಎರಡು ಕಾದಂಬರಿಗಳು, ಸರಳ

ಸುಂದರವಾದ 'ಹೀರೆಯ ಹೂವು' ಮುಂತಾದ ಆಯ್ದ ಕವಿತೆಗಳು, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಮತ್ತು ವಿಚಾರಕ್ರಾಂತಿಗೆ ಆಹ್ವಾನ ಎಂಬ ಭಾಷಣಗಳು ಇವಿಷ್ಟನ್ನು ಓದಲು ಬಲ್ಲ ಶ್ರೀ ಸಾಮಾನ್ಯರು: ಎಸ್‌ಎಸ್‌ಎಲ್‌ಸಿ-ಪಿಯುಸಿ ಪಾಸಾದವರು, ಡಿಗ್ರಿ ಪಡೆದವರು, ಬೇರೆ ಬೇರೆ ಟೆಕ್ನಿಕಲ್ ಕೋರ್ಸುಗಳನ್ನು ಮಾಡಿದವರು, ಡಾಕ್ಟರುಗಳು-ಇಂಜಿನಿಯರ್‌ಗಳು, ಲಾಯರ್‌ಗಳು, ವ್ಯಾಪಾರಿಗಳು, ಅಧಿಕಾರಿ ವರ್ಗದವರು, ಮುಂತಾದವರೆಲ್ಲರೂ ಓದಿಕೊಂಡು ಮನನ ಮಾಡಿಕೊಳ್ಳಬೇಕು. ನಮ್ಮ ತರುಣ ಜನಾಂಗದವರು ತಾರುಣ್ಯದ ಜೀವಕಾಂತಿ ಗಳಿಸಲು ಮೇಲೆ ಹೇಳಿದ ಕುವೆಂಪು ಸಾಹಿತ್ಯವನ್ನು ಓದಿಕೊಳ್ಳಬೇಕು. ಜೀವಪ್ರಭೆಯುಳ್ಳ ಮಿಂಚುಹುಳುವಿನಂತೆ ಮಿಂಚುವ ವ್ಯಕ್ತಿತ್ವವನ್ನು ಪಡೆಯಬೇಕೆಂದಿದ್ದರೆ ಕುವೆಂಪು ಅವರನ್ನು ಒಳಗೊಳ್ಳಬೇಕು. ಇದು ಸಾಧ್ಯವಾದಲ್ಲಿ ಇದೇ ನಿಜವಾಗಿಯೂ ಕುವೆಂಪು ಜನ್ಮಶತಮಾನೋತ್ಸವದ ಅರಿವಿನ ಆಚರಣೆಯಾಗುತ್ತದೆ. ಸಾಧಾರಣ ಜನರನ್ನು ಒಳಗೊಳ್ಳಲು ಕುವೆಂಪು ತಹತಹ ಪಟ್ಟಿದ್ದಾರೆ :

"....ಸಾಧಾರಣ ಜನರಿಂದ ನನ್ನ ಕೃತಿಗಳ ಪ್ರಶಂಸೆಯು ಬಂದಾಗ ನಾನು ಧನ್ಯನೆಂದು ಭಾವಿಸುತ್ತೇನೆ. ಪಾಂಡಿತ್ಯದ ವಕ್ರದೃಷ್ಟಿಯುಳ್ಳ ಮನೀಷಿಗಳ ಅಭಿಪ್ರಾಯ ಕೆಲವು ವೇಳೆ ಕೃತಿಯ ಯೋಗ್ಯತೆಯನ್ನು ಸರಿಯಾಗಿ ತಿಳಿಯಲಾರದು; ಅಸೂಯೆ-ಅಸಹನೆ-ಔದಾಸೀನ್ಯ-ಆದ್ಯತನದಲ್ಲಿ ತಿರಸ್ಕಾರ ಮೊದಲಾದ ಉಪಾಧಿಗಳಿಗೆ ವಶವಾಗಿ"... (ನೆನಪಿನ ದೋಣಿಯಲಿ, ಪು. ೧೦೧೯.)

ಕುವೆಂಪು ಅವರೊಂದಿಗೆ ಇಪ್ಪತ್ತನೆ ಶತಮಾನದುದ್ದಕ್ಕೂ ಬದುಕಿದ್ದ ಮತ್ತು ಬದುಕಿರುವ ಸಾಹಿತಿಗಳು ಅಥವಾ ಅಸಾಧಾರಣ ಜನರು ಕುವೆಂಪು ಸಾಹಿತ್ಯವನ್ನು ಕಡಿದು ಗುಡ್ಡೆ ಹಾಕಿದ್ದು ಸಾಕು ! ಇನ್ನು ಮುಂದೆ ಸ್ವತಃ ಕುವೆಂಪು ಅವರೇ ಆಶಿಸಿದಂತೆ ಸಾಧಾರಣ ಜನರು ಕುವೆಂಪು ಸಾಹಿತ್ಯವನ್ನು ಓದಿಕೊಂಡು ಬದುಕಿಗೆ ಬೇಕಾದ ಕಾಂತಿ ಮತ್ತು ಸತ್ವಗಳನ್ನು ಪಡೆಯಬೇಕು. ಕನ್ನಡದಲ್ಲಿ 'ಮರ ಹತ್ತಿದವನು ಇಳಿಯಲೇಬೇಕು' ಎಂಬ ಗಾದೆಯಿದೆ. ದೊಡ್ಡ ದೊಡ್ಡ ಸಾಹಿತಿಗಳು ಮತ್ತು ಪ್ರಸಿದ್ಧ ವಿಮರ್ಶಕರು ನೆಲವನ್ನು ಬಿಟ್ಟು ಮರ ಹತ್ತುವುದರಲ್ಲಿ ನಿಸ್ಸೀಮರೆನ್ನಬೇಕು. ಇವರುಗಳು ಕುವೆಂಪು ಸಾಹಿತ್ಯವೆಂಬ ಮರವನ್ನು ಹತ್ತಿ 'ಮರ ಕೋತಿ ಆಟ'ವನ್ನು ಮನಸ್ವೇಚ್ಛೆಯಾಗಿ ಆಡಿದ್ದಾರೆ; ಕೊಂಬೆ ರೆಂಬೆಗಳನ್ನು ಹಸಿರು ಸಿರಿಯನ್ನು ವಿಧ್ವಂಸಗೊಳಿಸಿದ್ದಾರೆ. ಇನ್ನು ಮುಂದೆ ಇವರಿಗೆಲ್ಲ 'ನೆಲ ಮುಟ್ಟುವ ಅಳ್ತಿ' (= ಪಂಪನ ಮಾತು) ಅನಿವಾರ್ಯವಾಗಿದೆ.

ಓದುವುದು ಕೂಡ ಒಂದು ಸೃಷ್ಟಿ ಕಾರ್ಯವೆಂದು ಬಲವಾಗಿ ನಂಬಿದ್ದ ಕುವೆಂಪು ತಮ್ಮ ಕಾದಂಬರಿಗಳನ್ನು 'ಕರತಲರಂಗಭೂಮಿ' ಎಂದು ಕರೆದಿದ್ದಾರಲ್ಲದೆ, ಓದುಗರು ಆತುರಪಡದೆ ಸಜೀವವಾಗಿ, ಸಚಿತ್ರವಾಗಿ ಓದುತ್ತಾ, ತಮ್ಮ ಪ್ರಜ್ಞೆಯಲ್ಲಿ ಪುನರ್ ಸೃಷ್ಟಿ ಮಾಡಿಕೊಳ್ಳಬೇಕೆಂದು ಕೋರಿದ್ದಾರೆ. ಇದನ್ನು ಸಾಧಾರಣ ಜನರು ಮಾತ್ರವಲ್ಲ ; ಅಸಾಧಾರಣ ಜನರು ಕೂಡ ಮನಸ್ಸಿನಲ್ಲಿಟ್ಟುಕೊಂಡಿರಬೇಕು. ನಾನು ಭಾಷಣ ಅಥವಾ ಬರೆಹಕ್ಕೆ ಮುಂಚೆ ನನ್ನ ಹೆಂಡತಿ-ಮಕ್ಕಳ ಹತ್ತಿರ ಕುಳಿತು ಚರ್ಚಿಸುತ್ತೇನೆ. ಇದರಿಂದ ನನಗೆ ಸಾಮಾನ್ಯ ಜನರ ಪ್ರತಿಕ್ರಿಯೆಗಳು ಎಂಥವು ಎಂಬುದು ಅರಿವಾಗುತ್ತದೆ. 'ಸ್ಥಳೀಯ ಸಂಸ್ಕೃತಿ ಹಾಗೂ ವಿಶ್ವಾತ್ಮಕ ಚೌಕಟ್ಟುಗಳು: ಕುವೆಂಪು ಯುಗದ ಬಿಕ್ಕಟ್ಟುಗಳು'- ಎಂಬ ಈ ಶೀರ್ಷಿಕೆ ಕುರಿತು ಬೆಂಗಳೂರಿನಲ್ಲಿ ಬಯೋ-ಟೆಕ್ನಾಲಜಿ ಓದುತ್ತಿರುವ ನನ್ನ ಮಗಳ ಹತ್ತಿರ ಪ್ರಸ್ತಾಪಿಸಿದೆ. ಅವಳಿಗೆ ಅದು ಅರ್ಥವಾಗಲಿಲ್ಲ. ಇದನ್ನು

ಅರ್ಥೈಸಲು ಕೇಳಿದಳು. ನಾನು ಕೊಂಚ ವಿವರಿಸಿದೆ. ನನ್ನ ಮನೋಧರ್ಮದ ಪರಿಚಯ ಅವಳಿಗಿದ್ದುದರಿಂದ ನಾನಿತ್ತ ವಿವರಣೆಯನ್ನು ಬೇಗನೆ ಗ್ರಹಿಸಿದಳು. ಆ ವಿವರಣೆಯನ್ನು ಇಲ್ಲಿರುವ ವಿದ್ವಜ್ಜನರ ಮತ್ತು ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ವಿದ್ಯಾರ್ಥಿಗಳ ಮುಂದೆ ಹೇಳಬಹುದೆನಿಸುತ್ತದೆ. ಮುಂದೆ ಕೊಟ್ಟಿರುವ ನಾಲ್ಕು ಜೊತೆ ದ್ವಂದ್ವಾತ್ಮಕ ಪರಿಕಲ್ಪನೆಗಳನ್ನು ಒಮ್ಮೆ ಗಮನಿಸಿ, ಅಖಂಡವಾಗಿ ಗ್ರಹಿಸಿ, ತಿಳಿಯಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ :

ವಾಕ್ಕು	-	ಅರ್ಥ
ಶಬ್ದ	-	ಬಿಂಬ
ನಾಗರಿಕತೆ	-	ವನ್ಯತೆ
ವಿಶ್ವಾತ್ಮಕ	-	ಸ್ಥಳೀಯ

ಇವುಗಳ ಪೈಕಿ, ವಾಕ್ಕು-ಶಬ್ದ-ನಾಗರಿಕತೆ-ವಿಶ್ವಾತ್ಮಕ ನೆಲೆಗಳು ಏಕರೂಪಿ ತುಡಿತವನ್ನು ಹೊಂದಿದ್ದರೆ, ಅರ್ಥ-ಬಿಂಬ-ವನ್ಯತೆ-ಸ್ಥಳೀಯ ನೆಲೆಗಳು ಸದಾ ಬಹುರೂಪಿ ಮಿಡಿತವನ್ನು ಹೊಂದಿರುತ್ತದೆಯೆಂದು ಗ್ರಹಿಸಬೇಕು. ಇದನ್ನು ಕೊಂಚ ವಿವರಿಸಲಿಚ್ಛಿಸುತ್ತೇನೆ :

೧. **ವಾಕ್ಕು-ಅರ್ಥ** : ಇದು ಕಾಳಿದಾಸನ 'ವಾಗರ್ಥ'ವೆಂಬ ನುಡಿಯಿಂದ ರೂಪಿತವಾಗಿದೆ. ಭಾಷೆಯೊಂದರಲ್ಲಿ ಶಬ್ದ ಮತ್ತು ಅರ್ಥಗಳು ಬಹು ಮುಖ್ಯವಾದ ಘಟಕಗಳು. ಶಬ್ದವು ಏಕರೂಪಿಯಾಗಿದ್ದರೆ, ಅರ್ಥವು ಬಹುರೂಪಿಯಾಗಿರುತ್ತದೆ. ಉದಾ : 'ಹರಿ' ಎಂಬ ಏಕರೂಪಿ ಶಬ್ದಕ್ಕೆ ಅರ್ಥಗಳು ಬಹುರೂಪಿಯಾಗಿರುತ್ತವೆ.

೨. **ಶಬ್ದ-ಬಿಂಬ** : ಇದು 'ವಾಗರ್ಥ'ವೆಂಬುದರ ಆಧುನಿಕ ವಿವರಣೆಯಾಗಿದೆ. ಶಿವರಾಮಕಾರಂತರು ಮನುಷ್ಯನ ಸಮಸ್ತ ಅನುಭವಗಳನ್ನು 'ಶಬ್ದಜ್ಞಾನ' ಮತ್ತು 'ಬಿಂಬಜ್ಞಾನ' ಎಂಬ ಮಾತುಗಳಿಂದ ವಿವರಿಸಿದ್ದಾರೆ. ಮನುಷ್ಯನ ಐಂದ್ರಿಯಿಕ ಅನುಭವಕ್ಕೆ ಒಳಪಟ್ಟ ಸಂಗತಿಗಳೆಲ್ಲ 'ಬಿಂಬ'ವಾದರೆ, ಇಂದ್ರಿಯಾತೀತವಾದ ವಿಷಯಗಳು 'ಶಬ್ದ' ಮಾತ್ರವೆಂದು ಹೇಳಿದ್ದಾರೆ. ಕಾರಂತರ ಪ್ರಕಾರ 'ದೇವರು' ಎಂಬುದೊಂದು ಶಬ್ದ ; ಇದು ಕಾಲ-ದೇಶಗಳ ಚಲನೆಯಲ್ಲಿ ನೂರಾರು ಬಗೆಯ 'ಬಿಂಬ'ಗಳಾಗಿ ನಮ್ಮ ಅಳತೆಯನ್ನು ಮೀರಲಾರದ ಸಂಗತಿಗಳಾಗಿರುತ್ತವೆ.

೩. **ನಾಗರಿಕತೆ-ವನ್ಯತೆ** : ಇದು ಕುವೆಂಪು ಸಾಹಿತ್ಯದಿಂದ ರೂಪಿಸಿಕೊಂಡ ಪರಿಭಾಷೆಗಳು. 'ನಾಗರಿಕ ಜೀವನ' ಮತ್ತು 'ವನ್ಯ ಸಂಸ್ಕೃತಿ'ಗಳು ಪರಸ್ಪರ ವಿರುದ್ಧ ಧ್ರುವಗಳು. ನಾಗರಿಕ ಪರಿಸರದ ಅನುಭವಗಳು ಮಿತವಾಗಿದ್ದರೆ, ವನ್ಯಪರಿಸರದ ಅನುಭವಗಳು ಅಮಿತವಾಗಿರುತ್ತವೆ. ನಾಗರಿಕರಿಗೆ ಸಮಸ್ತ ಮತ್ಸ್ಯರಾಶಿಯು 'ಮೀನು' ಎಂಬ ಶಬ್ದದಲ್ಲಿ ಅಡಗಿಹೋಗುತ್ತದೆ. ಕೆರೆ-ನದಿ-ಸಮುದ್ರಗಳಲ್ಲಿ ಮತ್ಸ್ಯರಾಶಿಯೊಂದಿಗೆ ಹೋರಾಡುತ್ತಾ ಬದುಕುವವರಿಗೆ ಒಂದೊಂದು ಮತ್ಸ್ಯಪ್ರಭೇದಕ್ಕೂ ಒಂದೊಂದು ವಿಶಿಷ್ಟವಾದ ಹೆಸರಿರುತ್ತದೆ. ಉದಾ : ಹೆಮ್ಮಲಗ, ಅವಲು, ಗಿರ್ಲು, ಕುಚ್ಚು ಇತ್ಯಾದಿ. ಇದೇ 'ಏಕರೂಪಿ' ನಾಗರಿಕತೆಗೂ 'ಬಹುರೂಪಿ' ವನ್ಯತೆಗೂ ಇರುವ ಅಂತರ.

೪. **ವಿಶ್ವಾತ್ಮಕ-ಸ್ಥಳೀಯ** : ಇಂದು ಹೆಚ್ಚು ಚಲಾವಣೆಯಲ್ಲಿರುವ ಈ ಪರಿಭಾಷೆಗಳನ್ನು ಗೊಂದಲಮುಕ್ತವಾಗಿ ಗ್ರಹಿಸಬೇಕಾಗಿದೆ. ಸ್ಥಳೀಯ ಕಾರ್ಯಾಚರಣೆಯ ಮೂಲಕ ವಿಶ್ವಾತ್ಮಕ ಚಿಂತನೆ

ನಡೆಸಬೇಕೆಂಬ ಪರಿಸರ ಕಾಳಜಿಯ ನುಡಿಗಟ್ಟು ಈ ದಿಸೆಯಲ್ಲಿ ಸ್ಮರಣೀಯವಾಗಿದೆ. ವಸುಧಾ ವಲಯವನ್ನು ಗೋಳವನ್ನಾಗಿ ಕಾಣುವ ವಿಶ್ವಾತ್ಮಕ ಗ್ರಹಿಕೆಯು ಏಕರೂಪಿಯಾದುದು. ಅಂತೆಯೇ, ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷಗಳನ್ನೆಲ್ಲ ಅಖಂಡವಾಗಿ ಮನಗಾಣುವ ಸ್ಥಳೀಯ ಜ್ಞಾನವು ಬಹುರೂಪಿಯಾದುದು.

ಕುವೆಂಪು ಸಾಹಿತ್ಯವು ವಾಕ್ಕು-ಶಬ್ದ-ನಾಗರಿಕತೆ-ವಿಶ್ವಾತ್ಮಕ ನೆಲೆಗಳೆಂಬ ಏಕರೂಪಿ ತುಡಿತಗಳಿಂದ, ಅರ್ಥ-ಬಿಂಬ-ವನ್ಯತೆ-ಸ್ಥಳೀಯ ನೆಲೆಗಳೆಂಬ ಬಹುರೂಪಿ ಮಿಡಿತಗಳೆಡೆಗೆ ನಡೆಸಿದ ಮಹಾಯಾನವಾಗಿದೆ. ಆದ್ದರಿಂದಲೇ ಕುವೆಂಪು ಸೃಷ್ಟಿಸಿದ್ದು 'ಬಹುರೂಪಿ' ಎನ್ನಬಹುದಾದ ಕೃತಿಶ್ರೇಣಿಗಳು. ಇವು ಮಲೆನಾಡಿನ ದಟ್ಟ ಕಾನನದಂತೆ ನಿತ್ಯ ಹರಿದ್ವರ್ಣ ಮತ್ತು ನಿತ್ಯ ನೂತನವಾಗಿದೆ. ಈ ಕಾಡುಕವಿಗೆ ಸ್ಪಂದಿಸಿದ, ಸುವಿಖ್ಯಾತ ವಿದ್ವಾಂಸರೆನಿಸಿಕೊಂಡಿರುವ 'ನಾಡಿನ ಜನರು' ಮಾಡಿದ ವಿಮರ್ಶೆಗಳು ಏಕರೂಪಿಯಾದದ್ದು ! ಅರಣ್ಯ ನಾಶವನ್ನು ತಡೆಗಟ್ಟಲು ಸ್ಥಾಪಿಸಿದ ಅರಣ್ಯ ಇಲಾಖೆಯು ಕಾಡುಗಳಲ್ಲಿ ಬೆಳೆಸಿದ ಏಕರೂಪಾತ್ಮಕ ನೆಡುತೋಪುಗಳಂತೆಯೇ, ಈ 'ನಾಡಿನ ಜನರು' ನಡೆಸಿದ ಕುವೆಂಪು ಸಾಹಿತ್ಯ ವಿಮರ್ಶೆಗಳು ತೋಪು ತೋಪಾಗಿರುವುದನ್ನು ಸುಸ್ಪಷ್ಟವಾಗಿ ಮನಗಾಣಬಹುದು.

ಕುವೆಂಪು ಅವರನ್ನು ಮಹಾಕವಿ, ರಾಷ್ಟ್ರಕವಿ, ರಸಋಷಿ, ದಾರ್ಶನಿಕ ಕವಿ, ಯುಗದ ಕವಿ, ಜಗದ ಕವಿ ಮುಂತಾದ ವಿಶೇಷಣಗಳಿಂದ 'ನಾಡಿನ ಜನರು' ಗೌರವಿಸಿದ್ದಾರೆ. ಆದರೆ, ಕುವೆಂಪು ಸ್ವತಃ ತಮ್ಮ ಕವಿತೆಗಳಲ್ಲಿ ತಮ್ಮನ್ನು ಕರೆದುಕೊಂಡಿರುವುದು 'ಕಾಡು ಕವಿ' ಮತ್ತು 'ಮಲೆಯ ಕವಿ' ಎಂದು. ಈ ಕಾಡುಕವಿಗೆ, ಅಲ್ಪ-ಸ್ವಲ್ಪ ಕಾಡು ತಿರುಗಿರುವ ನಾನಿಂದು ಕಾಡಿನ ಭಾಷಣ ಸಲ್ಲಿಸುತ್ತಿದ್ದೇನೆ. ಇದನ್ನು 'ನಾಡಿನ ಜನರು' ಒಲಿದು ಆಲಿಸಬೇಕೆಂದು ಬಿನ್ನವಿಸುತ್ತೇನೆ.

ಕುವೆಂಪು ಸ್ಥಳೀಯ ಸಂಸ್ಕೃತಿಯನ್ನು ಕಟ್ಟಿಕೊಡುತ್ತಲೇ ಜೈವಿಕ ಸತ್ಯಗಳೆನ್ನಬಹುದಾದ ವಿಶ್ವಾತ್ಮಕ ನೆಲೆಗಳ ದರ್ಶನ ಮಾಡಿಸುತ್ತಾರೆ. 'ಚೋರೆ-ಬೋರೆ' ಎಂಬ ಕವಿತೆಯನ್ನು ಗಮನಿಸಿ. ಇದು ಕೇವಲ ಶಬ್ದ ಮೋಹದ ಪ್ರಾಸ ಮೈತ್ರಿ ಅಲ್ಲ ! ಚೋರೆ ಹಕ್ಕಿ ಸಚರ, ಗುಡ್ಡದ ಬೋರೆ ಅಚರ. ಕುವೆಂಪು ಈ ಕವಿತೆಯಲ್ಲಿ ವಿಶ್ವಾತ್ಮಕ ನೆಲೆಯ ಸಚರಾಚರಗಳ ಜೈವಿಕ ಮೈತ್ರಿಯನ್ನು ಪ್ರತಿಪಾದಿಸಿದ್ದಾರೆ. ಇದಕ್ಕಾಗಿ ಸ್ಥಳೀಯವೆನ್ನಬಹುದಾದ 'ಚೋರೆ-ಬೋರೆ'ಗಳ ಒಳಹೊಕ್ಕು ನೋಡಿದ್ದಾರೆ.

ಬೊಬ್ಬುಳಿ ಗಿಡದಲಿ ಗುಬ್ಬಳಿಸುತ್ತಿದೆ
ಒಬ್ಬೊಂಟಿಗ ಚೋರೆ ;
ಕಿವಿಗೊಟ್ಟಲುಗಾಡದೆ ಕೇಳುತ್ತಿದೆ
ಹಗಲ್ ನಿದ್ದೆಯೊಳದ್ದಿದ ಬೋರೆ !

ಈ ಚೋರೆ-ಬೋರೆಗಳ ಸಂಬಂಧ ಕವಿಯ ಕಣ್ಣಿಗೆ 'ಜಡ ಚೇತನದಾಲಿಂಗನ'ವಾಗಿ ಕಂಡಿದೆ. ಆದರೆ ಈ ವಿಶ್ವಾತ್ಮಕ ದರ್ಶನವು ಕಾಣುತ್ತಿರುವುದು ವ್ಯೋಮದ ರವಿಗೆ ಮತ್ತು ಭೂಮಿಯ ಕವಿಗೆ ಮಾತ್ರ ! ಪ್ರೇಕ್ಷಕರಿನ್ನೊಬ್ಬರ ಕಾಣೆ ! ಬೋರೆಯ ಪುಲ್‌ನವಿರಿನ ಮೈ ಚೋರೆಯ ಮಿಂಚುಲಿ ಹೊನಲಿಗೆ ರೋಮಾಂಚಿತವಾಗುತ್ತಿದೆ ಎಂಬ ನುಡಿಗಳು ಕವಿತೆಯಲ್ಲಿವೆ. ಇದು ಸ್ಥಳೀಯ ಕಾರ್ಯಾಚರಣೆಯ ಮೂಲಕ ನಡೆಸಿದ ವಿಶ್ವಾತ್ಮಕ ಚಿಂತನೆ.

'ದೇವರು ರುಜು ಮಾಡಿದನು'- ಎಂಬ ಮತ್ತೊಂದು ಕವಿತೆಯನ್ನು ಗಮನಿಸಿ. ಇದು ಪಶ್ಚಿಮ ಘಟ್ಟಗಳ ಸಹ್ಯಾದ್ರಿಯ ಶ್ರೇಣಿಗಳಲ್ಲಿ ಉಗಮಿಸಿ ಉಕ್ಕಿ ಹರಿಯುವ ಜಲಸುಂದರಿ ತುಂಗಾನದಿಯ ಒಂದು ಬಿಂದುಸ್ಥಾನವೆನ್ನಬಹುದಾದ 'ಸಿಬ್ಬಲುಗುಡ್ಡೆಯ ಹೊಳೆ'ಯಲ್ಲಿನ ಅನುಭವವನ್ನು ವರ್ಣಿಸುತ್ತಿದೆ. ಸ್ಥಳೀಯ ಸಂಸ್ಕೃತಿಯ ನಾಮಾಂಕಿತವಾಗಿರುವ 'ಸಿಬ್ಬಲು ಗುಡ್ಡೆಯ ಹೊಳೆ' ನನ್ನ ಪಾಲಿಗೆ ಶಬ್ದಜ್ಞಾನವಾಗಿರದೆ ಬಿಂಬಜ್ಞಾನವಾಗಿದೆ. ಈ ಪ್ರದೇಶದಲ್ಲಿ ವಿವಿಧ ಋತುಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಅಲೆದಾಡಿರುವ ನನ್ನ ಕಣ್ಣಿಗೆ ಈ ಕವಿತೆಯ ಒಂದೊಂದು ವಿವರವೂ ಸಚಿತ್ರ ವರ್ಣನೆಯಾಗಿ ಪುನರ್ ಸೃಷ್ಟಿಗೊಂಡಿದೆ. ಈ ಕವಿತೆಯಲ್ಲಿ ಕುವೆಂಪು, ತಳದಲ್ಲಿ ಜಲವುಕ್ಕಿ ಹರಿಯುವ ಸಸ್ಯ ಪರಿಸರ ಮತ್ತು ಪಕ್ಷಿ ಪರಿಸರಗಳ ಕಾಣ್ಕೆ ನೀಡುತ್ತಾ ನೀಲಾಕಾಶದ ಹಿನ್ನೆಲೆಯಲ್ಲಿ ಕಂಗೊಳಿಸುತ್ತಿರುವ ಹಸಿರು ಪಿರಮಿಡ್ಡನ್ನು ನಿರ್ಮಾಣ ಮಾಡಿದ್ದಾರೆ. ಆದ್ದರಿಂದಲೇ ಈ ಕವಿತೆಯಲ್ಲಿ ಪಿರಮಿಡ್ಡಿನ ಕಲ್ಲುಗಳಂತಿರುವ ವಸ್ತು ವಿವರಗಳ ದೊಡ್ಡ ಪಟ್ಟಿಯೇ ಇದೆ. ಈ ವಿವರಗಳಲ್ಲಿ ಯಾವುದೊಂದನ್ನು ಹೊರತೆಗೆದು ಎತ್ತಿಡಲು ಸಾಧ್ಯವಿಲ್ಲ. ಅಷ್ಟರಮಟ್ಟಿಗೆ ಒಂದು ಮತ್ತೊಂದರೊಡನೆ ಬೆರೆತು ಕೂಡಲಸಂಗಮವಾಗಿದೆ. ಇದು ಸೃಷ್ಟಿ ರಚನೆಯ ಕುಶಲಕಲೆ ! ಜಗದಚ್ಚರಿಯ ಅಂದದ ಒಪ್ಪಂದ!

ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರ ಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು ;
ರಸವಶನಾಗುತ ಕವಿ ಅದ ನೋಡಿದನು !

ದಿನಾಂಕ ೨೮-೧-೧೯೩೭ರಲ್ಲಿ ಕುವೆಂಪು ಕಟ್ಟಿಕೊಟ್ಟಿರುವ ಈ ಸ್ಥಳೀಯ ಮೂಲದ ವಿಶ್ವಾತ್ಮಕ ಕಾಣ್ಕೆಯನ್ನು ಒಳಹೊಕ್ಕು ಗ್ರಹಿಸದೆ, ಪ್ರತಿ ಚರಣದ ಕೊನೆಯ ಸಾಲಿನಲ್ಲಿರುವ 'ರಸವಶನಾಗುತ' ಎಂಬ ಶಬ್ದವನ್ನು ಮಾತ್ರ ಹಿಡಿದುಕೊಂಡು ಕುವೆಂಪು ಕವಿತೆಗಳಲ್ಲಿ 'ರಸವಶತೆ' ಇದೆಯೆಂದು ತೀರ್ಪು ಕೊಡುವ ವಿಮರ್ಶೆಯನ್ನು ವಿಮರ್ಶೆಯೆಂದು ಕರೆಯಲಾದೀತೆ ? ಈ ಕವಿತೆಯಲ್ಲಿ ಕುವೆಂಪು ವರ್ಣಿಸಿರುವ ಸೃಷ್ಟಿರಚನೆಯ ಕುಶಲಕಲೆ ಮತ್ತು ಜಗದಚ್ಚರಿಯ ಅಂದದ ಒಪ್ಪಂದಗಳು ಇಂದು ಏನಾಗಿವೆ ?-ಎಂಬ ಪ್ರಶ್ನೆಯನ್ನು ಹುಟ್ಟಿಸುತ್ತದೆ. ಏಕೆಂದರೆ, ನಾವಿಂದು ನಿಸರ್ಗದ ಅಂದವನ್ನು ಕೆಡಿಸುತ್ತಿರುವ ಬಗೆ ಬಗೆಯ ಒಪ್ಪಂದಗಳಲ್ಲಿ ಮುಳುಗಿ ಹೋಗಿದ್ದು,

ಸಿಬ್ಬಲುಗುಡ್ಡೆಯ ಹೊಳೆಯಲಿ ಮೀಯುತ
ಕವಿಮನ ನಾಕದಿ ನೆಲೆಸಿತ್ತು ;
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು !

ಎಂಬ ಸಾಲುಗಳನ್ನು ಅನುಭವಿಸಿ ತಿಳಿಯಲಾರದ ಜಡತೆಯಲ್ಲಿದ್ದೇವೆ. 'ಪೊಂಗುಳಿ ಅಥವಾ ಮಳೆಕೋಗಿಲೆ'-ಎಂಬ ಕವಿತೆಯನ್ನು ಗಮನಿಸಿ. ಸ್ಥಳೀಯ ಸಂಸ್ಕೃತಿಯ ಜನಪದರ ನಾಲಗೆಯ ಮೇಲಿರುವ ಈ ಶಬ್ದವನ್ನು ದಿನಾಂಕ ೨೭-೫-೧೯೩೫ರಲ್ಲಿ ಕವಿತೆಯ ಮೂಲಕ ಕುವೆಂಪು

ದಾಖಲು ಮಾಡಿದ್ದಾರೆ. ಇದಕ್ಕೆ ಯಾವುದೇ ಅಡಿಟಿಪ್ಪಣಿಯನ್ನು ಕುವೆಂಪು ನೀಡಿಲ್ಲ. ಈ ಕಾಡು ಕವಿ ಬರೆದಿರುವ 'ಪೊಂಗುಳಿ ಅಥವಾ ಮಳೆಕೋಗಿಲೆ'ಯ ಚಿತ್ರವನ್ನು 'ನಾಡಿನ ಜನರು' ಹೇಗೆ ಕಲ್ಪಿಸಿಕೊಳ್ಳಬೇಕು ? ಈ ಹಕ್ಕಿಯನ್ನು ಕುರಿತು ಕವಿತೆಯಲ್ಲಿರುವ ಸಾಲುಗಳಿವು :

ಇನಿತು ಮಧುರನಾದಗೈವ
ಪೊಂಗುಳಿಯಿದೆ ? ಪಕ್ಷಿದೈವ !
ನೋಟಕದೋ ಒಂದು ಹದ್ದು
ಕಿವಿಗೋ ? ಚೈತ್ರ ಪಿಕದ ಸದ್ದು !

ನೋಡಲು ಹದ್ದಿನಂತಿರುವ ಯಾವ ಪಕ್ಷಿ ಈ ಪೊಂಗುಳಿ ಅಥವಾ ಮಳೆ ಕೋಗಿಲೆ ಎಂದು ತಿಳಿಯಲು ಸಲೀಂ ಅಲಿಯವರ ಪುಸ್ತಕವನ್ನು ತಿರುವಿ ಹಾಕಿದ್ದಾಯಿತು. ಕನ್ನಡದ ಈ 'ದೇಸಿ' ಹೆಸರು ಆ ಗ್ರಂಥಕ್ಕೆ ಅಸ್ಪೃಶ್ಯನಿಗೆ ಸಮಾನವಾದ್ದರಿಂದ ನನ್ನ ಗೊಂದಲ ಹಾಗೇ ಉಳಿಯಿತು. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಕನ್ನಡ ನಾಡಿನ ಹಕ್ಕಿಗಳು'-ಎಂಬ ಪುಸ್ತಕದಲ್ಲಿರುವ ಪಕ್ಷಿನಾಮಾಂಕಿತಗಳ ಪಟ್ಟಿಯಲ್ಲೂ 'ಪೊಂಗುಳಿ ಅಥವಾ ಮಳೆ ಕೋಗಿಲೆ'ಯ ಉಲ್ಲೇಖವಿಲ್ಲ. ಈ ಕೃತಿಯ ಎರಡನೆಯ ಮುದ್ರಣವನ್ನು ನೋಡಿ ಖಚಿತಪಡಿಸಿಕೊಂಡು ಉಲ್ಲೇಖವಿಲ್ಲದ್ದನ್ನು ಹೇಳುತ್ತಿದ್ದೇನೆ. ಕುವೆಂಪು ಒಂದು ವೇಳೆ 'ಪೊಂಗುಳಿ ಅಥವಾ ಮಳೆ ಕೋಗಿಲೆ'ಯನ್ನು ದಾಖಲು ಮಾಡದೆ ಇದ್ದಿದ್ದರೆ, ಈ ಹೆಸರು ಕನ್ನಡ ಅಕ್ಷರ ಜಗತ್ತಿನಲ್ಲಿ ದಾಖಲಾಗಿರದೆ, ಎಂದಿನಂತೆ ಜನಪದರ ನಾಲಗೆಯ ಮೇಲೆ ನಲಿಯುತ್ತಿತ್ತು. ನಾನೊಮ್ಮೆ ಗೆಳೆಯರೊಂದಿಗೆ ಕೊಡಚಾದ್ರಿಯ ತಪ್ಪಲಿನಲ್ಲಿರುವ, ದಟ್ಟ ಕಾಡಿನ ಮಧ್ಯೆ ಅಜ್ಞಾತವಾಗಿರುವ 'ದೊಡ್ಡಿನ ಗುಳಿ' ಎಂಬ ಕುಗ್ರಾಮದಲ್ಲಿ ಇರಬೇಕಾದ ಸಂದರ್ಭ ಒದಗಿತು. ಮರುದಿನ ಬೆಳಗ್ಗೆ ನಾವಿಳಿದುಕೊಂಡಿದ್ದ ಮನೆಯೊಡತಿ ತೋಟದಲ್ಲಿ ನಾವು ಅಡ್ಡಾಡುತ್ತಿದ್ದಾಗ ಕೇಳಿ ಬಂದ ಚೀರುಲಿಗೆ ಪ್ರತಿಕ್ರಿಯಿಸುತ್ತಾ 'ಮಳೆ ಕೋಗಿಲೆ' ಎಂದು ಉದ್ಗರಿಸಿದರು. ನಾನಾಗ ಪಕ್ಷಿಯತ್ತ ತಿರುಗಿ ನೋಡಿದೆ : ಅದು ಸಲೀಂ ಅಲಿಯವರು ಗುರುತಿಸಿರುವ ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್ ಹಾಗೂ ತೇಜಸ್ವಿ ಅವರು ಗುರುತಿಸಿರುವ ಮಂಗಟ್ಟೆ ಹಕ್ಕಿ. ಆ ಮನೆಯೊಡತಿ ಹೇಳಿದ ಪ್ರಕಾರ ಮಳೆ ಕೋಗಿಲೆ ಕೂಗಿದರೆ ಮಳೆ ಬೀಳುತ್ತದೆಯಂತೆ ! ಮಳೆ ಬೀಳುವುದನ್ನು ಸೂಚಿಸುವುದರಿಂದಲೇ ಗಿರಿಜನರು ಈ ಪಕ್ಷಿಗೆ 'ಮಳೆ ಕೋಗಿಲೆ'-ಎಂದು ಕರೆದಿದ್ದಾರೆ. ಕುವೆಂಪು ಈ ಸ್ಥಳೀಯ ಜನಪದ ನಂಬಿಕೆಯನ್ನು ಬಳಸಿಕೊಂಡು ಈ ಕವಿತೆಯನ್ನು ರಚಿಸಿದ್ದಾರೆ :

ಆತ್ಮ ತೊಯ್ಯುವಂತೆ ಬರಲಿ
ನಿನ್ನ ಕೊರಲ ಜೇನ್ಮಳೆ !
ನಿನ್ನ ಉಲಿಹು ಸಗ್ಗದ ಕರೆ
ಆಲಿಸುತಿದೆ ನಮ್ಮಿ ಧರೆ
ಹಾರು, ಹಾಡು, ಪೊಂಗುಳಿ !
ಬಾಳ ಕಣಿವೆಯಲ್ಲಿ ತೊಳಲಿ
ನಡೆವ ವೇಳೆ ನಾನು ಬಳಲಿ
ಇಂತೆ ಬರಲಿ ನಿನ್ನುಲಿ

ಉಲ್ಲಾಸವನೆದೆಗೆ ಮನಕೆ
ಇಂತೆತರಲಿ ಪೊನ್ನುಲಿ !
ಇಂತೆ ನಲಿ, ಇಂತೆ ಉಲಿ
ಇಂತೆ ಬಾ, ಪೊಂಗುಳಿ !

ಸ್ಥಳೀಯ ಜನಪದರ, ಗಿರಿಜನರ ಕಣ್ಣು-ಕಿವಿ-ಹೃದಯಗಳಿಂದ ಕವಿ ಕುವೆಂಪು ಈ ಕವಿತೆಯನ್ನು ರಚಿಸಿದ್ದಾರೆ. ಇದೊಂದು ಆರಣ್ಯಕ ಪಕ್ಷಿ. ಪಶ್ಚಿಮ ಘಟ್ಟಗಳ ಹೆಮ್ಮರಗಳ ಕಾಡಿನಲ್ಲಿ ಮಾತ್ರ ಕಾಣಸಿಗುವ ಇದನ್ನು 'ಪಕ್ಷಿ ದೈವ'-ಎಂದು ಕರೆದು ಕುವೆಂಪು ಗೌರವಿಸಿದ್ದಾರೆ. ಹೀಗೆ ಕುವೆಂಪು ಕವಿತೆಗಳನ್ನು ಕಾಡುಜ್ಞಾನದಿಂದ ಅರ್ಥಮಾಡಿಕೊಳ್ಳಬೇಕೇ ಹೊರತು, ಪದವಿ-ಪಾಂಡಿತ್ಯಗಳ ಬಲದಿಂದ ಅರ್ಥ ಮಾಡಿಕೊಳ್ಳಲಾಗುವುದಿಲ್ಲ.

ಕುವೆಂಪು ಸಾಹಿತ್ಯವನ್ನು ಒಂದು ಮಾತಿನಲ್ಲಿ ವರ್ಣಿಸುವುದಾದರೆ 'ಹೀರೆಯ ಹೂವು' ಎಂದು ಹೇಳಬಹುದು. ಇದೇ ಹೆಸರಿನ ಕವಿತೆಯೊಂದನ್ನು ಕುವೆಂಪು ಬರೆದಿದ್ದಾರೆ. 'ಹೀರೆಯ ಹೂವು' ಮನೆಯ ಹಿತ್ತಿಲಿನಲ್ಲಿರುವ ಅಲಕ್ಷಿತ ಪುಷ್ಪ. ಇದನ್ನು ರಮಣಿಯರು ಮುಡಿಯುವುದಿಲ್ಲ; ದೇವರ ಪೂಜೆಗೆ ಕೊಯ್ಯುವುದಿಲ್ಲ. ಕುವೆಂಪು ಕಾದಂಬರಿಗಳಲ್ಲಿ ಮನೆಯ ಹಿತ್ತಿಲುಗಳಲ್ಲಿ ಕಾಣಿಸಿಕೊಂಡು, ಮರೆಯಾಗಿ ಬಿಡುವ ಗುತ್ತಿ ಮುಂತಾದವರ ಚಿತ್ರಣವಿದೆ. ಕುವೆಂಪು ಸಾಹಿತ್ಯದಲ್ಲಿ ಅಲಕ್ಷಿತರು, ಅವಮಾನಿತರು, ತಿರಸ್ಕೃತರು, ಪ್ರತಿನಾಯಕರು ಮುನ್ನೆಲೆಗೆ ಬರುವುದನ್ನು ಗಮನಿಸಬೇಕು. ಈ ದೃಷ್ಟಿಯಿಂದ ನೋಡಿದರೆ ಕುವೆಂಪು ಸಾಹಿತ್ಯವೊಂದು 'ಹೀರೆಯ ಹೂವು'-ಎಂದು ಅರಿವಾಗುತ್ತದೆ. ಮಂಥರೆ, ಊರ್ಮಿಳೆ, ಕುಂಭಕರ್ಣ, ರಾವಣ, ಏಕಲವ್ಯ, ಶಂಭೂಕ, ನಂದಿಗ್ರಾಮದ ಭರತ, ವಿಶ್ವಾಮಿತ್ರ, ಸಾಮ್ರಾಜ್ಯಗಳ ಭಾರವನ್ನು ಎದೆಯ ಮೇಲೆ ಹೊತ್ತಿರುವ ರೈತ, ಕರಿಸಿದ್ಧ-ಗಿಡ್ಡಿ ದಂಪತಿಗಳು-ಇಂಥ ಅಲಕ್ಷಿತ ಮತ್ತು ತಿರಸ್ಕೃತರಾದ 'ಅಮುಖ್ಯ' ಹೀರೆಯ ಹೂವುಗಳನ್ನು ಕುವೆಂಪು ಸಾಹಿತ್ಯ ಜಗತ್ತಿನಲ್ಲಿ ವಿಪುಲವಾಗಿ ನೋಡಬಹುದು.

'ಹೀರೆಯ ಹೂವು' ಕವಿತೆಯ ಪ್ರಧಾನ ಆಶಯವೆಂದರೆ, ಭೋಗಧರ್ಮದ ನಿರಾಕರಣೆ. ಕುವೆಂಪು ಯುಗದ ಬಹುದೊಡ್ಡ ಬಿಕ್ಕಟ್ಟುಗಳೆಂದರೆ 'ಮತ ಧರ್ಮ' ಮತ್ತು 'ಭೋಗಧರ್ಮ' ಎನ್ನಬಹುದು. ಇವೆರಡರ ನಿಕಟ ಮೈತ್ರಿಯಿಂದ ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ 'ಸ್ವದೇಶಿ ವಸಾಹತುಶಾಹಿ' ಮತ್ತು 'ವಿದೇಶಿ ವಸಾಹತುಶಾಹಿ'ಗಳಿಗೆ ಮಣೆ ಹಾಕಲಾಯಿತು. ಆದ್ದರಿಂದಲೇ ಕುವೆಂಪು ಇವೆರಡನ್ನು ಒಟ್ಟಿಗೆ ಗ್ರಹಿಸಿ, ಮೀರಬೇಕಾದ ಅನಿವಾರ್ಯತೆಯನ್ನು ಬಲವಾಗಿ ಪ್ರತಿಪಾದಿಸಿದ್ದಾರೆ. ಇಂದು ಇಪ್ಪತ್ತೊಂದನೆ ಶತಮಾನದ ಆರಂಭದ ಹೊತ್ತಿಗೆ ಮತಧರ್ಮ ಮತ್ತು ಭೋಗಧರ್ಮಗಳು ವಿರಾಟ್ ಸ್ವರೂಪದಲ್ಲಿ ವಿಜೃಂಭಿಸುತ್ತಿವೆ.

ಮತಧರ್ಮದ ಕೊನೆಯ ತಂಗುದಾಣ 'ಪ್ರತ್ಯೇಕ ರಾಷ್ಟ್ರ' ಕಲ್ಪನೆಯಾಗಿದ್ದರೆ, ಭೋಗಧರ್ಮದ ಕೊನೆಯ ತಂಗುದಾಣ 'ವಿಶ್ವಗ್ರಾಮ' ವೆಂಬ ಕಲ್ಪನೆಯಾಗಿದೆ. ಮತಧರ್ಮವನ್ನು ಆಧರಿಸಿದ ವಿಶ್ವಗ್ರಾಮದ ಕಲ್ಪನೆ-ಇವೆರಡೂ ಅಪಾಯಕಾರಿ ! ಈ ಸಂದರ್ಭದಲ್ಲಿ ಜಾಗತೀಕರಣದ ವಿಶ್ವಗ್ರಾಮ ಬೇರೆ, ಅನಿಕೇತನ ಪ್ರಜ್ಞೆಯ ವಿಶ್ವಮಾನವ ಕಲ್ಪನೆ ಬೇರೆ ; ಇವೆರಡಕ್ಕೂ ಸಂಬಂಧವಿಲ್ಲವೆಂಬುದನ್ನು

ಗೊಂದಲಮುಕ್ತವಾಗಿ ಗ್ರಹಿಸಬೇಕು. ವಿಶ್ವಮಾನವ ಕಲ್ಪನೆ ಹುಸಿಯಾದುದು ಮತ್ತು ಪ್ರಸ್ತುತವಲ್ಲ ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿರುವುದುಂಟು ! ಇದನ್ನು ಒಪ್ಪಲಾಗದು !

ಬ್ರೆಕ್ಟ್ ವಿರಚಿತ 'ತಾಯಿ' ನಾಟಕದಲ್ಲಿ ಉಪಾಧ್ಯಾಯನೊಬ್ಬನ ಪಾತ್ರವಿದೆ. ಈತ 'ಕ್ರಾಂತಿ'ಯ ಬಗ್ಗೆ ಸಹಾನುಭೂತಿ ಉಳ್ಳವನು. ಆದ್ದರಿಂದಲೇ, ತನ್ನ ತಮ್ಮನ ಮಾತಿಗೆ ಓಗೊಟ್ಟು (=ಮೊದಲು ನಿರಾಕರಿಸಿದ್ದರೂ ಕಡೆಗೆ) ತಾಯಿಗೆ ಆಶ್ರಯ ನೀಡಿರುತ್ತಾನೆ. ಇವನ ಮಾತುಗಳಿವು :

"ನೇರವಾಗಿ ಗೆರೆ ಮೇಲೆ ಬರ್‍ಕೊಂಡು ಹೋಗು. ಅಂಚಿನಲ್ಲಿ ಬರಿಬೇಡ. ಯಾರು ಮಾರ್ಜಿನ್ನು ಮೀರಿ ಬರೀತಾರೋ ಅವರು ಕಾನೂನು ಮೀರ್‍ತಾರೆ. ತಲೆ ತಲಾಂತರದಿಂದ ಜ್ಞಾನದ ಮೇಲೆ ಜ್ಞಾನ ಗುಡ್ಡೆ ಹಾಕ್ತಾ ಬಂದಿದ್ದೀವಿ. ಪುಸ್ತಕದ ಮೇಲೆ ಪುಸ್ತಕ ಬರ್‍ತಾ ಇವೆ. ತಾಂತ್ರಿಕ ಜ್ಞಾನವಂತೂ ಹಿಂದೆ ಯಾವಾಗ್ಲೂ ಇಷ್ಟೊಂದು ಬೆಳೆದಿರಲಿಲ್ಲ. ಇದನ್ನೆಲ್ಲ ತೊಗೊಂಡೋಗಿ ಏನು ಮಾಡಬೇಕು ಅನ್ನುವ ವಿಚಾರದಲ್ಲಿ ಯಾರಿಗೂ ಸಂದೇಹ ಇಲ್ಲ. ಕಪ್ಪ ಸಮುದ್ರದ ತಲಾತಲದಲ್ಲಿ ಹುಗಿದುಬಿಡಬೇಕು! ಜ್ಞಾನದ ವಿರುದ್ಧದಂಗೆ ಏಳಬೇಕು !...ಒಮ್ಮೊಮ್ಮೆ ನಾನು ಖಿನ್ನತೆಯ ಆಳದಲ್ಲಿ ಮುಳುಗಿಹೋಗ್ತೀನಿ. ಆಗೆಲ್ಲ ನನ್ನನ್ನು ನಾನೇ ಪ್ರಶ್ನಿಸಿಕೊಳ್ಳುತ್ತೀನಿ. ನಮ್ಮೆಲ್ಲ ಉದಾತ್ತ ಭಾವನೆಗಳು, ಕಲ್ಪನೆಗಳು, ಆಲೋಚನೆಗಳು ಎಲ್ಲಿ ಹೋದವು ? ಸದ್ಯದ ತಾಪತ್ರಯಗಳನ್ನು ಮೀರಿದ ಚಿಂತನೆ-ಅದು ಶಾಶ್ವತಕ್ಕೆ ಸೇರಿದ್ದು, ಚಿರಂತನವಾದ ವಿಶ್ವಮಾನವನನ್ನು ಕುರಿತದ್ದು. ಇಂಥಾ ಉದಾತ್ತ ವಿಚಾರಕ್ಕೂ ವರ್ಗ ಹೋರಾಟಕ್ಕೂ ಎಲ್ಲೀ ಸಂಬಂಧ ?"

ಇದು ಉಪಾಧ್ಯಾಯ ವ್ಯಕ್ತಪಡಿಸುವ ವಿಶ್ವಮಾನವ ದೃಷ್ಟಿಕೋನ. ಕಣ್ಮುಂದಿನ ದೀನ ಮಾನವರ ತಾಪತ್ರಯಗಳು, ಬಾಳುವುದಕ್ಕಾಗಿ ನಡೆಸುವ ಹೋರಾಟಗಳನ್ನು ಮರೆತು ಕ್ರಿಯೆ-ಕಾಲ-ದೇಶಗಳ ಆಯಾಮವನ್ನೇ ಕಳಚಿಕೊಂಡ ವಿಶ್ವಮಾನವ ಕಲ್ಪನೆಯ ಹುಸಿತನ ಮತ್ತು ಅಪ್ರಸ್ತುತತೆಗಳನ್ನು ಬ್ರೆಕ್ಟ್ ಉಪಾಧ್ಯಾಯನ ಪಾತ್ರದ ಮೂಲಕ ಅನಾವರಣಗೊಳಿಸಿದ್ದಾನೆ. ಇದಕ್ಕೆ ವ್ಯತಿರಿಕ್ತವಾಗಿ ಬ್ರೆಕ್ಟ್ ಪ್ರತಿಪಾದಿಸುವ ವಿಶ್ವಾತ್ಮಕ ದೃಷ್ಟಿಕೋನವು ಇದೇ ನಾಟಕದ ತಾಯಿ ಮತ್ತು ಅಕ್ಕನ ಪಾತ್ರಗಳಲ್ಲಿದೆ.

ಮೇ ತಿಂಗಳು ಒಂದನೆ ತಾರೀಕು ಗುಂಡೇಟಿಗೆ ಬಲಿಯಾದ ಕಾರ್ಮಿಕನೊಬ್ಬನ ಕೈಯಲ್ಲಿದ್ದ ಧ್ವಜವನ್ನು ತಾಯಿ ತನ್ನ ಕೈಗೆತ್ತಿಕೊಳ್ಳುತ್ತಾಳೆ. ಇದಕ್ಕೆ ಮುಂಚೆ, ಧ್ವಜ ಕುರಿತು ರಾಜಕೀಯ ಖೈದಿಯೊಬ್ಬನ ಅಕ್ಕ ಮಾಷ ಹೇಳುವ ಮಾತುಗಳಿವು :

"ಈ ಬಾವುಟ ಕೆಂಪು ಬಣ್ಣದ್ದು, ಮೇಲೆ ತುಂಬ ಮೇಲೆ ಎಲ್ಲರಿಗೂ ಗೋಚರಿಸುವಂತೆ ಎತ್ತರದಲ್ಲಿ ಹಾರಾಡಬೇಕು, ಪೊಲೀಸರಿಗೂ ಕಾಣಬೇಕು, ಪ್ರಪಂಚದ ಎಲ್ಲ ಜನರಿಗೂ ಅದು ಕಾಣಬೇಕು"

ಇದು ಕಣ್ಮುಂದಿನ ದೀನ ಮಾನವರ ಏಳ್ಗೆಗಾಗಿ ಶ್ರಮಿಸುತ್ತಿರುವ ತಾಯಿ ಮತ್ತು ಅಕ್ಕನ ಪಾತ್ರಗಳಲ್ಲಿರುವ ವಿಶ್ವಾತ್ಮಕ ದೃಷ್ಟಿಕೋನ. ಇದು ಕ್ರಿಯೆ-ಕಾಲ-ದೇಶಗಳಿಗೆ ಬದ್ಧವಾದ ವಿಶ್ವಮಾನವ ಕಲ್ಪನೆಯಾಗಿದೆ. ನಮ್ಮ ಸಂದರ್ಭದಲ್ಲೀಗ ವಿಶ್ವಮಾನವ ಕಲ್ಪನೆಯ ಬಗ್ಗೆ ಅಪಸ್ವರಗಳೆದ್ದಿವೆ. ವಿಶ್ವಮಾನವ ಕಲ್ಪನೆಯನ್ನು ವಿರೋಧಿಸುವವರಿಗೆ ಮತ್ತು ಇದರ ಪ್ರಬಲ ಪ್ರತಿಪಾದಕರಿಗೆ ಬ್ರೆಕ್ಟ್ ನಿರೂಪಿಸಿರುವ ಗುಣಪಾಠದ ಸೂಕ್ಷ್ಮತೆಗಳ ಅರಿವಿಲ್ಲವೆಂದೇ ಹೇಳಬೇಕಾಗಿದೆ. ಕುವೆಂಪು ಅವರ

ವಿಶ್ವಮಾನವ ಕಲ್ಪನೆ ಕಣ್ಮುಂದಿನ ದೀನ ಮಾನವರು ಅಥವಾ ಹೀರೆಯ ಹೂವುಗಳನ್ನು ಆಧರಿಸಿದ ಜೈವಿಕ ಚಿಂತನೆಯಾಗಿದೆ.

ಕುವೆಂಪು ಅವರದು 'ತಾಯಿಯ ಹೃದಯ' ಮತ್ತು 'ಕೂಸಿನ ಮನಸು'. 'ಮಂತ್ರಾಕ್ಷತೆ' ಎಂಬ ಮುಕ್ತಕಗಳ ಸಂಕಲನದಲ್ಲಿರುವ ಈ ಬಿಡಿಮುತ್ತನ್ನು ಗಮನಿಸಿ :

ಆಶ್ಚರ್ಯಪಡು, ಆಶ್ಚರ್ಯಪಡು, ಆಶ್ಚರ್ಯಪಡು
ಓ ನನ್ನ ಜೀವ
ಆಶ್ಚರ್ಯ ಪಡುವ ಶಕ್ತಿಯನು ಕಳೆದುಕೊಂಡರೆ
ಆಗುವೆ ನೀ ನಿರ್ಜೀವ.

ಕುವೆಂಪು ಸಾಹಿತ್ಯವು Meta Creation ಎನ್ನಬಹುದು. ಇದನ್ನು ಲಕ್ಷಿಸಿದರೆ, ಕುವೆಂಪು ಸಾಹಿತ್ಯ ವಿಮರ್ಶೆಯೂ Meta Criticism ಆಗಬೇಕು.

ಕುವೆಂಪು ಕೃತಿಗಳನ್ನು 'ವಸಾಹತು ಪೂರ್ವ' ಅಥವಾ 'ವಸಾಹತೋತ್ತರ'-ಎಂಬ ವಿಕಲ್ಪಗಳಿಂದ ಪ್ರವೇಶಿಸುತ್ತಾ ಒಂದು ನಿರ್ದಿಷ್ಟ ಸಂದರ್ಭಕ್ಕೆ ನಿಗದಿಗೊಳಿಸುವುದು ಸರಿಯಲ್ಲ. ನನ್ನ ದೃಷ್ಟಿಯಲ್ಲಿ ಯಾವುದೇ ಶ್ರೇಷ್ಠ ಕಲಾಕೃತಿಯನ್ನು ಒಂದು ನಿರ್ದಿಷ್ಟ ಸಾಮಾಜಿಕ ಅಥವಾ ಚಾರಿತ್ರಿಕ ಸಂದರ್ಭಕ್ಕೆ ಜಡಿಯವುದೆಂದರೆ, ಕ್ರಿಸ್ತನನ್ನು ಮೊಳೆಗಳಿಂದ ಜಡಿದು ಶಿಲುಬೆಗೇರಿಸಿದಂತೆ ತೋರುತ್ತದೆ. ಪ್ರಾಚೀನ ಸಾಹಿತ್ಯವನ್ನು ತತ್ಕಾಲದಿಂದ ಬೇರ್ಪಡಿಸಿ ಹೇಗೆ ಪ್ರಸ್ತುತಗೊಳಿಸುತ್ತೇವೆಯೋ ಹಾಗೆಯೇ ಸಮಕಾಲೀನ ಸಾಹಿತ್ಯವನ್ನು ಕೂಡ ತತ್ಕಾಲದಿಂದ ಬೇರ್ಪಡಿಸಿ ಪ್ರಸ್ತುತಗೊಳಿಸಿಕೊಳ್ಳಬೇಕು. ಅಂಥ ಹಲವು ಬಗೆಗಳನ್ನು ಶೋಧಿಸಬೇಕು :

ಉದಾ : 'ಕಾನೂರು ಹೆಗ್ಗಡಿತಿ'ಯಲ್ಲಿರುವ ಕೋಳಿ ಅಂಕದ ವರ್ಣನೆ. ಬಾಡುಗಳ್ಳ ಸೋಮನು ತರುವ 'ಕುಂಭಕರ್ಣ'ನೆಂಬ ಕೋಳಿಯ ಹಿನ್ನೆಲೆ. ಕರ್ಣ, ಅರ್ಜುನ, ಅಭಿಮನ್ಯು ಎಂಬ ಅಂಕದ ಕೋಳಿಗಳು. 'ಕರ್ಣಾರ್ಜುನ ಕಾಳಗ' (=ಕೋಳಿ ಪಂದ್ಯ) ನೋಡುತ್ತಾ ಹೂವಯ್ಯನ ಆಜ್ಞೆಯನ್ನು ಮರೆತುಬಿಡುವ ಬಾಡುಗಳ್ಳ ಸೋಮ. ಕುವೆಂಪು ಕೋಳಿ ಅಂಕದ ವರ್ಣನೆಯಲ್ಲಿ ಯಕ್ಷಗಾನದ ಕಾಣ್ಕೆಯನ್ನೇ ಕೊಟ್ಟು ಬಿಡುತ್ತಾರೆ. ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ'ದಲ್ಲಿ ಪ್ರಾಣೇಶಾಚಾರ್ಯನು ಮಾಲೇರ ಪುಟ್ಟನೊಂದಿಗೆ ಕೋಳಿ ಅಂಕವನ್ನು ಇಣುಕಿ ನೋಡುತ್ತಾನೆ. ಇದು ಸ್ಪಷ್ಟವಾಗಿ ಸಂಸ್ಕೃತಿಯ ಹೊರನೋಟ. ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯಾಂಶವೆಂದರೆ 'ಕಟ್ಟಿಸಾಕಿ ಬೆಳೆಸಿದ ಕೋಳಿ'ಗೂ (=ಕುಂಭಕರ್ಣ), ಸ್ವೇಚ್ಛೆಯಾಗಿ ಬೆಳೆದ ಅಂಕದ ಕೋಳಿಗಳಿಗೂ (=ಕರ್ಣ, ಅರ್ಜುನ, ಅಭಿಮನ್ಯು) ಇರುವ ಅಂತರ. ಇದು ತನ್ನ ಧ್ವನಿಶಕ್ತಿಯಿಂದ ಕಟ್ಟಿಹಾಕಿ ಬೆಳೆಸಿದ ಕೋಳಿಗಳಂತಿರುವ ನಾಗರಿಕರಿಗೂ ಮತ್ತು ನಿಸರ್ಗದ ಮಡಿಲಿನಲ್ಲಿರುವ ಅಂಕದ ಕೋಳಿಗಳಂತೆ ಬದುಕುತ್ತಿರುವ ಗ್ರಾಮೀಣರಿಗೂ ಇರುವ ವ್ಯತ್ಯಾಸಗಳನ್ನೂ ನಿರೂಪಿಸುತ್ತದೆ. ಕಥಾಂತರ್ಗತವಾಗಿರುವ ಕೋಳಿ ಅಂಕವೆಂಬ ಸನ್ನಿವೇಶವನ್ನು ನಮ್ಮ ವರ್ತಮಾನದ ಬದುಕಿನ ವಿಶ್ಲೇಷಣೆಗೆ ಹೇಗೆ ಬಳಸಿಕೊಳ್ಳಬಹುದೆಂಬುದರ ಒಂದು ಸಣ್ಣ ಸೂಚನೆಯನ್ನಿಲ್ಲಿ ಕೊಡಲಾಗಿದೆ.

'ಸ್ಥಳೀಯ ಸಂಸ್ಕೃತಿ'ಯ ನೆಲೆಗಳನ್ನು ಆಧರಿಸಿದ ೧. ಜೀವಿ ವೈವಿಧ್ಯತೆ, ೨. ಭಾಷಾ ವೈವಿಧ್ಯತೆ, ೩. ಸಂಸ್ಕೃತಿ ವೈವಿಧ್ಯತೆಗಳನ್ನು ಅಖಂಡವಾಗಿ ಮನಗಂಡು ಕವಿತೆಗಳು-ನಾಟಕಗಳು-ಕತೆಗಳು-ಕಾದಂಬರಿಗಳು-ಮಹಾಕಾವ್ಯವನ್ನೂ ರಚನೆ ಮಾಡಿರುವ ಕುವೆಂಪು 'ವಿಶ್ವಾತ್ಮಕ ದೃಷ್ಟಿಕೋನ'ವನ್ನು ಸಹಜವಾಗಿಯೇ ಮೇಳೈಸಿದ್ದಾರೆ. ಇದನ್ನು ಗಮನಿಸಿದರೆ, ಬಾವಿಕಪ್ಪೆಯ ಕಣ್ಣು ಬಾನಾಡಿಯ ಕಣ್ಣಾಗಿ ಪರಿವರ್ತನೆಯಾಗುವ ಬಗೆಯನ್ನು ಕುವೆಂಪು ಸಾಹಿತ್ಯದಲ್ಲಿ ಮನಗಾಣಬಹುದು. ಕೊನೆಯದಾಗಿ, 'ಮಂತ್ರಾಕ್ಷತೆ'ಯಲ್ಲಿರುವ ಈ ಕಿರುಪದ್ಯವನ್ನು ಗಮನಿಸಿ :

'ಹೊನ್ನಿನ ಪ್ರಶ್ನೆಗೆ ಮಣ್ಣಿನ ಉತ್ತರ'

ಹೊನ್ನೆಂದಿತು ತಳತಳ ಮಿಂಚಿ :
"ಮೈಸೂರಿನ ಮಣ್ಣು
ಗಡಿ ದಾಟಲು ಹೊನ್ನು
ಎಲೆ ಮಣ್ಣೆ
ಏಕಿಲ್ಲಿಹೆ ನೀನಿನ್ನೂ ?"
ಮಣ್ಣೆಂದಿತು ಪಸುರ್ನಗೆ ಸೂಸಿ :
"ಅದೆ ನಿನಗೆನಗಿಹ ವ್ಯತ್ಯಾಸ
ಬೆಲೆ ಬರುವಲ್ಲಿಗೆ ನೀ ನೆಗೆವೆ
ನೆಲೆ ಇಲ್ಲದ ನೀ ಬೆಲೆವೆಣ್ಣು !
ನಾನಿರುವಲ್ಲಿಗೆ ಬೆಲೆ ಬರುವುದು
ನೆಲೆಯಾಗಿಹ ನಾ ನೆಲೆವೆಣ್ಣು"

ಈ ಕಿರುಪದ್ಯದಲ್ಲಿರುವ ಹೊನ್ನು-ಮಣ್ಣುಗಳ ಸಂವಾದ ಗಮನಾರ್ಹವಾಗಿದೆ : ತಳತಳ ಮಿಂಚುವ ಹೊನ್ನು, ಸುಬ್ರಹ್ಮಣ್ಯ ಸ್ವಾಮಿಯ ನವಿಲ ಪಯಣವನ್ನು ನೆನಪು ಮಾಡುತ್ತದೆ. ಇರುವಲ್ಲಿಗೆ ಬೆಲೆ ಬರುವುದೆಂದು ತಿಳಿದಿರುವ ಮಣ್ಣು, ಗಣಪತಿಯ ಪ್ರದಕ್ಷಿಣೆಯನ್ನು ನೆನಪಿಸುತ್ತದೆ. ಕುವೆಂಪು ಗಣಪತಿಯ ಸ್ವಭಾವದವರು ; ಸ್ಥಳೀಯ ಸಂಸ್ಕೃತಿಯ ಶಿವ-ಶಿವಾಣಿಯರಿಗೆ ಮೂರು ಸುತ್ತು ಹಾಕಿ, ವಿಶ್ವವಿಜೇತನಾಗಿ ಕುಳಿತವರು.

□

ಪ್ರೊ. ವಿ. ಚಂದ್ರಶೇಖರ ನಂಗಲಿ, ೧೬, ಶ್ರೀಗೌರಿ, ಕನಕನಗರ, ಬಸವೇಶ್ವರ ದೇವಸ್ಥಾನದ ಹತ್ತಿರ,
ಎಂ.ವಿ. ಬಡಾವಣೆ, ಹೊಸಕೋಟೆ, ಬೆಂಗಳೂರು-೫೬೨೧೧೪.

ದಲಿತ ಮಹಿಳೆ ಕಣ್ಣಲ್ಲಿ ಕುವೆಂಪು ಕಥನಗಳು

ದು. ಸರಸ್ವತಿ

ಇಂದಿನ ದಲಿತ ಮಹಿಳೆ ಮತ್ತು ಕುವೆಂಪು ಕಥನಗಳು ಎಂದಾಕ್ಷಣ ಶಿಕ್ಷಣ ಪಡೆದ ದಲಿತ ಮಹಿಳೆ ಎಂಬುದು ಸ್ಪಷ್ಟ. ಬಡತನ, ಅನಕ್ಷರತೆ, ಜಾತೀಯತೆ ಮತ್ತು ತಾರತಮ್ಯದ ಹಿನ್ನೆಲೆಯಲ್ಲಿ ನೋಡಿದಾಗ ಬಹುಪಾಲು ದಲಿತ ಮಹಿಳೆಯರು ಇಂದಿಗೂ ಎಂಥ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯ. ನಗರದ, ಮಧ್ಯಮ ವರ್ಗದ, 'ಶಿಕ್ಷಿತ' ದಲಿತ ಮಹಿಳೆಯಾಗಿ ನಾನೆಷ್ಟರ ಮಟ್ಟಿಗೆ ಒಟ್ಟಾರೆ ದಲಿತ ಮಹಿಳೆಯನ್ನು ಪ್ರತಿನಿಧಿಸುತ್ತೇನೋ ಗೊತ್ತಿಲ್ಲ. ಹಾಗಾಗಿ ನಾನಿಲ್ಲಿ ವ್ಯಕ್ತಪಡಿಸುತ್ತಿರುವುದು ನನ್ನ ವೈಯಕ್ತಿಕ ಅಭಿಪ್ರಾಯಗಳೆಂದು ಪರಿಗಣಿಸಬೇಕು. ಕುವೆಂಪುರವರ ಎರಡು ಕಾದಂಬರಿಗಳಲ್ಲಿ ನನ್ನ ಮನಸ್ಸಿಗೆ ತಟ್ಟಿದ, ಕಾಡಿದ ವಿಷಯ, ಪಾತ್ರಗಳ ಬಗ್ಗೆ ಹೇಳಲಿಷ್ಟಪಡುತ್ತೇನೆ. ಇವೂನೂ ಅನಿಸಿಕೆಗಳೇ ಹೊರತು ವಿಮರ್ಶೆಯಲ್ಲ.

ನಿನ್ನೆಯ ಗೋಷ್ಠಿಯಲ್ಲಿ ವೈದಿಕ, ಅವೈದಿಕ ರೂಪಕಗಳ ಕುರಿತು ಹೆಚ್ಚಿನ ಚರ್ಚೆಯಾಯಿತು. ಆ ಬಗ್ಗೆ ನನ್ನ ನಿಲುವನ್ನು ಸ್ಪಷ್ಟಪಡಿಸುವುದು ಸೂಕ್ತವೆನಿಸುತ್ತದೆ. ನನ್ನ ಮಿತಿಯೊಳಗೆ ನಾನು ಗ್ರಹಿಸಿರೋದು-ತಾನು, ತನ್ನದಷ್ಟೆ ಶ್ರೇಷ್ಠ ಉಳಿದದ್ದೆಲ್ಲ ನಿಕೃಷ್ಟ ಎಂಬ ಮನೋಭಾವನೆಯನ್ನ, ಏಕಾಧಿಪತ್ಯ, ಏಕರೂಪತೆಯನ್ನ ನಾನು ವೈದಿಕ ಅಂತ ಕರೀತೀನಿ. ಯಾವ ಕಸುಬೂ ಬರದ, ಒಂದು ಚೂರು ಕೈ ಕೆಸರು ಮಾಡಿಕೊಳ್ಳದ ಜನರು ಯಾವುದು ಶ್ರೇಷ್ಠ ಯಾವುದು ನಿಕೃಷ್ಟ ಅಂತ ನಿರ್ಧರಿಸುತ್ತಾರೆ ! ಹಾಗಾಗಿಯೇ ನಮ್ಮ ದೇಶದಲ್ಲಿ ದುಡಿಮೆಗೆ ಘನತೆಯೇ ಇಲ್ಲದಿರುವುದು. ಇನ್ನು ರೂಪಕಗಳಲ್ಲಿ ಮಾತನಾಡೋದು ಅದು ನಮ್ಮ style, ನಮ್ಮ language.

'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳನ್ನು ಪದೇ ಪದೇ ಓದಿದ್ದೇನೆ. ಎರಡೂ ಕಾದಂಬರಿಗಳಲ್ಲಿ ನನಗೆ ಅತ್ಯಂತ ಇಷ್ಟವಾಗುವುದು 'ಮಲೆಗಳಲ್ಲಿ ಮದುಮಗಳು'.

'ಕಾನೂರು ಹೆಗ್ಗಡಿತಿ' ಕಾದಂಬರಿಯನ್ನು ನಾನು ಮೊದಲು ಓದಿದ್ದು ಕಾನೂರು ಸುಬ್ಬಮ್ಮ ಹೆಗ್ಗಡಿತಿಯಾಗಿ. ಮುಂದೆ ಅದು ಕಾನೂರು ಹೆಗ್ಗಡಿತಿಯಾದದ್ದು ಸೂಕ್ತವೇ. ಯಾಕೆಂದರೆ ಈ ಕಾದಂಬರಿ ಓದಿದಾಗ ತಕ್ಷಣಕ್ಕೆ ಹೂವಯ್ಯ, ಚಂದ್ರೇಗೌಡರ ಕತೆ ಎನಿಸಿದರೂ ಅದು ಸುಬ್ಬಮ್ಮ, ಸೀತೆ, ನಾಗಮ್ಮ, ಲಕ್ಷ್ಮಿ ಹೆಗ್ಗಡಿತಿಯರ ಕತೆ.

ಕಾದಂಬರಿ ಓದುವಾಗ ಅಂದಿನ ಸಂದರ್ಭದ ಬದಲಾವಣೆಗಳ ಬಗ್ಗೆ ಕುತೂಹಲ ಮೂಡುತ್ತದೆ. ಸ್ವಾತಂತ್ರ್ಯ ಹೋರಾಟ, ಗಾಂಧಿಯವರ influence, ಆಧುನಿಕ ಶಿಕ್ಷಣ, ಹಿಂದೂಧರ್ಮದ ಸುಧಾರಣೆಗಳು, ಮೂಢನಂಬಿಕೆ ಕುರಿತ ವಿರೋಧ...ಇವೆಲ್ಲವನ್ನು ಕಾದಂಬರಿಯಲ್ಲಿ ನೋಡಬಹುದು. ಆದರ್ಶಪ್ರಾಯನಾಗಿರಬೇಕೆಂಬ ಹೂವಯ್ಯನ ಹಠ, ಪರದಾಟ, ಹುಡುಕಾಟಗಳೊಂದಿಗೆ ನನ್ನನ್ನು ತುಂಬಾ ಚೆನ್ನಾಗಿ ಗುರುತಿಸಿಕೊಳ್ಳಬಲ್ಲೆ. ಚಳುವಳಿಗಳು ಎತ್ತಿ ಹಿಡಿಯುವ ಆದರ್ಶಗಳನ್ನು ಹಸಿಹಸಿಯಾಗಿ ಅಳವಡಿಸಿಕೊಳ್ಳಲು ಹಠ ಹಿಡಿಯುವುದು, ಆ ಆದರ್ಶಗಳನ್ನು ಮನೆಯಲ್ಲೂ ಅಳವಡಿಸಲು ಹೋಗಿ, ಮನೆಯವರಿಗೆ ನಾವು ಹುಚ್ಚರು, ದುರಹಂಕಾರಿಗಳೆನಿಸಿ ನಮಗೆ ಅವರು ಮೂಢರು, ಸಂಕುಚಿತ ಮನೋಭಾವದವರೆನಿಸುವುದು, ಪುಸ್ತಕಗಳಿಂದ influence ಆಗುವುದು ಇತ್ಯಾದಿ. ('ಚಿದಂಬರ ರಹಸ್ಯ'ದ-ಬಾಂಬ್ ಸಿಡಿಸಿದ ನಂತರ ಮುಂದೆ ಮಾಡಬೇಕಾದುದಕ್ಕೆ ಮಾವೊತ್ಸೆತುಂಗನ ಪುಸ್ತಕದ ಪುಟಗಳಲ್ಲಿ ಉತ್ತರವಿದೆಯೆನ್ನುವ ಕ್ರಾಂತಿಕಾರಿ ಹುಡುಗರು ನೆನಪಿಗೆ ಬರುತ್ತಾರೆ.) ಬದಲಾವಣೆಯ ಅಲೆಗಳು ಯಾವುದೋ ಕಾಲಕ್ಕೆ ಪ್ರಾರಂಭವಾದರೂ, ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಸುಗಳ ಉತ್ಸಾಹ, ಚಡಪಡಿಕೆ, ಗೊಂದಲ ಒಂದೇ ರೀತಿ ಎನಿಸಿಬಿಡುತ್ತದೆ.

ಕಾದಂಬರಿಯಲ್ಲಿ ಸೀತೆಯೇ ಹೂವಯ್ಯನಿಗಿಂತ ಗಟ್ಟಿ ವ್ಯಕ್ತಿ. ಹೂವಯ್ಯನ ಬಗ್ಗೆ ಅವಳಿಗಿರುವ ಪ್ರೀತಿ, ವಿಶ್ವಾಸ ಅಚಲವಾದ್ದು, ಎಲ್ಲೂ ಅನುಮಾನವೇ ಇಲ್ಲ. ತನ್ನ ಪ್ರೀತಿಯನ್ನು ಪ್ರಕಟಪಡಿಸಲು ಹಿಂಜರಿಕೆಯಿಲ್ಲ. ಆದರೆ ತನ್ನ ಪ್ರೇಮವನ್ನು ಆದರ್ಶವೆಂದುಕೊಳ್ಳುವ ಹೂವಯ್ಯ ಅತ್ಯಂತ crucial ಆದ ಸಂದರ್ಭದಲ್ಲಿ ಸರಿಯಾದ ನಿಲುವು ತೆಗೆದುಕೊಳ್ಳದೆ ಸೀತೆಯ ಪ್ರೀತಿಯನ್ನೆ ಅನುಮಾನಿಸುತ್ತಾನೆ. ಸೀತೆ ಹೂವಯ್ಯನಿಗಾಗಿ ಹಂಬಲಿಸಿ, ಬೇರೊಬ್ಬನೊಂದಿಗೆ ನಿಶ್ಚಯವಾಗಿರುವ ಮದುವೆಯಿಂದ ತಪ್ಪಿಸಿಕೊಳ್ಳಲು ವಿಚಿತ್ರ ರೋಗದಿಂದ ನರಳುತ್ತಿರುತ್ತಾಳೆ. ಅವಳನ್ನು ನೋಡಲು ಹೂವಯ್ಯ ಹೋದಾಗ ಅವಳ ಸಂತೋಷ, ಸಂಕಟವೆಲ್ಲ ಕಣ್ಣೀರಾಗಿ ಹರಿಯುವುದನ್ನು ಕಂಡು ತಪ್ಪಾಗಿ ಅರ್ಥೈಸಿಕೊಳ್ಳುತ್ತಾನೆ. 'ಸೀತೆ ನಿಜವಾಗಿಯೂ ಕೃಷ್ಣಪ್ಪನಿಗಾಗಿ ಅಳುತ್ತಿದ್ದಾಳೆ. ಅವನನ್ನೆ ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದಳು. ಈಗಲೂ ಪ್ರೀತಿಸುತ್ತಿದ್ದಾಳೆ' ಎಂಬ ತಪ್ಪು ಭಾವ ಪ್ರಬಲತರವಾಗುತ್ತಿತ್ತು (ಪು. ೨೮೯) ಎಂಬುದನ್ನು ಓದುವಾಗ ಹೂವಯ್ಯ ಮೂರ್ಖ ಎನಿಸುತ್ತದೆ.

ತಾನು ಸೀತೆಯನ್ನು ಇಷ್ಟಪಟ್ಟಿದ್ದೇನೆ, ಆಕೆಯನ್ನ ಮದುವೆ ಆಗ್ತೀನಿ ಅಂತ ಕೇಳೋಕೆ ಹೂವಯ್ಯ ಮುಜುಗರ ಪಟ್ಕೋತಾನೆ. ಹಿಂದೆ ಮುಂದೆ ನೋಡ್ತಾನೆ. ಕೇಳೋಕೆ ಅಂತ ಮುತ್ತಳ್ಳಿಗೆ ಹೋಗಿ ಕೇಳದೆ ವಾಪಸ್ಸು ಬರೋದು ತುಂಬಾ irritate ಆಗುತ್ತೆ. ಇಂತಹ ಹೂವಯ್ಯ 'ಸೀತೆಯ ಮದುವೆಯನ್ನು ಕೃಷ್ಣಪ್ಪನೊಂದಿಗೆ ನಿಶ್ಚಯಿಸಿದವರು ಆಕೆಯ ಪಿತೃಗಳಾಗಿದ್ದರೂ ಸೀತೆಯ ಸಮ್ಮತಿಯೇ ಅದಕ್ಕೆ ಕಾರಣವೆಂದು' ಭಾವಿಸುತ್ತಾನೆ. ಅಸಮ್ಮತಿ ಸೂಚಿಸಬೇಕೆಂಬ ಧೈರ್ಯವನ್ನು ಸೀತೆಯಲ್ಲಿ ನಿರೀಕ್ಷಿಸುತ್ತಾನೆ!

ಹೂವಯ್ಯ ಆದರ್ಶ ಪ್ರೇಮವನ್ನು ತಲೆಗೆ ಹತ್ತಿಸಿಕೊಂಡು ಪರದಾಡಿ, ಅಲೆದಾಡಿ, ತೊಳಲಾಡಿ, ದಾಡಿ ಬಿಟ್ಟು ಬೋಳಿಸಿ....ಕೊನೆಗೆ ತಲುಪುವಂತಹ ಸ್ಥಿತಿಯನ್ನು ಸೀತೆ ಯಾವ ಸರ್ಕಸ್ ಮಾಡದೆ, ಸಂಕಟ ಅನುಭವಿಸುತ್ತಾ, ಕಷ್ಟಗಳಿಗೆ ಒಡ್ಡಿಕೊಳ್ಳುತ್ತಾ, ತನ್ನದೇ ರೀತಿಯಲ್ಲಿ ಪ್ರತಿಭಟಿಸುತ್ತಲೆ ತಲುಪುತ್ತಾಳೆ.

ಕಾದಂಬರಿಯಲ್ಲಿ ಬರುವ ಸುಬ್ಬಮ್ಮ ಎಂತಹವಳೆಂದರೆ "ದಾರಿದ್ರ್ಯದಲ್ಲಿ ಹುಟ್ಟಿ ಬೆಳೆದು, ಅಸಂಸ್ಕೃತರಿಂದ ಪೋಷಿತವಾಗಿ, ಅವರ ನಡೆನುಡಿ, ಆಚಾರ, ವ್ಯವಹಾರ, ಶೀಲಗಳನ್ನು ಕಲಿತ ಸುಬ್ಬಮ್ಮನಲ್ಲಿ ಸುಸಂಸ್ಕೃತ ಸ್ತ್ರೀ ಸಹಜವಾದ ಔದಾರ್ಯ, ಗಾಂಭೀರ್ಯ, ನಯ-ವಿನಯ, ಸಂಯಮ, ಸಂಚಲನಗಳು ಒಂದಿನಿತೂ ಇರಲಿಲ್ಲ. ಆದಕಾರಣ ಅದುವರೆಗೂ ಅವಕಾಶ ಸಿಕ್ಕದೆ ಸುಪ್ತವಾಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮೊದಲಾದ ಕಾಡುಭಾವಗಳು ಆಕೆ ಯಜಮಾನರ ಪತ್ನಿಯಾಗಿ ಕಾನೂರಿಗೆ ಹೆಗ್ಗಡಿತಿಯಾದ ಕೂಡಲೆ ಭಯಾನಕವಾಗಿ ಹೆಡೆಯೆತ್ತಿ ನಿಂತವು." (ಪು.೩೬) ಇಲ್ಲಿ ನಯ-ವಿನಯ, ಔದಾರ್ಯ-ಗಾಂಭೀರ್ಯ ಇವಕ್ಕೂ ವರ್ಗ ಹಿನ್ನೆಲೆಗೂ ಇರೋ ಸಂಬಂಧ ಗಮನಿಸಬೇಕು. ಸುಬ್ಬಮ್ಮ ನಿಜವಾಗಿಯೂ ಹೆಗ್ಗಡಿತಿಯ ರೀತಿ ವರ್ತಿಸಿದ್ರೆ 'ನೋಡಪ್ಪ ತಿನ್ನೋಕೆ ಗತಿ ಇಲ್ದೋಳು ಈಗ ಆಗಿರೋದು" ಅಂತ ಅಥವಾ ಬಡ ಹಳ್ಳಿ ಹೆಂಗಸಿನ ಹಾಗೆ ವರ್ತಿಸಿದ್ರೆ 'ಎಷ್ಟಾಗ್ಲಿ ಮೂಲ ಯಾವುದೇಳು' ಅಂತ ಅನಿಸ್ಕೊಂಡಿರ್ತಿದ್ಲು. ಜಾತಿಯೊಂದೇ ಆದ್ರು ಬಡವಳು ಅನ್ನೋ ಕಾರಣಕ್ಕೆ ಸಿಗೋ ಅನಾದರ ಎಂತದ್ದು ಅಂದ್ರೆ ಪುಟ್ಟ ವಾಸುವು ಕೂಡ ಆಕೆಯನ್ನು 'ಹಡ್ಡೆ ಮುಂಡೆ' ಅಂತ ಬೈಯಬಲ್ಲ.

ಗಂಡ ಬಂಜೆ ಬಂಜೆ ಅನ್ನೋದನ್ನೆ ನಿಜವೆಂದುಕೊಳ್ಳುವ ಸುಬ್ಬಮ್ಮ ತನ್ನೊಳಗೆ ಜೀವ ಚಿಗುರಿದ ಸಂದರ್ಭದಲ್ಲಿ ತನ್ನ ಜೀವವನ್ನ ಕಳೆದುಕೊಳ್ಳೋ ದುರಂತ ಸಂಕಟ ಹುಟ್ಟಿಸುತ್ತೆ. 'ಬಂಜೆ'ಯಾಗಿ ಚಂದ್ರಯ್ಯಗೌಡರ ಹೆಂಡತಿಯಾಗಿರೋಕೆ ಸಮ್ಮತಿ ಸಿಗುತ್ತೆ, ಜೀವ ಚಿಗುರಿಸೊ ಸಹಜವಾದ ಶಕ್ತಿಯ ಹೆಣ್ಣಾಗಿರೋಕೆ ಆ ಸಮಾಜದ ಸಮ್ಮತಿ ಸಿಗಲ್ಲ. ದಲಿತರನ್ನು, ಮಹಿಳೆಯರನ್ನು ಕೀಳು ಕೀಳು ಅಂದು ನಾವು ನಮ್ಮನ್ನೆ ಕೀಳು ಅಂತ ನಂಬಿಬಿಟ್ಟಿದ್ವೀವಿ. ಚಿಗುರೋ ಶಕ್ತಿಯುಳ್ಳ ನಮ್ಮ ಚೈತನ್ಯವೇ ನಮ್ಮ ಮನಸ್ಸಿನಿಂದ ಮಾಸಿಹೋಗಿದೆ. ಹಾಗೊಮ್ಮೆ ನೆನಪಿಸಿಕೊಂಡೋ, ಆಚಾನಕ್ಕಾಗೋ, ನಮ್ಮ ಚೈತನ್ಯ ಮೊಳಕೆಯೊಡೆದ್ರೆ ಗರ್ಭಪಾತ ಮಾಡಿಸುವ 'ಮದ್ದು'ಗಳು ಇದ್ದೇ ಇರ್ತವೆ.

ಕಾದಂಬರಿಯಲ್ಲಿ ಬರೋ ಕೃಷ್ಣಪ್ಪ ಮನಸ್ಸನ್ನು ಕಲಕೋದು ಅವನ ದಾರುಣಮಯವಾದ ಸಾವಿನೊಂದಿಗೆ. ಆ ಇಡೀ ಸಂದರ್ಭವೇ ದುರಂತಮಯ. ಕೃಷ್ಣಪ್ಪ ಬೇಟೆಗೆ ಹೊರಟಾಗ ತಾಯಿಗೇನೋ ಆತಂಕ. ಕೃಷ್ಣಪ್ಪನ ಮನಸ್ಸು ಸರಿ ಇಲ್ಲ, ತಂದೆ ಹೀಯಾಳಿಸಿದ್ದಕ್ಕೆ ಸಿಟ್ಟಾಗಿದ್ದಾನೆ. ಏನೋ ಅಳುಕು, ಅಪಶಕುನದ ಸೂಚನೆಯಲ್ಲೇ ಕೃಷ್ಣಪ್ಪ ಬೇಟೆಗೆ ಹೊರಡುತ್ತಾನೆ. ಬೇಟೆಗೆ ಕೃಷ್ಣಪ್ಪ, ಹುಲಿ, ಜಾಕಿ ಮೂವರು ಬಲಿಯಾಗುತ್ತಾರೆ. ಹೃದಯ ವಿದ್ರಾವಕ ಘಟನೆಯ ಸಂದರ್ಭದಲ್ಲಿ ಸೀತೆ ಮನಸ್ಥಿತಿ ಎಂತದ್ದೆಂದರೆ "ವಿದೇಶದಲ್ಲಿ ಕಗ್ಗತ್ತಲೆಯ ಗುಹಾಕಾರ ಗೃಹದಲ್ಲಿ ಬಹುಕಾಲದಿಂದಲೂ ಬಂಧಿತನಾಗಿ ಮೃತಪ್ರಾಯವಾಗಿದ್ದವನನ್ನು ಸೆರೆಯಿಂದ ಬಿಡಿಸಿ ಸ್ವದೇಶದ ನಿರ್ಮಲವಾದ ವಾಯುಮಂಡಲದಲ್ಲಿ ಬಾನು, ಬಿಸಿಲು, ಕಾಡು, ಹೊಳೆ, ತೊರೆ, ಕೆರೆ, ಪೈರು ಪಚ್ಚೆಗಳ ಹುಲುಸಾದ ಸನ್ನಿವೇಶದಲ್ಲಿ ಬಿಟ್ಟಂತೆ ಆಗಿದ್ದಳು". ಹೂವಯ್ಯನ 'ಹೃದಯದಲ್ಲಿ ಏನೋ ಒಂದು ಮಹಾಪರಿವರ್ತನೆಯಾಗುತ್ತಿತ್ತು. ಉಲ್ಲಾಸದ ಬುಗ್ಗೆ ಮತ್ತೊಮ್ಮೆ ಕಣ್ಣು ಬಿಡುತ್ತಿತ್ತು. ಹಿಂದೆ ಕೃಷ್ಣಪ್ಪ ಸೀತೆಯರ ವಿವಾಹ ನಿಶ್ಚಯದಿಂದ ಭಗ್ನವಾಗಿದ್ದ ಆಸೆ ಮರಳಿ ಮೊಳೆಯುತ್ತಿತ್ತು....ತನ್ನ ಮುಖದಲ್ಲೇನೋ ಹೊಸ ಹೊಳಪು ಮೂಡಿದೆ ಎನಿಸಿ ನೀರಿನಲ್ಲಿ ನೋಡಿಕೊಂಡು ಸರಿ ಎಂದು ಹಿಗ್ಗುವನು" (ಪು. ೨೮೨) ಗಂಡು ಹೆಣ್ಣಿನ ನಡುವಿನ ಬಯಕೆಯ ಉತ್ಕಟತೆ ದಟ್ಟ ಕಾಡಿನ ಸೌಂದರ್ಯದಷ್ಟೆ ಮಾಂತ್ರಿಕ ಹಾಗು rutihless !

ಮಂತ್ರ, ತಂತ್ರಗಳ ಮೂಲಕ ನಿರಂತರವಾಗಿ ಹುಟ್ಟಿಸುವ ಭೀತಿ ಕೊನೆಗೆ ನಮ್ಮ ಮಾನಸಿಕ ಸ್ಥಿತಿಯೇ ಆಗಿಬಿಡುತ್ತದೆ ಎನ್ನುವುದನ್ನ ಗಂಗ ಹುಡುಗನ ಸಾವಿನಲ್ಲಿ ಕಾಣಬಹುದು. ಮಂತ್ರದ ತೆಂಗಿನ ಕಾಯಿ ದೆಸೆಯಿಂದಾಗಿ ಕದ್ದ ಕೋಳಿಯ ಬದಲಿಗೆ ಜೀವವನ್ನೆ ಬಿಡುತ್ತಾನೆ ಗಂಗ ಹುಡುಗ. ನಮ್ಮ ಊರಲ್ಲಿ ದೇವಸ್ಥಾನದ ಒಳಗೆ ಹೋಗೋ ಕಾನೂನು ಬಂದು ಯಾವುದೋ ಕಾಲವಾಯ್ತು. ಆದ್ರೆ ಈಗಿನ ಜನಾಂಗವೂ ದೇವಸ್ಥಾನದ ಒಳಗೆ ಹೋಗಲ್ಲ. 'ಯವ್ವ ನಾ ಕೆಟ್ಟೆ ಒಳಿಕೋದ್ರುಂಟಾ ಆ ನಂತಾಯಿ ಕಣ್ಣಿಗ್ ಮಳೆ ಊದ್ ಬುಡ್ತಳಪ್ಪೆಯಾ, ಒಳಿಕೋಗದ್ದಿದ್ರೆ ಏನಂತೆ ಆ ಕಿಟ್ಕಿ ತವಳಿಂದ ನೋಡಿದ್ರೆ ತಾಯಿ ಮುಖಾ ಚೆಂದಿಗೆ ಕಾಣುತ್ತೆ, ಅಷ್ಟ್ ಸಾಕು' ಅಂತರೆ. ಕಾನೂನು ಕೋರ್ಟು ಮಾಡದ ಕೆಲಸವನ್ನ ಮಂತ್ರ, ತಂತ್ರಗಳು ಯಶಸ್ವಿಯಾಗಿ ಮಾಡುತ್ತವೆ.

ದುಡಿತಕ್ಕೂ ಕುಡಿತಕ್ಕೂ ತಪ್ಪದ ನಂಟು. ಕಳ್ಳಿನಂಗಡಿಯ ಪ್ರಸಂಗದ ತಮಾಷೆಯ ಹಿಂದೆ ನೋವೆ ಕಾಣಿಸೋದು. ಅಲ್ಲಿಗೆ ಬರೋರೆಲ್ಲ ದುಡಿಯೋ ಕೂಲಿಗಳು, ಸಂಪಾದಿಸುವ ಚೂರು ಪಾರನ್ನು ಕಳೆದುಕೊಂಡು ತಮಾಷೆಯ ವಸ್ತುಗಳಾಗಬಲ್ಲವರು, ಕುಡುಕರೆಂಬ ಅವಹೇಳನಕ್ಕೂ ಗುರಿಯಾಗಬಲ್ಲರು. 'ಕುಡಿದೆ ಇದ್ರೆ ನಾತದಲ್ಲಿ ಕೆಲ್ಸ ಮಾಡೋಕೆ ಆಗಲ್ಲ' ಅಂತಾರೆ-ನಾಗರಿಕರ ಹೊಲಸನ್ನ ಸ್ವಚ್ಛಗೊಳಿಸುವ ಸಫಾಯಿ ಕರ್ಮಚಾರಿಗಳು. ಅವರಿಗೆ ಕುಡಿಬೇಡಿ ಅಂತ ಬೋಧಿಸುವುದು ನನ್ನ ದುರಹಂಕಾರವಾಗುತ್ತದೆ.

ಭಯವೆಂಬುದೇ ಗೊತ್ತಿಲ್ಲದ, ಹಗಲು ರಾತ್ರಿ ಎನ್ನದೆ ಕೋವಿಯನ್ನು ಹೆಗಲಿಗೆ ಹಾಕಿಕೊಂಡು ಕಾಡು ತಿರುಗುವ ಪುಟ್ಟಣ್ಣ ಏನೆಲ್ಲಾ ಕಸುಬುಗಳು ಗೊತ್ತಿದ್ದರೂ ಯಾವುದನ್ನೂ ಸಂಪಾದನೆಗೆ ಬಳಸಿಕೊಳ್ಳದವ. ಮದುವೆ, ಮನೆ, ಮಠ, ಗದ್ದೆ ಗಿದ್ದೆ ಏನೂ ಇಲ್ಲದ ಅವನು ಪುಟ್ಟ ವಾಸುವಿನಿಂದ ಹಿಡಿದು ಹಿರಿಯಳಾದ ನಾಗಮ್ಮನವರೆಗೂ ಎಲ್ಲರಿಗೂ ಬೇಕಾದವನು. ಎಲ್ಲರ ಕಷ್ಟಕ್ಕೂ ಆಗುವ ಅವನೆಂದೂ ಯಾರೆದುರೂ ತನ್ನ ಸಂಕಟ ತೋಡಿಕೊಂಡವನಲ್ಲ. ಮಹಾ ಸಾಹಸಿಗನಾದ ಈ ಬೇಟೆಗಾರ ತನ್ನ ಮೆಚ್ಚಿನ ನಾಯಿ ಸತ್ತುಹೋದಾಗ ಮಗುವಿನಂತೆ ಅಳುತ್ತಾನೆ. ತನ್ನ ಬಳಿಯಿದ್ದ ಅತ್ಯುತ್ತಮವಾದ ಪಂಚೆಯಲ್ಲಿ ನಾಯಿಯನ್ನು ಸುತ್ತಿ ಮಣ್ಣು ಮಾಡಿ ತನ್ನ ತಾಯಿ ಸ್ವರ್ಗಕ್ಕೆ ಹೋದಂತೆ ಕಲ್ಪಿಸಿಕೊಳ್ಳುವ ಭಾವುಕ. ಹೊಡೆದಾಟದಲ್ಲಿ ದೈತ್ಯನಾದ ಪುಟ್ಟಣ್ಣ ತನ್ನ ಮೆಚ್ಚಿನ ನಾಯಿಯನ್ನೆ ಕೊಂದ ಜಾಕಿ ಸಾವು ಬದುಕಿನೊಂದಿಗೆ ಹೊಡೆದಾಡುವಾಗ ಕರುಣೆಯಿಂದ ನೋಡಿಕೊಳ್ಳುವ ಮೃದು ಮನಸ್ಸಿನವನು. ಹೂವಯ್ಯ ಇವನನ್ನು ಕಾಡು ಫಕೀರನೆಂದು ತಮಾಷೆ ಮಾಡುತ್ತಾನೆ. ಪುಟ್ಟಣ್ಣ ನಿಜವಾಗಿಯೂ ಕಾಡುಫಕೀರ. ಕುತೂಹಲ ಮೂಡಿಸುವ ಪುಟ್ಟಣ್ಣನ ಬದುಕೇ ಒಂದು ಕಾದಂಬರಿಯಾಗಬಲ್ಲದು.

ಶ್ಯಾಮಯ್ಯಗೌಡರು ಪೂಜೆ ಮಾಡುವ ಸಂದರ್ಭದಲ್ಲಿ ಬರುವ ನಾಮದ ಪೆಟ್ಟಿಗೆ ಕುರಿತು ಕುವೆಂಪು ಹೀಗೆ ಬರೆಯುತ್ತಾರೆ-"ಪೆಟ್ಟಿಗೆಯ ಸಂದುಗಳಲ್ಲಿ ಆಸ್ತಿಕರ ಸಮಾಜದಲ್ಲಿ ನಾಸ್ತಿಕರೂ ತಮ್ಮ ಅಭಿಪ್ರಾಯಗಳನ್ನು ಗೌಪ್ಯವಾಗಿಟ್ಟುಕೊಂಡು ಜೀವಯಾಪನೆ ಮಾಡುವಂತೆ ಕೆಲವು ಸಣ್ಣ ತಣಸಿನ ಹುಳುಗಳು ಗೌಡರ ಕಣ್ಣಿಗೆ ಬೀಳದಂತೆ ವಾಸ ಮಾಡಿಕೊಂಡಿದ್ದವು". ಈ ಆಸ್ತಿಕ, ನಾಸ್ತಿಕ ಅನ್ನೋ rigid ಗೆರೆಗಳು ಏನೆಲ್ಲ ಅಸಹನೆ ಗೊಂದಲಗಳಿಗೆ ಕಾರಣವಾಗ್ತವೆ ಅನ್ನಿಸುತ್ತೆ. ದೇವರು ಎಂದಕೂಡಲೇ ನಾಸ್ತಿಕರು ಮೂಗು ಮುರಿಯುವುದು, ನಾಸ್ತಿಕರನ್ನು ಕಂಡು ಆಸ್ತಿಕರು ಕೆರಳುವುದು,

ವಿಚಾರವಂತರೆಂದುಕೊಂಡೆ ಪೂಜೆ ಪುರಸ್ಕಾರ ಮಾಡುವುದು, ಪ್ರತಿಯೊಂದು ಆಚರಣೆಗೂ 'ವೈಜ್ಞಾನಿಕ' ವಿಶ್ಲೇಷಣೆ ನೀಡಿ ಸಮರ್ಥಿಸಿಕೊಳ್ಳುವುದು ಇವೆಲ್ಲ ನೆನಪಿಗೆ ಬರುತ್ತದೆ. ಕಾದಂಬರಿಯಲ್ಲೂ ಸಹ ಹರಕೆ, ಆಯಾರವನ್ನು ಮೂಢನಂಬಿಕೆ ಎಂದು ಜರಿಯುವ ಹೂವಯ್ಯನೂ ತನ್ನ ಮನೆಯಲ್ಲಿ ಮಹಾಪುರುಷರ ಫೋಟೋವನ್ನಿಟ್ಟುಕೊಂಡು ಪೂಜಿಸುತ್ತಾರೆ. ಕಾದಂಬರಿಯ ಕೊನೆಯಲ್ಲಿ ಹೂವಯ್ಯ ವ್ಯವಸ್ಥೆ ಮಾಡಿರುವ ಸಮಾರಂಭದಲ್ಲಿ ಪಾಲ್ಗೊಳ್ಳಲು ಎಲ್ಲರೂ ಬರುತ್ತಾರೆ. ಸೀತೆ ಬಂದ ಕೂಡಲೆ ಹೂವಯ್ಯನಿಗೆ ನಮಿಸುತ್ತಾಳೆ. ಪೂಜಿಸುವ, ನಮಿಸುವ, ಭಾವಪರವಶರಾಗುವ ಗುಣ ಸಹಜವಾದದ್ದು. sentiment ಗಳೂ ಸಹ ಪುಸ್ತಕದ ಬಗ್ಗೆ ಇರಬಹುದು, ನಾಯಕನ ಬಗ್ಗೆ ಇರಬಹುದು, ಸಿದ್ಧಾಂತದ ಬಗ್ಗೆ ಇರಬಹುದು. ಹೂವಯ್ಯ ಮಳೆಯನ್ನ ನೋಡುತ್ತಾ ಭಾವಪರವಶನಾಗಬಲ್ಲ, ಪುಟ್ಟಣ್ಣ ಆಕಾಶದತ್ತ ನೋಡುತ್ತಾ ತನ್ನ ಪ್ರೀತಿಯ ನಾಯಿ ಸ್ವರ್ಗಕ್ಕೆ ಹೋಗುತ್ತಿರುವಂತೆನಿಸಿ ಭಾವಪರವಶನಾಗಬಲ್ಲ. ಎರಡನ್ನೂ ಗ್ರಹಿಸಬಲ್ಲದು ಕುವೆಂಪುರವರ ಮನಸ್ಸು.

ಇಷ್ಟರ ನಡುವೆಯೂ ಬಲಿಯಾಗಬೇಕಿದ್ದ ಮೇಕೆಯನ್ನ ಉಳಿಸಿ ಸಾಕುವ ಹೂವಯ್ಯನಿಗೆ ಅದನ್ನ ಕೊಂದು ಹಾಕಿದ್ದು ಮಾತ್ರ ತಿಳಿಲೇಇಲ್ವಲ್ಲ; ಆ ಬಗ್ಗೆ ಹೂವಯ್ಯನೂ ಕೇಳಲಿಲ್ಲವಲ್ಲ ಅನ್ನೊ ಪ್ರಶ್ನೆ ಬರುತ್ತೆ ಓದುವ ಮನಸ್ಸಿಗೆ.

'ಮಲೆಗಳಲ್ಲಿ ಮದುಮಗಳು' ನನಗೆ ಅತ್ಯಂತ ಇಷ್ಟವಾದ ಕಾದಂಬರಿ. ಈ ಕಾದಂಬರಿಯ ಗುತ್ತಿ-ತಿಮ್ಮಿ, ಪೀಂಚಲು-ಐತರು ಯಾವುದೇ ಉತ್ಕೃಷ್ಟವಾದ ಪ್ರೇಮಕಥೆಯ ನಾಯಕ-ನಾಯಕಿಯರಿಗೆ ಸಾಟಿಯಾಗಬಲ್ಲರು.

"ಪೂರ್ವದಿಗಂತದಿಂದ ಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೇಳುತ್ತಿದ್ದನು. ಕಣಿವೆಗಳನ್ನು ತುಂಬಿದ್ದ ಆ ಮಂಜಿನ ನೊರೆ ನೊರೆಯ ಸಮುದ್ರ, ಹಸುರು ದ್ವೀಪಗಳಂತೆ ನಡು ನಡುವೆ ತಲೆಯೆತ್ತಿದ್ದ ಮಲೆನೆತ್ತಿಗಳು, ಮೂಡುಬಾನಿನಲ್ಲಿ ಸಾಗುತ್ತಿದ್ದ ಆ ಮೋಡಗಳ ವರ್ಣಲೀಲೆ, ಇವುಗಳ ಸುವಿಸ್ತೃತ ಭಿತ್ತಿ ವೇದಿಕೆಯಲ್ಲಿ ಆವಿರ್ಭವಿಸುತ್ತಿದ್ದ ಚೈತ್ರರವಿ" ಕಂಡು ತಿಮ್ಮಿಯ ಉದ್ಗಾರ ಹೀಗಿದೆ :

"ಅಯ್ಯೋ ಅಯ್ಯೋ ಅಯ್ಯೋ ! ಅದೇನು ಬಾವ ಅದು ನೊರೆ, ನೊರೆ, ನೊರೆ ಹಾಲು! ಕಡ್ಡು ನಿಂತ್ಹಾಂಗೆ ಅದೆಯಲ್ಲಾ ?....ಅಯ್ಯೊ ಅಯ್ಯೋ ಅಯ್ಯೋ ! ಬಾವ ಬಾವ ಬಾವ ! ಅಲ್ನೋಡು ಅಲ್ನೋಡು ಅಲ್ನೋಡು !" ಎನ್ನುತ್ತಾ ಕೈ ಮುಗಿದುಕೊಂಡು ಸುಮ್ಮನೆ ನಿಂತುಬಿಡುತ್ತಾಳೆ.

ಇಂತಹ ನಿಸರ್ಗದ ವರ್ಣನೆಗಳು ಕೃತಿಯ ಉದ್ದಕ್ಕೂ ಹಾಸುಹೊಕ್ಕಾಡಿವೆ. ನೆನಪಿಗೆ ಬಂದದ್ದನ್ನು ಇಲ್ಲಿ ಹೇಳುವೆ : "ಎಷ್ಟು ಹಕ್ಕಿಗಳಿವೆ ಈ ಕಾಡಿನ ಸೆರಗಿನಲ್ಲಿ ? ಯಾವ ಯಾವ ತರಹದ ಹಕ್ಕಿ, ಎಷ್ಟು ಬಣ್ಣ, ಒಂದೊಂದರ ಕೂಗು ಒಂದೊಂದು ತರ, ಸಿಳ್ಳು ಹಾಕುವ ನೇಲುಪುಕ್ಕದ ಕಾಜಾಣ .... ಗಿಣಿ ಹಿಂಡು .... ಕಾಮಳ್ಳಿ ಹಿಂಡು .... ಪಿಕಳಾರ ...... ಎಲ್ಲವೂ ಒಟ್ಟುಲಿದು ಕಾಡೆಲ್ಲಾ ಗಿಲಿಗಿಚ್ಚಿ ಆಡಿಸಿದ ಹಾಂಗಿದಿಯಲ್ಲ !"

"ಮಲೆಯೋ ಅಲೆ ಅಲೆಯಾಗಿ ಬಾನ್ಮುಟ್ಟಿ ತಲೆ ಎತ್ತಿ ನಿಂತಿದೆ ! ಕಾಡೋ ? ದಿಗಂತ ವಿಶ್ರಾಂತವಾಗಿ, ದಟ್ಟವಾಗಿ, ವ್ಯಾಘ್ರ ಭೀಷಣವಾಗಿ, ವರಾಹ ಕಠೋರವಾಗಿ ಹಸರಿಸಿದೆ. ಮಳೆಯೋ ಹಗಲು ಇರುಳೂ ಒಂದೇ ಸಮನೆ ಸುರಿಯುತ್ತಿದೆ, ಹೊಡೆಯುತ್ತಿದೆ, ಜಡಿಯುತ್ತಿದೆ ? "

ಹಲಸು, ದೀರ್ಕ, ಮಾವು, ಕಲ್ಲು ಸಂಪಿಗೆ ಹಣ್ಣುಗಳು -

ಹುಂಡುಕೋಳಿ, ಚಿಟ್ಟುಗೋಳಿ, ಕಾಡುಕೋಳಿ, ಮಿಗ, ಬರ್ಕ, ಕುರ್ಕ, ಸಲಗ, ಹಂದಿ, ಮೊಲ, ದೊಡ್ಡಿನ ಹಿಂಡು, ಹುಲಿ -

ಬೆತ್ತದ ಹಿಂಡಿಲು, ವಾಟೆಯ ಹಿಂಡಿಲು, ಬಿದಿರ ಹಿಂಡಿಲು, ಹಳು ಮರಸು ಕೂರುವುದು, ಜೇನು ಕೀಳೊದು, ಹಕ್ಕಿ ಹೊಡೆಯೋದು, ಗಾಳ ಹಾಕೋದು, ಬಲೆ ಬೀಸೋದು, ಬತ್ತಿ ಕೋವಿ, ಭರ್ಜಿ, ಈಟಿ, ಉದ್ದಗತ್ತಿ, ಬಿಲ್ಲುಬಾಣ -

ಎರಡೊ, ಮೂರೋ ದೊಡ್ಡ ಮಳೆ ಕಂಡಿರುವ, ಕಾಂಕ್ರೀಟ್ ಕಟ್ಟಡಗಳ ನಡುವೆ ಬೆಳವಣಿಗೆ, ಹಸುರಿಗೆ, ಹಕ್ಕಿಗೆ ಹಾತೊರೆವ ನನ್ನಂತಹವರಿಗೆ ಕುವೆಂಪು ಚಿತ್ರಿಸುವ ಕಾಡು ಎಂತಹ ಭಾವನೆಗಳನ್ನುಂಟು ಮಾಡಬಹುದೆಂದರೆ ಹೂವಯ್ಯನಂತೆ ಭಾವ ಪರವಶರಾಗಿ ಕಣ್ಣೀರು ಹಾಕಿಬಿಡಬಹುದು. ಇಂತಹ ಮಲೆಯ ಕಾಡಿನೊಳಗೆ .... ಗುತ್ತಿ-ತಿಮ್ಮಿ ಪೀಂಚಲು-ಐತ !

ಗುತ್ತಿ "ಪ್ರಕೃತಿಯ ಒಂದಂಶವಾಗಿದ್ದನು : ಬೆಟ್ಟದಲ್ಲಿ ಬಂಡೆಯಂತೆ ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು" (ಪು.೭) ಜೊತೆಗೆ ಜಾಣ್ಮೆ, ಧೈರ್ಯ, ಸಾಹಸ, ಸಮಯ ಪ್ರಜ್ಞೆಯಲ್ಲಿ ಯಾರಿಗೂ ಕಡಿಮೆಯವನಲ್ಲ. ಸಾಲ ಕೊಟ್ಟು ಕರೀಂ ಸಾಬಿ ವಾಪಾಸ್ಸು ಕೇಳಿದಾಗ "ಇನ್ನೆಂಟು ದಿನ ತಡೀರಿ, ನನ್ನ ಮದೇಗೆ ಹೆಗ್ಗಡೇರ ಕೈಲಿ ದುಡ್ಡು ಕೇಳಿನಿ. ಅದ್ರಾಗೆ ನಿಮ್ಮ ಚಿಳ್ರೆನೂ ತೀರ್ಸಿ ಬಿಡ್ತೀನಿ" ಅನ್ನೊ ಗುತ್ತಿಯ ವ್ಯಂಗ್ಯನೋಡಿ. ದೊಡ್ಡ ಸಾಲ ತಗೊಂಡು ಚಿಕ್ಕ ಸಾಲವನ್ನು ಚಿಳ್ರೆ ಮಾಡೊ ಜಾಣ ! ಭೀಕರವಾದ ಕಾಡಿನಲ್ಲಿ ಕಾಡೆಮ್ಮೆಗಳ ಹಿಂಡಿನಿಂದ ತಪ್ಪಿಸಿಕೊಳ್ಳುವಂತಹ ಸಾಹಸ ಮಾಡುವ ಗುತ್ತಿ, ತಿಮ್ಮಿ ಕೈಬಿಟ್ಟು ಹೋಗಬಾರದೆಂದು ಅಂತ್ರ ಕಟ್ಟಿಸಿಕೊಳ್ಳೊ ಪುಕ್ಕಲ ! 'ನಾನು ಇವಳಿಗೆ ಅಧೀನವಾಗದಿದ್ದರೆ ಇವಳು ನನಗೆ ಅಧೀನವಾಗುವ ಚೇತನವಲ್ಲ'ವೆಂದು ತಿಮ್ಮಿಯ ಗಟ್ಟಿತನವನ್ನು ಅರಿತುಕೊಳ್ಳಬಲ್ಲ. ತನ್ನ ಜೀವವಾದ ಹುಲಿಯನಿಗೆ ಪೆಟ್ಟಾದಾಗ ತನ್ನ ಪ್ರೀತಿಯ ತಿಮ್ಮಿಯನ್ನೆ "ಸನಿಮುಂಡೆ, ನಿನ್ನದೆಸಿಂದ ನನ್ನ ನಾಯಿನೂ ಹೋಯ್ತಲ್ಲೇ ! ಯಾವ ಇಸಗಳಿಗೇಲಿ ಹುಟ್ಟಿದ್ಯೋ ನೀನು ಹುಲಿಯಾನ ತಿನ್ನಾಕೆ" ಎಂದು ಸಿಡುಕಬಲ್ಲ. ಗುಡ್ಡದ ನೆತ್ತಿಯ ಮೇಲೆ ಕಾಡು ಪ್ರಾಣಿಗಳಿಂದ, ಚಳಿಯಿಂದ ತಿಮ್ಮಿಯನ್ನು ಜೋಪಾನ ಮಾಡೋ ಹೆಂಗರುಳ. ಬೆಳಗಿನ ಕಾವಣ ಕಂಡು ಆನಂದಪಡುವ ತಿಮ್ಮಿಗೆ 'ಕೆಳೂಗೆ ಬಿಡಾರದಾಗೇ ಕೂತುಕೊಂಡಿದ್ರೆ ಹೆಂಗೆ ಕಾಣ್ತದೆ ಇದೆಲ್ಲಾ' ಅನ್ನೋ ಗುತ್ತಿ ಬಿಡಾರದಾಚೆಗಿನ ವಿಸ್ಮಯಗಳು ಕೊಡೊ ಆನಂದ ಬಲ್ಲ. ಆ ಆನಂದವನ್ನು ಜೊತೆಗಾತಿಯೊಂದಿಗೆ ಹಂಚಿಕೊಳ್ಳಬಲ್ಲ. ತನ್ನ ಹುಲಿಯನನ್ನು ಮಾರಿದೆನೆಂಬ ಭಾವನೆ ಬಂದು ಬಿಕ್ಕಿ ಬಿಕ್ಕಿ ಅಳುವ ಗುತ್ತಿ, ಹಿಂತಿರುಗಿ ಬಂದು ಕೊಟ್ಟ ಅಂಗಿ ಪಂಚೆ ರೂಪಾಯಿ ಹಿಂತಿರುಗಿಸುತ್ತಾನೆ. 'ನನಗೆ ನಾಯಿಯನ್ನು ಕೊಡದಿದ್ದರೂ ಚಿಂತೆಯಿಲ್ಲ, ಅದನ್ನು ಮಾರಿಬಿಟ್ಟೆ ಎಂದು ನನ್ನ ಮನಸ್ಸಿಗೆ ಇಸ್ಸಿ ಆಗಬಾರದು ; ಆದ್ದರಿಂದ ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ. ಈ ಸಾಮಾನ್ನೆಲ್ಲ ಹಿಂದಕ್ಕೆ ತೆಗೆದುಕೊಳ್ಳಿ" ಎನ್ನುವ ಗುತ್ತಿ 'ಮಾರಾಟ' ಬಯಸದ 'ಶ್ರೀಮಂತ'.

ತಿಮ್ಮಿ ಬಗ್ಗೆ ಆತಂಕಗೊಂಡಿದ್ದ ಗುತ್ತಿ ಪೀಂಚಲುಗೆ 'ನಾ ಸಾಯೋ ತನಕಾ ನಿಮ್ಮ ಉಪಕಾರ ಮರೆಯೋದಿಲ್ಲ...ಆ ಹುಡುಗಿ ನೇಣು ಗೀಣು ಹಾಕಿಕೊತಾಳೊ ? ಹಳ್ಳ ಕೆರೆ ಹಾರ್ತಾಳೊ ಅಂತ ಹೆದರಿಕೆ ಆಗ್ಯದೆ ನಂಗೆ. ಇದೊಂದು ಸತಿ ನಾವು ಒಟ್ಟಾದರೆ ಮತ್ತೆ ಬಿಡಿ ನಮ್ಮನ್ನ ಯಾರು

ಆಗಬ್ತಾರೊ ನೋಡ್ತೀನಿ. ಆಗಬಿಟ್ರೆ ನಮ್ಮ ಹೆಣಾನೆ ಆಗಬೇಕು ! ನಮ್ಮನ್ನು ಬದುಕಿಸಿದೋರು ಅಂತ ನಿನಗೂ ಐತಣ್ಣಗೂ ಜೀತ ಮಾಡಿಕೊಂಡು ಬೇಕಾದ್ರೂ ಇರ್‍ತೀವಿ !" ಅಂತ ಹೇಳ್ತನೆ. ಇವನು ಪ್ರೀತಿಗಾಗಿ ಪ್ರಾಣ ಕೊಡಬಲ್ಲ. ಉಪಕಾರ ಮಾಡಿದವರಿಗೆ ಜೀತ ಮಾಡಬಲ್ಲ.

ಗುತ್ತಿಯ ಜೊತೆಗಾತಿ ತಿಮ್ಮಿನೂ ಸಾಮಾನ್ಯದವಳೇನಲ್ಲ. ಇಷ್ಟಪಟ್ಟವನೊಂದಿಗೆ ಬದ್ಕೋಕೆ ಕಷ್ಟವಾದ್ರೂ ನಿರ್ಧಾರ ತಗೊತಾಳೆ. ಗುತ್ತಿ ತನ್ನ ತೋಳಿನಲ್ಲಿದ್ದ ಅಂತ್ರ ತೋರಿಸಿ, 'ಕಣ್ಣಾ ಪಂಡಿತರು ಕೊಟ್ಟಿದ್ದು ಕಣೆ, ಎಂಥಾ ಒಲ್ಲೆ ಅನ್ನೊ ಹೆಣ್ಣನ್ನಾದ್ರೂ ಒಲಿಯೋ ಹಾಂಗೆ ಮಾಡ್ತದಂತೆ. ಅಲ್ಲದಿದ್ರೆ ನನ್ನ ಸಂಗಡ ನೀ ಇಷ್ಟ್ ಸುಲಭಕ್ಕೆ ಓಡಿಬರ್‍ತಿದ್ಯಾ ? ಚುಟುಗಿ ಹಾಕಿ ಕರದ್ರೆ ನಾಯಿ ಬರಾ ಹಂಗೆ" ಅಂತಾ ಕೆಣಕಿದಾಗ, 'ನಿಂಗೊಬ್ಬನಿಗೇ ಅಂತ ಮಾಡಿಯೇನೊ ? ಅವನಿಗೂ ಕೊಟ್ಟಾರೆ ಅವರು, ನಿನ್ಹಾಂಗೆ ಅವನೂ ತೋರಿಸಿದ್ದ ನಂಗೆ' ಅಂತ ಮಾತಲ್ಲೆ ಮೊಟಕಿಸಿ ಬಂದಿರೋದು ನನ್ನಿಚ್ಛೆ ಮೇಲೇ ಅಂತ ತೋರಿಸ್ತಾಳೆ.

ಹುಲಿಯನಿಗೆ ಮದ್ದು ಮಾಡಿಸೋಕೆ ಸೇಸನಾಯ್ಕನ ಮನೆಗೆ ಹೋಗಬೇಕಾಗಿ ಬಂದ ಸಂದರ್ಭದಲ್ಲಿ ಗುತ್ತಿ, ತಿಮ್ಮಿಗೆ ಅಡಗಿಕೊಂಡಿರೋಕೆ ಹೇಳ್ತಾನೆ. 'ಅಡಗಿಕೊಂಡಿರೋಕೆ ನಾ ಏನು ಕದ್ಕೊಂಡು ಬಂದಿಲ್ಲ ! ನಾನೂ ಬರ್‍ತೀನಿ ನಿನ್ನ ಸೇಸನಾಯ್ಕರ ಮನೆ ನಾ ಕಾಣದಿದ್ದಲ್ಲ ! ನಂಟರ ಮನೆಗೆ ಕರಕೊಂಡು ಹೋಗ್ತಿದ್ದೀನಿ ಅಂತ ಹೇಳು. ಕೇಳಿದ್ರೆ, ನಿನ್ನ ಸ್ವಾವರತ್ತೆ ಮಗಳಲ್ಲೇನೂ ?' ಅಂತಾ ತಿಮ್ಮಿ ಜವಾಬು ಕೊಡ್ತಾಳೆ. ಈ ಮೇಲಿನ ಎರಡು ಸಂದರ್ಭದಲ್ಲಿ ತಿಮ್ಮಿ ಆತ್ಮವಿಶ್ವಾಸದ ಹೆಣ್ಣು ಅಂತ ತಿಳಿಯುತ್ತೆ. ಅವಳದು ಅಧೀನವಾಗುವ ಚೇತನವಲ್ಲ. ಇಷ್ಟಪಟ್ಟವನೊಂದಿಗೆ ಕದ್ದು ಬರುವ ಧೈರ್ಯ ತೋರಬಲ್ಲಳು. ಭೀಕರವಾದ ಕಾಡಿನಲ್ಲಿ ರಾತ್ರಿ ಹೊತ್ತು ನಡೆದು ಬರೋ ಸಾಹಸ ಮಾಡಬಲ್ಲಳು. ಗುತ್ತಿ ಸನಿ ಮುಂಡೆ ಅಂದ್ರೆ ಏನೂ ಅಳುಕು, ಅಂಜಿಕೆ ಇಲ್ದೆ 'ನಾನ್ಯಾಕೆ ಆಗ್ಲಿ ಸನಿ ಮುಂಡೆ ನೀನೆ ಆಗು ಸನಿ ಮುಂಡೆಗಂಡ' ಅನ್ನಬಲ್ಲಳು. ಆ ಮಲೆಕಾಡಿನಲ್ಲಿ ಅವರಿಬ್ಬರೂ ಪಡೋ ಕಷ್ಟ, ಅವರಿಬ್ಬರ ನಡುವಿನ ತಮಾಷೆ, ಸರಸ, ಜಗಳ, ಇಬ್ಬರೂ ಒಬ್ಬರಿಗೊಬ್ಬರು ಬೆಚ್ಚಗಿರೋದು-ಇವೆಲ್ಲ ಅವರ ನಡುವಿನ ಆಕರ್ಷಣೆ, ಪ್ರೀತಿಯಷ್ಟೇ ಅಲ್ಲದೆ ಸಂಗಾತಿಗಳ ನಡುವಿನ ಸ್ನೇಹ, ಸ್ವಾತಂತ್ರ್ಯವನ್ನು ಕಾಣಿಸುತ್ತವೆ.

ಎಳೆ ಜೋಡಿಗಳಾದ ಪೀಂಚಲು, ಐತ ಹೇಗಿದ್ದಾರೆ ಅಂದ್ರೆ ಅವರಿಲ್ದೆ ಆ ಕಾಡಿನ ಸೊಗಸೆ ಸ್ವಲ್ಪ ಕಮ್ಮಿ ಆದಂಗೆ.

ಪೀಂಚಲು-ಒಕ್ಕಲಿಗ ಮನೆತನಸ್ಥರ ಹೆಣ್ಣು ಮಕ್ಕಳಿಗೆ ಅಸಾಧ್ಯವಾದ ಸಾಹಸಗಳನ್ನೆಲ್ಲ ಮಾಡುವವಳು. ಅಡಕೆ ಮರಕ್ಕೆ ಹತ್ತಿ ಕೆಳಗೆ ಬೀಳಲಾರದೆ ಹಿಂಗಾರಕ್ಕೆ ಸಿಕ್ಕಿಕೊಂಡಿದ್ದ ಹೊಂಬಾಳೆಗಳನ್ನು ಅದೆಷ್ಟು ಸಾರಿ ಲೀಲಾಜಾಲವಾಗಿ ಕಿತ್ತುಕೊಟ್ಟವಳು. ಐತ, ಮುಕುಂದಯ್ಯ ಹೆದರಿ ಓಡಿದಾಗ ಹುಳುಗಳಿಂದ ಕಚ್ಚಿಸಿಕೊಂಡರೂ ಹುತ್ತದಲ್ಲಿದ್ದ ತುಡುವೆ ಜೇನು ಕೀಳುತ್ತಿದ್ದವಳು. ತಿಮ್ಮಿಯನ್ನು ಬಚ್ಚಿಡೊ ಸಾಹಸ ಮಾಡ್ತಾಳೆ. ಉಪಾಯದಿಂದ ಚಿನ್ನಮ್ಮನನ್ನ ಕಾಡಿನ ದಾರಿಯಲ್ಲಿ ಕರ್‍ಕೊಂಡು ಬರೋ ಧೈರ್ಯ ತೋರಬಲ್ಲಳು. ಒಂದು ಸಂದರ್ಭದಲ್ಲಿ ಕಾಡಿನಲ್ಲಿ ಮುಕುಂದಯ್ಯ ಚಿನ್ನಮ್ಮನನ್ನು ಹೊತ್ತುಕೊಂಡು ಹೋಗ್ತಾನೆ. ಈ ಬಸಿರಿ ಪೀಂಚಲು ಗುಡ್ಡದ ನೆತ್ತಿ ಮುಟ್ಟೊವರ್‍ಗು ಕಮಕ್ ಕಿಮಿಕ್ ಅನ್ದೆ ಹೋಗ್ತಳೆ. ಅವಳನ್ನು ಬಸಿರಿ ಅಂತ ಆರೈಕೆ ಮಾಡೋರೆ ಇಲ್ಲ. ಅಗತ್ಯವಿರೊ ಸೊಪ್ಪುಸದೆ

ತಾನೇ ತಂದ್ಕೊಂಡು ಆರೈಕೆ ಮಾಡ್ಕೊತಾಳೆ. ಐತ, ಪೀಂಚಲು ಸವಾಲುಗಳನ್ನು ತಗೊಳೋದು 'ನಾನು ಪೀಂಚಲು ಗಂಡನೆ ಅಲ್ಲ' 'ನಾನು ಐತನ ಹೆಂಡ್ತಿನೇ ಅಲ್ಲ' ಅಂತ.

"ಹಾಳು ಹುಡುಗ, ಸೆಟ್ಲುಮಿಂಚ" ಐತ ಸರಳ, ಶ್ರಮಜೀವಿ, ಹೆಂಡತಿಯನ್ನ ಅನುಮಾನಿಸಿದೆ ಅಂತ ನೊಂದ್ಕೊಳೊ ಅಂತವನು. ಜೀವಂತಿಕೆಯಲ್ಲಿ, ಸಾಹಸದಲ್ಲಿ, ಪ್ರಣಯ, ಪ್ರೀತಿಯಲ್ಲಿ ಒಬ್ಬರಿಗೊಬ್ಬರು ಸರಿಗಟ್ಟುವ ಜೋಡಿ. ಈ ಜೀವದ ಮಿಂಚುಗಳು ಕವಿಯ ಕಣ್ಣಿಗೆ 'ಭಿಲ್ಲವೇಷದ ಶಿವ-ಶಿವಾಣಿಯರಂತೆ' ಕಾಣಿಸುವುದು ಆಶ್ಚರ್ಯವೇನಲ್ಲ. "ಮೇಲು ಕೀಳು, ಬಡವ ಬಲ್ಲಿದ, ಅರಸ ತಿರುಕ ಎಂಬ ತಾರತಮ್ಯವಿಲ್ಲದೆ ಅಡವಿ, ನಗರ, ಮಂಚ, ನೆಲ, ಚಾಪೆ ಸುಪ್ಪತ್ತಿಗೆ ಎಂಬ ಭೇದವಿಲ್ಲದ ಸರ್ವರಲ್ಲಿಯೂ ಸಮಾನವಾಗಿ ಸಮಪ್ರಮಾಣದಲ್ಲಿ ಆವಿರ್ಭೂತವಾಗುವ ರತಿಮನ್ಮಥ ಪ್ರೇಮಾನುಗ್ರಹ.... ಈ ರೀತಿ ಯೋಚಿಸುವ ಮನಸ್ಸಿಗಷ್ಟೇ ಐತ-ಪೀಂಚಲುವೆಂಬ ಶಿವ-ಶಿವಾಣಿಯರು ಗೋಚರಿಸಿ 'ಆಃ ಏನು ಚೆನ್ನಾಗಿದ್ದಾರೆ ಅವರಿಬ್ಬರೂ' ಅನಿಸುವುದು.

ಕಾಡಿಗೆ ಕಾಡಾಗಿ, ಮಣ್ಣಿಗೆ ಮಣ್ಣಾಗಿ, ಜೀವಕ್ಕೆ ಜೀವವಾಗೊ ಈ ಎರಡೂ ಜೋಡಿಗಳ ಮುಂದೆ ಮುಕುಂದಯ್ಯ, ಚಿನ್ನಮ್ಮ ತುಂಬಾ ಸಪ್ಪೆಯೆನಿಸುತ್ತಾರೆ.

ಕಾದಂಬರಿಯಲ್ಲಿ ಬರೋ ಸೇಸಿಯನ್ನು ನೋಡಿದಾಗ ತಿಮ್ಮಿಯ ಸ್ವಾಭಿಮಾನ, ಆತ್ಮವಿಶ್ವಾಸದ ಮೂಲ ತಿಳಿಯುತ್ತದೆ. ಮಗಳು ಓಡಿಹೋದ ಮೇಲೆ ಬರೊ ಅಪಾಯದ ಸಂದರ್ಭವನ್ನು ಎದುರಿಸೋಕೆ ಮೈಮೇಲೆ ಜಕಣಿ ಬರಿಸಿಕೊಳ್ಳೋದು ಅವಳ ಜಾಣ್ಮೆ, ಸಮಯಪ್ರಜ್ಞೆ ತೋರಿಸುತ್ತೆ. ಮಗನನ್ನು ಕಂಬಕ್ಕೆ ಕಟ್ಟಿ ಹೊಡೆಯೊ ಸಂದರ್ಭದಲ್ಲಿ ಧೈರ್ಯ ತೋರಿಸಿ ಇಜಾರದ ಸಾಬಿಯ ಕೈಲಿಂದ ಹುಣಸೆ ಬರಲು ಕಿತ್ತೆಸೆದು ಬಿಡಿಸಿಕೊಳ್ತಾಳೆ. ಅವಳ ಧೈರ್ಯದ ಮುಂದೆ ಹೊಡೆಯುತ್ತಿದ್ದ ಇಜಾರದ ಸಾಬಿಯು ಸುಮ್ಮನಾಗುತ್ತಾನೆ. ಮಗನಿಗಾದ ರಾಕ್ಷಸ ಶಿಕ್ಷೆ ಕಂಡ ಮೇಲೂ ಗೌಡರ ನಗಗಳನ್ನು ಲಪಟಾಯಿಸಿ, ಗೌಡರು-ಹೆಗ್ಗಡ್ತೀರ ಜಿದ್ದನ್ನು ಬಳಸಿಕೊಂಡು ತನ್ನ ಕುಟುಂಬವೆ ಬೇರೆಡೆಗೆ ಹೋಗುವ ಬಗ್ಗೆ ಯೋಚಿಸುವುದು ಬಿಡುಗಡೆ ಬಯಸುವ ಅವಳ ಚೇತನವನ್ನು ಪರಿಚಯಿಸುತ್ತದೆ. ಇದನ್ನು ಕುವೆಂಪು ಸರಿಯಾಗಿಯೇ ಗುರುತಿಸಿದ್ದಾರೆ. "ಇಚ್ಛೆ ಅಪೇಕ್ಷೆಗಳು ಕೈಗೂಡಲಿ ಬಿಡಲಿ, ಪ್ರಯತ್ನ ಮಾಡುವುದರಿಂದ ತಪ್ಪಿಸಿಕೊಳ್ಳಲಾದೀತೆ ? ಅದರಿಂದ ಎಂತಹ ಹಾನಿಯೇ ಒದಗಲಿ, ಸರ್ವನಾಶವೆ ಬೇಕಾದರೂ ಆಗಲಿ ಮಾನವತ್ವವನ್ನು ತಲುಪಿದ ಚೇತನ ಕಲ್ಲು ಮಣ್ಣುಗಳಂತೆ ತಟಸ್ಥವಾಗಿ ಬಿದ್ದಿರಲು ಸಾಧ್ಯವಿಲ್ಲ....ಮನುಷ್ಯತ್ವ ಸಹಜವಾಗಿದ್ದ ಹಕ್ಕನ್ನು ಸ್ಥಾಪಿಸಿಕೊಳ್ಳಲು, ಭಯಂಕರವಾದ ದುರ್ದಮ್ಯವಾದ ಪ್ರತಿಭಟನೆ ಮತ್ತು ಪ್ರತೀಕಾರಗಳ ಮೃತ್ಯು ಭೀಕರ ರೌರವ ನರಕವೇ ತನ್ನಿದಿರೇ ಆ ಎಂದು ಬಾಯಿ ತೆರೆಯುವ ಸಂಭವವಿದ್ದರೂ ಅಂಜುತ್ತಲೇ ಬದ್ಧ ಕಂಕಣವಾದಂತೆ ಯತ್ನಶೀಲವಾಗಿತ್ತು".

ತಬ್ಬಲಿ ಮಕ್ಕಳಿಗೆ ತಾಯಾಗುವ, ರೋಗಿಷ್ಟ ಗಂಡನಿಗೆ ಆಸರೆಯಾಗುವ ಅಕ್ಕಣಿ ಸದ್ದಿಲ್ಲದೆ ಮನಸ್ಸಿನಲ್ಲಿ ನಿಲ್ಲುತ್ತಾಳೆ.

ಅದ್ಭುತ ರಮ್ಯವಾದ, ಮಾಂತ್ರಿಕ ಕಾಡಿನೊಳಗೆ ಬಿಚ್ಚಿಕೊಳ್ಳುವ ದಲಿತರ ಬದುಕು ಎಂಥದು?

ಕಂಬಕ್ಕೆ ಕಟ್ಟಿಸಿಕೊಂಡು ಹೊಡೆಸಿಕೊಳ್ಳಲು ಕಮಕ್ ಕಿಮಕ್ ಎನ್ನದೆ ಹೋಗಿ ಕಂಬಳಿ ತೆಗೆದು ನಿಲ್ಲುವ ಸಣ್ಣಭೀರ-

ಇಜಾರದ ಸಾಬಿಯ ಮೂಲಕ ಪ್ರಕಟವಾಗುವ ಕಲ್ಲಯ್ಯ ಗೌಡರ ಕ್ರೌರ್ಯ ಗಮನಿಸಿ : ಮೊದಲ ಬಾರಿಯ ಹೊಡತಕ್ಕೇ ಬಾಸುಂಡೆಗಳೆದ್ದಿದ್ದ ಬೆನ್ನು ಎರಡನೆಯ ಸುತ್ತಿನ ಪೆಟ್ಟುಗಳಿಗೆ ಇದ್ದಕ್ಕಿದ್ದ ಹಾಗೆಯೆ ಕೆಂಪಾಯಿತು, ನೆತ್ತರು ಚಿಮ್ಮಿ ! ಅವನು ಉಟ್ಟಿದ್ದ ಪಂಚೆ ಒದ್ದೆಯಾಗಿ ಕಾಲ ಮೇಲೆ ಇಳಿದ ಉಚ್ಚೆಗೆ ನೆಲ ತೊಯ್ದಿತು. ಅಂಡಿನ ಬಟ್ಟೆಯೂ ರಕ್ತದಿಂದ ಕೆಂಪಾಯಿತು. ಅವನ ಕೂಗು ಒಮ್ಮೆಗೆ ನಿಂತುಬಿಟ್ಟಿತು ! ತಲೆ ಕತ್ತಿನ ಮೇಲೆ ನಿಲ್ಲಲೊಲ್ಲದೆ ಜೋಲಿತು" ಇದನ್ನು ಕಂಡು ಹೊಟ್ಟೆಯಲ್ಲಿ ಸಂಕಟ ಹೊತ್ತಿ ಮಂಜಾದ ಕಣ್ಣನ್ನ ಸರಿಪಡಿಸಿಕೊಳ್ಳಬೇಕೆನ್ನುವಾಗಲೆ ಕಲ್ಲಯ್ಯಗೌಡರ ಹೆಂಡತಿ ದೊಡ್ಡಮ್ಮ ನೆನೆಸಿಕೊಳ್ಳುವ 'ಹೊಲೆಯನ ಬೆನ್ನ ಮೇಲೆ ಹಲಗೆ ಇಟ್ಟು ತುಳಿಸಿ ರಕ್ತ ಕಾರಿ ಸಾಯಿಸಿದ" ಪ್ರಸಂಗ ಎದೆ ನಡುಗಿಸುತ್ತದೆ. ಕ್ರೌರ್ಯವನ್ನು ಪ್ರಯೋಗಿಸಿದ ಮೇಲೆ ಪ್ರತಿ ಸಲವೂ ಗೌಡರು ಮನಃಕ್ಲೇಶ, ದೈಹಿಕ ಖಾಯಿಲೆ ಮೂಲಕ ಪ್ರತೀಕಾರಕ್ಕೆ ಒಳಗಾಗುತ್ತಿರುತ್ತಾರೆ. ಅವರು ಪ್ರಯೋಗಿಸುವ ಕ್ರೌರ್ಯದ ಮುಂದೆ ಅವರು ಒಳಗಾಗುತ್ತಿದ್ದ ಪ್ರತೀಕಾರ ಏನೇನೂ ಅಲ್ಲ. (ನಾನು ಸೇಸಿ ಆಗಿದ್ದಿದ್ರೆ ನಿದ್ದೆ ಬರಬಾರ್ದು, ಕಕ್ಕಸು ಬರಬಾರ್ದು ಅಂತ ಶಾಪ ಹಾಕಿರ್ತಿದ್ದೆ).

ಪಿಳವೆ ಕಾಡಿ ಬಸಿರಾದಾಗ ದಂಡ ಹಾಕಲು, ಕಾರಣರಾದವರು ಯಾರೆಂದು ಕೇಳಿದಾಗ ಹಲವರ ಹೆಸರನ್ನು ಸೂಚಿಸುತ್ತಾಳೆ. ಈ ಸೂಚನೆ ಹಲವರ ಕೈಲಿ ಸೊಪ್ಪು ಸೆದೆಯಷ್ಟೇ ಸುಲಭವಾಗಿ ಬಳಕೆಯಾಗೊ ದಲಿತ ಹೆಣ್ಣುಗಳನ್ನು ಕಣ್ಮುಂದೆ ನಿಲ್ಲಿಸುತ್ತದೆ.

ತಿಮ್ಮಿ ತಪ್ಪಿಸಿಕೊಂಡಾಗ ಉಂಟಾಗೊ ಊಹಾಪೋಹಗಳು-"ಕೆರೆಗೆ ಬಿದ್ದಳೇ ? ನೇಣು ಹಾಕಿಕೊಂಡಳೊ ? ಹಾವು ಕಚ್ಚಿ ಸತ್ತಳೊ ? ಹುಲಿ ಹಿಡಿಯಿತೋ? ಕೊನೆಯದಾಗಿ ಕಲ್ಲೂರು ಸಾಹುಕಾರ ಮಂಜಭಟ್ಟರು ಪ್ರಮುಖವಾಗಿಯೂ ಇತರ ಸಾಹುಕಾರರೂ ಸೇರಿ ತಮ್ಮ ಸಾಲದ ಹಣ ವಸೂಲಿಗಾಗಿಯೂ ಮತ್ತು ಇತರ ರೀತಿಯ ಬಲಾತ್ಕಾರದಿಂದ ದವಸಧಾನ್ಯ ಜಮೀನು ಇವುಗಳ ಸಂಪಾದನೆಗಾಗಿಯೂ, ಹೊಸ್ನಾಳೆಯಿಂದ ಕರೆಯಿಸಿ ಮೇಗರವಳ್ಳಿಯಲ್ಲಿ ಜಮಾಯಿಸಿಕೊಂಡಿರುವ ಪುಂಡಸಾಬರ ತಂಡದವರಿಂದ ಆಭರಣಕ್ಕಾಗಿಯೋ ಅಥವಾ ಅತ್ಯಾಚಾರಕ್ಕಾಗಿಯೋ ಅಪಹರಿಸಲ್ಪಟ್ಟಳೊ ?"..ಎಂಬುದರವರೆಗೂ ಸುಳಿಯುತ್ತವೆ.

ಹೂವಳ್ಳಿ ಮದುವೇಲಿ ವಾಲಗದವನ ಸಂಗೀತ ಮೆಚ್ಚಿ, ನುಡಿಸಿದವನು ಹೊಲೆಯ ಬೈರನೆಂದು 'ತಿಳಿದು' "ಥೂ ಬನ್ರೊ ಈ ಬಾಡು ತಿನ್ನೊ ಜೀತದಾಳಿನ ವಾಲಗ ಏನು ಕೇಳೋದು" ಎಂದು ಅಸಹ್ಯಿಸಿಕೊಳ್ಳುವ ಪುಟ್ಟ ತಿಮ್ಮು, ಅಪರಾಧವೇನೂ ಮಾಡದ ಗುತ್ತಿ ಕಾಡಿನಲ್ಲಿ ಅನಾಥವಾಗಿ ಅಲೆದಾಡುವುದು, ಹುಟ್ಟಿದ ನೆಲವನ್ನೆ ತೊರೆದು ಜೀವವಾದ ಹುಲಿಯನನ್ನು ಕಳೆದುಕೊಂಡು ಪರದೇಸಿಯಾಗುವುದು....ಇವೆಲ್ಲಾ ಎದೆನಡುಗಿಸುತ್ತವೆ. ಜಾತಿಯ ಐಡೆಂಟಿಟಿಯನ್ನು ಮುಚ್ಚಿಟ್ಟು ನಗರಗಳಲ್ಲಿ ಬದುಕಿ ಬಿಡುವುದೇ ಕ್ಷೇಮವೆನಿಸಿಬಿಡುತ್ತದೆ. ಕ್ಷೇಮಕ್ಕಾಗಿ ನಾವು ಕಳೆದುಕೊಳ್ಳ ಬೇಕಾಗಿರುವುದು ಐಡೆಂಟಿಟಯನ್ನು ! ಆದರೆ ಜಾತಿಯನ್ನು ಮುಚ್ಚಿಟ್ಟುಕೊಂಡರೂ ಹೆಣ್ಣೆಂಬುದನ್ನು ಹೇಗೆ ಮುಚ್ಚಿಡುವುದು ?

ಕಲ್ಲಯ್ಯಗೌಡರ ಕ್ರೌರ್ಯದಿಂದ ತಲ್ಲಣಗೊಂಡ ಮನಸ್ಸಿಗೆ ಆ ನಂತರದ ಗೌಡರ ಸೊಸೆ ಮಗುವಿಗೆ ಹಾಲೂಡಿಸುವ ವಿಶ್ವಗೌರವ ಭಾಜನವಾದ ಜಗದ್‌ಭವ್ಯ ಘಟನೆ ಯಾವ ತರಂಗಗಳನ್ನೂ ಎಬ್ಬಿಸಲಿಲ್ಲ. ಆರೈಕೆ ಮಾಡುವವರಿಲ್ಲದ ಎಳೆ ಬಸಿರಿ ಪೀಂಚಲು, ಕರ್ವಾಲೊ ಕಾದಂಬರಿಯ

ಆದಿವಾಸಿ ಹೆಂಗಸು (ಆಕೆಯ ಕಂಕುಳಲ್ಲಿ ಒಂದು ಮಗು, ಆಕೆ ರವಿಕೆ ತೊಟ್ಟಿಲ್ಲ, ಎದುರಿಗೆ ಒಂದಿಬ್ಬರಿರುತ್ತಾರೆ. ಕಂಕುಳಲ್ಲಿದ್ದ ಮಗು ತಟಕ್ಕನೆ ಜೋತುಬಿದ್ದ ಮೊಲೆಯನ್ನು ಚೀಪತೊಡಗುತ್ತೆ), ಎಳೆ ಮಗುವನ್ನು ರಸ್ತೆ ಬದಿಯಲ್ಲಿ ಮಲಗಿಸಿ ಕಸ ಗುಡಿಸುವ ಪೌರಕಾರ್ಮಿಕ ಮಹಿಳೆಯರು ನೆನಪಾದರು.

ಎರಡೂ ಕಾದಂಬರಿಗಳಲ್ಲಿ ನನಗೆ ಸಾಮಾನ್ಯ ಎನಿಸಿದ ಕೆಲವು ಅಂಶಗಳೆಂದರೆ-ಬ್ರಾಹ್ಮಣರ ಅನುಕರಣೆ-'ಹೆಗ್ಗಡಿತಿ'ಯ ಶ್ಯಾಮಯ್ಯಗೌಡರು, 'ಮಲೆಗಳಲ್ಲಿ'ನ ಶಂಕರಯ್ಯ ಪಾತ್ರಗಳಲ್ಲಿ ಕಾಣಬಹುದು. ಈ ಅನುಕರಣೆ ಸ್ವಚ್ಛತೆ, ಮಡಿ, ಮೈಲಿಗೆ, ಪೂಜೆ ಪುನಸ್ಕಾರಗಳಿಗಷ್ಟೆ ಸೀಮಿತವಾದುದು. ಬ್ರಾಹ್ಮಣರಂತೆ ಇರಲು ಬಯಸುವ, ಬ್ರಾಹ್ಮಣರಿಗೆ ಸಮನಾಗಲು ನಡೆಸುವ ಸರ್ಕಸ್‌ಗಳಿಂದ ಶೂದ್ರ, ದಲಿತಾದಿಗಳಿಗೆ ಬಿಡುಗಡೆಯೇ ಇಲ್ಲವೇನೊ ?

ರಚ್ಚೆ ಹಿಡಿದು ಗೋಳಾಡುವ ಲಕ್ಷ್ಮಿಗೆ ಅಮ್ಮ ಇನ್ನು ನನ್ನ ಕಡೆ ಗಮನ ಕೊಡೋದೆ ಇಲ್ವೆನೊ ಅನ್ನಿಸಿ 'ಇನ್ನೊಂದ್ ಸಾರಿ ಕರುದ್ರೆ ಬತ್ತಿನಿ' ಅನ್ನೋದು, ದೇವಸ್ಥಾನದಲ್ಲಿ 'ಇನ್ನೂ ಸೊಪ್ಪ' ಅಂತ ಎರಡನೆ ಸಾರಿ ಪ್ರಸಾದ ಕೇಳೋದು, ವಾಸುವಿನ ಸಕಲೈಶ್ವರ್ಯವೂ ತುಂಬಿಕೊಂಡ ಜೇಬು, ಧರ್ಮುಗೆ ಆಸರೆಯಾಗೊ ಕಾಡು, ತಿಮ್ಮ....ಈ ಮಕ್ಕಳ ಲೋಕದ ಸ್ನೇಹ, ಆಟ, ಒಡನಾಟ, ಅಳು, ರಚ್ಚೆ, ಚೇಷ್ಟೆ...ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುವ ಮನಸ್ಸಿಗಷ್ಟೆ ಮಕ್ಕಳನ್ನು ಮಾಯಾಲೋಕಕ್ಕೊಯ್ಯುವ 'ಕಿಂದರ ಜೋಗಿಯ' ಸೃಷ್ಟಿ ಸಾಧ್ಯ.

ಕಳ್ಳು, ಬಾಡು, ಬಾಯಲ್ಲಿ ನೀರೂರಿಸಿದರೆ ಶಿಕಾರಿ tempt ಮಾಡುತ್ತೆ. ಗಂಗೆ, ಅಂತಕ್ಕ, ಕಾವೇರಿ, ನಾಗತ್ತೆ, ಪೀಂಚಲು ಪಾತ್ರಗಳನ್ನು ಗಮನಿಸಿದಾಗ ನಾಗತ್ತೆಯನ್ನು ಹೊರತುಪಡಿಸಿ ಉಳಿದವರು ಗಟ್ಟದ ಕೆಳಗಿನ ಹೆಂಗಸರು. ಗಂಗೆಯನ್ನ ಪ್ರೀತಿಸುವವನೊಬ್ಬ, ಮದುವೆ ಯಾಗುವವನೊಬ್ಬ, ಹಾರಿಸಿಕೊಂಡು ಬಂದು ಇಟ್ಟುಕೊಳ್ಳುವವನೊಬ್ಬ, ಜೊತೆಗೆ ಧಣಿಗಳ ಬಳಕೆಗೂ ಬರುತ್ತಾಳೆ.

ಗಟ್ಟಿಮುಟ್ಟಾದ ಗುತ್ತಿಯನ್ನು ನೋಡಿ ಆನಂದಿಸುವ ಕಾವೇರಿ ಚೆಲ್ಲು ಸ್ವಭಾವದಳು. ಈ ಸ್ವಭಾವದಿಂದಾಗಿ ಅತ್ಯಂತ ದಾರುಣಮಯ ಅಂತ್ಯ ಕಂಡರೂ ಯಾರ ಅನುಕಂಪಕ್ಕೂ ಭಾಜನಳಾಗದವಳು. ಅವಳ ಸಾವಿನ ನಂತರ ಎಲ್ಲರು 'ಹುಡುಗಿ ಬಾಳೆದಿಂಡಿನ ಹಾಗೆ ಬೆಳೆದಿದ್ದಳು' ಅಂದ್ಕೊತಾರೆ. ಇಷ್ಟವಿಲ್ಲದ ಸಂಬಂಧಿಯನ್ನು ಮದುವೆ ಮಾಡಿಕೊಳ್ಳದಿದ್ದರೆ, ದೇವಯ್ಯನನ್ನು ಒಲಿಸಿಕೊಳ್ಳುವುದೊಂದೆ ಅವಳಿಗಿದ್ದ ದಾರಿ. ಅವನು ಕೊಟ್ಟ ಉಂಗುರ ಕಳೆದುಹೋಗಿದೆ ಅಂತ ಹೇಳೋ ಧೈರ್ಯವಿಲ್ಲದೆ ಆಕೆ ಆಹ್ವಾನಿಸಿಕೊಳ್ಳೊ ಅಪಾಯಕ್ಕೆ ತೆರುವ ಬೆಲೆ ಎಂತಾದ್ದು ? ಪಾದ್ರಿಯ ಮಗಳೊಂದಿಗೂ ಕಾವೇರಿಯೊಂದಿಗೂ ಸಂಬಂಧವಿಟ್ಟುಕೊಳ್ಳುವ ದೇವಯ್ಯ ಸಂಭಾವಿತ ಗೃಹಸ್ಥನಾಗಿಯೇ ಉಳಿಯುತ್ತಾನೆ. ಮದುವೆ, ಆಸ್ತಿ ಎಂದಾಗ ಜಾಗೃತರಾಗುವ ಗೃಹಸ್ಥರಿಂದಾಗಿಯೇ ಕಾವೇರಿಯಂತಹವರು ಸಡಿಲ ನಡತೆಯ ಹೆಂಗಸರಾಗುವುದು.

ಮಗಳ ಸಾವು ಅನ್ಯಾಯದ್ದೆಂದು ತಿಳಿದರೂ ಸುಮ್ಮನಿರಬೇಕಾದ ಅನಿವಾರ್ಯತೆ ಅಂತಕ್ಕನದು. ದೇವಯ್ಯನನ್ನು ಒಲಿಸಿಕೊಳ್ಳೋದಿಕ್ಕೆ ಪ್ರೇರೇಪಿಸುವುದನ್ನು ಬಿಟ್ರೆ ಬೇರೆ ಯಾವ ದಾರಿಯನ್ನು ಆಕೆ ಮಗಳಿಗೆ ತೋರಬಲ್ಲಳು ?

ಗಂಡ ಸತ್ತು, ಒಂಟಿ ಬಾಳು ಬೇಸರವಾಗಿ, ಜಂಟಿ ಬಾಳಿಗಾಗಿ ಊರೂರು ಅಲೆಯುತ್ತಿದ್ದ, ಅವಳನ್ನು ಚೆನ್ನಾಗಿ ತಿಳಿದಿದ್ದ ಯಾವ ಊರಿನಲ್ಲಿಯೂ ಜಂಟಿ ಬಾಳು ಗಿಟ್ಟದ ನಾಗತ್ತೆಯ ಕೀರ್ತಿ ಹೊಲೆಯನ ಹಾಸ್ಯಕ್ಕೂ ಪಕ್ಕಾಗುವಷ್ಟರ ಮಟ್ಟಿಗೆ ಹಬ್ಬಿತ್ತು.

ಪೀಂಚಲುವಿಗೆ "ಮುಕುಂದಯ್ಯನನ್ನು ತಾನು ಸುಮ್ಮನೆ ಮುಟ್ಟುವಷ್ಟಾದರೂ ಆಗಿದ್ದರೆ ಸ್ವರ್ಗವೇ ಪ್ರಾಪ್ತವಾದಷ್ಟು ಆನಂದವಾಗುತ್ತಿತ್ತು. ಐತ-ಪೀಂಚಲು ಪ್ರೇಮ ವ್ರತಸ್ವರೂಪದ್ದಲ್ಲ. ತನ್ನ ಗಂಡನ ಸಂಬಂಧವಾದ ಅವಳ ನಡೆಯನ್ನು ಪಾತಿವ್ರತ್ಯ ಎಂದು ಕರೆಯುವಂತಿರಲಿಲ್ಲ. ಮುಕುಂದಯ್ಯ ಅಪೇಕ್ಷಿಸಿದ್ದರೆ 'ತನಗಿಂತಲೂ ಮಹತ್ತಾದುದಕ್ಕೆ ತನ್ನನ್ನು ಅರ್ಪಿಸಿಕೊಳ್ಳಲು ಹಿಂಜರಿಯುತ್ತಿರಲಿಲ್ಲ. ಅವಳು ತನ್ನನ್ನು ಸಮರ್ಪಣಭಾವದಿಂದಲೇ, ಸಂತೋಷವಾಗಿಯೇ, ಪಾಪ ಭಯ ಲೇಶವಿಲ್ಲದ ಆತ್ಮನೈವೇದ್ಯ ರೂಪದಿಂದಲೇ ಒಪ್ಪಿಸಿಕೊಂಡು ಬಿಡುತ್ತಿದ್ದಳು" ಅನ್ನೋ ಭಾವವಾದರೆ ಮುಕುಂದಯ್ಯನ ಭಾವನೆ ಹೀಗೆ-'ತನ್ನೊಡನೆ ಬೇಟೆಗೆ ಬರುವ ತಮ್ಮ ಮನೆಯ ಒಂದು ಒಳ್ಳೆಯ ಜಾತಿಯ ಮತ್ತು ರೂಪದ ಹೆಣ್ಣು ನಾಯಿಯ ವಿಚಾರವಾಗಿ ಯಾವ ಮೋಹ, ಮಮತೆ, ಪ್ರೀತಿ, ಪ್ರಶಂಸೆಗಳಿರಬಹುದಾಗಿತ್ತೋ ಹಾಗೆಯೇ ಮುಟ್ಟಬಾರದವಳು, ಕೀಳು ಜಾತಿಯವಳು, ತಮ್ಮ ಕೂಲಿಯಾಳುಗಳ ಕುರುದೆಯೂ ಆಗಿದ್ದ ಪೀಂಚಲು ವಿಚಾರದಲ್ಲಿಯೂ ಒಂದು ವಿಶ್ವಾಸ ಪೂರ್ವಕವಾಗಿದ್ದ ಆಸಕ್ತಿ ಇತ್ತು. (ಇಲ್ಲಿ ನಾಯಿಯೊಂದಿಗೂ ಸಹ ಗುತ್ತಿಗಿರುವ attachment ನೆನಪಿಗೆ ಬರುತ್ತೆ) ಶಿವಾಣಿಯಂತೆ ಕಂಡ ಮರುಗಳಿಗೆಯಲ್ಲೆ ಪೀಂಚಲು ಬಗ್ಗೆ ಬರುವ ಇಂತಹ ಮಾತುಗಳು ಹಾಗೂ ಐತ-ಪೀಂಚಲು ಪ್ರೀತಿಯನ್ನು ಹೀಗೆ ಅಳೆಯೋದು ಸರಿಯೆನಿಸಲಿಲ್ಲ.

ಸಡಿಲ ನಡತೆಯ ಹೆಂಗಸರಂತೆ ಕಾಣಿಸಿಕೊಳ್ಳುವ ಅಂತಕ್ಕ, ಕಾವೇರಿ, ಗಂಗೆ, ನಾಗತ್ತೆಯರು ಬದುಕಲು ಹಿಡಿಯುವ ದಾರಿ ಅವರಿಚ್ಛೆಯದಲ್ಲ. ಇಂತಹ ಹೆಣ್ಣುಗಳಿಗೆ, ಸಾಧ್ವಿ-ಗರತಿಯರ ದಾರಿಗಳನ್ನು ಪುರುಷ ಅಹಂಕಾರದ ಸಮಾಜ ಮುಚ್ಚಿ ಹಾಕಿಬಿಡುತ್ತದೆ. ಗಂಡಸರನ್ನು ಓಲೈಸಿಕೊಂಡು ಬದುಕುವುದೊಂದೇ ದಾರಿ ಉಳಿಯುವುದು. ಒಂದೋ ಗರತಿಯರಾಗಬೇಕು ಇಲ್ಲ ಹಾದರಗಿತ್ತಿಯರಾಗಬೇಕು. ಈ ಎರಡನ್ನು ಬಿಟ್ಟರೆ ಇರುವ ಆಯ್ಕೆಗಳಾದರೂ ಏನು ?

ಮುಸಲ್ಮಾನರೂ ಮತ್ತು ಕ್ರಿಶ್ಚಿಯನ್ನರನ್ನು ಕುರಿತ ಚಿತ್ರಣದಲ್ಲಿ ಅಸಹನೆಯ ಎಳೆ ಕಾಣುತ್ತದೆ. ಎರಡೂ ಕಾದಂಬರಿಗಳಲ್ಲಿ ಬರುವ ಬಹಳಷ್ಟು ಪಾತ್ರಗಳನ್ನು ಕುವೆಂಪುರವರು black & white ಆಗಿ ಚಿತ್ರಿಸಿಲ್ಲ. ಆದರೆ 'ಮಲೆಗಳಲ್ಲಿ....' ಬರುವ ಸಾಬರು ಕ್ರೂರಿಗಳಾಗೆ ಉಳಿದುಕೊಂಡು ಬಿಡುತ್ತಾರೆ. ಗಬ್ಬದ ಆಡನ್ನು ಕೊಲ್ಲುವ ಘಟನೆ, (ತಬ್ಬಲಿಯು ನೀನಾದೆ ಮಗನೆ ಕಾದಂಬರಿಯಲ್ಲಿ ವಿದೇಶಿ ಸೊಸೆ ಪುಣ್ಯಕೋಟಿಯನ್ನು ಸಿಟ್ಟಿನಲ್ಲಿ ಕುಯ್ಯುವ ಘಟನೆಯನ್ನು ನೆನಪಿಗೆ ತಂತು) "ಜೀವವಿರುವ ದನಗಳನ್ನು ಕೊಂದು ತಿನ್ನುವವರಿಗೂ ಸತ್ತ ಬಾಡು ತಿನ್ನುವವರಿಗೂ ಅಷ್ಟಾದರೂ ಬೇಡವೆ ವ್ಯತ್ಯಾಸ" (ಪು. ೨೬೯) ಎಂಬ ಮಾತುಗಳಲ್ಲಿ ಅಸಹನೆಯ ಎಳೆಗಳನ್ನು ಕಾಣಬಹುದಾಗಿದೆ. ಈ ಸಾಬರು ಮಾಡುವ ಕೆಲಸಗಳನ್ನು ಗಮನಿಸಿದಾಗ (ವ್ಯಾಪಾರ, ಹೊನ್ನಾಳಿ ಹೊಡೆತ, ಮಂಜಭಟ್ಟರ ಕ್ರಿಮಿನಲ್ ಚಟುವಟಿಕೆಗಳಿಗೆ ಸಹಾಯ) ಇವರು ಆ ಕಾಡಿನ ಅಕ್ರಮ ಚಟುವಟಿಕೆಗಳಿಗೆ ಅನಿವಾರ್ಯ. ಇವರು ದುಷ್ಕರ್ಮಿಗಳೆ ಇರಬಹುದಾದರೂ ಇವರೆದೆಯೊಳಗೂ ಇರಬಹುದಾದ ಜೀವದ ಎಳೆಗಳೇನೂ ಗೋಚರಿಸಲಿಲ್ಲವೆ ಎನಿಸಿತು.

ದೇವಯ್ಯನನ್ನು ಮತಾಂತರದ ಅವಗಡದಿಂದ ತಡೆಯಲು ಹೊರಡುವ ಮುಕುಂದಯ್ಯ ಮಿಶಿನರಿ ಚಟುವಟಿಕೆಗಳಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ವಿವೇಚಿಸಬಲ್ಲ. ಹಿಂದೂ ಧರ್ಮದ ಘನತೆಯನ್ನು ಬಲ್ಲ. ಇಂತಹವನು ದೇವಯ್ಯನ ಮದುವೆ ಹೊರಗಿನ ಸಂಬಂಧಗಳ ಬಗ್ಗೆ ಚಕಾರವೆತ್ತದೆ ಮತಾಂತರವನ್ನು ತಡೆಯಲು, ಆಸ್ತಿ ಉಳಿಸಲು ಬಂದೂಕೆತ್ತಿಕೊಂಡು ಹೋಗುವುದು ಹಾಸ್ಯಾಸ್ಪದವೆನಿಸುತ್ತದೆ.

ಯೇಸುಕ್ರಿಸ್ತ, ಮತ, ಧರ್ಮ, ಪರಲೋಕ, ದೇವರು ಇವು ಯಾವುದಕ್ಕೂ ಸಂಬಂಧಪಡದ ಪಾದ್ರಿಯ, ಪಾದ್ರಿಯ ಮಗಳ ಮತ್ತು ದೇವಯ್ಯಗೌಡರ ಆಂತರಂಗಿಕವೂ ಶುದ್ಧ ಲೌಕಿಕವೂ ಆಗಿದ್ದ ಗುಪ್ತ ವ್ಯವಹಾರದ ಜಟಿಲತೆ (ಪು. ೭೭೧) ಗೊತ್ತಿಲ್ಲದ ರೆವರೆಂಡ್ ಲೇಕ್ ಹಿಲ್‌ರವರು ಹಿಂದೂ ಧರ್ಮದ ಹುಳುಕುಗಳನ್ನು ಮತ್ತು ಕ್ರೈಸ್ತಧರ್ಮದ ನಿಜ ಉದ್ದೇಶಗಳನ್ನು ಕುರಿತು ಹೇಳಿದಾಗ ಮುಕುಂದಯ್ಯನಿಗೆ ಈ ಬಿಳಿ ಪಾದ್ರಿ, ಕರಿ ಪಾದ್ರಿಯಂತಲ್ಲದೆ ನಿಜವಾಗಿಯೂ ದೊಡ್ಡ ಮನುಷ್ಯನಾಗಿ ಕಾಣುತ್ತಾನೆ. ಆಮಿಷಕ್ಕೊ, ಅವಕಾಶಕ್ಕೊ ಮತಾಂತರಗೊಂಡ ("ಕ್ರೈಸ್ತ ಮತ ಪ್ರಚಾರಕರು ಬ್ರಿಟಿಷ್ ಸರ್ಕಾರದ ರಾಜಕೀಯ ಬಲ ಮತ್ತು ಪ್ರತಿಷ್ಠೆ ಮತ್ತು ಸೌಕರ್ಯ ಸೌಲಭ್ಯಗಳನ್ನು ಪಡೆದು, ವಿದ್ಯಾಭ್ಯಾಸದ ಮತ್ತು ವೈದಕೀಯದ ನೆರವೀಯುವ ಬಲೆಯೊಡ್ಡಿ, ಅರಿಯದ ಅಜ್ಞಾನಿಗಳನ್ನು ತಮ್ಮ ಜಾತಿಗೆ ಸೇರಿಸಿಕೊಂಡು, ತಮ್ಮ ಸಂಖ್ಯಾ ಪ್ರಮಾಣವನ್ನು ಹೆಚ್ಚಿಸುವ ವ್ಯಾಪಾರಿ ಉದ್ಯಮದಲ್ಲಿದ್ದಾರೆ ಎಂಬ ವಿವೇಕಾನಂದರ ನುಡಿಗಳು ಪು. ೩೬೧) ಕರಿ ಪಾದ್ರಿ ಜೀವರತ್ನಯ್ಯ ಚಿಕ್ಕವನಾಗಿಬಿಡುತ್ತಾನೆ.

ಕುವೆಂಪು ಅವರದು ಒಣ ವೈಚಾರಿಕತೆಯಲ್ಲ. ಬದುಕನ್ನು ವೈಚಾರಿಕತೆಯಿಂದಾಚೆಗೂ ನೋಡುವುದರಿಂದಾಗಿ ಹೆಚ್ಚು ಆಪ್ತರಾಗುತ್ತಾರೆ. ಅಲ್ಲದೆ ಸಾಹಿತಿಯಾಗಿ ಬರವಣಿಗೆಗಷ್ಟೇ ಸೀಮಿತವಾಗದೆ ಬದಲಾವಣೆ ಬಯಸಿದ, ಪ್ರಯತ್ನಿಸಿದ, ಅಧ್ಯಾತ್ಮವನ್ನು ಆಚರಣೆಗಳಿಂದ, ದೇವರಿಂದ ಬಿಡಿಸಿದವರಾಗಿ, ಮುಖ್ಯವಾಗಿ 'ಹೇಮಿಯ ಗಂಡನಾಗಿ' ಸ್ವರ್ಗಕ್ಕೆ ಹೋಗುವವರಾಗಿ ಲೇಖಕರಾಗಿ ನನಗೆ ಮುಖ್ಯವೆನಿಸುತ್ತಾರೆ. ಇವರ ಬರವಣಿಗೆ ಅಕಡೆಮಿಕ್ ಕಟ್ಟಡಗಳಿಂದ ಹೊರಬಂದು ಬಹುಸಂಖ್ಯೆಯ ಗುತ್ತಿ-ತಿಮ್ಮಿಯರಿಗೆ ತಲುಪಬೇಕು.

ನಿಗೂಢ, ಮಾಂತ್ರಿಕ, ವಿಸ್ಮಯದ ಕಾಡು, ಆ ಕಾಡೊಳಗಿನ ಅಂತದೇ ಬದುಕನ್ನು ಓದುತ್ತಾ, ನೋಡುತ್ತಾ, ಅದು ನಮ್ಮೊಳಗೇ ಜೀವಂತವಾಗುವ ಪರಿ ! ಎಷ್ಟು ಧ್ಯಾನಿಸಿ ಬರೆದಿದ್ದಾರಪ್ಪ ಎನಿಸುತ್ತೆ. ಕಾಡಿನ ಬದುಕನ್ನೆಲ್ಲಾ ಮೀರಿಸಿ ಪ್ರವಾಹದೆದುರು ಈಜಿ ಮರೆಯಾಗುತ್ತಾ ನಮ್ಮೆದೆಯೊಳಗೆ ಜೀವಂತವಾಗಿ ನಿಂತುಬಿಡುತ್ತಾನೆ ಗುತ್ತಿಯ ಹುಲಿಯ !

ಕುವೆಂಪು ವಿಶ್ವವಿದ್ಯಾಲಯದಲ್ಲಿ, ಕುವೆಂಪು ಕಾದಂಬರಿ ಕುರಿತು ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ಕರೆದದ್ದು ನನಗೆ ಸಿಕ್ಕ ಗೌರವ. ಅವಕಾಶ ಮಾಡಿಕೊಟ್ಟ ಎಲ್ಲರಿಗೂ ಕೇಳಿಸಿಕೊಂಡ ಎಲ್ಲ ಸ್ನೇಹಿತರಿಗೂ ನನ್ನ ಹೃದಯಪೂರ್ವಕ ವಂದನೆಗಳು.

□

ದು. ಸರಸ್ವತಿ, ೧೧೯, ಪಶ್ಚಿಮ ಕಾರ್ಡ್ ರಸ್ತೆ, ೨ನೇ ಹಂತ,
ಮಹಾಲಕ್ಷ್ಮೀಪುರ, ಬೆಂಗಳೂರು-೫೬೦೦೮೬.

ಮಲೆನಾಡಿಗರ ಬಾಯಲ್ಲಿ ಕುವೆಂಪು

ಬಿಳುಮನೆ ರಾಮದಾಸ್

ಬಿ.ಎಂ.ಶ್ರೀ. ಅವರಿಗು ಅವರ ವಿದ್ಯಾರ್ಥಿಗಳಾದ ಕುವೆಂಪು, ಡಿ.ಎಲ್. ನರಸಿಂಹಾಚಾರ್ ಅವರಿಗು ನಶ್ಯ ಸೇದುವ ಚಟ ಇದ್ದಿತು. ಗುರುಗಳೆದುರಿಗೆ ಶಿಷ್ಯರು ನಶ್ಯ ಸೇಮುತ್ತಿರಲಿಲ್ಲ. ಆದರೆ ಗುರುಗಳಿಗೆ ಶಿಷ್ಯರ ಚಟದ ಕುರಿತು ಮಾಹಿತಿ ಇತ್ತು. ಒಂದು ಸಾರಿ ಗುರುವಿನಿಂದ ನಶ್ಯ ತೆಗೆದುಕೊಳ್ಳುವ ಸಂದರ್ಭ ಈ ಶಿಷ್ಯೋತ್ತಮರಿಗೆ ಒದಗಿ ಬಂದಿತು. ಸಾಹಿತ್ಯ ಸಮ್ಮೇಳನ ಒಂದರಲ್ಲಿ ಗುರುಶಿಷ್ಯರು ಭಾಗವಹಿಸಿದ್ದರು. ಅಂದು ಗುರುಗಳದ್ದೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. ಡಿ.ಎಲ್.ಎನ್. ಅವರಲ್ಲಿ ನಶ್ಯ ಸೇದುವ ಕಯಾಲಿಯಾಗಿ ಡಬ್ಬಿ ಕಾಣೆಯಾಗಿತ್ತು. ಅವರು ಕುವೆಂಪು ಅವರ ಮೊರೆ ಹೊಕ್ಕರು. ಕುವೆಂಪು ಅವರ ಡಬ್ಬಿಯಲ್ಲೂ ನಶ್ಯವಿಲ್ಲದೆ ಡಬ್ಬಿ ಬಣಗುಡುತ್ತಿತ್ತು. ಪೇಟೆಗೆ ಹೋಗಿ ನಶ್ಯ ತರಲು ವ್ಯವದಾನವಿರಲಿಲ್ಲ. ಸಭೆ ಶುರುವಾಗುವ ಹಂತದಲ್ಲಿತ್ತು. ಏನು ಮಾಡುವುದೆಂದು ಇಬ್ಬರಿಗು ಚಿಂತೆಯಾಯಿತು. ಕೊನೆಗೆ ಡಿಎಲ್‌ಎನ್ ಅವರು ಕುವೆಂಪು ಅವರಿಗೆ ಗುರುಗಳನ್ನೆ ಕೇಳಿ ನಶ್ಯದ ಡಬ್ಬಿ ತೆಗೆದುಕೊಳ್ಳಲು ಸಲಹೆ ಕೊಟ್ಟರು. ಗುರುಗಳನ್ನು ಕೇಳಿದರೆ ಏನು ಹೇಳುವರೊ ? ಏನು ತಿಳಿದುಕೊಳ್ಳುವರೊ ? ಎಂದು ಅಂಜಿದ ಕುವೆಂಪು ಅವರು "ಈಗ ಬೇಡ. ಸಭೆ ಶುರುವಾಗಲಿ. ಈಗ ಕೇಳಿದರೆ ಏನಾದರು ಅಂದುಕೊಳ್ಳಬಹುದು ಅವರು. ಸಭೆ ಶುರುವಾದಾಗ ಕೇಳಿದರೆ ಏನನ್ನು ಹೇಳದೆ ಸುಮ್ಮನೆ ಕೊಡುತ್ತಾರೆ" ಎಂದು ಗೆಳೆಯನಿಗೆ ಸಮಾಧಾನ ಹೇಳಿದರು. ಸಭೆ ಶುರುವಾಯಿತು. ಬಿ.ಎಂ.ಶ್ರೀ. ಕುರ್ಚಿಗೆ ಭರ್ತಿಯಾಗಿ ಕೂತಿದ್ದರು. ಕುವೆಂಪು ಅವರು ಹಿಂದಿನಿಂದ ಹೋಗಿ "ಸಾರ್ ಸ್ವಲ್ಪ ನಶ್ಯ ಡಬ್ಬಿ ಕೊಡಿ" ಎಂದು ಕೇಳಿಯೇಬಿಟ್ಟರು. ಬಿ.ಎಂ.ಶ್ರೀ. ಯವರು ಒಮ್ಮೆ ಕುವೆಂಪು ಅವರನ್ನು ಇನ್ನೊಮ್ಮೆ ಸಭಿಕರನ್ನು ನೋಡಿದರು. ಸಭಿಕರು ಗುರುಶಿಷ್ಯರನ್ನು ನೋಡುತ್ತಲೆ ಇದ್ದರು. ಶ್ರೀ ಅವರಿಗೆ ಇರಿಸುಮುರಸಾಗಿ ಮೂರು ತೊಲದ ಡಬ್ಬಿಯನ್ನು ತೆಗೆದುಕೊಟ್ಟರು. ಗುರುಗಳಿಂದ ನಶ್ಯಡಬ್ಬಿಯನ್ನು ಹಾರಿಸಿಕೊಂಡು ಬಂದ ಗೆಳೆಯನ ಕುರಿತು ಡಿ.ಎಲ್.ಎನ್. ಅವರಿಗೆ ಸ್ವರ್ಗಕ್ಕೆ ಮೂರೇ ಗೇಣು. ಇಬ್ಬರೂ ಡಬ್ಬಿ ಮುಚ್ಚಳ ತೆಗೆದು ಒಂದೊಂದು ಚಿಟಿಕೆ ತೆಗೆದು ತಮ್ಮ ಚಟವನ್ನು ತೀರಿಸಿಕೊಂಡರು. ಕುವೆಂಪು ಅವರು ಅಷ್ಟಕ್ಕೆ ತೃಪ್ತರಾಗದೆ ತಮ್ಮ ಒಂದು ತೊಲದ ಖಾಲಿ ಡಬ್ಬಿಗೆ ಗುರುಗಳ ಡಬ್ಬಿಯಿಂದ ನಶ್ಯವನ್ನು ಗಿರಿದು (ಟೈಟ್) ತುಂಬಿಕೊಂಡು ಗುರುಗಳ ಡಬ್ಬಿಯಿಂದ

ಮತ್ತೊಂದು ಚಿಟಿಕೆ ನಶ್ಯ ತೆಗೆದು ಸೇದಿ ಗುರುಗಳಿಗೆ ಡಬ್ಬಿಯನ್ನು ವಾಪಸು ಮಾಡಿದರು. ಗುರುಗಳು ನಶ್ಯದ ಡಬ್ಬಿ ಕೊಡುವಾಗ ತೂಕವಿದ್ದುದು ತೆಗೆದುಕೊಳ್ಳುವಾಗ ಹಗುರವಾಗಿದ್ದುದನ್ನು ಗಮನಿಸಿ ಕೈಯಲ್ಲೆ ತೂಗಿ ನೋಡಿ ಶಿಷ್ಯನನ್ನೊಮ್ಮೆ ಸಭಿಕರನ್ನೊಮ್ಮೆ ನೋಡಿ ಅಸಹಾಯಕತೆ, ವ್ಯಥೆಯಿಂದ ಡಬ್ಬಿಯನ್ನು ಜೇಬಿಗೆ ಇಳಿಬಿಟ್ಟರು.

ನಾನು ಚಿಕ್ಕವನಿದ್ದಾಗ ನಮ್ಮ ತಂದೆಯವರು ಮೇಗರವಳ್ಳಿಯಲ್ಲಿ ಜವಳಿ ಅಂಗಡಿಯನ್ನು ಇಟ್ಟಿದ್ದರು. ಅವರಿಗೆ ನಶ್ಯ ಸೇದುವ ಹವ್ಯಾಸ ಇತ್ತು. ಅವರಿಗೆ ಹಳೆಯ ದಾಸ್ತಾನು ನಶ್ಯ ರುಚಿಸದಿದ್ದುದರಿಂದ ಮದ್ರಾಸಿನಿಂದ ನೇರವಾಗಿ 'ಅಂಬಾಳ್' ನಶ್ಯವನ್ನು ತರಿಸುತ್ತಿದ್ದರು. ಬಹಳ ಮಂದಿ ನಮ್ಮ ತಂದೆಯವರಿಂದ ನಶ್ಯ ಕೊಳ್ಳುತ್ತಿದ್ದರು. ಅದರಲ್ಲಿ ಪುಕ್ಕಟೆ ಗಿರಾಕಿಗಳೆ ಜಾಸ್ತಿ. ಸಂಜೆ ಹೊತ್ತು ನಮ್ಮ ತಂದೆಯವರ ಅಂಗಡಿಯಲ್ಲಿ ಶೂದ್ರ ಮಹಾಸಭೆ ಸೇರುತ್ತಿತ್ತು. ಪ್ರತಿನಿತ್ಯ ಒಂದೇ ರೀತಿಯ ಸಂಭಾಷಣೆ. ಅದೇನೆಂದರೆ ಇಂದಿರಾಗಾಂಧಿ ಬಾಬುಕಟ್ಟು ಮಾಡಿಸಿಕೊಂಡದ್ದು, ಆಕೆ ಪಾರ್ಸಿ ಜನಾಂಗದ ಫಿರೋಜ್ ಗಾಂಧಿಯನ್ನು ಮದುವೆ ಮಾಡಿಕೊಂಡದ್ದು, ಪಂಡಿತ ಜವಾಹರಲಾಲರ ಭಟ್ಟ ಇಂಗ್ಲೆಂಡಿನಿಂದ ಮಡಿಯಾಗಿ ಬರುತ್ತಿರುವುದರ ಬಗ್ಗೆ ಚರ್ಚೆಯಾಗುತ್ತಿತ್ತು. ಕುವೆಂಪು ಅವರನ್ನು ಕುರಿತು "ಕೆ.ವಿ. ಪುಟ್ಟಪ್ಪಂದು ಏನು ಸುದ್ದಿ ಇಲ್ಲವೇನರಿ ?" ಎಂದು ಕೆಲವರು ಕೇಳುತ್ತಿದ್ದರು. ನಮ್ಮ ತಂದೆಯವರು ಉತ್ತರವಾಗಿ "ದಿನಾ ಎಂತ ಸುದ್ದಿ ಇರತದರಿ" ಎಂದೆನ್ನುತ್ತಿದ್ದರು. ಕುವೆಂಪು ಅವರು ಹೊಸ ಪುಸ್ತಕ ಬರೆದರೆ ಮೇಗರವಳ್ಳಿತನಕ ಸುದ್ದಿ ಬಂದು ಕೆಲವರು ಸಂತೋಷಪಟ್ಟರೆ ಕೆಲವರು ಅಸಮಾಧಾನದಿಂದ 'ಓಹೋ!' ಅನ್ನುತ್ತಿದ್ದರು. ಅಸಮಾಧಾನ ಏಕೆಂದರೆ ಕುವೆಂಪು ಅವರು 'ಕಾನೂರು ಹೆಗ್ಗಡತಿ' ಕಾದಂಬರಿ ಬರೆದು ಮಲೆನಾಡಿನ ಒಕ್ಕಲಿಗರನ್ನು ಹರಾಜು ಹಾಕಿದರು ಎಂದು. ನನ್ನಜ್ಜನ ವಯಸ್ಸಿನವರು ಕೆಲವರು "ಆ ಪುಟ್ಟಪ್ಪ ಇಲ್ಲಿ ಬಂದರೆ ಅವನನ್ನು ಮನೀಗೆ ಸೇರಿಸಬೇಡಿ" ಎಂದು ಹೇಳುತ್ತಿದ್ದರು. ಕಾನೂರು ಹೆಗ್ಗಡತಿ ಬರೆಯುವುದಕ್ಕಿಂತ ಮುಂಚೆ ಕುವೆಂಪು ಅವರು ಆಗಾಗ ನಮ್ಮೂರ ಕಡೆ ಬರುತ್ತಿದ್ದರು. ಜನ ಟೀಕೆ ಮಾಡಿದರೆಂದು ಕುವೆಂಪು ನಮ್ಮೂರಿಗೆ ಬರುವುದನ್ನು ನಿಲ್ಲಿಸಲಿಲ್ಲ. ಮದುವೆ ಮಕ್ಕಳು ಬರವಣಿಗೆ ಎಂದು ಹೆಚ್ಚಿನ ಜವಾಬ್ದಾರಿ ಅವರಿಗೆ ಬಿದ್ದುದರಿಂದ ಅವರು ತಿರುಗಾಟವನ್ನು ನಿಲ್ಲಿಸಿದ್ದರು. ನಮ್ಮ ತಂದೆಯ ಜವಳಿ ಅಂಗಡಿಯಲ್ಲಿ ನಡೆಯುವ ಶೂದ್ರ ಮಹಾಸಭೆಯಲ್ಲಿ ಒಂದು ಪ್ರಶ್ನೆಯನ್ನು ಅಂತಿಮವಾಗಿ ಒಬ್ಬರು ಎತ್ತುತ್ತಿದ್ದರು. ಅದೇನೆಂದರೆ "ಏನಾದರು ಪುಟ್ಟಪ್ಪನವರು ಕಾನೂರು ಹೆಗ್ಗಡತೀನ ಸೇರೇಗಾರ ರಂಗಪ್ಪಸೆಟ್ಟಿ ಜತೀಗೆ ಮಲಗಿಸಿದ್ದು ತಪ್ಪು. ಏನಂತೀರಾ ?" ಎಂದು ಹೇಳಿದರೆ ಇನ್ನಿಬ್ಬರು "ಹಾದೌದು, ತಪ್ಪು ತಪ್ಪು. ಪುಟ್ಟಪ್ಪನವರು ಆ ಕೆಲಸ ಮಾಡಬಾರದಿತ್ತು" ಎಂದು ಹೇಳಿ ನಮ್ಮ ತಂದೆಯ ಮುಖ ನೋಡುತ್ತಿದ್ದರು. ನಮ್ಮ ತಂದೆಯ ಮುಖವನ್ನು ಅವರು ನೋಡಲು ಕಾರಣವೆಂದರೆ ನಮ್ಮ ತಂದೆಯವರಿಂದ ನಿರೀಕ್ಷಿತ ಉತ್ತರವನ್ನು ಅವರು ಅಪೇಕ್ಷಿಸುತ್ತಿದ್ದರು. ನಮ್ಮ ತಂದೆಯವರು ಗಹಗಹಿಸಿ ನಕ್ಕು "ನೀವೆಲ್ಲ ಏನು ಬಾಳ ಅಪ್ಪಂತ ಜನಗಳಾ ? ತ್ವಾಟದಾಗೆ ಕೆಲಸದ ಹೆಂಗಸರ ಜತಿಗೆ ಮಲಗದವರಲ್ಲವಾ ? ಪೂಜಾರರ ಹೆಂಗಸರ ಬಿಡಾರನ ರಾತ್ರೆ ತಟ್ಟಿ ಅವರಿಂದ ಉಗಿಸಿಕೊಂಡವರಲ್ಲವಾ ?" ಎಂದೆನ್ನುತ್ತಿದ್ದರು. ಅದರಿಂದ ಗೌಡರುಗಳಿಗೆ ಖುಷಿಯಾಗಿ ಹುಚ್ಚೆದ್ದು ನಕ್ಕು ಅವರು ಚದುರಿಬಿಡುತ್ತಿದ್ದರು. ಅಲ್ಲಿಗೆ ಅಂದಿನ ಶೂದ್ರಮಹಾಸಭೆ ಮುಗಿದುಬಿಡುತ್ತಿತ್ತು.

ನಮ್ಮೂರಿನ ಬಂಗಲೆ ಬೈಲಿನಲ್ಲಿ ಕುವೆಂಪು ಅವರ ಹೆಣ್ಣು ಕೊಟ್ಟ ಮಾವನ ಸಂಬಂಧಿಯೊಬ್ಬರು ರೈಸ್‌ಮಿಲ್ಲೊಂದನ್ನು ಇಟ್ಟಿದ್ದರು. ಅದನ್ನು ನೋಡಿಕೊಳ್ಳಲು ಕುವೆಂಪು ಅವರನ್ನು ಚೆನ್ನಾಗಿ ಬಲ್ಲ ಬಿಕ್ಕಿಗುಂಡಿ ಸುಬ್ಬಯ್ಯ ಗೌಡರು ಎಂಬುವರು ನೇಮಕವಾಗಿದ್ದರು. ಅವರು ಆಗಾಗ ಮೈಸೂರಿಗೆ ಹೋಗಿ ಕುವೆಂಪು ಅವರ ಕುರಿತು ಏನಾದರು ಸಮಾಚಾರ ತಂದು ನಮ್ಮ ತಂದೆಯವರ ಜವಳಿ ಅಂಗಡಿಯಲ್ಲಿ ಪಟ್ಟಂಗ ಹೊಡೆಯುವರಿಗೆ ವರದಿ ಒಪ್ಪಿಸುತ್ತಿದ್ದರು. ಅವರಿಗೆ ಕುವೆಂಪು ಮಾತಿಗೆ ಸಿಕ್ಕಿದ್ದರೆ ಬಹಳ ರಸವತ್ತಾಗಿ ಕುವೆಂಪು ಏನು ಬರೆಯುತ್ತಿದ್ದಾರೆ ಎಂದು ಹೇಳುತ್ತಿದ್ದರು. ಒಮ್ಮೆ ಅವರು ಮೈಸೂರಿಗೆ ಹೋಗಿ ಬಂದವರು "ಪುಟ್ಟಪ್ಪ ಮಾತಿಗೆ ಸಿಗಲಿಲ್ಲ. ಅವನು ಬಾಗಿಲು ಹಾಕ್ಕಂಡು ಏನೋ ಬರೀತಾ ಇದ್ದ. ಅವನ ಒಡತಿ ಹೇಮಾವತಿ ಈಗ ಅವರನ್ನ ಮಾತಾಡಿಸಂಗಿಲ್ಲ. ಸಾಯಂಕಾಲ ಬನ್ನಿ ಅಂದ್ಲು. ಆಮೇಲೆ ನಾನತ್ಲಾಗೆ ಹೋಗ್ಲಿಲ್ಲ. ಅವನಿಗೆ ಮಗ ಹುಟ್ಟಿದಾನೆ ಮಾರಾಯರೆ, ಎಷ್ಟು ತೂಕ ಅದಾನೆ ಅಂತೀರಿ. ಆನೆಮರಿ ಇದ್ದಂಗೆ ಇದಾನೆ" ಎಂದು ಪಕಪಕ ನಕ್ಕರು.

ಕುವೆಂಪು ಅವರು ಪ್ರೊಫೆಸರರಾಗಿದ್ದ ಸಮಯದಲ್ಲಿ ಒಂದು ಸಾರಿ ತೀರ್ಥಹಳ್ಳಿಗೆ ಬಂದವರು ಒಂದು ತೊಲ ನಶ್ಯಕ್ಕಾಗಿ ಯಾರೊಂದಿಗೊ ಖಾಲಿ ಡಬ್ಬಿ ಕೊಟ್ಟು ನಮ್ಮ ತಂದೆಯವರಲ್ಲಿಗೆ ಅಟ್ಟಿದರು. ನಮ್ಮ ತಂದೆ ಸ್ವಂತಕ್ಕಾಗಿ ಮದ್ರಾಸಿನಿಂದ ಅಂಬಾಳ್ ನಶ್ಯ ತರಿಸಿಕೊಳ್ಳುತ್ತಿದ್ದರು. ಅವರು ಮದ್ರಾಸ್ 'ಅಂಬಾಳ್ ನಶ್ಯ'ದ ಕಚೇರಿಗೆ ಕನ್ನಡದಲ್ಲಿ ಪತ್ರ ಬರೆಯುತ್ತಿದ್ದರು. ಅವರ ಕನ್ನಡ ಪತ್ರ ಯಾರಿಗೆ ಅರ್ಥವಾಗುತ್ತಿತ್ತೊ ತಿಳಿಯದು. ಬಹುಶಃ ಅವರ ಕನ್ನಡ ಹಸ್ತಾಕ್ಷರ ನೋಡಿ ಇದು ನಶ್ಯಕ್ಕಾಗಿ ಬರೆದದ್ದು ಎಂದು ಅವರು ಒಂದುವರೆ ಸೇರು ನಶ್ಯ ವಿ.ಪಿ.ಕಳುಹಿಸುತ್ತಿದ್ದರೇನೊ ? ನಮ್ಮ ತಂದೆಯವರಿಗೆ ಬಹಳ ಖುಷಿಯಾಗಿ ಕುವೆಂಪುಗೆ ನಶ್ಯ ಕೇಳಲು ಬಂದವರಿಗೆ ಕುವೆಂಪು ಅವರು ಹೇಗಿದ್ದಾರೆ ? ಅವರೇನು ಬರೆಯುತ್ತಿದ್ದಾರಂತೆ ಎಂದು ಕೇಳುತ್ತಿದ್ದರು. ಬಂದಾತ ಕಾದಂಬರಿ ಬರೀತಿದಾರಂತೆ ಎಂದು ಒಂದು ಹಸಿ ಸುಳ್ಳು ಹೇಳುತ್ತಿದ್ದರು. ಏಕೆಂದರೆ ಆಗೆಲ್ಲ ಕಾರಂತರು, ಅ.ನ.ಕೃ., ತ.ರಾ.ಸು., ನಿರಂಜನ, ಪುರಾಣಿಕರು ಪೈಪೋಟಿ ಮೇಲೆ ಕಾದಂಬರಿ ಬರೆಯುತ್ತಿದ್ದರು. ಆ ಕಾರಣಕ್ಕೊ ಅಥವಾ ಕಾನೂರು ಹೆಗ್ಗಡತಿ ನಮ್ಮ ಕಡೆ ಬಹಳ ಪ್ರಖ್ಯಾತವಾದುದಕ್ಕೊ ಬಂದವರು ಹಾಗೆ ಹೇಳಿರಬೇಕು. ನಮ್ಮ ತಂದೆಯವರು 'ಬಾಳ ಸಂತೋಷ' ಎಂದು ನನಗೆ 'ಶೆಟ್ಟಿ (ನಾನು ಕೆಲವರಿಗೆ ನಶ್ಯವನ್ನು ಲೂಸಾಗಿಯು ಕೆಲವರಿಗೆ ಗಿರಿದು ತುಂಬಿಕೊಡುತ್ತಿದ್ದುದರಿಂದ ಹಾಗೆ ನನ್ನನ್ನು ಕರೆಯುತ್ತಿದ್ದರು) ಸರಿಯಾಗಿ ತುಂಬಿಕೊಡು" ಎಂದು ತಾವು ಮೂರು ತೊಲದ ಡಬ್ಬಿಗೆ ನಶ್ಯ ತುಂಬಿ ಕೊಡುತ್ತ "ನೋಡಿ ಪುಟ್ಟಪ್ಪನವರಿಗಾಗಿದ್ದಕ್ಕೆ ಮೂರು ತೊಲ ನಶ್ಯ ಫ್ರೀ ಕೊಡತಿದೀನಿ. ದುಡ್ಡು ತಗೊಳ್ಳಲ್ಲ. ಒಂದು ತೊಲದ ನಶ್ಯಕ್ಕೆ ಮಾತ್ರ ದುಡ್ಡು ತಗೊಳತೀನಿ" ಎಂದು ನಾನು ತುಂಬಿದ ನಶ್ಯವನ್ನು ಪರೀಕ್ಷಿಸಿ ಒಂದು ತೊಲಕ್ಕೆ ಹಣ ತೆಗೆದುಕೊಂಡರು. ಒಂದು ವಾರದ ನಂತರ ಕುವೆಂಪು ಅವರಿಂದ ನಮ್ಮ ತಂದೆಯವರು ಪುಕ್ಕಟೆಯಾಗಿ ಕೊಟ್ಟ ಮೂರು ತೊಲ ನಶ್ಯಕ್ಕೆ ಏಳುವರೆ ಆಣೆಗೆ ಎಂ.ಒ. ಬಂದಿತು. ಎಂ.ಒ. ಕೆಳಗೆ ಕುವೆಂಪು ಅವರು "ನಶ್ಯ ತಲುಪಿದೆ. ಖಾರ ಖಾರವಾಗಿ ಬಹಳ ಚೆನ್ನಾಗಿದೆ. ಹಣ ಸ್ವೀಕರಿಸಿರಿ" ಎಂದು ಬರೆದಿದ್ದರು. ನಮ್ಮ ತಂದೆಯವರು ಎಂ.ಒ. ಚೀಟಿಯನ್ನು ಬಹಳ ದಿನ ಇಟ್ಟುಕೊಂಡು ಅವರ ಸ್ನೇಹಿತರಿಗೆಲ್ಲ ತೋರಿಸುತ್ತಿದ್ದರು.

ನಾನು ಚಿಕ್ಕವನಿದ್ದಾಗ ಪ್ರಥಮ ಬಾರಿಗೆ ಕೆ.ವಿ. ಪುಟ್ಟಪ್ಪ ಅವರ ಹೆಸರನ್ನು ಕೇಳಿದೆ. ಆಗೆಲ್ಲ ಕುವೆಂಪು ಅವರು ಕೆ.ವಿ. ಪುಟ್ಟಪ್ಪ ಎಂದೇ ಪ್ರಖ್ಯಾತರಾಗಿದ್ದರು. ಕುವೆಂಪು ಅವರ ಕವನ "ಞುವ್ವಿ ಞುವ್ವಿ ಎಂದು ಎನ್ನ ಎದೆಯೊಳೊಂದು ಹಕ್ಕಿ ಹಾಡಿತು" ಎಂದು ಮೇಷ್ಟರು ಸುಬ್ಬಾಭಟ್ಟರು ಓದಿ ಹೇಳಿ ಪಠ್ಯಪುಸ್ತಕವನ್ನು ಕವುಚಿಟ್ಟು ಒಂದು ಚಿಟಿಕೆ ನಶ್ಯ ಸೇದಿ 'ಶೂದ್ರ ಮುಂಡೇವೆಲ್ಲ ಕವನ ಬರೆಯವೆ. ಇವನ ಎದೇಲಿ ಹಕ್ಕಿ ಹಾಡಿ ಬಿಡತಂತೆ" ಎಂದು ಮೂದಲಿಸಿದರು. ನಾವು ಹುಡುಗರು ಕತೆ, ಕವನ, ಕಾದಂಬರಿ, ಪ್ರಬಂಧ ಬರೆಯುವುದು ಕೇವಲ ಬ್ರಾಹ್ಮಣರಿಗೆ ಸಾಧ್ಯ. ಶೂದ್ರರು ಬರೆಯಕೂಡದೆಂದು ತಿಳಿದೆವು. ಮಧ್ಯಾಹ್ನ ಊಟಕ್ಕೆ ಮನೆಗೆ ಬಂದಾಗ ನಮ್ಮ ತಂದೆಗೆ "ಕೆ.ವಿ. ಪುಟ್ಟಪ್ಪನವರು ಶೂದ್ರರಂತೆ" ಎಂದೆ. ನಮ್ಮ ತಂದೆಯವರು ನಕ್ಕು "ನೀನು ಯಾರು ಅಂತ ಮಾಡಿದೀಯಾ ? ನೀನು ಶೂದ್ರನೆ" ಎಂದರು. ನಮ್ಮ ತಾಯಿಯವರು "ಅದೆಲ್ಲ ಇರಲಿ. ಆ ಪ್ರಶ್ನೆ ಯಾಕೆ ಬಂತು ? ಪುಟ್ಟಪ್ಪನವರು ಶೂದ್ರರು ಅಂತ ಯಾರು ಹೇಳಿದವರು ನಿನಗೆ" ಎಂದು ಕೇಳಿದರು. ನಾನು ವಿಷಯ ತಿಳಿಸಿದೆ. ನಮ್ಮ ತಂದೆಯವರು ವ್ಯಗ್ರರಾದರು. ಅವರು ನನ್ನನ್ನು ಕರೆದುಕೊಂಡು ಕುವೆಂಪು ಅವರ ಬಾಲ್ಯಗೆಳೆಯರೂ, ಕುವೆಂಪು ಅವರ ಶಡ್ಡಕನ ತಮ್ಮನೂ ಆದ ರಾಮಪ್ಪ ಗೌಡರಲ್ಲಿಗೆ ಹೋದರು. "ಸುಬ್ಬಾಭಟ್ಟರು ಏನೂ ಅರಿಯದ ಹುಡುಗರೆದುರಿಗೆ ಪುಟ್ಟಪ್ಪನವರನ್ನು ಶೂದ್ರಮುಂಡೇವು ಅನ್ನಬಹುದೆ ? ಅವರಿಗೆ ಎಷ್ಟು ಸೊಕ್ಕು" ಎಂದು ಹಾರಾಡಿದರು. ಮುಷ್ಟಿಯಲ್ಲಿ ಬೀಡಿಯನ್ನಿಟ್ಟುಕೊಂಡು ಸೇದುತ್ತಿದ್ದ ಗೌಡರು ಏನು ನಡೆಯಿತು ಎಂದು ನನ್ನಿಂದ ಹೊಸದಾಗಿ ಎಲ್ಲವನ್ನು ಕೇಳಿ ತಿಳಿದುಕೊಂಡು "ಸಾಯಂಕಾಲ ಆ ಭಟ್ಟ ಇದೆ ರಸ್ತೇಲಿ ವಾಕಿಂಗ್ ಹೋಗತಾನಲ್ಲ, ಇಚಾರಣೆ ಮಾಡತೀನಿ. ನೀನು ಬಾ" ಎಂದರು. ನನಗೆ ಭಯವಾಗಿ ಹೋಯಿತು. ಭಟ್ಟರು ದಿನಾ 'ಸರಿಯಾಗಿ ಪಾಠ ಓದುತ್ತಿಲ್ಲ' ಎಂದು ನನ್ನ ಕಿವಿ ಹಿಂಡುವುದು 'ಶೂದ್ರ ಮುಂಡೇದೆ' ಎಂದು ಬೈಯುವುದು ಮಾಡುತ್ತಿದ್ದರು. ಗೌಡರೇನಾದರು ಭಟ್ಟರನ್ನು ತರಾಟೆಗೆ ತೆಗೆದುಕೊಂಡರೆ ಭಟ್ಟರು ನನಗೆ ಕೊಡುವ ಹಿಂಸೆಯನ್ನು ಇನ್ನೂ ಜಾಸ್ತಿ ಮಾಡಬಹುದೇನೊ ಎಂದು ದಿಗಿಲುಗೊಂಡೆ. ದಾರಿಯಲ್ಲಿ ಈಶ್ವರ ದೇವಸ್ಥಾನದೆದುರು ನಿಂತು ಇದೊಂದು ಪ್ರಕರಣದಲ್ಲಿ ನನ್ನನ್ನು ಬಚಾವ್ ಮಾಡಬೇಕೆಂದು ಗೌಡರು ಭಟ್ಟರನ್ನು ಅವಮಾನ ಮಾಡದಿರಲಿ ಎಂದು ಪ್ರಾರ್ಥಿಸಿಕೊಂಡೆ. ಸಂಜೆ ನಾನು ಶಾಲೆ ಬಿಟ್ಟು ಬರುವಾಗ ಗೌಡರು 'ಬಾ' ಎಂದು ಕರೆದರು. ಸಾಲದ್ದಕ್ಕೆ ಭಟ್ಟರನ್ನು ವಾಚಾಮಗೋಚರವಾಗಿ ಬೈಯುತ್ತ ಯಥೇಚ್ಛವಾಗಿ ಬೀಡಿ ಸೇದಿದರು. ಭಟ್ಟರು ಆರು ಗಂಟೆಗೆ ಸರಿಯಾಗಿ ವಿಹಾರ ಹೋಗುವವರು ಬಂದೇಬಿಟ್ಟರು. ಗೌಡರು ಭಟ್ಟರನ್ನು "ಓ ಸುಬ್ಬಾಭಟ್ಟರೆ, ಬನ್ನಿರಿ ಇಲ್ಲಿ" ಎಂದು ಕರೆದರು. ಭಟ್ಟರು ನನ್ನನ್ನು ನೋಡಿ ದಿಗಿಲುಬಿದ್ದು ಗೌಡರ ಅಂಗಡಿ ಕಡೆಗೆ ಬಂದರು. ಗೌಡರೆದ್ದು ಮೈಮೇಲೆ ದೆವ್ವ ಬಂದವರಂತೆ ಹೂಂಕರಿಸಿ ಕುವೆಂಪು ಅವರನ್ನು ಭಟ್ಟರು ಅವಮಾನಿಸಿದ ಪ್ರಕರಣವನ್ನು ಹೇಳಿ "ನಿನಗೇನು ತಲೆಗಿಲೆ ಸರಿ ಇಲ್ಲವನೊ ? ಏನು ನಮ್ಮ ಪುಟ್ಟಪ್ಪನ್ನ ಬಾರಿ ಆಡಿಕೊಳತಿದ್ದಿಯಂತೆ ? ಕಾಳಿದಾಸ, ಕನಕದಾಸ, ಪುರಂದರದಾಸ ಯಾವ ಜಾತೀನೊ? ಬ್ರಾಂಬರನೊ ? ಹುಡುಗರ ಎದುರಿಗೆ ಹಾಗೆಯನೊ ಹೇಳಾದು ? ಮೆಟ್ನಲ್ಲಿ ಹೊಡದರೆ ಹ್ಯಾಂಗೆ ಆಗಬೇಕು ಗೊತ್ತನು" ಎಂದು ಭಟ್ಟರ ಜನ್ಮ ಜಾಲಾಡಿದರು. ಅಷ್ಟರಲ್ಲಿ ಬಹಳ ಜನ ಸೇರಿ ಬಿಟ್ಟಿತು. ಭಟ್ಟರು ಹುಲಿಯನ್ನು ಕಂಡ ಜಿಂಕೆಯಂತಾಗಿ ಕ್ಷಮಾಪಣೆ ಕೇಳಿ

ಬಚಾವ್ ಆದರು. ಭಟ್ಟರು ಅಂದಿನಿಂದ ನನ್ನನ್ನು ಮಾತಾಡಿಸುವುದನ್ನು ಬಿಟ್ಟರು. ನನಗೆ ಕಿವಿ ಹಿಂಡುವುದು ತಪ್ಪಿತು. ಅವರು ಸಮಯ ಬಂದಾಗ "ಪುಟ್ಟಪ್ಪ ದೊಡ್ಡ ಕವಿ. ಅವನ ವಿಚಾರ ನಮಗೆ ಬ್ಯಾಡ. ಇಲ್ಲೆಲ್ಲ ಚಾಡಿ ಹೇಳವರು ಇದಾರೆ" ಎಂದೆನ್ನಹತ್ತಿದರು. ನಾನು ಭಗವಂತನ ಮೊರೆ ಹೊಕ್ಕಿದ್ದುದು ಸಾರ್ಥಕವಾಯಿತು.

ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಬರೆಯುವಾಗ ಮೇಗರವಳ್ಳಿ ಬಿ.ವಿ. ಮೂರ್ತಿಯವರಿಗೆ ಕಾಗದ ಬರೆದು ವಿವೇಕಾನಂದರು ೧೮೯೩ರಲ್ಲಿ ಚಿಕಾಗೊದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಉದ್ದೇಶಿಸಿ ಉಪನ್ಯಾಸ ನೀಡುವಾಗ ನಿಮ್ಮಲ್ಲಿ ಅಂದಿನ ಪತ್ರಿಕೆಗಳು ಯಾವುದಾದರು ಇದ್ದರೆ ಕಳಿಸಿಕೊಡಿ, ಎಂದು ಕೇಳಿಕೊಂಡಿದ್ದರು. ಮೂರ್ತಿಯವರು ಪ್ರಜಾವಾಣಿ ಪತ್ರಿಕೆ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಚಾರವಾಗಲು ಕಾರಣವಾಗಿದ್ದರು. ಅವರಲ್ಲಿ ನೂರು ವರ್ಷದ ಹಿಂದಿನ ಪ್ರಪಂಚದ ನಾನಾ ದೇಶದ ಪತ್ರಿಕೆಗಳು ಇದ್ದವು. ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶನಕ್ಕಾಗಿ ಆ ಪತ್ರಿಕೆಗಳನ್ನು ಇಡುವ ಪದ್ಧತಿಯನ್ನು ಅವರು ಇಟ್ಟುಕೊಂಡಿದ್ದರು. ಕುವೆಂಪು ಅವರ ಪತ್ರವನ್ನು ನೋಡಿ ಮೂರ್ತಿಗಳು ರೋಮಾಂಚಿತರಾಗಿ ಮೇಗರವಳ್ಳಿ ಪೇಟೆಯ ಪ್ರಮುಖರಿಗೆ ಕಾಗದವನ್ನು ತೋರಿಸಿಕೊಂಡು ಬಂದರು. ಕುವೆಂಪು ಅವರಿಗೆ ಅವರು ೧೮೯೩ರ ಕಾಲದ ಪತ್ರಿಕೆಯೊಂದನ್ನು ಕಳುಹಿಸಿದರು. ಕುವೆಂಪು ಅವರು ಒಂದು ವಾರದಲ್ಲಿ ಪತ್ರಿಕೆಯನ್ನು 'ರಿಜಿಸ್ಟರ್ಡ್ ಅಂಚೆ' ಮೂಲಕ ಬಹಳ ಮುತುವರ್ಜಿಯಿಂದ ವಾಪಸು ಕಳುಹಿಸಿದರು.

ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಬರೆಯುವಾಗ ಅವರ ಬಾಲ್ಯ ಗೆಳೆಯರಾದ ಗೋವಿನಹಳ್ಳಿ ರಾಮಪ್ಪ ಗೌಡರಿಗೆ ಪತ್ರ ಬರೆದು ೧೯೦೦ನೆ ಇಸವಿಯಲ್ಲಿ ಒಂದು ಸೊಪ್ಪಿನ ಹೊರೆ (ಗೊಬ್ಬರ ನುರಿಯಲು ಜಾನುವಾರಗಳ ಕಾಲ ಬುಡದಲ್ಲಿ ಹಾಕುವ ಮರಗಿಡಗಳ ಹಸಿರೆಲೆಗಳು)ಯ ಬೆಲೆ ಏನಿದ್ದಿತು ಎಂದು ಬರೆದಿದ್ದರು. ಗೋವಿನಹಳ್ಳಿ ರಾಮಪ್ಪಗೌಡರು ಪತ್ರ ಹಿಡಿದು ಬಹಳ ಖುಷಿಯಿಂದ ಮೇಗರವಳ್ಳಿ ರಾಮಪ್ಪಗೌಡರನ್ನು (ರಾಮಪ್ಪದ್ವಯರು-ನೋಡಿ 'ನೆನಪಿನ ದೋಣಿಯಲ್ಲಿ' ಕೃತಿಯನ್ನು) ನೋಡಿದರು. ಮೇಗರವಳ್ಳಿ ಗೌಡರಿಗೆ ಬಹಳ ಖುಷಿಯಾಗಿ "ಅಷ್ಟೆ ಬರದಿದಾನಾ ಮತ್ತೇನಾದರು ಬರದಿದಾನಾ ?" ಕೇಳಿದರು.

"ಇಲ್ಲ ಮತ್ತೇನು ಬರಿದಿಲ್ಲ ಅಷ್ಟೆ ಬರದಿದಾನೆ. ಯಾಕೆ ?"

"ಯಾಕಂದ್ರೆ ನಾನು ನೀವು ಅವನು ಮೈಸೂರಾಗೆ ಒಂದು ಹೊಟ್ಲಾಗೆ ಕಾಫಿತಿಂಡಿ ಊಟ ಮಾಡಿ ತಿಂಗಳಿಗೊಂದು ಸಾರಿ ದುಡ್ಡು ಕೊಡತಿದ್ದವಲ್ಲ ? ನಾನು ನಿನ್ನೆ ಕಾಫಿ ತಿಂಡಿ ಮಾಡಿದ್ದು ಎಂಟಾಣೆ ಅಂತ ಬರದಿದ್ವನ್ನ ಇವತ್ತು ಐದಾಣೆ ಅಂತ ತಿದ್ದತಿದ್ದನಲ್ಲ ಅದನ್ನೇನಾದರು ಗ್ಯಾಪಕ ಮಾಡಿದಾನಾಂತ ಕೇಳದೆ"

"ಇಲ್ಲ, ಅದೆಲ್ಲ ಬರೀಲಿಲ್ಲ"

"ಸಾವಿರದ ಒಂಬೈನೂರನೆ ಇಸ್ವೀಲಿ ಒಂದು ಸೊಪ್ಪಿನ ಹೊರೆಗೆ ಒಂದು ಕಾಸು ಅಂತ ಬರೀರಿ" ಎಂದರು ಮೇಗರವಳ್ಳಿ ಗೌಡರು.

ತಾರುಣ್ಯದಲ್ಲಿ ಕುವೆಂಪು ಅವರು ಬರೆದ ಹೊಸ ಕವನ ಅಚ್ಚಾಗುವುದಕ್ಕಿಂತ ಮುಂಚೆ

ಗುರುಗಳಾದ ಎ.ಆರ್. ಕೃಷ್ಣಶಾಸ್ತ್ರಿಗಳ ಮನೆಯಲ್ಲಿ ಸ್ನೇಹಿತರುಗಳಾದ ಡಿ.ಎಲ್.ಎನ್., ತಿ.ನಂ.ಶ್ರೀ, ಎ.ಎನ್. ಮೂರ್ತಿರಾಯರ ಸಮ್ಮುಖದಲ್ಲಿ ಕುವೆಂಪು ಅವರು ಓದಿ ಹೇಳುವ ಪರಿಪಾಠವಿತ್ತು. ಹೀಗೆ ಕುವೆಂಪು ಅವರು ತಮ್ಮ ಹೊಸಕವನ ಓದುತ್ತಾರೆ ನೀವು ಬನ್ನಿ ಎಂದು ಪ್ರಚಾರ ಮಾಡುವ ಕಾರ್ಯವನ್ನು ಎ.ಎನ್. ಮೂರ್ತಿರಾಯರು ವಹಿಸಿಕೊಂಡಿದ್ದರು. ಒಂದು ಸಾರಿ ಕುವೆಂಪು ಅವರು 'ಚಿತ್ರಾಂಗದ' ಖಂಡಕಾವ್ಯವನ್ನು ಓದುತ್ತಾರೆ. ಸಂಜೆ ಗುರುಗಳ ಮನೆಯಲ್ಲಿ ಪಾರ್ಟಿ (ಅಂದರೆ ಈಗಿನ ಕಾಲದ ಪಾರ್ಟಿ ಅಲ್ಲವೆಂದು ಬರೆ ಹಪ್ಪಳ ಕಾಫಿ ಎಂದು ಎ.ಎನ್.ಎಮ್. ಹೇಳುತ್ತಾರೆ) ಇದೆ ಬನ್ನಿ ಎಂದು ಮೂರ್ತಿರಾಯರು ಗೆಳೆಯರುಗಳಿಗೆ ಪ್ರಚಾರ ಮಾಡಿದರು. ಸಂಜೆ ಗುರುಗಳ ಮನೆಯಲ್ಲಿ ಶಿಷ್ಯಗಣ ಸೇರಿತು. ಕುವೆಂಪು ಅವರು 'ಚಿತ್ರಾಂಗದ' ಕಾವ್ಯವನ್ನು ಓದಿದರು. ಮಧ್ಯೆ ಅರ್ಜುನ ಚಿತ್ರಾಂಗದೆಯ ಪ್ರಣಯ ಪ್ರಕರಣವನ್ನು ಸಾಕಷ್ಟು ವಿವರಿಸಿ ಇನ್ನು ವರ್ಣಿಸಲಾಗದೆ ಕುವೆಂಪು ಅವರು 'ಕವಿ ನಿರನುಭವಿ' ಎಂದರು. ಕುವೆಂಪು ಅವರಿಗೆ ಆಗಿನ್ನೂ ಮದುವೆಯಾಗಿರಲಿಲ್ಲ. ಗುರುಗಳು ಎ.ಆರ್.ಕೃ. ಅವರು "ನಿನಗು ಮದುವೆಯಾಗುತ್ತೆ ಕಣಯ್ಯ" ಎಂದು ಸಮಾಧಾನ ಹೇಳಿದರು.

ನಾನು ಚಿಕ್ಕವನಿದ್ದಾಗ ಕುವೆಂಪು ಅವರಿಗೆ ಹುಚ್ಚು ಹಿಡಿದಿದೆ ಎಂದು ಕೆಲವರು, ಇನ್ನು ಕೆಲವರು ಅವರಿಗೆ ತಲೆ ಸರಿ ಇಲ್ಲ ಎಂದು ನಮ್ಮೂರಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ನನಗೆ ಇದು ದಿಗ್‌ಭ್ರಮೆ ಹುಟ್ಟಿಸುವ ಸುದ್ದಿಯಾಗಿತ್ತು. ಏಕೆಂದರೆ ಹುಚ್ಚು ಹಿಡಿದ ಕೆಲವರನ್ನು ನಾನು ನೋಡಿದ್ದೆ. ಅವರು ಗಡ್ಡ ಬಿಟ್ಟುಕೊಂಡು ಕೆದರಿದ ತಲೆಕೂದಲಿನೊಂದಿಗೆ ರಸ್ತೆಯಲ್ಲಿ ಏನನ್ನೋ ಹುಡುಕುತ್ತ ನಗುತ್ತ ಹೋಗುತ್ತಿದ್ದರು. ಆದರೆ ಕುವೆಂಪು ಅವರು ನೀಟಾಗಿ ಬಾಚಿಕೊಳ್ಳುತ್ತಾರೆ. ಪುಸ್ತಕ ಬರೆಯುತ್ತಾರೆ. ಒಳ್ಳೆಯ ಬಟ್ಟೆ ಹಾಕಿಕೊಳ್ಳುತ್ತಾರೆ. ಕಾಲೇಜಿನಲ್ಲಿ ಮೇಷ್ಟರಾಗಿ ಹುಡುಗ ಹುಡುಗಿಯರಿಗೆ ಪಾಠ ಹೇಳುತ್ತಾರೆ. ಅವರಿಗೆ ಹುಚ್ಚು ಹಿಡಿದಿದ್ದರೆ ಇದೆಲ್ಲ ಹೇಗೆ ಸಾಧ್ಯ ಎಂದು. ಒಮ್ಮೆ ನಮ್ಮ ತಂದೆಯವರನ್ನು ಈ ಕುರಿತು ಕೇಳಿದೆ. ಅವರು ನಕ್ಕು "ಶೂದ್ರನೊಬ್ಬ ಸಾಹಿತ್ಯ ರಚನೆ ಮಾಡತಾರೆ ಅಂತ ಕೆಲವರು ಹುಟ್ಟಿಸಿದ ಪಿತೂರಿ ಇದು" ಎಂದರು. ಮಾಂಸ ಮಡ್ಡಿ ತಿನ್ನುವ ಶೂದ್ರರು ರಾಮಾಯಣ ಬರೆಯುವುದು ಕೆಲವರಿಗೆ ಅಸೂಯೆಯಾಗಿತ್ತು. ಕೆಲವರು 'ರಾಮಾಯಣ ದರ್ಶನಂ' ಮಹಾಕಾವ್ಯ ಕುವೆಂಪು ಬರೆಯಲು ಕಾರಣವೇನೆಂದರೆ ಕುವೆಂಪು ಅವರ ತಂದೆ ಕುಪ್ಪಳ್ಳಿ ವೆಂಕಟಪ್ಪ ಗೌಡರಿಗೆ ಮದುವೆಯಾದ ಮೂರು ನಾಲ್ಕು ವರ್ಷಗಳು ಮಕ್ಕಳು ಇರಲಿಲ್ಲವೆಂದು ಅವರು ಮಕ್ಕಳಾಗಲು ತಿರುಪತಿ ದೇವರಿಗೆ ಹರಕೆ ಹೊತ್ತುದರಿಂದ ತಿರುಪತಿ ದೇವರು ಪ್ರಸನ್ನನಾಗಿ ತನ್ನಲ್ಲಿರುವ ಗಣವೊಂದನ್ನು ಕುವೆಂಪು ರೂಪದಲ್ಲಿ ಕಳುಹಿಸಿದನೆಂದು ಆಡಿಕೊಳ್ಳುತ್ತಿದ್ದರು.

ನಾನು ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನಲ್ಲಿ ಪ್ರಿ ಯೂನಿವರ್ಸಿಟಿ ಓದುವಾಗ ಪ್ರೊ॥ ದೇ. ಜವರೇಗೌಡರು ಕಾಲೇಜಿನ ಪ್ರಾಚಾರ್ಯರಾಗಿದ್ದರು. ಅಂದು ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದರು. ಕುವೆಂಪು ಅವರನ್ನು ಕಾಲೇಜಿಗೆ ಕರೆಸಲಾಗಿತ್ತು. ಸಭೆಯನ್ನು ಉದ್ದೇಶಿಸಿ ಕುವೆಂಪು ಮಾತನಾಡುವ ಮೊದಲು ಭದ್ರಾವತಿ ಶಾಂತಾದೇವಿ ಎಂಬ ಹುಡುಗಿ ಹಿಂದಿ ಸಿನೆಮಾವೊಂದರ ಗೀತೆಯನ್ನು ಪ್ರಾರ್ಥನೆಯಾಗಿ ಹಾಡಿದಳು. ಕುವೆಂಪು ಅವರು ತಮ್ಮ ಉಪನ್ಯಾಸದಲ್ಲಿ "ಪ್ರಾರ್ಥನೆ ಅಂದರೆ ಹಿಂದಿ ಸಿನೆಮಾ ಹಾಡು ಹೇಳೋದು. ಕನ್ನಡದಲ್ಲಿ ಪ್ರಾರ್ಥನಾ

ಗೀತೆಗಳಿಲ್ಲವೆ ? ಯುವ ಜನಾಂಗ ಹಿಂದಿ ಭಾಷೆಗೆ ಪ್ರಾಶಸ್ತ್ಯ ಕೊಡಬಾರದು. ಕನ್ನಡಕ್ಕೆ ಪ್ರಾಶಸ್ತ್ಯ ಕೊಡಬೇಕು" ಎಂದರು. ಶಾಂತಾದೇವಿಗೆ ಮುಖಭಂಗವಾಯಿತು. ಆಕೆ ಕಣ್ಣೀರು ಹಾಕಿದಳು. ನನ್ನ ವಿದ್ಯಾರ್ಥಿ ಮಿತ್ರರಿಗೆ ತಮಗೇ ಅವಮಾನವಾದಂತಾಗಿ ಕುವೆಂಪು ವಿರುದ್ಧ ಘೋಷಣೆ ಕೂಗಿದರು. ಕುವೆಂಪು ಅವರು ವಿಚಲಿತರಾಗದೆ, ಹಾರಾಟ ಚೀರಾಟ ಮುಗಿಯುವ ತನಕ ಸುಮ್ಮನೆ ನಿಂತಿದ್ದರು. ಅನಂತರ ಅವರು ತಮ್ಮ ಭಾಷಣ ಮುಂದುವರೆಸುತ್ತ "ನಮ್ಮ ಹುಡುಗರ ಆವೇಶ ಮಲೆನಾಡಿನ ಮಳೆಯಂತೆ. ಭರ್ರನೆ ಮಳೆ ಸುರಿದು ತಟ್ಟನೆ ನಿಂತು ಹೋಗುವುದು" ಎಂದರು.

ಕುವೆಂಪು ಅವರಿಗೆ ಅರುವತ್ತು ವರ್ಷ ಆದಾಗ ಶಿವಮೊಗ್ಗೆಯಲ್ಲಿ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಸನ್ಮಾನವಾಯಿತು. ಕುವೆಂಪು ಅವರು ಉಪನ್ಯಾಸ ಮಾಡುವಾಗ "ಇನ್ನೊಂದು ಕಾದಂಬರಿ ಬರೀಬೇಕು ಅಂತ ಇದೀನಿ. ದೇವರು ಆಯುಷ್ಯ ಕೊಡತಾನೊ ಇಲ್ಲವೊ" ಎಂದರು. ಆಗಿನ್ನೂ ಮಲೆಗಳಲ್ಲಿ ಮದುಮಗಳು ಕಾದಂಬರಿ ಪ್ರಕಟವಾಗಿರಲಿಲ್ಲ. ಕುವೆಂಪು ಅವರು ಹಾಗೆ ಹೇಳಿದಾಗ ಬೇಂದ್ರೆಯವರು ತಟ್ಟನೆ ಎದ್ದು ನಿಂತು "ಬರಿತೀರಿ, ಬರಿತೀರಿ. ಭಗವಂತ ನಿಮಗೆ ಆಯುಷ್ಯ ಕೊಡದೆ ಮತ್ತೆ ಯಾರಿಗೆ ಆಯುಷ್ಯ ಕೊಡತಾನು" ಎಂದರು. ನಂತರ ಬೇಂದ್ರೆಯವರು 'ರಾಮಾಯಣ ದರ್ಶನಂ' ಕಾವ್ಯ ಕುರಿತು ಇದೀ ಸಭೆ ಮಂತ್ರಮುಗ್ಧರಾಗುವಂತೆ ಮಾತನಾಡುತ್ತಿದ್ದರು. ಕುವೆಂಪು ಅವರು ಮಧ್ಯೆ ಎದ್ದು "ಲವಕುಶರ ಜನ್ಮವೃತ್ತಾಂತ ಸ್ವಲ್ಪ ಹೇಳಿ" ಎಂದರು. ಬೇಂದ್ರೆಯವರು "ಹೇಳತೇನು ಹೇಳತೇನು" ಎಂದರು. ಈ ಮೊದಲು ಕುವೆಂಪು ಅವರು ಭಾಷಣ ಶುರು ಮಾಡುವಾಗ "ಪೂಜ್ಯ ಬೇಂದ್ರೆಯವರೆ" ಎಂದು ಹೇಳಿದಾಗ ಸುಮಾರು ಹತ್ತು ನಿಮಿಷ ಸಭೆಯಲ್ಲಿ ದೀರ್ಘ ಕರತಾಡನವಾಯಿತು. ಚಪ್ಪಾಳೆ ನಿಲ್ಲದಿದ್ದಾಗ ಬೇಂದ್ರೆಯವರೆದ್ದು ಸಭಿಕರಿಗೆ "ಸಾಕು ಮಾಡರಿ ಅಪ್ಪ. ನಿಮ್ಮ ಅಭಿಮಾನ ಸಾಕು" ಎಂದರು.

ನಾನು ಚಿಕ್ಕವನಿದ್ದಾಗ ಶಿವರಾಮಕಾರಂತರು ನಮ್ಮೂರಿಗೆ ಐದಾರು ತಿಂಗಳಿಗೊಮ್ಮೆ ಬರುತ್ತಿದ್ದರು. ಪ್ರೌಢಶಾಲೆಯಲ್ಲಿ ಅವರ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿತ್ತು. ಆಗ ಅವರು ಇಂದಿನಷ್ಟು ಆರ್ಭಟಿಸಿ ಮಾತನಾಡುತ್ತಿರಲಿಲ್ಲ. ಬಹಳ ನಿಧಾನವಾಗಿ ದೇಶವಿದೇಶಗಳ ಸುದ್ದಿಯನ್ನು ಅಂಕಿಅಂಶವನ್ನು ಕೊಟ್ಟು ಹೇಳುತ್ತಿದ್ದರು. ನಾನು ಪ್ರೌಢಶಾಲೆಯ ಎರಡನೆ ತರಗತಿ ಓದುವಾಗ ಕಾರಂತರು ನಮ್ಮೂರಿಗೆ ಕೊನೆಯ ಭೇಟಿ ಕೊಡುವ ಸಂದರ್ಭ ಬಂದಿತು. ಯಥಾಪ್ರಕಾರ ಕಾರಂತರ ಉಪನ್ಯಾಸವನ್ನು ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದ್ದಿತು. ಕಾರಂತರು ಅದೇ ತಾನೆ ವಿಜ್ಞಾನಕ್ಕೆ ಸಂಬಂಧಿಸಿದ 'ಬಾಲ ಪ್ರಪಂಚ' 'ಈ ಜಗತ್ತು' ಪ್ರಕಟಿಸಿ ತುಂಬ ಹುಮ್ಮಸಿನಿಂದ ಇದ್ದರು. ಕಾರಂತರು ಭಾಷಣ ಮಾಡುತ್ತ "ನಮ್ಮ ಕೆ.ವಿ. ಪುಟ್ಟಪ್ಪನವರು ವಿಜ್ಞಾನಕ್ಕೆ ಏನು ಸೇವೆ ಸಲ್ಲಿಸಿದ್ದಾರೆ" ಎಂದರು. ಅದರಿಂದ ಕೆರಳಿದ ಕುವೆಂಪು ಅವರ ಬಾಲ್ಯ ಸ್ನೇಹಿತರೊಬ್ಬರು ತಟ್ಟನೆ ಎದ್ದು "ಅವನ ಇಚಾರ ಯಾಕ್ರಿ ನಿಮಗೆ ? ನೀವು ಏನು ಹೇಳೋದು ಇದೆ ಅದನ್ನ ಹೇಳಿ ಹೋಗಿ. ವಿಜ್ಞಾನಕ್ಕೆ ಅವನು ಏನು ಸೇವೆ ಮಾಡಿದಾನೆ ಅಂದ್ರೆ ನೀವು ಕಾವ್ಯ ಕ್ಷೇತ್ರಕ್ಕೆ ಏನು ಮಾಡಿದಿರಿ" ಎಂದು ರೇಗಿದರು. ಇದರಿಂದ ಕೆರಳಿದ ಕಾರಂತರು ಸಭೆಯನ್ನು ಬಿಟ್ಟು ಹೋದವರು ಮತ್ತೆ ನಮ್ಮ ಊರಿಗೆ ಬರಲೇ ಇಲ್ಲ.

ನಾನು ಚಿಕ್ಕವನಿದ್ದಾಗ ಕುವೆಂಪು, ಹಾ.ಮಾ.ನಾ. ಮತ್ತು ಲಿಂಗಪ್ಪನವರನ್ನು ಕುರಿತು ಒಂದು ಪ್ರಸಂಗವನ್ನು ನಮ್ಮೂರಿನ ಕೆಲವು ಮಂದಿ ಆಡಿಕೊಳ್ಳುತ್ತಿದ್ದರು. ಅದೇನೆಂದರೆ ಹಾ.ಮಾ.ನಾ. ಮತ್ತು ನಮ್ಮ ತಾಲೂಕಿನ ಇನ್ನೊಬ್ಬರು ಲಿಂಗಪ್ಪನವರು ಪ್ರಾಧ್ಯಾಪಕರಾದ ಕುವೆಂಪು ಅವರನ್ನು ಕನ್ನಡ ಎಂ.ಎ.ಗೆ ಸೀಟು ಕೇಳಲು ಹೋದರಂತೆ. ಹಿತಮಿತ ಮಾತನಾಡುವ ಕುವೆಂಪು ಅವರು ಅಂದಿನ ದಿನಗಳಲ್ಲಿ ಕನ್ನಡ ನಾಡಿನಲ್ಲಿ ಪ್ರಖ್ಯಾತರು. ಕನ್ನಡ ಎಂ.ಎ. ಓದಲು ಅಪೇಕ್ಷೆಪಟ್ಟ ಇಬ್ಬರು ಯುವಕರಿಗೆ ಕುವೆಂಪು ಅವರು "ನಿಮಗೆ ಯಾಕರಯ್ಯ ಕನ್ನಡ ಎಂ.ಎ. ಓದುವ ಹುಚ್ಚು, ಬೇರೇನಾದರು ಓದಿಕೊಳ್ಳಿ" ಎಂದು ಅವರಾಸೆಗೆ ತಣ್ಣೀರು ಎರೆಚಿದರಂತೆ. ಅಂದಿನ ದಿನಗಳಲ್ಲಿ ಬರವಣಿಗೆ ಮಾಡುವವರು ಮಾತ್ರ ಕನ್ನಡ ಎಂ.ಎ. ಓದಲು ಅರ್ಹರು ಎಂದು ಕುವೆಂಪು ಅವರು ತಿಳಿದಿದ್ದರೆಂದು ತೋರುತ್ತದೆ. ಈ ಕಾರಣಕ್ಕಾಗಿಯೊ ಏನೊ ಹಾ.ಮಾ.ನಾ. ಅವರು ಮಹಾರಾಜ ಕಾಲೇಜಿಗೆ ಅಧ್ಯಾಪಕರಾಗಿ ಬರುವ ಮೊದಲು ಕುವೆಂಪು ಅವರಿಂದ ಬಹಳ ದೂರ ಇದ್ದರು. ಅವರು ಅಂದು ಅ.ನ.ಕೃ. ಬೇಂದ್ರೆ ಅವರನ್ನು ಬಹಳ ಹಚ್ಚಿಕೊಂಡಿದ್ದರು.

ನಮ್ಮೂರಿನಲ್ಲಿ ನಾನು ಚಿಕ್ಕವನಿದ್ದಾಗ ಚೆಂದುಪೂಜಾರ್ತಿ ಎನ್ನುವವಳು ಒಂದು ಹೋಟೆಲು ನಡೆಸುತ್ತಿದ್ದಳು. ಆಕೆ ನೋಡಲು ಕಳೆಕಳೆಯಾಗಿ ಸುಂದರವಾಗಿದ್ದಳು. ಅಂದಿನ ದಿನಗಳಲ್ಲಿ ಜನ ಹೋಟೆಲಿಗೆ ಹೋಗುವುದು ಕಡಿಮೆಯಾಗಿದ್ದಿತು. ಹೋಟೆಲಿಗೆ ಹೋಗುವವರನ್ನು ಜನ ಬಹಳ ಕನಿಷ್ಟವಾಗಿ ಕಾಣುತ್ತಿದ್ದರು. ಸವರ್ಣೀಯರ ಹೋಟೆಲಿಗೆ ಜನ ಹೋಗದೆ ಇರುವಾಗ ಇನ್ನು ಕೆಳಕೋಮಿನವರ ಹೋಟೆಲಿಗೆ ಯಾರು ಹೋಗುತ್ತಾರೆ ? ಈ ಕಾರಣಕ್ಕಾಗಿ ಚೆಂದು ಪೂಜಾರ್ತಿ ಕಾಲಕಾಲಕ್ಕೆ ಗಿರಾಕಿಗಳನ್ನು ತನ್ನ ಹೋಟೆಲಿಗೆ ಸೆಳೆಯಲು ಇಲ್ಲದ ಸಬೂಬು ಹಾಕುತ್ತಿದ್ದಳು. ಇಂದಿರಾಗಾಂಧಿ ಮದುವೆಯಾಗಲು ಹೊರಟಿದ್ದು, ಕಾಂಗ್ರೆಸಿನಲ್ಲಿ ಗಲಾಟೆಯಾದದ್ದು, ಫಿರೋಜ್‌ಗಾಂಧಿ ಮನೆಯವರು ಇಂದಿರಾಗಾಂಧಿಯನ್ನು ಸೊಸೆಯಾಗಿ ತಂದುಕೊಳ್ಳಲು ವಿರೋಧಿಸಿದ್ದನ್ನು ಗಿರಾಕಿಗಳಿಗೆ ಹೇಳುತ್ತ ತನ್ನ ಹೋಟೆಲನ್ನು ಒಂದು ಪಂಚಾಯಿತಿ ಕಟ್ಟೆಯನ್ನಾಗಿ ಮಾಡಿದ್ದಳು. ಅದರಿಂದಾಗಿ ಚೆಂದುಪೂಜಾರ್ತಿ ಏನಾದರು ಹೊಸ ವಿಷಯ ಹೇಳುತ್ತಾಳೇನೊ ಎಂದು ಜನ ಆಕೆಯ ಹೋಟೆಲಲ್ಲಿ ಸೇರತೊಡಗಿದರು. ಒಂದು ಸಾರಿ ಕೆ.ವಿ. ಪುಟ್ಟಪ್ಪನವರಿಗೆ ಐವತ್ತು ವರ್ಷವಾಯಿತೆಂದು ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಯಿತು. ಅದರ ಲಾಭ ಪಡೆಯಲು ಪೂಜಾರ್ತಿ ಕುವೆಂಪು ಅವರ ಭಾವಚಿತ್ರವನ್ನು ಕತ್ತರಿಸಿ ಹೋಟೆಲು ಬಾಗಿಲಿಗೆ ಅಂಟಿಸಿ ಒಕ್ಕಲಿಗ ಗಿರಾಕಿಗಳನ್ನು ತನ್ನ ಹೋಟೆಲಿಗೆ ಆಕರ್ಷಿಸಲು ಅಂಗಳದಲ್ಲಿ ನಿಂತು "ಹ್ವಾಯ್ ಗೌಡರೆ ಬನಿಂತಿನಿ, ಸೀತಮ್ಮ ಹೆಗಡತೇರ ಮಗನ ಪಟ ಪೇಪರಂಗೆ ಬಂದಿತು. ಕಂಡಕಂಡು ಹೋಯಿನಿ. ಅವರಿಗೆ ವಯಸ್ ಐವತ್ತು ಆಯಿತಂತೆ. ಅವರು ಬರವಣಿಗೇಲಿ ಏನು ಸಾಧನೆ ಮಾಡಿದಾರು ಏನು ಕತೆ ? ಕಾನೂರು ಹೆಗಡತಿ, ರಾಮಾಯಣ ಬರಿಯೂದು ಏನು ಹುಡಗಾಟಿಕೆ ಮಾತಾಯಿತಾ ? ರಾಮಣ ಸೀತೇನ ಹಾರಿಸಿಕಂಡು ಹೋದ್ದು ನಮಗೆ ಗೊತ್ತೀತು. ಉಳದ್ದು ಏನು ಗೊತ್ತೀತು ನಮಗೆ ? ಗೌಡರ ಬಗೇರನ್ನ ಕಾನೂರ ಹೆಗ್ಗಡತೀಲಿ ಅವರು ಟೀಕೆ ಮಾಡಿದಾರು ಅಂತ ನೀವು ಬೇಜಾರು ಮಾಡಕಣುಕಾಗದೆ - ಇದ್ದುದ್ದು ಬರದಿದಾರು ಬನಿ ಬನಿ" ಎಂದು ಗೌಡರುಗಳನ್ನು ಕೈಬೀಸಿ ಕರೆಯುತ್ತಿದ್ದಳು. ಕುವೆಂಪು ಅವರು 'ಕಾನೂರು ಹೆಗ್ಗಡತಿ' ಕಾದಂಬರಿಯನ್ನು

'ರಾಮಾಯಣ ದರ್ಶನಂ' ಮಹಾ ಕಾವ್ಯವನ್ನಲ್ಲದೆ ಮತ್ತೇನು ಬರೆದಿದ್ದಾರೆಂದು ಆಕೆಗೂ ಬಹಳ ಮಂದಿ ಮಲೆನಾಡಿನವರಿಗೂ ತಿಳಿಯದು. ತಿಳಿದಿದ್ದರೂ ಓದಿದವರು ಬಹಳ ಕಡಿಮೆ. ಕುವೆಂಪು ಅವರು ನಾಯಿಗುತ್ತಿ ತಿಮ್ಮಿಯಂತಹ ಜನಸಾಮಾನ್ಯರ ಬಗ್ಗೆ ಬರೆದಿದ್ದರೂ ಜನಸಾಮಾನ್ಯರಿಗೆ ಕುವೆಂಪು ಅವರ ಬಗ್ಗೆ ಏನೂ ತಿಳಿದಿರಲಿಲ್ಲ.

ನಾನು ೧೯೬೨ರಲ್ಲಿ ಬೆಂಗಳೂರಿನಲ್ಲಿ ಒಂದು ವರ್ಷ ಓದಲು ನಮ್ಮ ಸೋದರಮಾವನ ಮನೆಯಲ್ಲಿದ್ದೆ. ನಮ್ಮತ್ತೆಯವರ ಚಿಕ್ಕಮ್ಮನನ್ನು ಕುವೆಂಪು ಅವರ ಚಿಕ್ಕಪ್ಪನಾಗುವ ಕೆ.ಬಿ. ಮಾನಪ್ಪನವರಿಗೆ ಕೊಟ್ಟಿದ್ದಿತು. ಅವರು ಗಾಂಧಿಬಜಾರಿನ ಒಂದು ಸಣ್ಣ ಮನೆಯಲ್ಲಿ ವಾಸವಾಗಿದ್ದರು. ಕುವೆಂಪು ಅವರಿಗಿಂತ ವಯಸ್ಸಿನಲ್ಲಿ ಎರಡು ವರ್ಷ ಚಿಕ್ಕವರಾದ ಮಾನಪ್ಪನವರು ಆ ಕಾಲದಲ್ಲಿ ಬನಾರಿಸ್ ವಿಶ್ವವಿದ್ಯಾಲಯದಲ್ಲಿ ಹಿಂದಿ ಎಂ.ಎ. ಓದಿದ್ದರು. ಹಿಂದಿ ಭಾಷೆಗೆ ಸಂಬಂಧಿಸಿದಂತೆ ಕೆಲವು ಮುಖ್ಯ ಹುದ್ದೆಗಳಲ್ಲಿದ್ದರು. ಅವರು ಹಿಂದಿ ಮತ್ತು ಕನ್ನಡದಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದರು. ಕುವೆಂಪು ಅವರ ಮನೆಯಲ್ಲಿದ್ದಂತೆ ಮಾನಪ್ಪನವರ ಮನೆಯಲ್ಲು ಪುಸ್ತಕಗಳ ರಾಶಿ ಬಿದ್ದಿರುತ್ತಿತ್ತು. ನಾನು ಆಗಾಗ ಅವರ ಮನೆಗೆ ಹೋಗುತ್ತಿದ್ದೆ. ಒಂದು ಸಾರಿ ಅವರು ಕುವೆಂಪು ಅವರನ್ನು ಕುರಿತು "ನಮ್ಮ ಪುಟ್ಟಣ್ಣಂಗೆ ಏನು ನಾಚಿಕೆ ಇಲ್ಲ ಮಾರಾಯರೆ. ಅವನು ಹೆಂಡತಿ ಮೇಲೆ ಒಂದು ಕವನ ಬರದಿದಾನೆ. ಓ ನನ್ನ ಹೇಮಿ ಅಂತ ಶುರುವಾಗತದೆ. ಅವನು ಸತ್ತಮೇಲೆ ಸ್ವರ್ಗಕ್ಕೆ ಹೋಗತಾನಂತೆ. ನಾನು ಮಹಾಕವಿ, ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಆಗಿದ್ದವನು, ಬಾಗಲು ತೆಗಿ ಅಂದನಂತೆ. ಬಾಗಲು ತೆಗಿಲಿಲ್ಲಂತೆ. ನಾನು ಹೇಮಿ ಗಂಡ ಅಂದಕೂಡಲೆ ಸ್ವರ್ಗದ ಬಾಗಲು ತೆಗಿತಂತೆ. ಛಿಛಿ, ಅವನಿಗೆ ನಾಚಿಕೆ ಯಾಕೆ ಆಗಲಿಲ್ಲಾಂತಿನಿ" ಅಂದರು.

□

ಬಿಳುಮನೆ ರಾಮದಾಸ್, ೧೮೦೧, ೩೭ನೇ 'ಬಿ' ತಿರುವು, ೧೧ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-೫೬೦೦೪೧.

ಗಾಜುಗೋಳದಲ್ಲೊಂದು ಸುತ್ತು

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

೧

ಇದು ಈ ಶರೀರ ಎಲ್ಲಕ್ಕೂ ಮೂಲ ಸ್ವಾಮಿ
ಕಾವ್ಯಕ್ಕೆ ಸನ್ಯಾಸಕ್ಕೆ ಮಹತ್ವಾಕಾಂಕ್ಷೆಗೆ
ತಲೆಗಳುರುಳಿ ತಲೆ ಎತ್ತಿ ನಿಲ್ಲುವುದಕ್ಕೆ
ಈ ಹೆಣ್ಣೊಡಲೆ ಆದಿ ಅಂತ್ಯ
ಹೇಳಿ, ಯಾಕೆ ಸುರಿಯುತ್ತಾರೆ ಇವರು
ಬರಿ ವಿಷವ ನನ್ನೊಡಲಿಗೆ?
ನನ್ನ ಪಾದಗಳ ಸುತ್ತ ಯಾಕೆ
ಈ ಚಿತ್ತಾರದ ಚಕ್ರಬಂಧ
ಈ ವೃತ್ತದೊಳಗಿನ ಚಿತ್ರದ ಬೊಂಬೆಗೆ
ಮುಕ್ತಿ ಎನ್ನುವುದಿದೆಯೇ ?
ಯಾ ಅಲ್ಲಾ ಯಾ ಖುದಾ
ಉತ್ತರವಿದೆಯೇ ನನಗೆ

೨

ಉತ್ತರಸಿಗದ ಪ್ರಶ್ನೆಗಳೇ ನೂರಾರು ಇಲ್ಲಿ
ಹಾವು ಸಾಯುವುದಿಲ್ಲ ಕೋಲುಮುರಿಯುವುದಿಲ್ಲ
ದಿನದಿನಗಳು ಜಾರಿ
ರಾತ್ರಿಗಳ ಮಬ್ಬುಹಾದಿ ತೆಳ್ಳಗಾಗುತ್ತಾ
ಹಗಲಿಗಾಗಿ ಮಲಗಿ ನಿದ್ರಿಸುತ್ತದೆ ಇರುಳು

೩

ಇಲ್ಲ ಕನಸುಗಳು ಮೂಡುವುದೇ ಇಲ್ಲ
ಬಂಜರು ಭೂಮಿಯಲ್ಲಿ ಬರೀ ನೇಗಿಲು
ಉತ್ತು ಬಿತ್ತಲೂ ಇಲ್ಲದೆ ಬೆಳೆಯಲೂ ಇಲ್ಲದೆ
ಬರಿದೆ ಆಯಾಸ ಯಾಕೆ ?

೪

ಸಂತಾಪ ಹೊತ್ತು ಬರುವ ಮುಖಗಳೆಲ್ಲಾ
ಸರದಿಯಂತೆ ಹೊಸಿಲು ದಾಟುತ್ತಾ
ಮನೆ ಖಾಲಿ ಮನ ಖಾಲಿ
ಒಳಗೆ ಕಾವು ಕೂತಿದ್ದ ಕೂಸೂ ಖಾಲಿ
ಎದೆಗೂಡೊಳಗೆ ಅಡಗಿದ್ದ ಕವಿತೆಯೂ ಖಾಲಿ
ಬಣ್ಣ ಕಳಕೊಂಡ ಕೆನ್ನೆಯ ಮೇಲೆ
ತೂಗುವ ಕೆನ್ನೆ ಸರಪಳಿಯೂ ಮೌನಿ, ಅವಳಹಾಗೆ

ಒಂದು ಎರಡು ಮೂರು ನಾಲ್ಕು ಊಹೂಂ ..... ಮತ್ತೆ ಮತ್ತೆ ಓದಿದಷ್ಟೂ ಮೌನದಾಳದ ಧ್ಯಾನಗುಹೆಗೆ ತಳ್ಳಿ ಆವರಿಸುವ ಈ ವಿಷಾದದ ಹಿಂದಿನ ಸಂಕಟ ಯಾವುದು ? ಬದುಕ ತಬ್ಬುವ ಕಡಲಕುದಿತದ ಒಳಸುಳಿದಾಳದಲ್ಲಿ ನಿರೀಕ್ಷೆಯ ಮುತ್ತುಗಳು; ನಿರಂತರ ಹುಡುಕಾಟದ ರತ್ನಗುಂಭಗಳು.

೧

ಗಾಯಗೊಂಡ ಮನವ ಮುಟ್ಟಲಾರೆ ಇನ್ನು
ಒಡಲ ಮುಟ್ಟಲಾರದು ಕಿಚ್ಚು
ಹಾಲೂ ಇಲ್ಲ ಹಾಲಾಹಲವೂ ಇಲ್ಲ ಮಥನದಲಿ
ಅಮೃತವು ಮೊದಲೇ ಇಲ್ಲ ಬರಿಯ ವಿಷದ ಕಡಲು

೨

ದುಂಬಿಗಳಿಲ್ಲ ಮರಿದುಂಬಿಗಳಿಲ್ಲ
ಭಾವ ಮನದನುಭಾವವಿಲ್ಲ
ಖಾಲಿ ಮಾತುಗಳ ಕಳಚೊಗೆದ
ದಿಗಂಬರ ಮೌನ

೩

ಕಾಣಲಿಲ್ಲ ಒಂದೂ ಮುಟ್ಟುವ ತಟ್ಟುವ
ನೇವರಿಸುವ

ನಂಜನೆಲ್ಲ ಹೀರಿ ನಿರಾಳವಾಗಿಸುವ
ಸಂತನೊಬ್ಬನ ಬರವು

ಈ ಅಳುವಿನಲ್ಲಿ ಹಾಲಾಹಲವನ್ನು ಕುಡಿದೂ ಸಂತವಿಸುವ ಜೀರ್ಣಾಗ್ನಿಯ ನಿತಾಂತ ಜ್ವಾಲೆಗಳಿವೆ.
ಜಾರುವ ಕಾಮನಬಿಲ್ಲಿನಡಿ
ಬೆಚ್ಚಗೆ ಮಲಗಿಕೊಂಡೆ ತೇಪೆ ಹಾಕುತ್ತಾ
ಚಳಿಗಾಲದ ಈ ದಿನಗಳಲಿ
ಹೌದು, ನಾನು ಹೆಣ್ಣು
ನಾನೊಂದು ಸುಂದರ ಕೌದಿ.

ಇದು 'ಗಾಜು ಗೋಳ'ದ ಅಂತರಾಳದಲ್ಲಿ ಭೋರ್ಗರೆದು ಹರಿದಿರುವ ಭಾವಧಾರೆ.

'ಗಾಜು ಗೋಳ' - ಶ್ರೀಮತಿ ಎಚ್.ಎಲ್. ಪುಷ್ಪ ಅವರ ಎರಡನೆಯ ಕವನ ಸಂಕಲನ. ಸಂಕಲನದ ಕವನಗಳನ್ನು ಓದುತ್ತಾ ಹೋದಂತೆ ಅದೊಂದು ನೀಳ್ಗವನ. ತಲೆ ಬರಹಗಳನ್ನು ಕಿತ್ತೊಗೆದೂ ಓದಬಹುದಾದ, ಓದಬೇಕಾದ ನೀಳ್ಗವನ. ಅನುಕ್ರಮಣಿಕೆಯ ಹಂಗಿಲ್ಲದೆಯೂ ಸಿಕ್ಕ ಸಿಕ್ಕ ಭಾಗಗಳಲ್ಲಿ ಕಣ್ಣು ನೆಟ್ಟು ಓದಿದರೆ ಹರಿಗಡಿತವಿಲ್ಲದಂತೆ ಓದಿಸಿಕೊಳ್ಳುವ, ಆವರಿಸಿ ಕಾಡುವ ನೀಳ್ಗವನ. ಅಕ್ಕನ ವಚನಗಳೆಲ್ಲ ಬಿಡಿಬಿಡಿ ಎಂದರೂ ಅವುಗಳಲ್ಲಿ ಅಂತರ್ಗತವಾಗಿರುವ ಜೀವಾತ್ಮ ಸೂತ್ರವನ್ನು ಭಿನ್ನ ಭಿನ್ನ ಎನ್ನಲಾದೀತೆ ? ಒಂದರ್ಥದಲ್ಲಿ ಎಲ್ಲ ಕವಿಗಳ ರಚನೆಗಳಲ್ಲೂ ವಿಸ್ತರಣೆಗೊಂಡ ವ್ಯಕ್ತಿತ್ವದ ವಿರಚನೆಯೇ ಬಳ್ಳಿವರಿದಿರುತ್ತದೆ. ಆದರೆ ಈ ಮಾತಿನ ಸತ್ಯಕ್ಕೆ ಮುಖಗಳೆಷ್ಟು ? ಕಣ್ಣು ಕಂಡಷ್ಟು. ಕಣ್ಣು ಎಂದರೆ ಯಾವ ಕಣ್ಣು ! ಕಾವ್ಯದ ಕಣ್ಣನ್ನು ಕುರಿತು ಅಲ್ಲಮ ಹೇಳುತ್ತಾನೆ,

> ಕಣ್ಣಿಂಗೆ ಕಣ್ಣು ಕಣ್ಣೊಳು ಕಣ್ಣು
> ಕಣ್ಣೇ ನೇತ್ರ ನೇತ್ರವೆ ಸೂತ್ರ ಸೂತ್ರವೆ ಲಿಂಗ
> ಲಿಂಗವೇ ಗುಹ್ಯ ಗುಹ್ಯಕ್ಕೆ ಗುಹ್ಯ
> ಗೋಪ್ಯಕ್ಕೆ ಗೋಪ್ಯ ರಹಸ್ಯಕ್ಕೆ ರಹಸ್ಯ
> ಈ ನೇತ್ರ ಮಹಿಮೆಯಂ ಗುಹೇಶ್ವರ ಬಲ್ಲನಲ್ಲದೆ
> ಕಣ್ಣುಗೆಟ್ಟಣ್ಣಂಗಳೆತ್ತ ಬಲ್ಲರು ನೋಡೈ !

ಹೀಗಾಗಿ ದಶಶಿರನ ಭಾವಗಳು ಹತ್ತು ಹಲವಾದರೂ ಅವನ ಜೀವಾತ್ಮದ ನಿಲುವು ಒಂದೇ. ಇದು ಕವಿ ; ಹೀಗೆ ಕವಿಯ ಕಾವ್ಯ.

ಪುಷ್ಪ ಅವರ ಕವನಗಳ ಜೊತೆಗಿನ ಅನುಸಂಧಾನದ ಹೊತ್ತಿನಲ್ಲಿ ಉಪವಸ್ತುವಿನಂತೆ ಹುಟ್ಟಿದೆ ಈ ಆಲೋಚನೆ. ಈ ಆಲೋಚನೆಯ ಬೆನ್ನುಹಿಡಿದು ಇವರ ಮೊದಲ ಕವನ ಸಂಕಲನದತ್ತ ಮನಸ್ಸು ಹರಿಯಿತು. ಹಿಂದೆ ಓದಿದ್ದ ನೆನಪು. ಮತ್ತೆ 'ಅಮೃತ ಮತಿಯ ಸ್ವಗತ'ಕ್ಕೆ ಎದೆ ತೆರೆದೆ. ಹೆಣ್ಣೊಬ್ಬಳ ಕರುಳಾಳದ ಕುದಿತಗಳಿಗೆ ಪುರಾಣ-ಚರಿತ್ರೆ-ವರ್ತಮಾನದ ವಸ್ತು ಸಂಗತಿಗಳು ಅವಳ

ಸ್ವಗತಾತ್ಮಕ ಸಂವಾದಕ್ಕೆ ಒದಗಿ ಬರುವ ಆಕೃತಿ ಸತ್ತೆಗಳು. ಸೃಜನ ಕರ್ಮದಲ್ಲಿ ಸತ್ತೆ ಉರಿದಂತೆ ಜೀವತಾಳುವ ಪ್ರಕೃತಿ ಸತ್ಯಗಳು.

ಹೌದು ನಾನು ಹೆಣ್ಣು
ನಾನೊಂದು ಸುಂದರ ಕೌದಿ

ಸೀತೆ, ಪಾಂಚಾಲಿ, ಅಮೃತಮತಿ, ಅಕ್ಕ ಇವರು ಮೊದಲ್ಗೊಂಡು ಸುರಯ್ಯವರೆಗೆ ಹರಿದ, ಹರಿಯುತ್ತಿರುವ ಕರುಳಾಳದ ಕಕ್ಕುಲಾತಿಯ ಕಥನಗಳಲ್ಲಿ ಈ ಮೇಲಿನ ಸಾಲಿನ ಸಂಕಟ ದ್ರವ್ಯವೇ ಒಳಗಿನೊಳಗಿನ ಜೀವಸ್ರೋತವಾಗಿ ಮಿಡಿದಿದೆ.

ಸಿಂಹಾಸನದಿಂದ ಸಿಂಹಾಸನಕ್ಕೆ
ಸತಿಯರ ನೂರಾರು ಹೆಜ್ಜೆಗಳು
ಸವೆಯದ ಕರುಳ ಹಿಂಡುವ ಕ್ರೌರ್ಯ

ಇದು ಧರಣಿ ಹೆಣ್ಣಿನ ಕಥನ. ಧರಣಿಯ ಸಂಕಟ.

ಕೊಂದವರುಳಿದರೇ
ಕತ್ತರಿಸಿದ ನಮ್ಮ ನೆರಳೇ
ಕೊಂದು ಕೂಗುವುದು ಇಲ್ಲಿ
ತಳ್ಳುವುದು ನಮ್ಮ ಕಾಲಕೆಳಗಿನ ಗೋಡೆಗೆ

ದಾಖಲಿತ ರೂಪದಲ್ಲಿರುವ ಚರಿತ್ರೆಗಳಲ್ಲಿ, ಪಾರಾಯಣ ಪರಂಪರೆಯಲ್ಲಿ ಹರಿದು ಬರುತ್ತಿರುವ ಪುರಾಣಗಳಲ್ಲಿ ಈ ಒಳಸಂಕಟಗಳು ಅಪವ್ಯಾಖ್ಯೆಗೆ ಒಳಗಾಗಿವೆ. ಮೂಲಭೂತ ದೃಷ್ಟಿ ಧೋರಣೆಗಳ ಕಟ್ಟುಪಾಡಿನ ನೀತಿ ಸೂತಕದಲ್ಲಿ ಈ ದನಿಗಳ ಕತ್ತು ಹಿಸುಕಲಾಗಿದೆ. ಸತ್ಯವನ್ನು ಸಾಯಿಸಲಾದೀತೆ?

ಹೇ ಪ್ರಭು ನನ್ನದಲ್ಲದ ಈ
ಒಡಲ ಮೀಟುತ್ತೇನೆ ಹಾಡುತ್ತೇನೆ
ಗೆಜ್ಜೆಗಳ ಬಾಯಿಗೆ ಉಸಿರು ಸುರಿದು
ಬಿಲ್ಲಾಗುತ್ತೇನೆ ಕಾಮನಬಿಲ್ಲಿನಡಿ
ಅಡಗಿದ ಬೆವರಬಿಂದುವಿನಲಿ
ಏಳೇಳು ಬಣ್ಣಗಳ ಜಗದ ಕುಡಿಯೊಡೆದ
ನವಿಲಾಗುತ್ತೇನೆ.

ಇದು ಧರಣಿ ಧರ್ಮ. ಮೂಲಭೂತ ನೀತಿದೃಷ್ಟಿಗೆ ವಿರುದ್ಧವಾದ ಋತು ಧರ್ಮ. ಈ ಋತುಧರ್ಮ ಯಾವತ್ತೂ ಸತ್ಯದ ಪರವಾದ ಉಸಿರನ್ನು ಕಳೆದು ಕೊಳ್ಳುವುದಿಲ್ಲ. ಜೀವಪರವಾದ ಮಾನವತಾದೃಷ್ಟಿ ಅದರ ಪ್ರಾಣವಾಯು.ಸಂತ್ರಸ್ತಮನಸ್ಸುಗಳನ್ನು ತಟ್ಟುವ ತಾಯಿಭಾವ ಅದರ ಕ್ರಿಯಾ ಗುಣ.

ಕಳೆದ ರಾತ್ರಿ ಕಂಡದ್ದು ಕನಸೇ
ಶಿವಶಿವಾ! ಕ್ಷಮಿಸಿ ಬಿಡು ನನ್ನ
ಗರತಿಯು ನಾನು, ಪತಿವ್ರತೆ.
ಕೊಡಪಾನ ಹಿಡಿದು
ನೀರೆದುರು, ನೀರಾಗಿ ಬಾಗಿನಿಂತೆ
ಕಿಲಕಿಲನೆ ನಕ್ಕಿತು ನೆರಳು ನನ್ನ ಕಂಡು
ನೀರಿನಾಳದಲ್ಲೂ ಸಪ್ತವರ್ಣದ ಕಾಮನಬಿಲ್ಲು
ನಕ್ಕಿತು ಮುಖತೋರಿ
ಮತ್ತದೇ ಕುದುರೆ, ಮತ್ತದೇ ಮಾಯಕದ ಓಟ
ನೀರಿನಾಳ ಬಗೆ ಬಗೆದು ದಿಟ್ಟಿಸಿದರೂ
ಅದರೊಡಲ ಹೊಕ್ಕಿಬಂದರೂ, ಸಿಗಲಿಲ್ಲ ಅಂತರಂಗ
ಮೀನುಗಳು ಮುತ್ತಾಗಿ ಜಾರಿದವು
ಕಣ್ಣು ಹೊಡೆದವು ಕಪ್ಪೆಗಳು
ಮಂಗಳ ಸೂತ್ರದಲಿ ಯಾರದೋ ಮುಖ ನಗುಹೊಮ್ಮಿಸಿತು
ಯಾರೂ, ಯಾರಲ್ಲಿ
ಕಳೆದಿರುಳು ಕನಸಲ್ಲಿ ಬಂದು ಹೋದವರು.

ನೀರ ಮೇಲಿನ ಹೆಜ್ಜೆಗುರುತು ಸಿಗಲೇ ಇಲ್ಲ
ಗಾಳಿಯಲ್ಲಿ ಊದಿತು ಕೊಳಲು
ತುಟಿ ಕಾಣಲಿಲ್ಲ
ಎಲ್ಲೆಲ್ಲೂ ಮುಖವಿಲ್ಲದ ಚಿತ್ರಗಳೇ ತುಂಬಿದವು
ಕೊಡಪಾನ ಮುಳುಗಿತು. ಭಾರದ ನಿಟ್ಟುಸಿರೊಂದಿಗೆ
ಮನ ಒದ್ದೆಯಾಗಿದೆ ಗೊಂದಲದಲಿ.

ಕನಸು ವಾಸ್ತವಗಳ ನಡುವಿನ ರೀತಿ-ನೀತಿಗಳ ಇರುಕಿನಲ್ಲಿ ಮನಸ್ಸು ತಲ್ಲಣಗೊಳ್ಳುವ ಸ್ಥಿತಿ ಸಹಜವಾದರೂ ಅಸಹನೀಯತೆಯ ಅನಿವಾರ್ಯದಲ್ಲಿ ವಿಷಾದ ಕಟ್ಟಿಟ್ಟ ಫಲವಾಗುತ್ತಿದೆ. ಇದು ಮೆಲುಮಾತಿನ ಕಾವ್ಯ. ಈ ಮೆಲುದನಿಯಾಳದಲ್ಲಿ ಸಿಟ್ಟಿದೆ ; ಗೊಂದಲವಿದೆ ; ಆತ್ಮವಿಮರ್ಶೆಯಿದೆ ; ಕಸಿವಿಸಿಯಿದೆ ; ಸಂತಾಪವಿದೆ ; ವಿಷಾದವಿದೆ. ಸ್ವಗತಾತ್ಮಕವೆನ್ನಿಸುವ ಮಾತಾದರೂ ಜಗತ್ತು ಕಣ್ಣು ಕಿವಿ ಎದೆ ತೆರೆದು ಆಲಿಸಬೇಕೆಂಬ ಆಪ್ತತೆ, ಆರ್ದ್ರತ್ವ ಈ ದನಿಯ ಒಳ ಹೊರಗನ್ನು ತುಂಬಿಕೊಂಡಿದೆ. ಹೀಗಾಗಿ ವಿಷಾದ ವ್ಯಕ್ತಿಗತ ಕೊರಗಾಗುವುದಿಲ್ಲ ; ಸಮಷ್ಟಿ ನೆಲೆಯ

ಶೋಧವಾಗುತ್ತದೆ. ಪ್ರಶ್ನೆಯಾಗುತ್ತದೆ. ಪುರಾಣಚರಿತ್ರೆಗಳ ಗರ್ಭದೊಳಗಿನ ಈ ಮಾತುಗಳು ವರ್ತಮಾನದ ನಿಗಿನಿಗಿ ಕೆಂಡಗಳೂ ಆಗಿವೆ.

ಹೇಳಿ ಯಾಕೆ ಸುರಿಯುತ್ತಾರೆ ಇವರು
ಬರಿ ವಿಷವ ನನ್ನೊಡಲಿಗೆ!

ಗೋರಿಯಿವೆ ಗುಡಿಯಿವೆ
ಶಾಸನಗಳಿವೆ ಏನೆಲ್ಲಾ ಇವೆ
ಹೀಗಿದ್ದೂ ನಾವು ಕಳೆದು ಹೋಗಿದ್ದೇವೆ
ವಿಳಾಸವಿಲ್ಲದೆ

ಈ ವೃತ್ತದ ಚಿತ್ರದ ಬೊಂಬೆಗೆ
ಮುಕ್ತಿ ಎನ್ನುವುದಿದೆಯೇ !

ಇದು ಒಂದು ಕಾಲದ ಒಂದು ಹೆಣ್ಣಿನ ವ್ಯಕ್ತಿಗತ ಪರಿಮಿತಿಯಲ್ಲಿ ನಿಂತ ತಿರುಗಣೆಯಲ್ಲ. ಕಾಲದ ನಿರಂತರತೆಯಲ್ಲಿ ನಿತ್ಯದ ಅಳಲಾಗಿ ಹರಿದು ಬಂದಿದ್ದು, ಅನುಸಂಧಾನದ ವಿವೇಕವಾಗಿ ಎದುರಾಗಿರುವುದು.

ನಾನು ಪ್ರಕೃತಿ ನಾನು ಹೆಣ್ಣು ನಾನು ತಾಯಿ
ಬಿಚ್ಚುವುದು ಹರಿದೊಗೆಯುವುದು ಬಲು ಸುಲಭ
ತೊಡಿಸುವವರಿದ್ದರೆ ಬನ್ನಿ ತೊಡುಗೆ
ಈ ಹರಿದ ಮೈಗೆ ಒಡೆದ ಕನಸುಗಳಿಗೆ

ಜಗತ್ತಿನೆದುರಿಗಿಟ್ಟ ಈ ಆಹ್ವಾನದಾಳದಲ್ಲಿ ಕಾರಣರಾದವರನ್ನು ಆತ್ಮಾವಲೋಕನಕ್ಕೆ ತಳ್ಳುವ ನೈತಿಕ ಕೆಚ್ಚಿದೆ. ಸತ್ಯವನ್ನು ಮನಗಾಣಬೇಕೆಂಬ ಅಧಿಕಾರಯುತ ಹಂಬಲವಿದೆ. ಇಲ್ಲಿನ ಯಾವ ರಚನೆಗಳೂ ಸ್ತ್ರೀವಾದಿ ಸಿದ್ಧಾಂತದಲ್ಲಿ ಮೈದುಂಬಿದ ಮಾತುಗಳಲ್ಲ. ಅನುಭವವೇ ದ್ರವ್ಯವಾಗಿ ಅನುಭವ ಪರಂಪರೆಯ ಜೊತೆಗಿನ ಅನುಸಂಧಾನವೇ ಜೀವಾಳವಾಗಿ ಆಕೃತಿಗೊಂಡವು. ಹೀಗಾಗಿ ಈ ಭಾಷೆಗೆ ಒಂದು ವ್ಯಕ್ತಿ ವಿಶಿಷ್ಟತೆಯ ಗತ್ತಿದೆ. ಆರ್ದ್ರತ್ವ, ಆಪ್ತತೆಗಳ ನೈತಿಕ ಕೆಚ್ಚು ತುಂಬಿಕೊಂಡ ವಿವೇಕದ ನಡೆಯ ಗತ್ತು ಇದು. ಅನಾಯಾಸವಾಗಿ ಮಾತು ರೂಪಕವಾಗುವ ಪರಿ ಇದು.

ಈ ಜೀವಸ್ರೋತ ಬುದ್ಧನಿಗೂ ಮುಖಾಮುಖಿಯಾಗಿದೆ. 'ಬುದ್ಧ ಬೆಳಕಿನೆಡೆಗೆ' ನಡೆದ 'ಪ್ರಕೃತಿ'ಯ ಮನೋಧರ್ಮ ಸೆಳೆತ, ತಳಮಳ, ತುಯ್ತಗಳ ಆಗುಹೋಗಿನ ಸಾಗುವಿಕೆಯಲ್ಲಿ ಮಾಗಿ ನಡೆದಿದೆ. ಇಲ್ಲಿ ಮೂರು ವ್ಯಕ್ತಿತ್ವಗಳೆದುರಿಗೆ ಅವಳ ಮುಖಾಮುಖಿ ಇದೆ. ಪ್ರಕೃತಿ-ಆನಂದ; ಪ್ರಕೃತಿ-ಮಾತಂಗಿ ; ಪ್ರಕೃತಿ-ಬುದ್ಧ ಈ ಮುಖಾಮುಖಿಗಳ ಸಂದರ್ಭದಲ್ಲಿ ಪ್ರಕೃತಿಗೆ ಎದುರಾಗುವ ಮುಖ್ಯಪ್ರಶ್ನೆಗಳು ಎರಡು.

ನೀರಿನಾಳದಲ್ಲಿ ಪುಳಕ್ಕನೆ ಹೊರಳೋ
ಎಳೆಮೀನು ಈ ಕೊಡದಲಿ ಹಿಡಿಯಲು
ಬರುವುದೇನು ?

ಚಾಂಡಾಲಕನ್ಯೆ ಎರೆವ ನೀರಿಗೆ
ಕುಡಿವ ಬಾಯುಂಟೇ, ದಾಹತೀರುವುದುಂಟೇ ?

ಈ ಎರಡೂ ಪ್ರಶ್ನೆಗಳು ಒಂದರೊಳಗೊಂದು ಒಳಸಂಚಾರ ಪಡೆದು ಮತ್ತೊಂದು ಪ್ರಶ್ನೆಯನ್ನು ಹುಟ್ಟುಹಾಕಿವೆ. ಈ ಪ್ರಶ್ನೆ ಅವಳು ಎದುಗೊಂಡ ಆನಂದ ಮಾತಂಗಿ ಬುದ್ಧ ಈ ಮೂವರನ್ನೂ ಬಿಟ್ಟು ಮತ್ತೊಂದು ಸಾಕ್ಷೀಭೂತಕ್ಕೆ ಹಾಕುವ ಪ್ರಶ್ನೆಯಾಗಿದೆ. ತನ್ಮುಖೇನ ತನಗೆ ತಾನೇ ಹಾಕಿಕೊಳ್ಳುವ ಪ್ರಶ್ನೆಯೂ ಆಗಿದೆ.

ಶ್ರಾವಸ್ತಿಯ ಹಣ್ಣುಬಿಡುವ ಮರಗಳೇ
ಏನಾಗಿದೆ ನನಗೆ ?
ಹಾಡೋ ಪಕ್ಷಿಗಳೇ ಏನಾಗಿದೆ ನನಗೆ ?

ಇಡೀ ಸಂಕಲನದೊಳಗಿನ ತಳಮಳ, ಸೆಳೆತ, ತುಯ್ತ, ವಿಷಾದಗಳು ಉತ್ತರ ಹುಡುಕಿ ಹೊರಟ ಪರಂಪರೆಯ ಜಾಡಿನಲ್ಲಿ ಮೂಡಿ ಬೆಳೆದ ಪ್ರಶ್ನೆಗಳಾಗಿವೆ. ಇದುವರೆಗೂ ಅನ್ಯಮುಖಿಯಾಗಿದ್ದ ಪ್ರಶ್ನೆ ಇಲ್ಲಿ ಅಂತರ್ಮುಖಿಯಾಗಿದೆ. ಈ ನಡೆ ವಿಶೇಷ ಅನುಭೂತಿಯ ಪರಿಣಾಮದೆಡೆಗೆ ಬೆರಳು ಚಾಚಿದ ನಡೆಯಾಗಿದೆ. ಈ ಮೂರೂ ಪ್ರಶ್ನೆಗಳ ಗರ್ಭದಲ್ಲಿ ಮನುಷ್ಯ ನಿರ್ಮಿತಿಯ ಅಸಮತೆಯನ್ನು ದಾಟುವ ಆಶಯ ಧ್ವನಿತವಾಗುತ್ತಿದೆ.

ಕಿಟಕಿ ಬಾಗಿಲುಗಳ ಹಂಗುತೊರೆದು
ಬರುತ್ತೇನೆ, ಬರುತ್ತೇನೆ ನಿನ್ನೊಂದಿಗೆ
ನಿನ್ನ ಬೆಳದಿಂಗಳ ತಾಣಕ್ಕೆ

ಎಂಬ ಬಯಕೆ ಜಾತಿಹಂಗಿನ ಅರಿಮೆಕಳೆದು ಬೆಳೆದ ಅಭೀಪ್ಸೆಯಾಗಿದೆ. ಇಷ್ಟಾಗಿಯೂ ಕಾಯ ವರ್ತುಲದಲ್ಲಿ ಸುತ್ತುವ ಇದರ ಪರಿಮಿತಿ ಬಹಳ ದೊಡ್ಡದೇ. ಬುದ್ಧ ಬೆಳಕಿನಲ್ಲಿ ಈ ಕಾಯದ ಮಾಯದ ಮೊಟ್ಟೆ ಒಡೆದಿದೆ.

ಜಾತಿ ಅಳಿದು ಮನವೆಲ್ಲೋ ಕಳೆದು
ಬುದ್ಧನಿತ್ತ ಭಿಕ್ಷಾಪಾತ್ರೆಯಲಿ ಗಮಗಮಿಸೊ ಮೊಗ್ಗುಗಳು
ಕೂಗಲೆತ್ನಿಸೋ ಎಳೆಹಕ್ಕಿಗಳು
ಧ್ವನಿ ಕಳಕೊಂಡ ಕಂಠಗಳು

ಬುದ್ಧನ ಅಡಿದಾವರೆಗಳಲ್ಲಿ ಬಿಚ್ಚಿದ ಕಮಲ
ನಳನಳಿಸೋ ಇಬ್ಬನಿ ಹನಿಗಳ ಕಮಲ

ಇದು ಪ್ರಕೃತಿ, ಇದು ಧರಣಿ, ಇದು ಪ್ರಕೃತಿ ಪಡೆದ ಅನುಭೂತಿ. ಇದು ಧರಣಿ ಕಂಡ ಬೆಳಕು. ಬೌದ್ಧ ಧರ್ಮದ ನೆಲೆಯಲ್ಲಿ ಹೆಣ್ಣಿಗೆ ಸಂಬಂಧಿಸಿದಂತೆ ಎತ್ತುವ ಮುಖ್ಯ ಪ್ರಶ್ನೆಯ ಜಾಡು ಹಿಡಿದು ನಡೆದ ನಡೆ ಕಂಡ ಬೆಳಗು.

ಗಾಜುಗೋಳದಲ್ಲಿ 'ಕೊಲಾಜ್ ಕವಿತೆಗಳು' ಎನ್ನುವ ಹೆಸರಿನ ನಾಲ್ಕು ರಚನೆಗಳಿವೆ. ಈ ರಚನೆಗಳು ಒಂದು ವಿಶಿಷ್ಟ ರೀತಿಯ ಪ್ರಯೋಗ. ಪೂರ್ವ ಕವಿಗಳ ಸೊಲ್ಲ ಸಾಲು ಹಿಡಿದು ಸಂವಾದಿಸಿದ ಪ್ರಯೋಗವಿದ್ದು ಈ ಬಗೆಯ ಬೆಳೆ ವಚನಕಾರರಲ್ಲಿ ಸಮೃದ್ಧವಾಗಿದೆ. ಅದರ ಫಲವೇ ಶೂನ್ಯ ಸಂಪಾದನೆ. ಆದರೆ ವಚನಕಾರರಲ್ಲಿ ಈ ಸಂವಾದ ಪ್ರಶ್ನೋತ್ತರ ಮಾದರಿಯಲ್ಲಿ ಅನುಭವ ತತ್ವಗಳ ಜಿಜ್ಞಾಸಾಮುಖಿಯಾಗಿದ್ದರೆ, ಪುಷ್ಪ ಅವರಲ್ಲಿ ತುಸು ಭಿನ್ನ ಮಾರ್ಗದಲ್ಲಿ ಹರಿದಿದೆ. ಶೂನ್ಯ ಸಂಪಾದನೆಯ ನೆಲದ ನೀರ ಹೀರಿಯೂ ವರ್ತಮಾನದ ಗತಿಶೀಲತೆಯಲ್ಲಿ ಹೊಸತನವನ್ನು ಕಾಣಿಸುವ ಪ್ರಯೋಗ ಇದಾಗಿದೆ.

'ಹೊಗೆಯಲ್ಲಿ ಗಿಲಕಿ ಕಣ್ಣಗೊಂಬೆ' - ಕವನದಲ್ಲಿ ಅಡಿಗರು ಕವನಗಳಲ್ಲಿನ ಹಲವು ಸಾಲುಗಳನ್ನು ಮುಖಾಮುಖಿಮಾಡಿಕೊಂಡು ಸಂವಾದ ಹರಿದಿದೆ. ಅಡಿಗರ ಹಲವು ಕವನಗಳ ಚಿಂತನಾ ದ್ರವ್ಯವನ್ನು ಮೂಲಧಾತುವಾಗಿಸಿಕೊಂಡು ಮಾತು ಬೆಳೆಯುತ್ತದೆ. ನೇತ್ಯಾತ್ಮಕ ರೀತಿಯ ದನಿ ಧಾರೆಗೆ ಇತ್ಯಾತ್ಮಕ ಭಾವದ ಸಾಂತ್ವನ ಹೇಳುವ ಪರಿ ವಿಶಿಷ್ಟವಾಗಿದೆ. ಸಮಕಾಲೀನ ಸಂದರ್ಭದಲ್ಲಿನ ಹಿರಿಯ ಕವಿಯ ಕಾವ್ಯದ ಅಂತಃಪ್ರಮಾಣುವನ್ನು ಜೀರ್ಣಿಸಿಕೊಂಡಿದ್ದಾಗ ಮಾತ್ರ ಆಪ್ತಭಾವದಲ್ಲಿ ಹೀಗೆ ಸ್ಪಂದಿಸಲು ಸಾಧ್ಯವಾಗುತ್ತದೆ.

ಸಮಕಾಲೀನ ಅನುಭವಗಳ ನೆಲೆಯಲ್ಲಿ ಅಡಿಗರಿಗೆ ಮುಖಾಮುಖಿಯಾದ ಕವಯಿತ್ರಿ ಅಲ್ಲಮನ ದನಿಜಾಡನ್ನು ಹಿಡಿದು 'ನಿರ್ಣಯವನರಿಯದ ಮನ'ದಲ್ಲಿ ತನ್ನೊಳಗಿನ ತಳಮಳಗಳಿಗೆ ತನ್ನ ಸುತ್ತಲಿನ ಇಕ್ಕಟ್ಟುಗಳು ಉಂಟುಮಾಡಿರುವ ಕಟ್ಟುಬ್ಬಸದ ಬೇಗುದಿಗೆ ಉತ್ತರವನ್ನು ಹುಡುಕಿದ್ದಾಳೆ. ಅಡಿಗರು ಎತ್ತುವ ಪ್ರಶ್ನೆಗಳು ಇವರ ಮುಖಾಮುಖಿಯಲ್ಲಿ ಸಾಂತ್ವನದ ಆಪ್ತತೆಗೆ ಒಳಗಾಗಿದ್ದರೆ, ಅಲ್ಲಮನ ನೆಲೆಯಲ್ಲಿ ಇವರೇ ಸಾಂತ್ವನವನ್ನು ನಿರೀಕ್ಷಿಸಿದ ಭಾವದಲ್ಲಿ ತಮ್ಮ ಅಳಲನ್ನು ನಿವೇದಿಸಿಕೊಂಡಿದ್ದಾರೆ.

ಕಟ್ಟಿದ ಮನೆಯ ಕೆಡಹುವುದು ಸುಲಭವಲ್ಲ
ತಲೆಯೆತ್ತಿದರೆ ಮಿರುಗುವ ಕಾಮನಬಿಲ್ಲು
ಕೆಳಗೆ ಕುಟುಕಲು ಕಾದಿರುವ ಚೇಳು ಹಾವುಗಳ ಹಿಂಡು
ದಾರಿ ಯಾವುದು ನನಗೆ
ತೋರಿ ಯಾವುದಿದೆ ದಾರಿ ನನಗೆ.

ಹೀಗೆ ಅಲ್ಲಮ್ಮನ ಎದುರಿಗೆ ನಿವೇದಿಸಿಕೊಳ್ಳುವ ತಲ್ಲಣ ತಳಮಳವನ್ನು ಅಕ್ಕನ ಜೊತೆಯಲ್ಲಿ ಸಹಭಾಗಿ ಭಾವದಲ್ಲಿ ಹಂಚಿಕೊಂಡಿದ್ದಾರೆ.

ಭದ್ರಕೋಟೆಗಳಲ್ಲಿ ಮುಚ್ಚಿಟ್ಟಮಾತೇ
ಕಲ್ಲುಗೋಡೆಯ ತಳದಲ್ಲಿ ಚಿಗುರೊಡೆದು
ಜಿಗಿತ ಜೀವವೇ, ಏನನ್ನಲಿ ನಿನ್ನನು ?
ಮಣ್ಣ ಪದರ ಮೆಲ್ಲನೆ ಒದರಿ ಮೇಲೆದ್ದ ಪಿಳಿಪಿಳಿ ಜೀವವೇ
ಮಿಸು ಮಿಸುನಿ ಚೇತನವೇ ಮೆಲ್ಲನಲುಗಾಟವೇ
ಹೇಗೆ ಸವರಲಿ ನಿನ್ನನ್ನು ?
ನನ್ನದೆಯಲ್ಲಿ ಬೇರುಬಿಟ್ಟ ಜೀವವೇ
ಮೆಲ್ಲನೇ ನಿನ್ನ ಕೈ ಹೊರಹಾಕು
ನೀರಿನಾಳದ ಮುತ್ತುಗಳನ್ನು ಹೆಕ್ಕು, ಹೊರತೆಗೆ
ನವರಂಗಿನ ಮೆರಗು ನೀಡು ಕಣ್ಣುಕುಕ್ಕುವಂತೆ

ಇಲ್ಲಿ ಪ್ರಶ್ನೆ ಇದೆ. ಆದರೆ ಆ ಪ್ರಶ್ನೆ ಅಕ್ಕನ ಗೆಲುವಿನ ಎದುರಲ್ಲಿ ತನ್ನ ಸೋಲು ಎಸೆದ ಸೊಲ್ಲಾಗಿದೆ. ಕಡೆಯಲ್ಲಿ ಆ ಸೊಲ್ಲಿನ ಹಾದಿ ಅಕ್ಕನ ಹುಡುಕಾಟದ ಹಾದಿಯನ್ನೆ ಹಿಡಿದು ನಿರೀಕ್ಷೆಯ ನಿಜವನ್ನು ತಬ್ಬಿ ಬಾಳಿದೆ. ಆದರೆ ಅಂತರಂಗದ ನಿಜವೆನ್ನುವುದು ಕೇವಲ ನಿರೀಕ್ಷೆಯಾಗಿ ಸೆರಗಿನ ಮರೆಯ ಮಿಥ್ಯದಲ್ಲಿ ಮುಚ್ಚಿಡಲಾಗದ ಒಳಗುದಿ.

ಪುಟ್ಟವಿಟ್ಟ ಚಿನ್ನದ ಹಾಗೆ
ಮುಚ್ಚಿಡಲಾಗದು ಬಹುಶಃ ಇನ್ನು ಮುಂದೆ
ಬಂದುದೆಲ್ಲಾ ಬರಲಿ
ಎಲ್ಲ ನನ್ನ ಕಂಠದ ಉಸಿರಾಗಲಿ
ಯಾರು ತೆಗಳಿದರೇನು ಹೊಗಳಿದರೇನು
ನಾನು ನಾನೇ ನಾನು ನಾನೇ

ಎಂಬ ನಿರ್ಧಾರಿತ ಭಾವದಲ್ಲಿ ಬೇರೂರಿ ಬೆಳೆದ ನಿಜವಾಗುತ್ತದೆ. ಇಂಥ ನಿಲುವಿಗೆ ಅಕ್ಕನ ಗೆಲುವು ತೋರಿದ ಪ್ರಭಾವ ಹಾಗೂ ಅದರ ಪರಿಣಾಮ ನಿಷ್ಠುರತೆ ಕಾರಣವಾಗಿದೆ.

ಕಡೆಯಲ್ಲಿ ಚಿತ್ತಾಲರ 'ಸಂಪರ್ಕ'ದ ಹಾದಿಯಲ್ಲಿ ಇದೇ ಭಾವದ ಅನುಸಂಧಾನ ಮುಂದುವರಿದಿದೆ. ದೈಹಿಕ ಋಗ್ಣತೆಯಲ್ಲಿ ಬಳಲಿದ ಚಿತ್ತಾಲರ ಕವಿಮನ-

ಅರರೆ ಶಾಪಗ್ರಸ್ತ
ಜಗದ ನಡುವೆಯೂ ನಿಂತು ಜಗಕೆ ಬಾಹಿರನಾದೆ

ತನೆಯಾಡಿಸುವ ಸುಖದ ನಟ್ಟನಡುವೆಯೂ ನಿಂತೂ
ಅಸಹ್ಯ ದುಃಖದ ಬಾಧೆ.

ಇಂಥ ನೋವಿನನುಭವದ ಅನುಕರಣಕ್ಕೆ ತನ್ನ ನೋವು ನಿರಾಶೆಗಳ ಪ್ರತಿಧ್ವನಿ ಹರಿಸುವ ಕವಯತ್ರಿಯ ಭಾವ-

ಹೆಳವನ ಮಾಡದಿರಯ್ಯ ತಂದೆ
ಹೆಳವನ ಮಾಡದಿರೋ
ನೀನೆ ಇತ್ತ ಅಂಗಾಂಗದ ಬಂಧವ
ಅಂದಗೆಡಿಸದಿರೋ

ಎಂಬ ಚಿತ್ತಾಲರ ಮೊರೆಯ ಸೊಲ್ಲಿನಲ್ಲಿ ಮುಗಿಯುತ್ತದೆ.

□

ಎಸ್.ಜಿ. ಸಿದ್ಧರಾಮಯ್ಯ, 'ಹೊಂಬೆಳಗು' ನಲಂದ ಶಾಲೆ ಪಕ್ಕ,
ರಾಘವೇಂದ್ರನಗರ, ತುಮಕೂರು-೫೭೨೧೦೩.

ದು. ಸರಸ್ವತಿ ಅವರ 'ಈಗೇನ್ ಮಾಡೀರಿ ?' : ರೂಪಕ ಪ್ರತಿಭೆಯ ಆತ್ಮಕಥನ

ಎಸ್. ಸಿರಾಜ್ ಅಹಮದ್

ತಾನು ಬರೆಯುತ್ತಿರುವ ಬರಹವನ್ನು ತನ್ನ ಸ್ವಂತ ಅನುಭವಗಳ ಕೇಂದ್ರಕ್ಕೆ ಒಗ್ಗಿಸಿ ಬರೆಯುವುದರಿಂದ ಆಗುವ ಸಮಸ್ಯೆಗಳನ್ನು ಅರಿತೋ ಏನೋ ಸರಸ್ವತಿಯವರು ತಮ್ಮ ಜೀವನದ ಕರಾಳ ಅನುಭವಗಳನ್ನು ಕುರಿತು ಬರೆಯುವಾಗಲೂ ಅದನ್ನು ಡೈರಿಯ ಪುಟಗಳ ವಿವರಣೆಗಳಿಗೆ ಸೀಮಿತಗೊಳಿಸಿಲ್ಲ. ಆದ್ದರಿಂದಲೇ ಸರಸ್ವತಿಯವರ ಅನುಭವ ಕಥನವೆಂಬ ವಿವರಣೆಯೊಡನೆ ಪ್ರಕಟವಾಗಿರುವ "ಈಗೇನ್ ಮಾಡೀರಿ ?" ಪುಸ್ತಕ ಅನುಭವ ಕಥನ-ಆತ್ಮಚರಿತ್ರೆಗಳೆಂಬ ಹಣೆಪಟ್ಟಿಯ ಬರಹಗಳಿಗಿಂತ ವಿಶಿಷ್ಟವಾಗಿದೆ. ಮುಖ್ಯವಾಗಿ ಇಂಥ ಬರಹಗಳು ಸಾಂಪ್ರದಾಯಿಕವಾಗಿ ಚರಿತ್ರೆಯಲ್ಲಿ ಕಾಣಸಿಗದ ಸತ್ಯಗಳನ್ನು ದಾಖಲಿಸುತ್ತವೆ. ಅವು ಸುತ್ತಲಿನ ಸಮಾಜದಲ್ಲಿ ಮೇಲ್ನೋಟಕ್ಕೆ ಕಾಣಸಿಗದ ವಾಸ್ತವ ಸತ್ಯಗಳನ್ನು ವ್ಯಕ್ತಿ ಚರಿತ್ರೆಯ ವಿವರಗಳ ಮೂಲಕ ಕಟ್ಟಿಕೊಡಲು ಯತ್ನಿಸುತ್ತವೆ. ಇಷ್ಟಾದರೂ ನಮ್ಮ ಪ್ರಸಿದ್ಧ ಆತ್ಮಚರಿತ್ರೆಗಳು ಸಾಹಿತ್ಯ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಖ್ಯಾತರಾದ ವ್ಯಕ್ತಿಗಳ ಸುತ್ತಲಿನ ಪ್ರಭಾವಳಿಯನ್ನು ಹೆಚ್ಚಿಸಿವೆ. ಆದರೆ ಕಳೆದ ಶತಮಾನದ ಕೊನೆಯಭಾಗದಲ್ಲಿ ಮರಾಠಿ ಹಾಗೂ ಕನ್ನಡದಲ್ಲಿ ಗಮನಾರ್ಹವಾದ ಆತ್ಮಕಥನಗಳು ಪ್ರಕಟವಾಗಿವೆ. ಇವು ಮೊದಲ ಬಾರಿಗೆ ಸಮಾಜದ ಅತ್ಯಂತ ತಿರಸತ ಸಮುದಾಯಗಳ ಬದುಕನ್ನು ಅಕ್ಷರಲೋಕದ ಶಿಕ್ಷಿತ ಮಂದಿಗೆ ತಲುಪಿಸುವ ಕೆಲಸ ಮಾಡಿದವು. ಮರಾಠಿಯಲ್ಲಿ ಬಂದ 'ಉಚಲ್ಯಾ' ಕನ್ನಡದ 'ಗೌರ್ಮೆಂಟ್ ಬ್ರಾಹ್ಮಣ', 'ಊರುಕೇರಿ' ಇತ್ಯಾದಿ ಆತ್ಮಕತೆಗಳು ತಿರಸ್ಕಾರಕ್ಕೆ ಒಳಗಾಗಿದ್ದ ವ್ಯಕ್ತಿಗಳ ಬದುಕಿನ ವಿವರಗಳನ್ನು ಹೇಳುತ್ತ ಸಮಾಜದ ಹೀನಸ್ಥಿತಿಗೆ ಕನ್ನಡಿ ಹಿಡಿಯುತ್ತದೆ.

ಇಂಗ್ಲಿಷ್‌ನಲ್ಲಿ ಒಂದಾದ ಮೇಲೊಂದರಂತೆ ಪ್ರಕಟವಾಗುವ ಜೀವನ ಚರಿತ್ರೆ, ಆತ್ಮಕತೆಗಳನ್ನು ಗಮನಿಸಿದರೆ - ಅದು ಯಾವುದೇ ಕ್ಷೇತ್ರವಾಗಿರಲಿ - ಕನ್ನಡದಲ್ಲಿ ವಿವಿಧ ಕ್ಷೇತ್ರಗಳ ಪ್ರಮುಖ ವ್ಯಕ್ತಿಗಳ ಕುರಿತು ಜೀವನ ಚರಿತ್ರೆಗಳನ್ನು ಬರೆಯುವ, ಆತ್ಮಕಥನಗಳನ್ನು ನಿರೂಪಿಸುವ ಸಂಪ್ರದಾಯವೇ

ನಮ್ಮಲ್ಲಿಲ್ಲ ಅನಿಸುತ್ತದೆ. ಇಂಗ್ಲಿಷ್‌ನಲ್ಲಿ ೧೭೯೨ರಲ್ಲಿ ಜೇಮ್ಸ್ ಬಾಸ್ವೆಲ್ ಬರೆದ Life of Samuel Johnson ಕೃತಿ ಕಳೆದ ೨೦೦ ವರ್ಷಗಳಲ್ಲಿ ಮರುಮುದ್ರಣ ಕಾಣದ ವರ್ಷವೇ ಇಲ್ಲವಂತೆ. ಆ್ಯಂಡ್ರೂ ಮಾರ್ಟನ್ ೧೯೯೨ರಲ್ಲಿ ಬರೆದ "Diana : Her True Story" ಎಂಬ ಪುಸ್ತಕ ಈಗಾಗಲೇ ೨½ ಮಿಲಿಯನ್ ಪ್ರತಿಗಳಿಗಿಂತಲೂ ಹೆಚ್ಚು ಮಾರಾಟವಾಗಿದೆ. ಇನ್ನು ಸಿನೇಮಾ ತಾರೆಯರ, ಕ್ರಿಕೆಟ್ ಹೀರೋಗಳ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ. ಎಷ್ಟೋ ಕ್ರಿಕೆಟಿಗರು ಮುವತ್ತರ ಪ್ರಾಯದಲ್ಲೆ ಆತ್ಮಕಥೆಯಂಥ ಬರಹಗಳನ್ನು ಪ್ರಕಟಿಸುವುದು ಸಾಮಾನ್ಯವಾಗಿದೆ. ಇಂಗ್ಲಿಷ್‌ನಲ್ಲಿ ಆತ್ಮಕತೆ, ಜೀವನ ಚರಿತ್ರೆಯ ಪುಸ್ತಗಳು ರೋಚಕ ಕಾದಂಬರಿಗಳ ಹಾಗೆ ಪ್ರತಿವರ್ಷವೂ ಪ್ರಕಟಗೊಂಡು ಬೆಸ್ಟ್‌ಸೆಲ್ಲರ್‌ಗಳ ಹಾಗೆ ಮಾರಾಟವಾಗುತ್ತಿರುತ್ತವೆ. ಇಂಥ ಪುಸ್ತಕ ಪ್ರಕಟಣೆಗಳ ಹಿಂದಿರುವ ಮಾರುಕಟ್ಟೆ ತಂತ್ರಗಳೇನೇ ಇರಲಿ ಈ ಮಾದರಿಯ ಪುಸ್ತಕ ಬರೆವ ಅಭ್ಯಾಸ ನಮ್ಮಲ್ಲಿ ಯಾಕಿಲ್ಲ ಎಂಬ ಬಗ್ಗೆ ಯೋಚಿಸಬೇಕಾಗಿದೆ.

ದು. ಸರಸ್ವತಿಯವರ ಆತ್ಮಕಥನ ಸ್ವಂತದ ಕಷ್ಟ ಕೋಟಲೆಗಳ ವಿವರಗಳನ್ನು ಹೇಳುತ್ತಲೇ ಅದನ್ನು ಎಲ್ಲರ ಕತೆಯಂತಾಗಿಸುವ ಪ್ರಯತ್ನ ಮಾಡುತ್ತದೆ ಎಂಬ ಕಾರಣಕ್ಕೆ ವಿಶಿಷ್ಟವಾಗಿದೆ. ಆದ್ದರಿಂದಲೇ ಇದು ಅವರ ವೈಯಕ್ತಿಕ ಅನುಭವಗಳ ನಿರೂಪಣೆಯಾದರೂ ಅಲ್ಲಿ ನಾನು ಎಂಬುದು ವಿಜೃಂಭಿಸಿಲ್ಲ. ಸ್ವಂತದ ಕತೆಯನ್ನೇ ಇನ್ನೊಬ್ಬರ ವ್ಯಥೆ ಎಂಬಂತೆ ತೃತೀಯ ಪುರುಷ (?)ನ ದಾಟಿಯಲ್ಲಿ ನಿರೂಪಿಸಿರುವುದರಿಂದ ಈ ಆತ್ಮಕತೆಗೆ ವ್ಯಕ್ತಿಯನ್ನು ಮೀರಿದ ಇನ್ನೊಂದು ದೊಡ್ಡ ಆಯಾಮ ಒದಗಿ ಬಂದಿದೆ.

ಕಥನದ ಆರಂಭದಲ್ಲಿ ಲೇಖಕಿಯ ಸ್ವಚ್ಛಂದ ಬಾಲ್ಯ, ಆಕೆಯ ಮೇಲೆ ಅವಳ ಅವ್ವನ ಅಗಾಧ ಪ್ರಭಾವ ಮತ್ತು ಅವಳು ಬೆಳೆಸಿದ ಉದಾತ್ತಗುಣಗಳ ವಿವರಗಳು ದೊರಕುತ್ತವೆ. ಅವ್ವನ ಪ್ರಭಾವ ಬಹಳ ಗಾಢವಾಗಿರುವುದರಿಂದ ಕೊನೆಯವರೆಗೂ ಈಕೆ ಅವ್ವಣ್ಣೆಯ ಮಗಳಾಗಿಯೇ ಉಳಿಯುತ್ತಾಳೆ. ಲೇಖಕಿ ಬಳಸುವ ಗ್ರಾಮ್ಯ ಭಾಷೆಯಿಂದಾಗಿ ಬಾಲ್ಯದ ವಿವರಗಳು ಸಹಜವಾಗಿ ಮೂಡಿಬಂದಿದೆ. ಇಷ್ಟೆಲ್ಲ ವಿವರಗಳನ್ನು ಕೊಡುವಾಗಲೂ ಇವರು, ಇಂಥೋರು, ಇಲ್ಲಿ, ಇಷ್ಟುಹೊತ್ತಿನಲ್ಲಿ ಎಂಬಂಥ ಕರಾರುವಾಕ್ಕಾದ ನಿರೂಪಣೆಯ ಪ್ರಯತ್ನ ಇಲ್ಲಿ ಕಾಣುವುದಿಲ್ಲ. ಆದ್ದರಿಂದಾಗಿಯೇ ಅವ್ವನ ಹೆಸರು, ಹುಟ್ಟಿದ ಊರು ಇತ್ಯಾದಿ ವಾಸ್ತವ ವಿವರಗಳು ಕಥನದಲ್ಲಿ ಸಿಕ್ಕುವುದಿಲ್ಲ. ಹಾಗಿಲ್ಲದಿದ್ದರೂ ಭಾಷೆಯ ಸಹಜತೆ ಮತ್ತು ನಿರೂಪಣೆಯ ನೇರವಂತಿಕೆಯ ಕಾರಣದಿಂದ ಕಥನದ ಅನುಭವವನ್ನು ಒಟ್ಟಾಗಿ ನಿಜಬದುಕಿನ ಹತ್ತಿರಕ್ಕೆ ತಂದು ನಿಲ್ಲಿಸುವುದನ್ನು ನಾವು ಕಾಣಬಹುದು.

ಶೈಲಿಯ ಸಹಜತೆಯೊಂದಿಗೆ ಲೇಖಕಿ ತನ್ನ ಅವ್ವನಿಂದ, ಸುತ್ತಲಿನ ಪರಿಸರದಿಂದ ಕಲಿತ ಸರಳತೆ, ಸಜ್ಜನಿಕೆಯ ಗುಣಗಳು ಆಕೆಯ ವ್ಯಕ್ತಿತ್ವದ ಬಹಳ ಮುಖ್ಯ ಅಂಶವಾಗುವುದನ್ನು ಇಲ್ಲಿ ಗಮನಿಸಬೇಕು. ರಸ್ತೆಯಲ್ಲಿ ಸಿಕ್ಕಿದ ಐದು ಪೈಸೆಯನ್ನು ತನ್ನದು ಎಂದು ತಿಳಿಯಬಾರದೆಂದು ಹೇಳುವ ಅನಕ್ಷರಸ್ಥ ಅವ್ವ ಲೇಖಕಿಗೆ "ಒಂದ್ ತುತ್ ಎಚ್ಗೆ ಉಂಡ್ರೆ ಇನ್ನೊಬ್ರನ್ನ ಕಿತ್ಕೊಂಡಂಗೆ" ಎಂದು ಬುದ್ಧಿ ಹೇಳುವುದು ನಿಜಕ್ಕೂ ದೊಡ್ಡಮಾತಾಗಿದೆ. "ಕೆಟ್ ಮಾತಾಡ್ಬಾರ್ದು ಯಾರ್ನು ಅಯ್ಕೊಬ್ನಾರ್ದು, ಇನ್ನೊಬ್ರೊಸ್ತುಗೆ ಕೈ ಆಕ್ಬಾರ್ದು" ಎಂಬಂಥ ಸರಳ ಸತ್ಯಗಳನ್ನು ಬಾಲ್ಯದಿಂದಲೇ ರೂಢಿಸಿಕೊಂಡು

ಬಂದ ಲೇಖಕಿಯನ್ನು ಮುಂದೆ ಜೀವನದಲ್ಲಿ ಸುತ್ತಲಿನವರು ಸಂಚು ಹೂಡಿ ಯಾವ ತಪ್ಪು ಮಾಡದಿದ್ದರೂ ಅಪರಾಧಿಯನ್ನಾಗಿಸಿ, ಸಮಾಜ ಅವಳನ್ನು ಹಿಂಸಿಸುವುದು ಬದುಕಿನ ದುರಂತ ವ್ಯಂಗ್ಯಕ್ಕೆ ಸಾಕ್ಷಿಯಾಗಿದೆ.

ಬಾಲ್ಯ ಹಾಗೂ ಯೌವನದ ಬದುಕಿನ ನಾಜೂಕು ತಿರುವುಗಳನ್ನು ವಿವರಿಸುವಾಗ ಲೇಖಕಿಯ ನಿಜವಾದ ಸತ್ವ ಅರಿವಾಗುತ್ತದೆ. ಬಾಲ್ಯ ಯೌವನದ ಅವಸ್ಥೆಗಳ ಚಿತ್ರಣ ನೀಡುವಾಗ ಮತ್ತೊಮ್ಮೆ ಸ್ಪಷ್ಟವಾಗುವುದು ನಿರೂಪಕಿಯ ಸಹಜ ಮುಗ್ಧ ವ್ಯಕ್ತಿತ್ವವೇ. ಅವಳಿಗೆ ಕಾಲೇಜಿನ ಥಳಕು ಬಳುಕಿನ ಹುಡುಗಿಯರ ನಡುವೆ ತಾನು ಸುಂದರಿಯಲ್ಲ ಅನಿಸಿದಾಗ ಸಾಂತ್ವನ, ಧೈರ್ಯಸಿಗುವುದು "ಹೆಂಗ್ ಚೆನ್ನಾಗಿಲ್ಲ ಅಂದ್ಕೊಳ್ಳಿ, ನನ್ನವ್ವಗಂತೂ ನಾನು ಚನಾಗಿದೀನಿ" ಎನ್ನುವ ಅವ್ವನ ಲೋಕದಲ್ಲಿ. ಉಬ್ಬುಹಲ್ಲುಗಳ ಈಕೆ ನಗಲು ಚೌಕಾಸಿ ಮಾಡಿ ಮುಜುಗರ ಪಟ್ಟುಕೊಂಡರೆ ಯಾರಿಗೂ ಕ್ಯಾರೆ ಅನ್ನದೆ ಇಷ್ಟಗಲ ನಗಲು ಪ್ರೇರೇಪಿಸುವವಳು ಅವಳ ತಾಯಿಯೇ. ಹೀಗಾಗಿ ನಿರೂಪಕಿಗೆ ಬದುಕಿನಲ್ಲಿ ಸಹಜವಾದದ್ದು, ಸರಳವಾದದ್ದು ಎನ್ನುವುದೆಲ್ಲವೂ ಅವಳ ಅವ್ವನ ಲೋಕದ ನೇಯ್ಗೆಯೊಳಗೆ ಸೇರಿಹೋಗುತ್ತದೆ. ಇಷ್ಟಲ್ಲದೆ ಕಾಲೇಜಿನ ಬೆಡಗಿನ ವೈಯಾರಿಗಳ ನಡುವೆ ಬಡಮಧ್ಯಮ ವರ್ಗದ ಹುಡುಗಿಗೆ ಗೊಂದಲವಾದಾಗ ಮತ್ತು ಮಹಿಳಾ ಸಂಘಟನೆಗಳ ಕ್ರಾಂತಿಕಾರಿ ಕಾಮ್ರೇಡುಗಳ ಮುಗಿಯದ ಚರ್ಚೆ, ವಾದ, ವಿವಾದಗಳಲ್ಲಿ ಚಡಪಡಿಕೆಯುಂಟಾಗುವುದು ಅವಳ ಮುಗ್ಧ ವ್ಯಕ್ತಿತ್ವದಿಂದಲೇ. ಹಾಗೆಯೇ ಹೊರಗಿನ ಪ್ರಪಂಚದ ವಂಚನೆ, ಘಾತುಕತನದಿಂದ ಕೊಡಲಿಪೆಟ್ಟು ಬೀಳುವುದು ಅವಳ ಸಹಜ ಸ್ಥಿತಿಯ ರೂಪವಾದ ಅವ್ವಣ್ಣಿಯ ಮಗಳಿಗೇನೇ. ಅವ್ವಣ್ಣಿಯ ಮಗಳ ರೂಪದಲ್ಲಿ ಮತ್ತೆ ಮತ್ತೆ ವ್ಯಕ್ತವಾಗುವುದು ನಿರೂಪಕಿಯ ಮುಗ್ಧ ಸಹಜ ವ್ಯಕ್ತಿತ್ವವೇ ಆಗಿದೆ. ಆದ್ದರಿಂದ ಅವಳಿಗೆ ಸಹಜವಾಗಿರುವುದು, ಸರಳವಾಗಿರುವುದು ಎಂದರೆ ನಿಜಕ್ಕೆ ಹತ್ತಿರವಾಗಿ ವಾಸ್ತವದಲ್ಲಿ ಬದುಕುವುದು ಎಂಬ ಅರ್ಥವೂ ಮೂಡಿಬರುತ್ತದೆ. ಆರ್ಟ್ಸ್ ಸ್ಕೂಲಿನ ಮೇಷ್ಟ್ರೊಬ್ಬರ ಬಗ್ಗೆ ಲೇಖಕಿ ಹೇಳುವುದನ್ನು ನೋಡಿ: "ಬಹು ದೊಡ್ಡ ಕಲಾವಿದನಾದರೂ ಯಾವ ಹಮ್ಮು ಬಿಮ್ಮಿಲ್ಲದೆ ಕೈಲಿ ಸಿಂಬಳ ತೆಗೆದು ಎಸೆದು, ಕೈಯನ್ನು ಗೋಡೆಗೆ ಒರೆಸುತ್ತಾ ಮಾತಾಡುತ್ತಿದ್ದ ಮೇಷ್ಟ್ರ ಮಾತು ಕೇಳುತ್ತಿದ್ದರೆ ಅಮ್ಮನ ಊರಿನಲ್ಲಿ ಕರಿಯಣ್ಣನೊಂದಿಗೆ ಮಾತನಾಡಿದಂತಿರುತ್ತಿತ್ತು." ಹೀಗೆ ತನ್ನ ಮುಗ್ಧತೆ ಸರಳತೆಗಳನ್ನು ಅವ್ವಣ್ಣಿಯ ಮಗಳ ರೂಪಕದಲ್ಲಿ ಚಿತ್ರಿಸುವ ಲೇಖಕಿ ಮುಂದೆ ವಂಚಕ ಸಮಾಜದ ತಂತ್ರಕ್ಕೆ ಬಲಿಯಾಗುವುದನ್ನು ನೋಡಿದಾಗ ಅದನ್ನು ಕೇವಲ ವ್ಯಕ್ತಿಯೊಬ್ಬನ/ಳ ಸಂಕಷ್ಟವಾಗಿ ನೋಡದೆ ಒಂದು ಮುಗ್ಧ ಪ್ರಪಂಚದ ನಾಶವಾಗಿಯೂ ನೋಡಬೇಕೆಂಬ ಸೂಚನೆ ಕಥನದಲ್ಲಿ ದೊರಕುತ್ತದೆ. ಆದ್ದರಿಂದಲೇ ಲೇಖಕಿ ಬೇಕಂತಲೇ ಆತ್ಮಕತೆಯ ನಿರೂಪಣೆಯಲ್ಲಿ ಸಾಮಾನ್ಯವಾಗಿ ಬರುವ ವ್ಯಕ್ತಿಗಳು, ಘಟನೆಗಳು, ಸ್ಥಳಗಳು ಇತ್ಯಾದಿಗಳ ನಿರ್ದಿಷ್ಟ ವಿವರಗಳಿಗೆ ಹೋಗದೇ ಒಟ್ಟು ಸ್ಥಿತಿಯನ್ನೇ ಒಂದು ರೂಪಕವೆಂಬಂತೆ ನಿರ್ವಹಿಸಿರುವುದನ್ನು ಗಮನಿಸಿದರೆ ಲೇಖಕಿಯ ಸೃಜನಶೀಲತೆಯ ಪರಿಚಯವಾಗುತ್ತದೆ. ಈ ಸೃಜನಶೀಲತೆಯ ಕಾರಣದಿಂದ ಅಲ್ಲಲ್ಲಿ ದೀರ್ಘಕಾವ್ಯದ, ಕಾದಂಬರಿಯ ಸೆಳೆತಗಳು ತೀವ್ರವಾಗಿ ಕಾಣಿಸಿಕೊಂಡು ಆತ್ಮಕತೆಯ ಸ್ವರೂಪಕ್ಕೆ ಒಂದು ವಿಶಿಷ್ಟವಾದ ಚಹರೆ ಒದಗಿಬಂದಿದೆ. ಆದರೆ ಆತ್ಮಕತೆಯಲ್ಲದ ಈ ಆತ್ಮಕತೆಯಲ್ಲಿ ಕಾವ್ಯದ ಕಾದಂಬರಿಯ ಎಳೆಗಳು ಅಲ್ಲಲ್ಲಿ ಕಾಣುವುದರಿಂದ ಇಲ್ಲಿನ ಕಥನವು ತನ್ನ ವ್ಯಾಪ್ತಿಯನ್ನು ಮೀರಿದ

ಅಪೇಕ್ಷೆಗಳನ್ನು ಉಂಟುಮಾಡುತ್ತದೆ ಎಂಬುದು ಬೇರೆಯ ಮಾತು. ಅದನ್ನು ಕೊನೆಯಲ್ಲಿ ಚರ್ಚಿಸಬಹುದು.

ಕಥನದ ನಿರೂಪಣೆಯ ಹಿಂದೆ ಒಂದು ರೂಪಕಶಕ್ತಿ ನಿರಂತರವಾಗಿ ಹರಿಯುವುದನ್ನು ಇನ್ನಿತರ ಸಂದರ್ಭಗಳಲ್ಲೂ ನೋಡಬಹುದು. ಆತ್ಮಕತೆಯ ಅತ್ಯಂತ ತೀವ್ರವಾದ ಭಾಗಗಳಲ್ಲಿ ಒಂದಾದ ನಿರೂಪಕಿಯ ತಾಯಿಯ ಅನಾರೋಗ್ಯ ಹಾಗೂ ಸಾವಿನಂಚಿನ ತನ್ನ ತಾಯಿಯ ನರಳಾಟವನ್ನು ನೋಡಲಾಗದೆ ಒಂದು ದೀರ್ಘಕನಸಿಗೆ ಜಾರುವ ಲೇಖಕಿ ಕನಸಿನ ಮಂಪರಿನಲ್ಲಿ ಅವ್ವನ ಹಾಗೆ ಪೂಜೆಮಾಡುತ್ತಾಳೆ, ಬಳೆತೊಡುತ್ತಾಳೆ. ಅವಳ ಹಾಗೆ ಕೂತು ನಡೆಯುತ್ತಾಳೆ. "ಎಚ್ಚರವಾದಾಗ ಅವ್ವ ಕಣ್ಣ ಮುಂದಿರಲಿ, ಇಲ್ಲವೇ ಈ ಕನಸು ಹೀಗೆಯೇ ಕೊನೆಯವರೆಗೆ ಇರಲಿ" ಎಂದು ಕನಸಿನ ಮಂಪರಿನಲ್ಲಿ ವಾಸ್ತವದ ಸತ್ಯವನ್ನು ಕಣ್ತೆರೆಸಿನೋಡುವಂತೆ ಮಾಡುವುದು ಲೇಖಕಿಯ ಶಕ್ತಿಗೆ ಇನ್ನೊಂದು ಉದಾಹರಣೆ. ತಾಯ ಸಾವಿನ ವಾಸ್ತವವನ್ನು ಕನಸಿನಲ್ಲೆಂಬಂತೆ ನಿರೂಪಿಸಿರುವುದರಿಂದ ತಾಯಿಯ ಸಾವಿನ ವಿವರಗಳಿಗೂ ಮಗಳ ತೊಳಲಾಟಕ್ಕೂ ಅನನ್ಯವಾದ ಭಾವತೀವ್ರತೆ ಒದಗಿಬಂದಿದೆ. ಅವ್ವನ ಸಾವಿನ ಭಯವನ್ನು ಅವಳು ಬೆಳೆಸಿದ ಏಳು ಮಲ್ಲಿಗೆ ಹೂವಿನ ಗಿಡವ ಮೇಲೆ ಆವರಿಸಿಕೊಂಡ ನೆರಳಿನ ರೂಪದಲ್ಲಿ ಗ್ರಹಿಸುವಾಗ ಕಥನದ ಹಿಂದಿನ ಸೃಜನಶೀಲ ಆಯಾಮ ಹಾಗೂ ಲೇಖಕಿಯ ಸಂವೇದನೆಯ ಸೂಕ್ಷ್ಮತೆಗಳು ಸ್ಪಷ್ಟವಾಗುತ್ತವೆ. ಇಷ್ಟೇ ಅಲ್ಲ, ವಾಸ್ತವ ಬದುಕಿನ ಎಂಥ ಕಹಿ ಅನುಭವವನ್ನೂ ತಾಳಿಕೊಳ್ಳುವ ಶಕ್ತಿ ಒದಗಿಬರುವುದು ಅಂತಿಮವಾಗಿ ಇಂಥ ಸೃಜನಶೀಲ ಶಕ್ತಿಯ ಸಹಾಯದಿಂದ ಎಂಬುದು ಗಮನಾರ್ಹ.

ಆತ್ಮಕಥನವ ಮುಖ್ಯಕೇಂದ್ರ ಲೇಖಕಿ ತಾನು ಮಾಡದ ತಪ್ಪಿಗೆ ಅಪರಾಧಿಯಾಗಿ ಶಿಕ್ಷೆ ಅನುಭವಿಸುವುದನ್ನು ನಿರೂಪಿಸುವ ವಿವರಗಳಲ್ಲಿದೆ. ಮೊದಲಿನಿಂದಲೂ ಲೆಕ್ಕವೆಂದರೆ, ಲೆಕ್ಕಾಚಾರವೆಂದರೆ ಆಗದ ಈಕೆಗೆ ಕೂಡು ಕಳೆಯುವುದೇ ಮುಖ್ಯವಾದ ಹಣಕಾಸಿನ ಪ್ರಪಂಚದೊಳಕ್ಕೆ ಕಾಲಿಟ್ಟಾಗ ಅವಳ ಮುಗ್ಧತೆಯ ಮೇಲೆ ಮತ್ತೊಮ್ಮೆ ಮಹಾ ಪ್ರಹಾರವಾಗುತ್ತದೆ. ದೊಡ್ಡ ಅಂಕಿ ಸಂಖ್ಯೆಗಳನ್ನು ನೋಡಿದರೇ ತಲೆ ತಿರುಗಿದಂತಾಗುವ ಆಫೀಸಿನ ವಾತಾವರಣದಲ್ಲಿ ಲೇಖಕಿಯ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡ ಸಹೋದ್ಯೋಗಿಗಳು ಹಣದ ಅವ್ಯವಹಾರದ ಆಪಾದನೆಯನ್ನು ಅವಳ ಮೇಲೆ ಹೊರೆಸುತ್ತಾರೆ. ಇದರಿಂದಾಗಿ ಜೈಲಿನ ನರಕಯಾತನೆ, ಜೊತೆಯವರ ಅವಮಾನ-ನಿಂದನೆಗಳನ್ನು ಅನುಭವಿಸಬೇಕಾಗಿ ಬರುತ್ತದೆ. ಸಮಾಜದ ಭ್ರಷ್ಟತೆ, ವಂಚಕತನದಿಂದ ಮುಗ್ಧ ಮನಸ್ಸೊಂದು ನಾಶವಾಗುವ ಕತೆ ಕ್ಲೀಷೆಯಾಗದೆ, ಲೇಖಕಿಯ ರೂಪಕ ಪ್ರತಿಭೆಯಿಂದ ತೀವ್ರ ಸಂವೇದನೆಯ ಬರಹವಾಗಿ ರೂಪುಗೊಂಡಿದೆ. ಆದ್ದರಿಂದ ತಾಯಿಯ ಸಾವನ್ನು ಕುರಿತ ಭಾಗಗಳು ಮತ್ತು ಲೇಖಕಿಯ ಜೈಲಿನ ಅನುಭವಗಳು ಮೇಲಿನ ಕಾರಣದಿಂದ ಆತ್ಮಕತೆಯ ಉಜ್ವಲಭಾಗಗಳಾಗಿವೆ. ಜಿಗುಪ್ಸೆ ಬರಿಸುವ ಜೈಲಿನ ಕೊಳಕು ಅವಮಾನವನ್ನು ಒಂದು ಉದ್ದ ಕನಸಿನಲ್ಲಿ ಎದುರಿಸುವುದು ಅನನ್ಯವಾಗಿದೆ. ಜೈಲಿನ ನೋವು ಅಸಹನೀಯವಾದಷ್ಟು ಅವಳ ಕನಸುಗಳು ಗಟ್ಟಿಯಾಗುತ್ತವೆ. "ಅಯ್ಯೋ, ಯಾಕೀ ಕನಸು ಇಷ್ಟುದ್ದ ಆಗ್ತಾ ಇದೆ, ಮುಗಿಯೋದೆ ಇಲ್ವಾ ? ಎಲ್ಲರು ಮಾತಾಡಿ ಸುಸ್ತಾಗಿ ಮಲಗಿದಾರೆ .... ನಾನು ಕಣ್ ಮುಚ್ಕೊಂಡ್ರೆ ಕಣ್‌ಬಿಡೋ

ವೇಳೆಗೆ ಕನಸು ಮುಗಿದಿರುತ್ತೆ, ಯಾರಾದ್ರೂ ಬಂದಿರ್ತಾರೆ ಕರ್‍ಕೊಂಡೋಗೋಕೆ" ಎನ್ನುವಾಗ ಎಂಥ ಯಾತನೆಯ ಸಂದರ್ಭದಲ್ಲೂ ಮತ್ತೆ ಬದುಕಿನ ನೆಲೆಯನ್ನು ಒಣಗಿಸದೆ ಉಳಿಸಿಕೊಳ್ಳಲು ಸಾಧ್ಯವಾಗುವುದು ಕನಸು ಕಾಣುವ ಛಲದಿಂದ. ಆದ್ದರಿಂದಲೇ ಜೈಲಿನಲ್ಲಿ ಹಸಿವಿನಿಂದ ಬಳಲುತ್ತಿದ್ದರೂ ಅದನ್ನೊಂದು ಕೆಟ್ಟಕನಸಿನ ಅಧ್ಯಾಯವೆಂದು ಸಮಾಧಾನದಿಂದ ಇರುವಾಗ ಜೈಲಿನ ಸಿಬ್ಬಂದಿ ಅಲ್ಯೂಮಿನಿಯಂ ಪ್ಲೇಟಿನಲ್ಲಿ ಮುದ್ದೆ ಚಟ್ನಿ ತಂದಿಡುತ್ತಾರೆ. ಅವಳಿಗೆ ಅದನ್ನು ಮಟ್ಟಲೂ ಇಷ್ಟವಾಗುವುದಿಲ್ಲ. ಅವಳು ಕೇಳುವ ಪ್ರಶ್ನೆ "ಕನಸಿನಲ್ಲಿ ಹಸಿವೆಲ್ಲಾಗುತ್ತೆ ?" ಎಂಬುದು. ಅಂದರೆ ಕನಸು ಕಾಣುವ ಕ್ರಿಯೆ ಆತ್ಮಕಥನದ ಸೃಜನಶೀಲ ಭಾಗವಾಗಿ ಮಾತ್ರ ಮೂಡಿಬಂದಿಲ್ಲ. ಬದಲಾಗಿ ಈ ಸೃಜನಶೀಲತೆ ಬದುಕನ್ನು ಎದುರಿಸುವ ಆಂತರ್ಯದ ಶಕ್ತಿಯಾಗಿಯೂ ಹೊರಹೊಮ್ಮಿದೆ. ಕೊನೆಯಲ್ಲಿ ಕೋರ್ಟುಕಛೇರಿ, ವಿಚಾರಣೆ, ಬೇಲು, ಜೈಲು ಎಂಬ ಕೊನೆಯಿಲ್ಲದ ಪಾತಾಳದಲ್ಲಿ ಮುಳುಗುತ್ತಿರುವ ಅವಳು ಅಮ್ಮನ ಕೈ ಹಿಡಿದು ತನ್ನೆಲ್ಲ ಶಕ್ತಿಯನ್ನು ಒಂದುಗೂಡಿಸಿ ಅಲ್ಲಿಂದ ಹಾರಿಪಾರಾಗಿ ಆಚೆ ಹರಿಯುತ್ತಿರುವ ನದಿಗೆ ಬೀಳುತ್ತಾಳೆ. ನದಿದಾಟಿ ಆಚೆಯ ಮಲ್ಲಿಗೆ ಬನದಲ್ಲಿ ನಿಂತು ತನ್ನನ್ನು ಇನ್ನಿಲ್ಲದಂತೆ ಹಿಂಸಿಸಿದ ಸಮಾಜಕ್ಕೆ ಸವಾಲು ಹಾಕುವ ದನಿಯಲ್ಲಿ "ಈಗೇನ್ ಮಾಡೀರಿ ?" ಎಂದು ಪ್ರಶ್ನಿಸುತ್ತಾಳೆ. ಇಂಥ ಧೈರ್ಯ ಅವಳಲ್ಲಿ ಮೂಡುವುದು ಎಲ್ಲವನ್ನೂ ಎದುರಿಸಬಲ್ಲೆನೆಂಬ ತಾಳ್ಮೆ ಮತ್ತು ಸೃಜನಶೀಲ ಸಾಮರ್ಥ್ಯದಿಂದ.

ಡಿ.ಆರ್. ನಾಗರಾಜರು ಸಿದ್ಧಲಿಂಗಯ್ಯನವರ "ಊರುಕೇರಿ" ಆತ್ಮಕಥನವನ್ನು ಚರ್ಚಿಸುತ್ತ ವೈಯಕ್ತಿಕ ವಿವರಗಳಿಂದಾಗಿ ಅನೇಕ ದಲಿತ ಲೇಖಕರ ಆತ್ಮಕಥನಗಳಲ್ಲಿ ಹಲವಾರು ಅನುಭವಗಳು ಸಂಕ್ಷಿಪ್ತೀಕರಣಕ್ಕೆ ಒಳಗಾಗಿಬಿಡುತ್ತವೆ ಎನ್ನುತ್ತಾರೆ. ಸಾಹಿತ್ಯ ಕೃತಿಯೊಂದರಲ್ಲಿ ವಿಸ್ತಾರವಾದ ಅನುಭವಗಳಾಗಿ ರೂಪುಗೊಳ್ಳಬೇಕಾದ ಘಟನೆಗಳು ವಿವರಗಳ, ನಿಖರತೆ ಸಂದರ್ಭಗಳ ಸ್ಪಷ್ಟತೆಯಿಂದಾಗಿ ಸಂಕ್ಷಿಪ್ತಗೊಂಡು ತಮ್ಮ ವ್ಯಾಪ್ತಿಯನ್ನು ಕುಗ್ಗಿಸಿಕೊಳ್ಳುತ್ತವೆ. ಆದರೆ ಇತರ ಲೇಖಕರಲ್ಲಿ ಬಾಲ್ಯದ ನೆನಪು, ಜೀವನದ ಹಲವಾರು ಅನುಭವಗಳು ವಿರಾಟೀಕರಣಗೊಂಡು ಕಥೆ, ಕಾದಂಬರಿಗಳ ಹಾಗೆ ಬೆಳೆಯುತ್ತವೆ. ಕಥನವೊಂದು ಸ್ವಂತ ಅನುಭವಗಳ ಪರಿಧಿಯಲ್ಲಿಯೇ ಸಿಲುಕಿಕೊಂಡರೆ ಆಗುವ ಸಮಸ್ಯೆಯಿದು. ಆತ್ಮಕತೆಯ ಸೀಮಿತ ಚೌಕಟ್ಟುಗಳನ್ನು ತನ್ನ ಸೃಜನಶೀಲ ಎಚ್ಚರದಲ್ಲಿ ಮೀರುವ ದು. ಸರಸ್ವತಿಯವರು ತಮ್ಮ ಆತ್ಮಕಥನಕ್ಕೆ ಕಾವ್ಯ, ಕಾದಂಬರಿಗಳ ಕಲ್ಪನಾಶೀಲ ಆಯಾಮಗಳನ್ನು ತಂದುಕೊಡಲು ಪ್ರಯತ್ನಿಸಿದ್ದಾರೆ. ಆದರೆ ಆತ್ಮಕತೆಯೊಂದು ಸಾಹಿತ್ಯಕೃತಿಯೊಂದರ ಆಯಾಮಗಳನ್ನು ದಕ್ಕಿಸಿಕೊಳ್ಳಲು ಯತ್ನಿಸಿದೊಡನೆ ಸಹಜವಾಗಿ ಓದುಗನ ಅಪೇಕ್ಷೆಗಳೂ ಹಿರಿದಾಗಿಬಿಡುತ್ತವೆ. ಹಾಗಾಗಿಯೇ ಸಮಾಜದ ವಂಚಕತನದಿಂದ ಹೆಣ್ಣೊಬ್ಬಳು ಅಪಾರ ನೋವಿಗೀಡಾಗುವ ಈ ಕತೆಯಲ್ಲಿ ಸಮಾಜದ ವಿಸ್ತಾರವಾದ ದರ್ಶನ ಸಿಗುವುದಿಲ್ಲ. ಕಥನದಲ್ಲಿ ದೊರಕುವ ವಿವಿಧ ಪಾತ್ರ ಚಿತ್ರಣವನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ಲೇಖಕಿಯ ಅವ್ವನನ್ನು ಹೊರತುಪಡಿಸಿ ಅವಳ ಅಪ್ಪ, ಅಣ್ಣ, ಗೆಳತಿ, ಬ್ಯಾಂಕಿನ ಸಹೋದ್ಯೋಗಿಗಳು ಎಲ್ಲರೂ ಅಂಚಿನಲ್ಲಿ ಸುಳಿಯುವ ಪಾತ್ರಗಳೇ ಆಗಿವೆ. ಅಷ್ಟೇ ಅಲ್ಲದೆ ಇತರ ಪಾತ್ರಗಳ ಅನಾವರಣವಾಗುವುದು ನಿರೂಪಕಿಯ ಮೂಲಕವೇ ಆಗುವುದರಿಂದ ಅಷ್ಟರಮಟ್ಟಿಗೆ ಕಥನವು ಏಕಾನುಭವ ಕೇಂದ್ರದ ಸುತ್ತಲೇ ಬೆಳೆಯುತ್ತದೆ. ವಿವಿಧ ಮಹಿಳಾ ಸಂಘಟನೆಗಳ ಸಕ್ರಿಯ ಸದಸ್ಯಳಾಗಿದ್ದ ಲೇಖಕಿಗೆ

ಅನ್ಯಾಯವಾದಾಗ ಆ ಸಂಘಟನೆಗಳು ಯಾವ ಪಾತ್ರ ವಹಿಸಿದವು ಎಂಬ ಬಗ್ಗೆ ಹೆಚ್ಚು ಮಾಹಿತಿ ಸಿಗುವುದಿಲ್ಲ. ಆದ್ದರಿಂದ ಲೇಖಕಿ ಬಳಸುವ ಅನ್ಯ ಪುರುಷ ನಿರೂಪಣಾ ತಂತ್ರದಿಂದ ವೈಯಕ್ತಿಕ ಅನುಭವವು ಸಾರ್ವತ್ರಿಕವಾಗುವ ಸಾಧ್ಯತೆ ಕಾಣುತ್ತದೆಯಾದರೂ ಕಥನದಲ್ಲಿ ದೊರಕುವ ಸಾಮಾಜಿಕತೆಯ ಚಿತ್ರಣ ತೆಳುವಾದದ್ದು ಎಂದು ಹೇಳದೆ ವಿಧಿಯಿಲ್ಲ. ಇದು ಲೇಖಕಿ ತನ್ನ ಆತ್ಮಕತೆಯನ್ನು ಸಾಹಿತ್ಯಕೃತಿಯಾಗಿಸುವ ತವಕದಲ್ಲಿ ಸೃಷ್ಟಿಸಿಕೊಂಡಿರುವ ಸಮಸ್ಯೆ. ಸ್ವಕೇಂದ್ರದ ಅನುಭವಗಳ ಸುತ್ತಲಿನ ವಿವರಗಳಿಗೆ ಸೀಮಿತವಾಗಬಹುದಾದ ಸಮಸ್ಯೆಯನ್ನು ತನ್ನ ರೂಪಕ ಪ್ರತಿಭೆ, ಸೃಜನಶೀಲತೆಯಿಂದ ಲೇಖಕಿ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆಂಬುದು ನಿಜ. ಆದರೂ ಸ್ವಕೇಂದ್ರವನ್ನು ದಾಟಿದ ಬೇರೆ ಸಾಮಾಜಿಕ ಅನುಭವವಲಯಗಳನ್ನು ಕಥನ ಒಳಗೊಳ್ಳುವಲ್ಲಿ ಸೋಲುವುದರಿಂದ ಅಂತಿಮವಾಗಿ ಅದು ಏಕಾನುಭವದ ಕತೆಯೇ ಆಗಿ ಉಳಿಯುತ್ತದೆ. ಇನ್ನುಳಿದಂತೆ ತಾನು ಅನುಭವಿಸಿದ ದಾರುಣ ಜೀವನದ ವಿವರಗಳನ್ನು ನಿರೂಪಿಸುವಾಗ ಲೇಖಕಿ ತಾನು ಒಮ್ಮೆಯೂ ಹೆಣ್ಣೆಂಬ ಕಾರಣಕ್ಕಾಗಿ, ಶೋಷಿತ ಸಮುದಾಯಕ್ಕೆ ಸೇರಿದವಳೆಂಬ ಕಾರಣಕ್ಕಾಗಿ ಮರುಕ ಹುಟ್ಟಿಸುವಂತೆ ಬರೆಯುವುದಿಲ್ಲ. ಅದಕ್ಕಾಗಿಯೇ ತನ್ನ ನೋವಿನಕತೆ ಯಾರ ಆತ್ಮದ ನೋವಿನ ಕತೆಯೂ ಆಗಬಹುದೆಂದು ಮನವರಿಕೆ ಮಾಡಿಕೊಡುವಲ್ಲಿ, ಒಂದೆರಡು ಮಿತಿಗಳ ನಡುವೆಯೂ, ಲೇಖಕಿ ಯಶಸ್ವಿಯಾಗಿದ್ದಾರೆ. ಅನುಭವದ ತೀವ್ರತೆ, ನಿರೂಪಣೆಯ ಜಾಣ್ಮೆ, ಶೈಲಿಯ ಸಹಜತೆಗಳಿಂದಾಗಿ ಮನಕಲಕುವ ಬರಹ ಇದು.

□

ಎಸ್. ಸಿರಾಜ್ ಅಹಮದ್, ಇಂಗ್ಲಿಷ್ ಉಪನ್ಯಾಸಕ, ಎಸ್.ಎಲ್. ೮,
ಗಂಧದ ಕಾರ್ಖಾನೆ ವಸತಿ ಗೃಹಗಳು, ಶ್ರೀಗಂಧದ ನಗರ, ವಿದ್ಯಾನಗರ, ಶಿವಮೊಗ್ಗ - ೫೭೭೨೦೩

ಲೇಖಕರಿಗೆ ವಿನಂತಿ

ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ದ ಸ್ವರೂಪದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಬೇಕೆಂಬ ಹಂಬಲವನ್ನು ತಾವು ಇದುವರೆಗಿನ ಸಂಚಿಕೆಗಳ ಮೂಲಕ ಗಮನಿಸಬಹುದಾಗಿದೆ. ಕನ್ನಡದ ಶ್ರೇಷ್ಠ ಲೇಖಕರನ್ನೆಲ್ಲ ಒಳಗೊಳ್ಳುವಂತೆಯೂ ಹಾಗೂ ಹೊಸ ಸಂವಾದ, ಸಂವೇದನೆಗಳ ಶಕ್ತ ವೇದಿಕೆಯಾಗಿ ಪತ್ರಿಕೆ ಗಂಭೀರ ಸಾಹಿತ್ಯ ಚಿಂತನೆಗಳ ಅಭಿವ್ಯಕ್ತಿಯಾಗಿ ರೂಪುಗೊಳ್ಳಬೇಕೆಂಬುದೂ ನಮ್ಮ ಆಶಯವಾಗಿದೆ. ಕನ್ನಡದ ಹಿರಿಯ ಹಾಗೂ ಭರವಸೆಯ ಹೊಸ ಪೀಳಿಗೆಯ ಲೇಖಕರೆಲ್ಲರ ಭಾಗವಹಿಸುವಿಕೆಯೇ ಪತ್ರಿಕೆಗೆ ಜೀವದ್ರವ್ಯವಾದ್ದರಿಂದ ತಮ್ಮ ಅಮೂಲ್ಯ ಸಹಕಾರ ಅತ್ಯಗತ್ಯ.

ಅನ್ಯಭಾಷೆಯ ಶ್ರೇಷ್ಠ ಬರಹಗಳ ಅನುವಾದದೊಂದಿಗೆ, ಸ್ವತಂತ್ರ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ. 'ಅನಿಕೇತನ'ಕ್ಕಾಗಿ ಕವಿತೆ / ಕಥೆ / ಕಿರುನಾಟಕ / ವಿಮರ್ಶಾತ್ಮಕ / ವೈಚಾರಿಕ ಲೇಖನ / ಪ್ರಬಂಧ / ಸಾಂಸ್ಕೃತಿಕ ಚಿಂತನೆ ಹಾಗೂ ಅನುವಾದಗಳನ್ನು ಕಳುಹಿಸಿ ಕೊಡುವುದರ ಮೂಲಕ ನಮ್ಮ ಪ್ರಯತ್ನಕ್ಕೆ ಸಹಕರಿಸಬೇಕೆಂದು ಕೋರುತ್ತಿದ್ದೇವೆ. ದಯವಿಟ್ಟು ಬರೆಯಿರಿ. ಪತ್ರಿಕೆಗೆ ಹೊಸ ರೂಪ ಕೊಡಬೇಕೆಂಬ ಪ್ರಯತ್ನಗಳ ನಮ್ಮೊಂದಿಗೆ ಸದಾ ನೀವಿರುತ್ತೀರೆಂಬುದೇ ನಮ್ಮ ಧೈರ್ಯ ಹಾಗೂ ವಿಶ್ವಾಸ.

ಅನುವಾದಗಳಾದರೆ ಮೂಲ ಲೇಖಕರ ಹೆಸರು, ವಿಳಾಸ, ಮೂಲ ಬರಹದ ಭಾಷೆಯ ವಿವರ ಅಗತ್ಯ. ಅನುಮತಿ ಪತ್ರದ ಜೆರಾಕ್ಸ್ ಪ್ರತಿ ಜೊತೆಯಲ್ಲಿರುವುದು ಅಪೇಕ್ಷಣೀಯ. ಬರವಣಿಗೆ ಹಾಳೆಯ ಒಂದೇ ಮಗ್ಗುಲಲ್ಲಿದ್ದು, ಸ್ಫುಟವಾಗಿ, ಓದಲು ಅನುಕೂಲವಾಗುವಂತಿರಲಿ.

ಬರಹಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, 'ಅನಿಕೇತನ', ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

-ಸಂಪಾದಕರು



ಕಾಶ್ಮೀರದ ಋಷಿ ಸೂಫಿಗಳ ವಚನಗಳು

ಶಿವನಿಲ್ಲದ ತಾಣವ್ಯಾವುದು ?
ಹಿಂದು ಮತ್ತು ಮುಸಲ್ಮಾನರ ನಡುವೆ
ಗೆರೆಯೆಳೆಯುವುದು ಸಾಧ್ಯವೆ !
ವಿವೇಚನೆಯುಳ್ಳವನಾದರೆ ಗುರುತಿಸಿಕೊ
ಮೊದಲು ನಿನ್ನೊಳಗಿನ
ದೇವನನ್ನು ನೀನು ಮೊದಲು.

- ಲಲ್ಲಾದೇವಿ

ಪದಮನಪುರದ ಆ ಲಲ್ಲಾ,
ಅಮೃತವನ್ನು ಗುಟುಕು ಗುಟುಕು ಕುಡಿದವಳು,
ಪ್ರತಿಯೊಂದರಲ್ಲೂ ಶಿವನ ಮುಖವನ್ನು ಕಂಡಳು !
ಹೋ ಶಿವನೇ !
ದಯಪಾಲಿಸು ನನಗೂ ಆ ವರವ.

- ಋಷಿ ಸೂಫಿ ಶೇಕ್ ನೂರುದ್ದೀನ್

Reg. No. 45646/88 Price : 20/-